10. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಉಪ್ಪಿನಂಗಡಿ , ಅಲೆಟ್ಟಿ, ಬೆಳಂದೂರು, ಪೆರಾಬೆ, ನೂಜಿಬಾಳ್ತಿಲ, ಬಂದಾರು, ಪೆರಿಯ[illegible], ಇಳಂತಿಲ ಗ್ರಾಮ ಪಂಚಾಯತ್, ದ.ಕ.
11. ಕಂದಾಯ ನಿರೀಕ್ಷಕರು, ಉಪ್ಪಿನಂಗಡಿ, ಸುಳ್ಯ, ಕಡಬ, ಕೊಕ್ಕಡ ಹೋಬಳಿ
12. ಗ್ರಾಮ ಆಡಳಿತಾಧಿಕಾರಿಗಳು, ಉಪ್ಪಿನಂಗಡಿ, ಅಲೆಟ್ಟಿ, ಕುದ್ಮಾರು, ಪೆರಾಬೆ, ನೂಜಿಬಾಳ್ತಿಲ, ಬಂದಾರು, ಇಳಂತಿಲ, ಪೆರಿಯ

ಮಾನ್ಯ [illegible] ಸಹಾಯಕ ಆಯುಕ್ತರ ಕಛೇರಿ, ಪುತ್ತೂರು ಉಪವಿಭಾಗ, ಪುತ್ತೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ [illegible] ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆ ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ [illegible] ಮಾನ್ಯ ಸಹಾಯಕ ಆಯುಕ್ತರು ಅಧ್ಯಕ್ಷತೆಯನ್ನು ವಹಿಸಿ ವಿಷಯವಾರು ಅಜೆಂಡಾ ಬಗ್ಗೆ ಸದಸ್ಯರೊಂದಿಗೆ ಚರ್ಚಿಸಿ ಕೆಳಕಂಡಂತೆ [illegible] ಕೈಗೊಳ್ಳಲಾಯಿತು.

1. ಪುತ್ತೂರು ತಾಲೂಕು ಉಪ್ಪಿನಂಗಡಿ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಉಪ್ಪಿನಂಗಡಿ - ನೇತ್ರಾವತಿ [illegible] ಪಾತ್ರದ ಸ.ನಂ. 110/1ಎ ರಲ್ಲಿ 6.00 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು.

ಈ ಬಗ್ಗೆ ಸವಿವರ ಚರ್ಚಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯ[illegible] ಪ್ರದೇಶದಲ್ಲಿ [illegible] ಜಾಗದಲ್ಲಿ ಸಮೀಕ್ಷೆ ನಡೆಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ [illegible]

[illegible] ಸಲ್ಲಿಸುವಂತೆ ತಿಳಿಸಿದರು. [illegible] ತಹಶೀಲ್ದಾರರು [illegible] ಇವರಿಗೆ ಸೂಚಿಸಿದರು.

ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ [illegible] ವಿಜ್ಞಾನಿ ಇಲಾಖೆ, ಇವರಿಗೆ ತಿಳಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, [illegible] ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

2. ಸುಳ್ಯ ತಾಲೂಕು ಆಲೆಟ್ಟಿ ಗ್ರಾಮದ ಪಯಸ್ವಿನಿ ನದಿ ಪಾತ್ರದ ಸರ್ಕಾರಿ ಸ.ನಂ. 336/1ಪಿ1 ರಲ್ಲಿ 2.00 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ, ವಲಯ ಅರಣ್ಯ ಅಧಿಕಾರಿ ಸುಳ್ಯ ಇವರು ಅರಣ್ಯ ಪ್ರಸ್ತಾಪಿತ ಮರಳು ಬ್ಲಾಕ್ [illegible] ಬಫರ್ ಜೋನ್ ವ್ಯಾಪ್ತಿಯಲ್ಲಿ ಬರುವುದಾಗಿದ್ದು, ಆಕ್ಷೇಪಣೆ ಇರುತ್ತದೆ ಎಂದು ಸಭೆಗೆ ಸೂಚಿಸಿದರು. ಮಾನ್ಯ ಅಧ್ಯಕ್ಷರು ಅರಣ್ಯ ಇಲಾಖೆಯ ಆಕ್ಷೇಪಣೆ ಇರುವುದರಿಂದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಿಳಿಸಿದರು.

(ಕ್ರಮ: ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಸುಳ್ಯ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

3. ಕಡಬ ತಾಲ್ಲೂಕು ನೂಜಿಬಾಳ್ತಿಲ ಗ್ರಾಮದ ಗುಂಡ್ಯ ಹೊಳೆ ನದಿ ಪಾತ್ರದ ಸರ್ಕಾರಿ ಸ.ನಂ. 72/1ಪಿ2 ರಲ್ಲಿ 2.50 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾಪಿತ ಹೊಳೆ/ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ [illegible] ಜಂಟಿ ತನಿಖಾ ವರದಿಯಲ್ಲಿ ನಮೂದಿಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು [illegible] ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು.

ಪ್ರಸ್ತಾಪಿತ ಮರಳು ಬ್ಲಾಕ್ ಪ್ರದೇಶವು ಯಾವ ವಲಯ ಬರುತ್ತದೆ ಎಂಬ ಬಗ್ಗೆ ಗೊಂದಲವಿದ್ದು, ಈ ಬಗ್ಗೆ ವಲಯ ಅರಣ್ಯ ಅಧಿಕಾರಿ ಪಂಜ ಮತ್ತು ಸುಬ್ರಹ್ಮಣ್ಯ ಇವರು ಜಂಟಿ ಸ್ಥಳ ತನಿಖೆ ನಡೆಸಿ, ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವಂತೆ ವಲಯ ಅರಣ್ಯ ಅಧಿಕಾರಿ ಪಂಜ ಮತ್ತು ಸುಬ್ರಹ್ಮಣ್ಯ ಇವರಿಗೆ ಸೂಚಿಸಲಾಯಿತು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಸುಳ್ಯ ಇವರು ಪ್ರಸ್ತಾಪಿತ ಮರಳು ಬ್ಲಾಕ್ ಅನ್ನು ಎರಡು ದಿನಗಳೊಳಗೆ ಸ್ಥಳ ತನಿಖೆ [illegible] ನಿರಾಕ್ಷೇಪಣಾ ದೃಢೀಕರಣ ಪತ್ರ ನೀಡುವಂತೆ ಸೂಚಿಸಲಾಯಿತು. ತಹಶೀಲ್ದಾರರು ಕಡಬ ಇವರಿಗೆ ಗ್ರಾಮಠಾಣ [illegible] ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ [illegible] ಭೂ ವಿಜ್ಞಾನಿ ಇಲಾಖೆ, ವಲಯ ಅರಣ್ಯ ಅಧಿಕಾರಿ ಪಂಜ ಮತ್ತು ಸುಬ್ರಹ್ಮಣ್ಯ ವಲಯ, ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ತಿಳಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಕಡಬ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

4. ಕಡಬ ತಾಲೂಕು ಪೆರಾಬೆ ಗ್ರಾಮದ ಕುಮಾರಧಾರ ನದಿ ಪಾತ್ರದ ಸರ್ಕಾರಿ ಸ.ನಂ. 1 ರಲ್ಲಿ 5.50 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾಪಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ [illegible] ತನಿಖಾ ವರದಿಯಲ್ಲಿ ನಮೂದಿಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು [illegible] ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು. [illegible] ಇವರಿಗೆ [illegible]

ಇವರಿಗೆ ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಲಾಗಿದ್ದು, ಸಾರ್ವಜನಿಕರಿಂದ ಲಿಖಿತ ರೂಪದಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು [illegible] ಗ್ರಾಮ ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ ಅಂಶಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಪರಿಶೀಲನಾ ವರದಿ ( ನಮೂನೆ- JIR ) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಕಡಬ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

5. ಕಡಬ ತಾಲೂಕು ಪೆರಾಬೆ ಗ್ರಾಮದ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಕುಮಾರಧಾರಾ ನದಿ ಪಾತ್ರದ ಸ.ನಂ.1/ಪಿ2 ರಲ್ಲಿ 6.90 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ ಎಂಬ ಬಗ್ಗೆ ತನಿಖಾ ವರದಿಯಲ್ಲಿ ನಮೂದಿಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು. ಪ್ರಸ್ತಾವಿತ ಮರಳು ಬ್ಲಾಕ್ ನ ಬಗ್ಗೆ ಸಭೆಯಲ್ಲಿ ವಲಯ ಅರಣ್ಯಾಧಿಕಾರಿಗಳು, ಪಂಜ ವಲಯ ಇವರಿಗೆ ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಲಾಗಿದ್ದು, ಸಾರ್ವಜನಿಕರಿಂದ ಲಿಖಿತ ರೂಪದಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪೆರಾಬೆ ಗ್ರಾಮ ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ. ತಹಶೀಲ್ದಾರರು, ಗ್ರಾಮವಾರು ಪ್ರತ್ಯೇಕ ಕಡತಗಳನ್ನು ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ ಅಂಶಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಪರಿಶೀಲನಾ ವರದಿ (ನಮೂನೆ- JIR ) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ನಿರ್ಣಯಿಸಿದಾಗ ಸಭೆಯು ಅನುಮೋದಿಸಿತು.

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಕಡಬ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

6. ಕಡಬ ತಾಲೂಕು ಕುದ್ಮಾರು ಗ್ರಾಮದ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಕುಮಾರಧಾರಾ ನದಿ ಪಾತ್ರದ ಸ.ನಂ.134/ಪಿ2 ರಲ್ಲಿ 2.50 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ ವಿಲೇವಾರಿ ಕುರಿತು

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ ಎಂಬ ಬಗ್ಗೆ ತನಿಖಾ ವರದಿಯಲ್ಲಿ ನಮೂದಿಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು.

ಸದರಿ ಜಂಟಿ ಸ್ಥಳ ಪರಿಶೀಲನಾ ವರದಿಯಲ್ಲಿ "ನಿರಾಕ್ಷೇಪಣಾ ಪತ್ರವನ್ನು ಬಿಡ ಬರದ್ಸ ಸಂರಕ್ಷಣಾಧಿಕಾರಿಯವರು [illegible] [illegible] ಎಂದು ನಮೂದಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ವಲಯಾರಣ್ಯಾಧಿಕಾರಿಗಳು, [illegible] [illegible], ಈ ಬ್ಲಾಕ್‌ನಲ್ಲಿ ಯಾವುದೇ ಆಕ್ಷೇಪಣೆ ಇಲ್ಲದಿರುವುದಾಗಿ ಮುಂದುವರೆದು ಅರಣ್ಯ ಸಂರಕ್ಷಣಾಧಿಕಾರಿಯವರಿಂದ ನಿರಾಕ್ಷೇಪಣಾ [illegible] [illegible] ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಜಂಟಿ ತನಿಖಾ ವರದಿಯಲ್ಲಿ ಆಕ್ಷೇಪಣೆ [illegible] [illegible] ನ್ನು ಸಲ್ಲಿಸುವಂತೆ ವಲಯಾರಣ್ಯಾಧಿಕಾರಿಗಳು, ಪುತ್ತೂರು ವಲಯ ಸೂಚಿಸಿದರು.

ಪ್ರಸ್ತಾಪಿತ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ [illegible] [illegible] ಬೋರ್ಡ್ ನಲ್ಲಿ ಪ್ರಕಟ ಪಡಿಸಲಾಗಿದ್ದು, ಸಾರ್ವಜನಿಕರಿಂದ ಲಿಖಿತ ರೂಪದಲ್ಲಿ ಯಾವುದೇ [illegible] ಆಕ್ಷೇಪಣೆ [illegible] ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು **ಬೆಳಂದೂರು** ಗ್ರಾಮ ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ. ತಹಸೀಲ್ದಾರರು ಗ್ರಾಮವಾರು ಪ್ರತ್ಯೇಕ ಕಡತಗಳನ್ನು ತಯಾರಿಸಿ ಪ್ರಸ್ತಾವನೆಯನ್ನು [illegible] ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆ [illegible] ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ವಲಯಾರಣ್ಯಾಧಿಕಾರಿಗಳು, ಪುತ್ತೂರು ವಲಯ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ ಅಂಶಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಸ್ಥಳ ಪರಿಶೀಲನಾ ವರದಿ (ನಮೂನೆ- JIR) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಕಡಬ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

2. ಬೆಳ್ತಂಗಡಿ ತಾಲ್ಲೂಕು ಮೊಗ್ರು ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ ಸ. ನಂ: 28/[illegible] ರಲ್ಲಿನ 4.40 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಪಾತ್ರದ ಶ್ರೇಣಿಯಲ್ಲಿ ಬರುತ್ತದೆ ಎಂಬ ಬಗ್ಗೆ [illegible] [illegible] ವರದಿಯಲ್ಲಿ ನಮೂದಿಸುವಂತೆ, ಜಂಟಿ ಸ್ಥಳ ತನಿಖಾ ದಿನಾಂಕವನ್ನು ನಮೂದಿಸುವಂತೆ ಹಾಗೂ ಮರಳು ಪ್ರಮಾಣ [illegible] ಮಾಡುವ ಬಗ್ಗೆ ವರದಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಬೆಳ್ತಂಗಡಿ ಇವರು ಪ್ರಸ್ತಾವಿತ ಮರಳು ಬ್ಲಾಕ್ ಅನ್ನು [illegible] ದಿನಗಳೊಳಗೆ ಸ್ಥಳ ತನಿಖೆ ನಡೆಸಿ ಇಲಾಖಾ ನಿರಾಕ್ಷೇಪಣಾ/ ದೃಢೀಕರಣ ಪತ್ರ ನೀಡುವಂತೆ ಸೂಚಿಸಲಾಯಿತು.

ಪ್ರಸ್ತಾವಿತ ಮರಳು ಬ್ಲಾಕ್ ನ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ವಲಯಾರಣ್ಯಾಧಿಕಾರಿಗಳು, ಬೆಳ್ತಂಗಡಿ [illegible] ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಕಟ ಪಡಿಸಲಾಗಿದ್ದು, [illegible] ರೂಪದಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮೊಗ್ರು ಗ್ರಾಮ ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ ಅಂಶಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಸ್ಥಳ ಪರಿಶೀಲನಾ ವರದಿ (ನಮೂನೆ- JIR ) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಬೆಳ್ತಂಗಡಿ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

8. ಬೆಳ್ತಂಗಡಿ ತಾಲ್ಲೂಕು ಮೊಗ್ರು ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ [illegible] ರಲ್ಲಿನ 6.00 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವಿಲೇವಾರಿ ಕುರಿತು.

ಈ ಬಗ್ಗೆ ಕೂಲಂಕಷ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ [illegible] ನಮೂದಿಸುವಂತೆ, ಜಂಟಿ ಸ್ಥಳ ತನಿಖಾ ದಿನಾಂಕವನ್ನು ನಮೂದಿಸುವಂತೆ ಹಾಗೂ ಮರಳು ಪ್ರಮಾಣ [illegible] ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು. [illegible] ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಬೆಳ್ತಂಗಡಿ ಇವರು ಪ್ರಸ್ತಾವಿತ ಮರಳು ಬ್ಲಾಕ್ [illegible] ಪ್ರದೇಶದಲ್ಲಿ ಸ್ಥಳ ತನಿಖೆ ನಡೆಸಿ ಇಲಾಖಾ ನಿರಾಕ್ಷೇಪಣಾ ದೃಢೀಕರಣ ಪತ್ರ ನೀಡುವಂತೆ ಸೂಚಿಸಲಾಯಿತು.

ಪ್ರಸ್ತಾವಿತ ಮರಳು ಬ್ಲಾಕ್ ನ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ವಲಯಾರಣ್ಯಾಧಿಕಾರಿಗಳು, ಉಪ್ಪಿನಂಗಡಿ ವಲಯ [illegible] ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ [illegible] ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಲಾಗಿದ್ದು, [illegible] ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು [illegible] ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆ [illegible] ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ [illegible] ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಸುಳ್ಯ ಇವರಿಗೆ ತಿಳಿಸಲಾಯಿತು ಮತ್ತು [illegible] ಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಸ್ಥಳ ಪರಿಶೀಲನಾ ವರದಿ ( [illegible] ) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಬೆಳ್ತಂಗಡಿ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

9. ಬೆಳ್ತಂಗಡಿ ತಾಲ್ಲೂಕು ಬಂದಾರು ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ [illegible] 264/* ರಲ್ಲಿನ 4.00 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವಿಲೇವಾರಿ ಕುರಿತು.

ಈ ಬಗ್ಗೆ ಕೂಲಂಕಷ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ ಎಂಬ ಬಗ್ಗೆ ಜಂಟಿ [illegible] ವರದಿಯಲ್ಲಿ ನಮೂದಿಸುವಂತೆ, ಜಂಟಿ ಸ್ಥಳ ತನಿಖಾ ದಿನಾಂಕವನ್ನು ನಮೂದಿಸುವಂತೆ, ಜಂಟಿ ತನಿಖಾ [illegible] ತಿದ್ದುಪಡಿ ಮಾಡುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ [illegible] ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು.

ಪ್ರಸ್ತಾವಿತ ಮರಳು ಬ್ಲಾಕ್ ನ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ವಲಯಾರಣ್ಯಾಧಿಕಾರಿಗಳು, ಉಪ್ಪಿನಂಗಡಿ ವಲಯ [illegible] ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ [illegible] ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಲಾಗಿದ್ದು, [illegible] ಅವಧಿಯಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು [illegible] ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆ [illegible] ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ [illegible]

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಸುಳ್ಯ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ [illegible] ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಸ್ಥಳ ಪರಿಶೀಲನಾ ವರದಿ (ನಮೂನೆ-[illegible]) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಬೆಳ್ತಂಗಡಿ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

10. ಬೆಳ್ತಂಗಡಿ ತಾಲ್ಲೂಕು ಚಿಬಿದ್ರೆ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಮೃತ್ಯುಂಜಯ ನದಿ ಪಾತ್ರದ ಸ.ನಂ. 3[illegible] [illegible] 1.50 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ, ಪ್ರಸ್ತಾವಿತ ನದಿಯು 3 ನೇ ಶ್ರೇಣಿಯಲ್ಲಿ ಬರುವುದಾಗಿ ಭೂ ವಿಜ್ಞಾನಿ ಇವರು ಸಭೆಗೆ ತಿಳಿಸಿದರು.

ಪ್ರಸ್ತಾವಿತ ಮರಳು ಬ್ಲಾಕ್ ನ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ವಲಯಾರಣ್ಯಾಧಿಕಾರಿಗಳು, ಬೆಳ್ತಂಗಡಿ ವಲಯ ಇವರಿಗೆ ಆಕ್ಷೇಪಣೆ ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಮರಳು ಬ್ಲಾಕ್ ನಲ್ಲಿ ಮರಳು ತೆಗೆಯುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳಿಗೆ ಪ್ರಕಟಣೆಯನ್ನು ಗ್ರಾಮ ಪಂಚಾಯತ್ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಲಾಗಿದ್ದು, ಸಾರ್ವಜನಿಕರಿಂದ ನಿಗದಿತ ದಿನದಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಬಂದಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಚಾರ್ಮಾಡಿ ಗ್ರಾಮ ಪಂಚಾಯತ್ ಇವರು ಆಕ್ಷೇಪಣೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾ, ಮೇಲ್ಕಂಡ ಎಲ್ಲಾ ವಿಚಾರದ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಹಶೀಲ್ದಾರರು, ಭೂ ವಿಜ್ಞಾನಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಇವರಿಗೆ ತಿಳಿಸಲಾಯಿತು ಮತ್ತು ಮೇಲಿನ ಅಂಶಗಳನ್ನು ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಜಂಟಿ ಸ್ಥಳ ಪರಿಶೀಲನಾ ವರದಿ (ನಮೂನೆ- JIR) ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಅನುಮೋದಿಸಲಾಯಿತು

ಪ್ರಸ್ತಾವಿತ ಮರಳು ಬ್ಲಾಕ್ ಮೂರನೇ ಶ್ರೇಣಿಯಲ್ಲಿ ಬರುವುದರಿಂದ, ಸಂಬಂಧಪಟ್ಟ ಗ್ರಾಮ ಪಂಚಾಯತ್ ನ [illegible] ಪ್ರತಿ, ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಅನುಮೋದನೆಗಾಗಿ ಸಲ್ಲಿಸಿದೆ.

(ಕ್ರಮ: ಸದಸ್ಯ ಕಾರ್ಯದರ್ಶಿ/ ತಹಶೀಲ್ದಾರರು, ಬೆಳ್ತಂಗಡಿ ತಾಲೂಕು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

11. ಬೆಳ್ತಂಗಡಿ ತಾಲ್ಲೂಕು ಇಳಂತಿಲ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ ಸ.ನಂ: 29/* ರಲ್ಲಿ 5.25 ಎಕ್ರೆ ಮತ್ತು 42/* ರಲ್ಲಿ 4.77 ಎಕ್ರೆ ವಿಸ್ತೀರ್ಣದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವಿಲೇವಾರಿ ಕುರಿತು.

ಈ ಬಗ್ಗೆ ಕಡತ ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಪ್ರಸ್ತಾವಿತ ನದಿ ಯಾವ ಶ್ರೇಣಿಯಲ್ಲಿ ಬರುತ್ತದೆ ಎಂಬ ಬಗ್ಗೆ ಜಂಟಿ ವರದಿಯಲ್ಲಿ ನಮೂದಿಸುವಂತೆ ಹಾಗೂ ಮರಳು ಪ್ರಮಾಣ ಲೆಕ್ಕಾಚಾರ ಮಾಡಿರುವ ಬಗ್ಗೆ ವರದಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದರು.

ಸ.ನಂ. 42 ರಲ್ಲಿ ಅಣೆಕಟ್ಟು ಬಂಡ್ ಮತ್ತು ಪಹಣಿ ವ್ಯತ್ಯಾಸವಿರುತ್ತದೆ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು. ಸ.ನಂ. 29 ರಲ್ಲಿ ಕಂದಾಯ ಮತ್ತು ಸರ್ವೆ ನಕ್ಷೆಯಲ್ಲಿ 10.00 ಎಕ್ರೆ ಎಂದು ಗುರುತಿಸಿದ್ದು, ಭೂ ವಿಜ್ಞಾನಿ ಇಲಾಖೆ ಜಿಪಿಎಸ್ BLUE PRINT ಅಲ್ಲಿ 12.00 ಎಕ್ರೆ ಎಂದು ತೋರಿಸುತ್ತಿದ್ದು, ವಿಸ್ತೀರ್ಣ ವ್ಯತ್ಯಾಸವಿರುತ್ತದೆ. ಆದ್ದರಿಂದ, ಈ ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಹಶೀಲ್ದಾರರು ಬೆಳ್ತಂಗಡಿ, ಭೂ ವಿಜ್ಞಾನಿ ಇಲಾಖೆ ಇವರಿಗೆ ತಿಳಿಸಲಾಯಿತು.

[illegible] ಬಗ್ಗೆ ಪರಿಶೀಲಿಸಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ತಹಶೀಲ್ದಾರ್ [illegible] ಕಾರ್ಯನಿರ್ವಾಹಕ [illegible] ಇವರಿಗೆ ಸಮಿತಿ ಸೂಚಿಸಿತು.

(ಕ್ರಮ: ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಬೆಳ್ತಂಗಡಿ [illegible] ಮತ್ತು ಗಣಿ [illegible])

## ಮಾನ್ಯ ಅಧ್ಯಕ್ಷರು ಚರ್ಚಿಸಿದ ಇತರ ವಿಷಯಗಳು:

1. ಪುತ್ತೂರು ಉಪವಿಭಾಗದ [illegible], ಮರಳು, ಕಲ್ಲುಗಳು ಇರುವ ಬಗ್ಗೆ [illegible] ಮಾಧ್ಯಮಗಳು [illegible] ಈ ಬಗ್ಗೆ ಭೂ ವಿಜ್ಞಾನಿ ಇವರು ಪುತ್ತೂರು ಉಪವಿಭಾಗದಲ್ಲಿ ಹಠಾತ್ ದಾಳಿ ನಡೆಸಿ [illegible] ಈ ಸಂದರ್ಭದಲ್ಲಿ ರಾತ್ರಿ ವೇಳೆ ಟೆಂಡರ್ ಆಗದಂತಹ ಬ್ಲಾಕ್ ಗಳಿಂದ ಮರಳಿಗೆ [illegible] ಮರಳು ಮತ್ತು ಕಲ್ಲುಗಳು ತೊಂದರೆಯಾಗದಂತೆ ಕ್ರಮವಹಿಸುವಂತೆ ತಹಶೀಲ್ದಾರರುಗಳಿಗೆ ಸೂಚಿಸಲಾಯಿತು.

(ಕ್ರಮ: ಪುತ್ತೂರು ಉಪವಿಭಾಗದ ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಪುತ್ತೂರು, ಸುಳ್ಯ, ಬೆಳ್ತಂಗಡಿ ಕಡಬ [illegible] ಭೂವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

2. ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳ [illegible] ಅಧಿಕಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರುಗಳು ಜಂಟಿ ತನಿಖೆ ನಡೆಸಿ, ನಿಕ್ಷೇಪಗಳನ್ನು ಗುರುತಿಸಿ ವರದಿ [illegible] ಮಾಹಿತಿಯನ್ನು ತಹಶೀಲ್ದಾರರು ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಇವರು ಸಹಾಯಕ ಆಯುಕ್ತರ ಕಚೇರಿಗೆ ನೀಡಲು [illegible]

(ಕ್ರಮ: ಪುತ್ತೂರು ವಿಭಾಗದ ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಪುತ್ತೂರು, ಸುಳ್ಯ, ಬೆಳ್ತಂಗಡಿ ಕಡಬ [illegible] ಕಾರ್ಯನಿರ್ವಾಹಕ ಅಧಿಕಾರಿ ಪುತ್ತೂರು, ಸುಳ್ಯ, ಬೆಳ್ತಂಗಡಿ, ಕಡಬ ತಾಲೂಕು, ಭೂ ವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

3. ಭೂ ವಿಜ್ಞಾನಿ ಇವರು ಸಭೆಯಲ್ಲಿ ವಶಪಡಿಸಿಕೊಂಡಿದ್ದ (SEIZED) ಮರಳನ್ನು ವಿಲೇವಾರಿ ಮಾಡುವ ಬಗ್ಗೆ [illegible] ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಈ ಬಗ್ಗೆ ಮಾನ್ಯ ಅಧ್ಯಕ್ಷರು ತಹಶೀಲ್ದಾರರು, ಭೂ ವಿಜ್ಞಾನಿ [illegible] ನಿರ್ದೇಶಕರು ಪೊಲೀಸ್ ಇಲಾಖೆ ಮತ್ತು [illegible] ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಮತ್ತು [illegible] ಆಯುಕ್ತರನ್ನು ಒಳಗೊಂಡಂತೆ [illegible] / ಉಪವಿಭಾಗದ ಟಾಸ್ಕ್ ಫೋರ್ಸ್ ಸಮಿತಿ [illegible] ಕ್ರಮ ವಹಿಸಲು ಭೂ ವಿಜ್ಞಾನಿ ಇವರಿಗೆ ನಿರ್ದೇಶನ ನೀಡಲಾಯಿತು

(ಕ್ರಮ: ಪುತ್ತೂರು ಉಪವಿಭಾಗದ ಸದಸ್ಯ ಕಾರ್ಯದರ್ಶಿ / ತಹಶೀಲ್ದಾರರು, ಪುತ್ತೂರು ವಿಭಾಗದ [illegible] ಗಣಿ ಮತ್ತು ಭೂ ವಿಜ್ಞಾನ ಇಲಾಖೆ)

[illegible] ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು
ಹಾಗೂ ಅಧ್ಯಕ್ಷರು
ತಾಲೂಕು ಮರಳು ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ

ಪ್ರತಿ: ಮಾನ್ಯ ಜಿಲ್ಲಾಧಿಕಾರಿಯವರು ದ.ಕ.ಜಿಲ್ಲೆ, ಮಂಗಳೂರು - ಇವರ ದಯಾಪರ ಅವಗಾಹನೆಗೆ ಸಲ್ಲಿಸಿದೆ

**ದಿನಾಂಕ 10-06-2024 ರಂದು ಅಪರಾಹ್ನ 2:30 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು:**

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | | |
|---|---|---|
| 1. | ಮಾನ್ಯ ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | ಅಧ್ಯಕ್ಷರು |
| 2. | ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಮಂಗಳೂರು | ಸದಸ್ಯರು |
| 3. | ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | ಸದಸ್ಯರು |
| 4. | ಉಪಅರಣ್ಯ ಸಂರಕ್ಷಣಾಧಿಕಾರಿಯವರು, ಮಂಗಳೂರು ವಿಭಾಗ, ಮಂಗಳೂರು | ಸದಸ್ಯರು |
| 5. | ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಗಳೂರು | ಸದಸ್ಯರು |
| 6. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು | ಸದಸ್ಯರು |
| 7. | ತಹಶೀಲ್ದಾರರು, ಬಂಟ್ವಾಳ ಮತ್ತು ಮಂಗಳೂರು ತಾಲೂಕು | ಸದಸ್ಯರು |
| 8. | ಶ್ರೀ ವೆಂಕಟೇಶ್ ಕೆ.ಡಿ, ವ್ಯವಸ್ಥಾಪಕರು, ಕೆ.ಎಸ್.ಎಂ.ಸಿ.ಎಲ್, ಬೆಂಗಳೂರು | ಆಹ್ವಾನಿತರು |
| 9. | ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು | ಸದಸ್ಯ ಕಾರ್ಯದರ್ಶಿ |

ಉಪ ನಿರ್ದೇಶಕರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಇತರೆ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಉಪ ನಿರ್ದೇಶಕರಿಗೆ ಸೂಚಿಸಿದರು. ಅದರಂತೆ ಉಪ ನಿರ್ದೇಶಕರು ಸಭೆಯಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಗಳ ವಿವರ ನೀಡಿದರು. ಅದರಂತೆ ಈ ಕೆಳಗಿನ ಕಾರ್ಯಸೂಚಿಗಳನ್ವಯ ನಿರ್ಣಯ ಕೈಗೊಳ್ಳಲಾಯಿತು.

<u>ವಿಷಯ ಸೂಚಿ-1:</u> ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕು ಅದ್ಯಪಾಡಿ ಮತ್ತು ಬಂಟ್ವಾಳ ತಾಲ್ಲೂಕು ಶಂಭೂರು ಡ್ಯಾಂನ ಹಿನ್ನೀರಿನ ಪ್ರದೇಶದಲ್ಲಿ ಕೆ.ಎಸ್.ಎಂ.ಸಿ.ಎಲ್, ಬೆಂಗಳೂರು ರವರು

ದಾಸ್ತಾನಿರಿಸಿರುವ ಮರಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಹರಾಜು ಮಾಡುವ ಬಗ್ಗೆ ಹಾಗೂ ಸದರಿ ಮರಳಿಗೆ ಮಾರಾಟ ದರವನ್ನು ನಿಗಧಿಪಡಿಸುವ ಕುರಿತು ಚರ್ಚೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕು ಅದ್ಯಪಾಡಿ ಮತ್ತು ಬಂಟ್ವಾಳ ತಾಲ್ಲೂಕು ಶಂಭೂರು ಡ್ಯಾಂನ ಹಿನ್ನೀರಿನ ಪ್ರದೇಶದಲ್ಲಿ ಹೂಳೆತ್ತಲು ಕೆ.ಎಸ್.ಎಂ.ಸಿ.ಎಲ್, ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಲಾಗಿದ್ದು, ಮಾನ್ಯ ಹಸಿರು ಪೀಠ ನ್ಯಾಯಾಲಯ ಚೆನ್ನೈನ OA No: 194/2020 (SZ), ದಿನಾಂಕ: 15.09.2022 ರನ್ವಯ ಫೆಬ್ರವರಿ 2023 ರಿಂದ ಮರಳು ಗಣಿಗಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿರುತ್ತದೆ ಹಾಗೂ ಸದರಿ ವಿಷಯವಾಗಿ ಹೂಳು ತೆಗೆಯುವುದರಿಂದಾಗುವ ಪ್ರಯೋಜನಗಳ ಮತ್ತು ಮರಳು ಗಣಿಗಾರಿಕೆಯನ್ನು ಮುಂದುವರೆಸುವ ಕುರಿತು ಸರ್ವೋಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ಕೋರಿ ಮನವಿ ಸಲ್ಲಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ನಂ: 8193/2023, ದಿನಾಂಕ: 14.05.2024 ರ ಆದೇಶದನ್ವಯ ಮಾನ್ಯ ಹಸಿರು ಪೀಠ ನ್ಯಾಯಾಲಯ ಚೆನ್ನೈ ಆದೇಶ ಹೊರಡಿಸಿರುವ ದಿನಾಂಕಕ್ಕಿಂತ ಮುಂಚೆ ತೆಗೆದ ಹಾಗೂ ದಾಸ್ತಾನಿರಿಸಿರುವ ಮರಳನ್ನು ಸಾರ್ವಜನಿಕವಾಗಿ, ನಿಷ್ಪಕ್ಷವಾದ ಪಾರದರ್ಶಕ ನೆಲೆಯಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಬಹಿರಂಗ ಹರಾಜು ಮಾಡಿ, ಅದರಿಂದ ದೊರೆತ ಹಣವನ್ನು ನ್ಯಾಯಾಲಯಕ್ಕೆ ಜಮೆ ಮಾಡುವಂತೆಯೂ, ನಂತರ ಸದರಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸ್ಥಿರ ಠೇವಣಿ ನೋಂದಾವಣಿ ಬಗ್ಗೆ ವರದಿ ಸಲ್ಲಿಸಿದ ನಂತರ ನ್ಯಾಯಾಲಯದಿಂದ ಸ್ಪಷ್ಟನೆ ನೀಡುವುದಾಗಿ ಆದೇಶವಾಗಿರುತ್ತದೆ.

ಅದರಂತೆ ಸದರಿ ಎರಡೂ ಪ್ರದೇಶಗಳಲ್ಲಿ ದಾಸ್ತಾನಿರಿಸಿರುವ ಒಟ್ಟು 21,328 ಮೆ.ಟನ್ ಮರಳನ್ನು ಬಹಿರಂಗ ಹರಾಜು ಮಾಡಬೇಕಾಗಿರುತ್ತದೆ ಹಾಗೂ ಸದರಿ ಮರಳಿನ ಮಾರಾಟ ದರವನ್ನು ನಿಗಧಿಪಡಿಸಬೇಕಾಗಿರುತ್ತದೆ ಎಂಬುದಾಗಿ ಉಪ ನಿರ್ದೇಶಕರು ಸಭೆಗೆ ತಿಳಿಸಿದರು.

ನಿರ್ಣಯ: ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಪ್ರದೇಶಗಳಲ್ಲಿ ದಾಸ್ತಾನಿರಿಸಿರುವ ಒಟ್ಟು 21,328 ಮೆ.ಟನ್ ಮರಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಹಾಗೂ ಸದರಿ ಪ್ರದೇಶದಲ್ಲಿನ ಪ್ರತಿ ಮೆ.ಟನ್ ಮರಳಿಗೆ ಮಾರಾಟ ದರ (ಕನಿಷ್ಠ ಬೆಲೆ) ರೂ.700/- ನ್ನು ನಿಗಧಿಪಡಿಸಲು ಸಭೆಯಲ್ಲಿ ತೀರ್ಮಾನಿಸಿ ಈ ಬಗ್ಗೆ ಮಾಹಿತಿಯನ್ನು ಪತ್ರ ಮುಖೇನ ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್ (KSMCL), ಬೆಂಗಳೂರು ಇವರಿಗೆ ನೀಡಲು ಉಪ ನಿರ್ದೇಶಕರಿಗೆ ತಿಳಿಸಲಾಯಿತು. ಮುಂದುವರೆದು ಸದರಿ ಸ್ಟಾಕ್‌ಯಾರ್ಡ್‌ನಲ್ಲಿ ಯಾವುದೇ ಅನಧಿಕೃತ ಮರಳು ಸಾಗಾಟಕ್ಕೆ ಆಸ್ಪದ ನೀಡದಂತೆ ಸಿ.ಸಿ. ಟಿ.ವಿ ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ ಕೊನೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಉಪ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

**ದಿನಾಂಕ 07-10-2024 ರಂದು ಅಪರಾಹ್ನ 3:30 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲೆಯ CRZ/ Non-CRZ ಪ್ರದೇಶದಲ್ಲಿನ ಮರಳು ಗಣಿ ಚಟುವಟಿಕೆಗಳನ್ನು ನಿಯಂತ್ರಿಸುವ ಕುರಿತು ಚರ್ಚಿಸುವ ಸಲುವಾಗಿ ಜಿಲ್ಲಾಧಿಕಾರಿಗಳ ಕಛೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮರಳು ಸಮಿತಿ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಮಾನ್ಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
2. ಮಾನ್ಯ ಪೊಲೀಸ್ ಆಯುಕ್ತರು, ಮಂಗಳೂರು ನಗರ, ದಕ್ಷಿಣ ಕನ್ನಡ ಜಿಲ್ಲೆ.
3. ಮಾನ್ಯ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
4. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು (ಪರವಾಗಿ).
5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುಂದಾಪುರ ವಿಭಾಗ, ಕುಂದಾಪುರ (ಪರವಾಗಿ).
6. ಮಾನ್ಯ ಉಪ ವಿಭಾಗಾಧಿಕಾರಿಗಳು, ಮಂಗಳೂರು ಉಪವಿಭಾಗ, ಮಂಗಳೂರು (ಪರವಾಗಿ).
7. ಮಾನ್ಯ ಉಪ ವಿಭಾಗಾಧಿಕಾರಿಗಳು, ಪುತ್ತೂರು ಉಪವಿಭಾಗ, ಪುತ್ತೂರು.
8. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು.
9. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು (ಪರವಾಗಿ).
10. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾರಿಗೆ ಇಲಾಖೆ, ಮಂಗಳೂರು.
11. ತಹಶೀಲ್ದಾರರು, ಬಂಟ್ವಾಳ/ ಬೆಳ್ತಂಗಡಿ/ ಮಂಗಳೂರು/ ಪುತ್ತೂರು/ ಸುಳ್ಯ/ ಕಡಬ/ ಮೂಡಬಿದ್ರೆ (ಪರವಾಗಿ)/ ಮುಲ್ಕಿ/ ಉಳ್ಳಾಲ ತಾಲ್ಲೂಕು.
12. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು.
13. ತಾಲ್ಲೂಕು ಭೂವಿಜ್ಞಾನಿಗಳು, ಬಂಟ್ವಾಳ/ ಬೆಳ್ತಂಗಡಿ/ ಮಂಗಳೂರು/ ಪುತ್ತೂರು/ ಸುಳ್ಯ/ ಕಡಬ/ ಮೂಡಬಿದ್ರೆ/ ಮುಲ್ಕಿ/ ಉಳ್ಳಾಲ ತಾಲ್ಲೂಕು.

ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆ ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಮಾನ್ಯ ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಿ ವಿಷಯವಾರು ಅಜೆಂಡಾ ಬಗ್ಗೆ ಸದಸ್ಯರೊಂದಿಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಮಾನ್ಯ ಅಧ್ಯಕರು ಮಾತನಾಡುತ್ತಾ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿ ಚಟುವಟಿಕೆಗಳ ವಿರುದ್ಧ ಕೈಗೊಂಡಿರುವ ಕ್ರಮದ ಕುರಿತು ಸಭೆಗೆ ಕೇಳಿದಾಗ, ಏಪ್ರಿಲ್-2024 ರಿಂದ ಸೆಪ್ಟೆಂಬರ್-2024 ವರೆಗೆ ಅನಧಿಕೃತ ಮರಳು ಗಣಿ ಚಟುವಟಿಕೆಗಳ ಸಂಬಂಧ ಈ ಕೆಳಕಂಡಂತೆ ಕ್ರಮ ಜರುಗಿಸಲಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ವಿವರಿಸಿದರು.

| ಕ್ರ. ಸಂ. | ಇಲಾಖೆ | ಗಣಿಗಾರಿಕೆ | | | ಸಾಗಾಣಿಕೆ | | | ದಾಸ್ತಾನು | | |
|---|---|---|---|---|---|---|---|---|---|---|
| | | ಪ್ರಕರಣಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ. ಆರ್/ ಪಿ.ಸಿ. ಆರ್ ಸಂಖ್ಯೆ | ಪ್ರಕರಣಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ. ಆರ್/ ಪಿ.ಸಿ. ಆರ್ ಸಂಖ್ಯೆ | ಪ್ರಕರಣಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ. ಆರ್/ ಪಿ.ಸಿ. ಆರ್ ಸಂಖ್ಯೆ |
| 1 | ಗಣಿ ಮತ್ತು ಭೂವಿಜ್ಞಾನ ಇಲಾಖೆ | 35 | 10.88 | 21 | 34 | 6.67 | 20 | 16 | 11.20 | 1 |
| 2 | ಕಂದಾಯ ಇಲಾಖೆ/ ಗಣಿ ಮತ್ತು ಭೂವಿಜ್ಞಾನ ಇಲಾಖೆ | 0 | 0 | 0 | 0 | 0 | 0 | 2 | 0.69 | 0 |
| 3 | ಸಹಾಯಕ ಆಯುಕ್ತರು/ ಕಂದಾಯ ಇಲಾಖೆ | 0 | 0 | 0 | 2 | 0.23 | 1 | 0 | 0 | 0 |
| 4 | ಪೋಲೀಸ್ ಇಲಾಖೆ | 2 | 2.40 | 1 | 19 | 9.60 | 3 | 5 | 0.71 | 0 |
| 5 | ಲೋಕೋಪಯೋಗಿ ಇಲಾಖೆ | 0 | 0 | 0 | 0 | 0 | 0 | 0 | 0 | 0 |
| 6 | ಅರಣ್ಯ ಇಲಾಖೆ | 0 | 0 | 0 | 0 | 0 | 0 | 0 | 0 | 0 |
| ಒಟ್ಟು | | 37 | 13.28 | 22 | 55 | 16.50 | 24 | 23 | 12.61 | 1 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ದಿನಾಂಕ 04-10-2024 ರಂದು ಮಂಗಳೂರು ತಾಲ್ಲೂಕು ಪಚ್ಚನಾಡಿ-ಅಡ್ಯಾರ್ ಬ್ರಿಡ್ಜ್-ಕಂ-ಬ್ಯಾರೇಜ್ ಸಮೀಪದಲ್ಲಿ ನೇತ್ರಾವತಿ ನದಿಯಿಂದ ಅನಧಿಕೃತವಾಗಿ ಮರಳು ತೆಗೆಯಲು ಬಳಸುತ್ತಿದ್ದ ದೋಣಿಗಳನ್ನು ಮತ್ತು ಯಂತ್ರೋಪಕರಣಗಳನ್ನು ವಶಪಡಿಸಿಕೊಂಡು ಅವುಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ಎಂದು ಸಭೆಗೆ ಕೇಳಿದಾಗ, ಮಂಗಳೂರು ಮತ್ತು ಉಳ್ಳಾಲ ತಾಲ್ಲೂಕು ಮರಳು ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳ ತಂಡವು ಮಂಗಳೂರು ತಾಲ್ಲೂಕು ಪಚ್ಚನಾಡಿ-ಅಡ್ಯಾರ್ ಬ್ರಿಡ್ಜ್-ಕಂ-ಬ್ಯಾರೇಜ್ ಸಮೀಪದಲ್ಲಿ ನೇತ್ರಾವತಿ ನದಿಯಿಂದ ಅನಧಿಕೃತವಾಗಿ ಮರಳು ತೆಗೆಯಲು ಬಳಸುತ್ತಿದ್ದ ಒಟ್ಟು 21 ದೋಣಿಗಳನ್ನು, 06 ದೋಣಿಯ ಮೋಟಾರುಗಳನ್ನು ಮತ್ತು 08 ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು, ಮಂಗಳೂರು ತಾಲ್ಲೂಕು ಅಡ್ಯಾರು ಗ್ರಾಮದ ಸರ್ಕಾರಿ ಪೊರಂಬೋಕು ನೇತ್ರಾವತಿ ನದಿ ಸರ್ವೆ ನಂ.57 ರಲ್ಲಿ ಕ್ರೇನ್ ಮೂಲಕ ತಂದು ಇರಿಸಲಾಗಿದ್ದು, ಅವುಗಳ ವಿರುದ್ಧ ಮುಂದಿನ ಕ್ರಮ ಜರುಗಿಸುವವರೆಗೆ ಭದ್ರತೆಯ ಸಲುವಾಗಿ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ ಎಂದು ಭೂವಿಜ್ಞಾನಿಯವರು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ವಶಪಡಿಸಿಕೊಂಡಿರುವ ದೋಣಿಗಳು ಮತ್ತು ಯಂತ್ರೋಪಕರಣಗಳ ವಿರುದ್ಧ ಕೈಗೊಳ್ಳುವ ಮುಂದಿನ ಕ್ರಮದ ಬಗ್ಗೆ ಸಭೆಗೆ ಕೇಳಿದಾಗ, ಸದರಿ ಜಪ್ತು ಮಾಡಿರುವ ದೋಣಿ ಹಾಗೂ ಯಂತ್ರೋಪಕರಣಗಳ ಮಾಲೀಕರ ಮೇಲೆ ಸಂಬಂಧಪಟ್ಟ ಪೊಲೀಸ್

ಠಾಣೆಗಳಲ್ಲಿ ಈಗಾಗಲೇ ದಿನಾಂಕ: 25-09-2024 ರ ಪತ್ರದಲ್ಲಿ ಸೂಚಿಸಿರುವಂತೆ ಕ್ರಮವಹಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಲಾಯಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಮುಂದುವರೆದು, ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅನಧಿಕೃತ ಮರಳುಗಾರಿಕೆ ಚಟುವಟಿಕೆಯನ್ನು ಪರಿಣಾಮಕಾರಿಯಾಗಿ ತಹಬದಿಗೆ ತರಲು ಇತರೆ ಸಲಹೆಗಳನ್ನು ಸಭೆಗೆ ನೀಡುವಂತೆ ಮಾನ್ಯ ಅಧ್ಯಕ್ಷರು ಸೂಚಿಸಲಾಗಿ, ಹಿರಿಯ ಭೂವಿಜ್ಞಾನಿಯವರು ಮಾತನಾಡುತ್ತಾ, ಕರಾವಳಿ ನಿಯಂತ್ರಣ ವಲಯ ಪ್ರದೇಶವು ಪ್ರಾದೇಶಿಕ ನಿರ್ದೇಶಕರು, ಕರಾವಳಿ ನಿಯಂತ್ರಣ ವಲಯ, ಮಂಗಳೂರು ಇವರ ಪರಿವ್ಯಾಪ್ತಿಗೆ ಒಳಪಟ್ಟಿದ್ದು, ಸದರಿಯವರು ಜಿಲ್ಲಾ 07 ಸದಸ್ಯರ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾಗಿದ್ದು, ಸದರಿ ಪ್ರದೇಶದಲ್ಲಿನ ಕುದ್ರು/ ದ್ವೀಪ ಪ್ರದೇಶವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಮಂಗಳೂರು ಇವರು ಜಿಲ್ಲಾ 07 ಸದಸ್ಯರ ಸಮಿತಿಯಲ್ಲಿ ಸದಸ್ಯರಾಗಿದ್ದು, ನದಿಯಲ್ಲಿನ ಮೀನುಗಾರಿಕೆ ದೋಣಿಗಳನ್ನು/ ಸಾರ್ವಜನಿಕ ಸಂಚಾರ ದೋಣಿಗಳನ್ನು ಹೊರತುಪಡಿಸಿ ಯಾವುದೇ ಮರಳುಗಾರಿಕೆ ದೋಣಿಗಳು ನದಿಯಲ್ಲಿ ಕಂಡು ಬಂದಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ ಅವುಗಳನ್ನು ತೆರವುಗೊಳಿಸಲು ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲು ಜವಾಬ್ದಾರಿಯನ್ನು ಹೊಂದಿರುತ್ತಾರೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಅಕ್ರಮ ಗಣಿಗಾರಿಕೆ ತಡೆಗಟ್ಟುವ ದೃಷ್ಟಿಯಿಂದ ಇಲಾಖೆಗಳಾದ ಕರಾವಳಿ ನಿಯಂತ್ರಣ ವಲಯ, ಗಣಿ ಇಲಾಖೆಯವರು ಮತ್ತು ಪೊಲೀಸ್ ಇಲಾಖೆಯವರ ಜೊತೆ ತಂಡಮಾಡಿಕೊಂಡು ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ವಹಿಸುವಂತೆ ಹಾಗೂ ಉಪವಿಭಾಗಾಧಿಕಾರಿಗಳು ಈ ಕುರಿತು ತಮ್ಮ ಹಂತದಲ್ಲಿ ತಂಡಗಳನ್ನು ರಚಿಸಿಕೊಂಡು ಅಕ್ರಮ ಮರಳುಗಾರಿಕೆ ಕುರಿತು ಪರಿವೀಕ್ಷಣೆ ಮಾಡಿ ಪಾಲನ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

(ಕ್ರಮ: ಕರಾವಳಿ ನಿಯಂತ್ರಣ ವಲಯ, ಮೀನುಗಾರಿಕೆ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ದಕ್ಷಿಣ)

ಮುಂದುವರೆದು, ಮಾನ್ಯ ಅಧ್ಯಕ್ಷರು ಅನಧಿಕೃತ ಮರಳುಗಾರಿಕೆ/ ಸಾಗಾಣಿಕೆ/ ದಾಸ್ತಾನು ಚಟುವಟಿಕೆಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆಯನ್ನೊಳಗೊಂಡಂತೆ ಆಯಾ ತಾಲ್ಲೂಕಿನ ಆಯಾ ಪ್ರದೇಶದ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ರಾತ್ರಿ ಪಹರೆ ತಂಡಗಳನ್ನು ರಚಿಸಿ ಕ್ರಮ ವಹಿಸುವಂತೆ ಹಾಗೂ ಯಾವ ಸ್ಥಳಗಳಲ್ಲಿ ರೈಲ್ವೆ ಹಳಿ, ಸೇತುವೆ ಕಂಡು ಬರುತ್ತದೆಯೋ ಅಂತಹ ಪ್ರದೇಶಗಳಲ್ಲಿನ ರೈಲ್ವೇ ಸಿಬ್ಬಂದಿಯನ್ನು, ಸಂಬಂಧಪಟ್ಟ ಸೇತುವೆ ನಿರ್ವಹಣಾ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡು ತಂಡಗಳನ್ನು ರಚಿಸಿ ಅನಧಿಕೃತ ಮರಳುಗಾರಿಕೆ/ ಸಾಗಾಣಿಕೆ/ ದಾಸ್ತಾನು ಚಟುವಟಿಕೆಗಳು ನಡೆಯದಂತೆ ನಿಯಂತ್ರಣಾ ಕ್ರಮ ಕೈಗೊಳ್ಳುವಂತೆ ಹಾಗೂ ಸೇತುವೆಯಿಂದ/ ಪ್ರಮುಖ ರಚನೆಗಳಿಂದ 500 ಮೀಟರ್ ವ್ಯಾಪ್ತಿಯೊಳಗೆ ಯಾವುದೇ ಮರಳುಗಾರಿಕೆ ಚಟುವಟಿಕೆಗಳು ನಡೆಯದಂತೆ ನಿಯಂತ್ರಣಾ ಕ್ರಮ ಕೈಗೊಳ್ಳುವಂತೆ, ಅಂತಹ ಸ್ಥಳಗಳಲ್ಲಿ ತಾತ್ಕಾಲಿಕ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ ಕ್ರಮ ವಹಿಸುವಂತೆ ತಾಲೂಕು ತಹಶೀಲ್ದಾರರುಗಳು ಕೂಡಲೇ ತಂಡಗಳನ್ನು ರಚಿಸಲು ಸೂಚಿಸಲಾಯಿತು.

**(ಕ್ರಮ: ಉಪವಿಭಾಗಾಧಿಕಾರಿಗಳು ತಾಲೂಕು ತಹಶೀಲ್ದಾರರುಗಳು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ಉಪವಿಭಾಗ ಮಟ್ಟದ ಸಭೆಗಳನ್ನು ನಡೆಸಿ ಪರಿಶೀಲಿಸುವುದು)**

ಮಾನ್ಯ ಪೊಲೀಸ್ ಆಯುಕ್ತರು ಮಾತನಾಡುತ್ತಾ, ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ಹೆಚ್ಚಾಗಿ ಅನಧಿಕೃತ ಮರಳುಗಾರಿಕೆ ನಡೆಯುವ 6 ರಿಂದ 7 ಸ್ಥಳಗಳಲ್ಲಿ ಸಿ.ಸಿ.ಕ್ಯಾಮೆರಾಗಳನ್ನು (ANPR & Face Recognition) ಅಳವಡಿಸಿದಲ್ಲಿ ಅನಧಿಕೃತ ಮರಳುಗಾರಿಕೆ/ ಸಾಗಾಣಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದಾಗ, ಸದರಿ ವಿಷಯದ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಪ್ರಸ್ತುತ ಇರುವ ಕ್ಯಾಮರ ಕಣ್ಗಾವಲು ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದಕಾರಣ ಪೊಲೀಸ್ ಠಾಣೆಗಳಲ್ಲಿ ಕಣ್ಗಾವಲು ವ್ಯವಸ್ಥೆಯನ್ನು ಸುಧಾರಿಸಿ ಪರಿಣಾಮಕಾರಿ ಕಣ್ಗಾವಲು ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು. ಮುಂದುವರೆದು ಅನಧಿಕೃತ ಮರಳುಗಾರಿಕೆ/ ಸಾಗಾಣಿಕೆ/ ದಾಸ್ತಾನು ಚಟುವಟಿಕೆ ಪ್ರದೇಶಗಳಲ್ಲಿ ಉತ್ತರ ಪ್ರದೇಶ ಮತ್ತು ಬಿಹಾರ ಮೂಲದ ಮರಳು ತೆಗೆಯುವ ಕಾರ್ಮಿಕರುಗಳಿಗೆ ಸ್ಥಳೀಯ ಗ್ರಾಮದ ವ್ಯಾಪ್ತಿಯಲ್ಲಿ ಹಾಗೂ ಸರ್ಕಾರಿ ಹೊಳೆ ಪೊರಂಬೋಕು ಪ್ರದೇಶಗಳಲ್ಲಿ ಅನಧಿಕೃತವಾಗಿ ಶೆಡ್‌ಗಳು/ ಟೆಂಟ್‌ಗಳನ್ನು ನಿರ್ಮಿಸಿದ್ದು, ಇವುಗಳನ್ನು ತೆರವುಗೊಳಿಸಿದಲ್ಲಿ

ಅನಧಿಕೃತ ಮರಳುಗಾರಿಕೆ ಚಟುವಟಿಕೆಯನ್ನು ತಹಬದಿಗೆ ತರಲು ಸಾಧ್ಯವಾಗುವುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದಾಗ, ಈ ಕುರಿತು ಮಾನ್ಯ ಅಧ್ಯಕ್ಷರು ಅನಧಿಕೃತ ಮರಳುಗಾರಿಕೆ ಚಟುವಟಿಕೆ ನಡೆಸಲು ಕಾರ್ಮಿಕರುಗಳಿಗೆ ಶೆಡ್‌ಗಳು/ ಟೆಂಟ್‌ಗಳನ್ನು ನಿರ್ಮಿಸಿರುವುದು ಕಂಡು ಬಂದಲ್ಲಿ ಅವುಗಳನ್ನು ಕಂದಾಯ ಇಲಾಖೆಯ ತಹಶೀಲ್ದಾರರು, ಪರಿವ್ಯಾಪ್ತಿಯ ಪೊಲೀಸ್ ಠಾಣಾ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಭೇಟಿ ನೀಡಿ ಅಂತಹ ಮರಳುಗಾರಿಕೆ ನಡೆಸುವ ಕಾರ್ಮಿಕರ ಶೆಡ್‌ಗಳನ್ನು/ ಟೆಂಟ್‌ಗಳನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು. ಈ ಕುರಿತು ತಾಲೂಕು ಮಟ್ಟದ ಸಮಿತಿಗಳಲ್ಲಿ ಚರ್ಚಿಸಿ ಪಾಲನ ವರದಿಯನ್ನು ಸಲ್ಲಿಸುವುದು.

**(ಕ್ರಮ: ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು, ಪೊಲೀಸ್ ಇಲಾಖೆ, ಗಣಿ ಇಲಾಖೆ, ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿ, ಮತ್ತು ಕಾರ್ಮಿಕ ಇಲಾಖೆ )**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ದಿನಾಂಕ 07-06-2024 ರಂದು ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಮತ್ತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ & ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ Coastal Regulation Zones ನಲ್ಲಿ ಮರಳು ಸಮಸ್ಯೆಗಳ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಇತರೆ ವಿಷಯಗಳ ಕುರಿತು ನಡೆದ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನ್ಸೂನ್ ಅವಧಿಯು ಕೊನೆಗೊಳ್ಳುವ ಮುನ್ನ ಕರಾವಳಿ ನಿಯಂತ್ರಣ ವಲಯದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಕೇಂದ್ರ ಸರ್ಕಾರದಿಂದ ದಿನಾಂಕ 08-05-2023 ರಂದು ಸಂಖ್ಯೆ F.No.19-112/2013-IA III(pt) ರಂತೆ ಹೊರಡಿಸಿರುವ ತಿದ್ದುಪಡಿ ಮಾರ್ಗಸೂಚಿ (ಕರಡು) ಕ್ರಮ ಸಂಖ್ಯೆ ix ರಲ್ಲಿ ಸೇರಿಸಿರುವಂತೆ ಮತ್ತು ಮಾನ್ಯ ರಾಷ್ಟ್ರೀಯ ಹಸಿರು ಪೀಠ ನ್ಯಾಯಾಲಯವು O.A. No. 252/2017 ರ ಆದೇಶದ ಕಂಡಿಕೆ ಸಂಖ್ಯೆ 75 ರಲ್ಲಿ ನೀಡಿರುವ ನಿರ್ದೇಶನದಂತೆ ಕರಾವಳಿ ನಿಯಂತ್ರಣ ವಲಯದಲ್ಲಿ ಉತ್ಪತ್ತಿಯಾದ ಮರಳನ್ನು ನದಿ ಪಾತ್ರದ ತಗ್ಗು ಪ್ರದೇಶಗಳಿಗೆ ಹಾಕಲು, ಕಡಲ ತೀರಗಳಲ್ಲಿ ಮರಳಿನ ಪೋಷಣೆ ಮತ್ತು ನದಿ ದಡಗಳ ಬಲವರ್ಧನೆಗೆ  ಬಳಕೆಯಾದ ನಂತರದಲ್ಲಿ ಉಳಿದ ಮರಳನ್ನು ವಾಣಿಜ್ಯ ಉಪಯೋಗದ ಬಳಕೆಗಾಗಿ ಕ್ರಮಿಕವಾಗಿ ಮಾರ್ಗಸೂಚಿಯನ್ನು ಜಾರಿಗೆ ತರುವ ಬಗ್ಗೆ ಅನುಸರಣೆ ಮಾಡಲು ನಿರ್ಣಯಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸುತ್ತಾ, ಈ ಬಗ್ಗೆ ನಿರ್ದೇಶನ/ ಮಾರ್ಗಸೂಚಿಯನ್ನು ಹೊರಡಿಸಿದ್ದಲ್ಲಿ ಮಾಹಿತಿಯನ್ನು ಒದಗಿಸುವಂತೆ ಕೋರಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು

ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಹಾಗೂ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆಯಲು ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಗಳೂರು ಮತ್ತು ಪುತ್ತೂರು ಉಪ ವಿಭಾಗ ವ್ಯಾಪ್ತಿಯಲ್ಲಿ 15 ದಿನಗಳಿಗೊಮ್ಮೆ ಆಯಾ ತಾಲ್ಲೂಕುಗಳ ಮರಳು ಸಮಿತಿ ಸಭೆಯನ್ನು ನಡೆಸಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಂಬಂಧಪಟ್ಟ ವಿಷಯಗಳ ಕುರಿತು ಚರ್ಚಿಸಿ ಕ್ರಮ ಕೈಗೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ನಡವಳಿಗಳನ್ನು/ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ಜಿಲ್ಲಾ ಮರಳು ಸಮಿತಿಗೆ ಮಂಡಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಉಪ ವಿಭಾಗಾಧಿಕಾರಿಗಳು, ಮಂಗಳೂರು/ ಪುತ್ತೂರು ಉಪ ವಿಭಾಗ ಇವರುಗಳಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**(ಕ್ರಮ: ಉಪ ವಿಭಾಗಾಧಿಕಾರಿಗಳು, ಮಂಗಳೂರು/ ಪುತ್ತೂರು ಉಪ ವಿಭಾಗ)**

ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಹಿರಿಯ ಭೂವಿಜ್ಞಾನಿ/ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಜಿಲ್ಲಾಧಿಕಾರಿಗಳು/ ಅಧ್ಯಕ್ಷರು
ಜಿಲ್ಲಾ ಮರಳು ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ದಿನಾಂಕ 29-01-2025 ರಂದು ಬೆಳಿಗ್ಗೆ 11:00 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮರಳು ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಮಾನ್ಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
2. ಮಾನ್ಯ ಪೋಲಿಸ್ ಆಯುಕ್ತರು, ಮಂಗಳೂರು.
3. ಮಾನ್ಯ ಪೋಲಿಸ್ ಅಧೀಕ್ಷಕರು, ಮಂಗಳೂರು.
4. ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ (ಪರವಾಗಿ).
5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು.
6. ಮಾನ್ಯ ಉಪ ವಿಭಾಗಾಧಿಕಾರಿಗಳು, ಮಂಗಳೂರು ಉಪವಿಭಾಗ.
7. ಮಾನ್ಯ ಉಪ ವಿಭಾಗಾಧಿಕಾರಿಗಳು, ಪುತ್ತೂರು ಉಪವಿಭಾಗ (ಪರವಾಗಿ).
8. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು (ಪರವಾಗಿ).
9. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು (ಪರವಾಗಿ).
10. ಪರಿಸರ ಅಧಿಕಾರಿಗಳು, KSPCB, ಮಂಗಳೂರು (ಪರವಾಗಿ).
11. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾರಿಗೆ ಇಲಾಖೆ, ಬಂಟ್ವಾಳ.
12. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾರಿಗೆ ಇಲಾಖೆ, ಪುತ್ತೂರು.
13. ತಹಶೀಲ್ದಾರರು, ಮಂಗಳೂರು/ ಪುತ್ತೂರು (ಪರವಾಗಿ)/ ಸುಳ್ಯ/ ಮೂಡಬಿದ್ರೆ/ ಕಡಬ (ಪರವಾಗಿ)/ ಮುಲ್ಕಿ/ ಉಳ್ಳಾಲ (ಪರವಾಗಿ).
14. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು.
15. ಭೂವಿಜ್ಞಾನಿಗಳು, ಬಂಟ್ವಾಳ/ ಬೆಳ್ತಂಗಡಿ/ ಮಂಗಳೂರು/ ಪುತ್ತೂರು/ ಸುಳ್ಯ/ ಕಡಬ/ ಮೂಡಬಿದ್ರೆ/ ಮುಲ್ಕಿ/ ಉಳ್ಳಾಲ ತಾಲ್ಲೂಕು.

ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆ ನಡೆಸಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಿದರು. ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯನ್ನು ವಹಿಸಿ ವಿಷಯವಾರು ಅಜೆಂಡಾ ಬಗ್ಗೆ ಸದಸ್ಯರೊಂದಿಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಧಿಕೃತ ಉಪಖನಿಜ (ಸಾಮಾನ್ಯ ಮರಳು) ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಚಟುವಟಿಕೆಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮದ ಕುರಿತು (ಏಪ್ರಿಲ್–2024 ರಿಂದ ಡಿಸೆಂಬರ್–2024 ವರೆಗೆ).

| ಕ್ರ ಸಂ. | ಇಲಾಖೆ | ಗಣಿಗಾರಿಕೆ | | | ಸಾಗಾಣಿಕೆ | | | ದಾಸ್ತಾನು | | |
|---|---|---|---|---|---|---|---|---|---|---|
| | | ಪ್ರಕರಣ ಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ.ಆರ್/ ಪಿ.ಸಿ. ಆರ್ ಸಂಖ್ಯೆ | ಪ್ರಕರಣ ಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ.ಆರ್/ ಪಿ.ಸಿ. ಆರ್ ಸಂಖ್ಯೆ | ಪ್ರಕರಣ ಗಳ ಸಂಖ್ಯೆ | ದಂಡದ ಮೊತ್ತ (ಲಕ್ಷ) | ಎಫ್.ಐ.ಆರ್/ ಪಿ.ಸಿ. ಆರ್ ಸಂಖ್ಯೆ |
| 1 | ಗಣಿ ಮತ್ತು ಭೂವಿಜ್ಞಾನ ಇಲಾಖೆ | 39 | 11.94 | 22 | 38 | 7.81 | 24 | 16 | 11.20 | 1 |
| 2 | ಕಂದಾಯ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ | 15 | 0.84 | 13 | – | – | – | 2 | 0.69 | – |
| 3 | ಕಂದಾಯ ಇಲಾಖೆ | – | – | – | 3 | 0.49 | 2 | – | – | – |
| 4 | ಪೊಲೀಸ್ ಇಲಾಖೆ | 5 | 2.40 | 4 | 30 | 13.11 | 7 | 7 | 1.09 | – |
| 5 | ಅರಣ್ಯ ಇಲಾಖೆ | – | – | – | – | – | – | – | – | – |
| 6 | ಲೋಕೋಪಯೋಗಿ ಇಲಾಖೆ | – | – | – | – | – | – | – | – | – |
| ಒಟ್ಟು | | 59 | 15.19 | 39 | 71 | 21.42 | 33 | 25 | 12.99 | 1 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಅನಧಿಕೃತ ಮರಳು ಗಣಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಈಗಾಗಲೇ 30 ಸ್ಥಳಗಳಲ್ಲಿ 60 ಸಿ.ಸಿ.ಕ್ಯಾಮರೆಗಾಗಳನ್ನು ಅಳವಡಿಸಲಾಗಿದ್ದು, ಸದರಿ ಸಿ.ಸಿ.ಕ್ಯಾಮರಾಗಳ ಫೂಟೇಜ್ ಅನ್ನು ಪರಿಶೀಲಿಸಿ ಇಲ್ಲಿಯವರೆಗೆ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಕೇಳಿದಾಗ, ಸದರಿ ಸಿಸಿಟಿವಿ ಯ ದೃಶ್ಯಾವಳಿಗಳನ್ನು ವೀಕ್ಷಿಸಿ ಒಟ್ಟು 15 ಅನಧಿಕೃತ ಮರಳು ಸಾಗಾಣಿಕೆ ಪ್ರಕರಣಗಳು ಪತ್ತೆಯಾಗಿದ್ದು, ಅನಧಿಕೃತ ಮರಳು ಸಾಗಾಣಿಕೆ ವಾಹನ/ ಮಾಲೀಕರ ವಿರುದ್ಧ ಪರವ್ಯಾಪ್ತಿಯ ನ್ಯಾಯಾಲಯಗಳಲ್ಲಿ 12 ಖಾಸಗಿ ಫಿರ್ಯಾದಿಯನ್ನು ದಾಖಲಿಸಲಾಗಿರುತ್ತದೆ, ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ 01 FIR ಅನ್ನು ದಾಖಲಿಸಲಾಗಿರುತ್ತದೆ ಹಾಗೂ 02 ಪ್ರಕರಣಗಳಲ್ಲಿ ತಲಾ ರೂ.44,640/– ಗಳ ದಂಡದ ಮೊತ್ತ ಒಳಗೊಂಡಂತೆ ಒಟ್ಟು ರೂ.4,44,880/– ಗಳ ದಂಡದ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿಕೊಳ್ಳಲಾಗಿರುತ್ತದೆ. ಸದರಿ ಸಿ.ಸಿ.ಕ್ಯಾಮರಾಗಳು ಪರಿಣಾಮಕಾರಿಯಾಗಿ ಚಾಲನೆಯಲ್ಲಿ ಇಲ್ಲದೆ ಇರುವುದರಿಂದ ಹಾಗೂ ಮರಳು ಸಾಗಾಣಿಕೆ ವಾಹನಗಳು ವಾಹನ ಸಂಖ್ಯೆ ಗೋಚರಿಸದಂತೆ ಗ್ರೀಸ್ ಹಚ್ಚಿ ಚಾಲನೆ ಮಾಡಿರುವುದರಿಂದ ಹಾಗೂ ಸದರಿ ಸಂಸ್ಥೆಯವರು ಅನಧಿಕೃತ ಮರಳು ಸಾಗಾಣಿಕೆ ವಾಹನಗಳಿಗೆ ಸಂಬಂಧಪಟ್ಟಂತೆ ಸಿ.ಸಿ.ಕ್ಯಾಮರಾ ಫೋಟೇಜ್ ಅನ್ನು ಕಾಲಕಾಲಕ್ಕೆ ನೀಡದೆ ಇರುವುದರಿಂದ, ಸದರಿ ಕ್ಯಾಮರಾಗಳು ನಿರಂತರವಾಗಿ ಚಾಲನೆಯಲ್ಲಿ ಇಲ್ಲದೆ

(Offline) ಇರುವುದರಿಂದ, ಗಣಿ ಮತ್ತು ಭೂವಿಜ್ಞಾನ ಇಲಾಖಾ ಕಛೇರಿಯಲ್ಲಿ ಸದರಿ ಸಿ.ಸಿ.ಕ್ಯಾಮೆರಾಗಳ ಕುರಿತು ತಾಂತ್ರಿಕ ಪರಿಣತಿ ಹೊಂದಿಲ್ಲದ ಇರುವುದರಿಂದಾಗಿ ಸದರಿ ಸಿ.ಸಿ.ಕ್ಯಾಮೆರಾಗಳನ್ನು ಪರಿಶೀಲಿಸಿ ಅನಧಿಕೃತ ಮರಳು ಸಾಗಾಣಿಕೆ ವಾಹನಗಳ ವಿರುದ್ಧ ಪರಿಣಾಮಕಾರಿಯಾಗಿ ಕ್ರಮ ವಹಿಸಲು ಕಷ್ಟಸಾಧ್ಯವಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ವಿವರಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತ 30 ಲಕ್ಷ ಅನುದಾನದಲ್ಲಿ 60 ಸಿ.ಸಿ.ಟಿವಿ ಕ್ಯಾಮರಗಳನ್ನು ಅಳವಡಿಸಿದರೂ ಪರಿವೀಕ್ಷಣೆ ಮಾಡಲು ಸೆರೆಹಿಡಿದ ಚಿತ್ರಗಳ ಬಗ್ಗೆ ಮಾಹಿತಿಯನ್ನು ಕೋರಿದಾಗ ದಿನಾಂಕ: 11.04-2024 ರಿಂದ 29-08-2024 ರ ವರೆಗೆ ಬರೀ 15 ಪ್ರಕರಣಗಳನ್ನು ದಾಖಲಿಸಿರುವುದು ಕಂಡುಬಂದಿರುತ್ತದೆ. ತದನಂತರ ಈವರೆಗೂ ಯಾವುದೇ ಒಂದು ಪ್ರಕರಣವು ದಾಖಲಾಗಿರುವುದು ಕಂಡುಬಂದಿರುವುದಿಲ್ಲ. 60 ಸಿಸಿ ಟಿವಿ ಕ್ಯಾಮರಗಳನ್ನು ಅಳವಡಿಸಿದರೂ ಕೂಡ ಗಣಿ ಇಲಾಖೆಯು ಅಕ್ರಮ ಮರಳುಗಾರಿಕೆಯ ಮೇಲೆ ನಿಗಾ ಇಡುವುದರಲ್ಲಿ ಸಂಪೂರ್ಣ ವಿಫಲವಾಗಿರುತ್ತದೆ. ಯಾವುದೇ ಪ್ರಕರಣ ದಾಖಲಾಗಿಲ್ಲದಿರುವುದರಿಂದ ಅಕ್ರಮ ಮರಳುಗಾರಿಕೆ ತಡೆಗಟ್ಟುವ ಬಗ್ಗೆ ಈ ಸಮಿತಿಯಿಂದ ಉದ್ದೇಶಪರ್ವಕವಾಗಿ ಕೆಲವೊಂದು ಮಾಹಿತಿಯನ್ನು ತಡೆಹಿಡಿದಿರುವುದು ಕಂಡುಬರುತ್ತಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. NON-CRZ ವ್ಯಾಪ್ತಿಯಲ್ಲಿ ಎಪ್ರಿಲ್ ನಿಂದ ಡಿಸಂಬರ್ ವರೆಗೆ 59 ಪ್ರಕರಣಗಳನ್ನು ದಾಖಲಿಸಿರುವುದಾಗಿ ಸಮಿತಿಗೆ ಮಂಡಿಸದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಪರಿಶೀಲಿಸಿದಾಗ ಗಣನೀಯವಾಗಿ ಪ್ರಕರಣಗಳು ಕಡಿಮೆ ಇದ್ದು ಈ ಬಗ್ಗೆ ತಿಂಗಳುವಾರು ವರದಿಯನ್ನು ಸಮಿತಿಯಲ್ಲಿ ಕೋರಿದಾಗ ಸ್ಪಷ್ಟ ಮಾಹಿತಿಯನ್ನು ಮಂಡಿಸಿರುವುದಿಲ್ಲ, ಆದ್ದರಿಂದ ಮುಂದಿನ ಸಭೆಗೆ ಸ್ಪಷ್ಟಮಾಹಿತಿಯನ್ನು ನೀಡಲು ಸೂಚಿಸಲಾಯಿತು.

ಮುಂದುವರೆದು ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸದರಿ ಸಮಸ್ಯೆಯನ್ನು ಆಲಿಸಿ ಸದರಿ ಅಳವಡಿಸಿರುವ ಸಿ.ಸಿ.ಕ್ಯಾಮೆರಾಗಳನ್ನು ನಿಗಾವಹಿಸಲು ಸಿ.ಸಿ.ಕ್ಯಾಮೆರಾಗಳ ಡಾಟಾ/ ಫೀಡ್ ಅನ್ನು ಸ್ಮಾರ್ಟ್ ಸಿಟಿ ಕಮಾಂಡ್ ಸೆಂಟರ್‌ನಲ್ಲಿ ಅಳವಡಿಸಿ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸಿ ಸದರಿ ಸಿ.ಸಿ.ಕ್ಯಾಮೆರಾಗಳ ಫೋಟೇಜ್ ಅನ್ನು ಪರಿಶೀಲಿಸಿ ಅನಧಿಕೃತ ಮರಳು ಸಾಗಾಣಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕಾರ್ಯ ಪ್ರವೃತ್ತರಾಗಲು ಸಭೆಯು ಸರ್ವಾನುಮತದಿಂತ ತೀರ್ಮಾನಿಸಿತು.

(ಕ್ರಮ: ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಮುಂದುವರೆದು, ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅನಧಿಕೃತ ಮರಳು ಗಣಿಗಾರಿಗೆ/ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟನಲ್ಲಿ ಯಥೇಚ್ಛವಾಗಿ ಅನಧಿಕೃತ ಮರಳು ಗಣಿ ಚಟುವಟಿಕೆಗಳು ನಡೆಯುವ ಪ್ರದೇಶಗಳಾದ ಅಡ್ಯೂರು, ತಲಪಾಡಿ, ಉದ್ಯಬೆಟ್ಟು, ಫರಂಗಿಪೇಟೆಯ ಸಮೀಪದಲ್ಲಿ ವಿವಿಧ ಇಲಾಖೆಗಳ ಅಧಿಕಾರಗಳನ್ನೊಳಗೊಂಡ ಸಂಕೀರ್ಣ ತನಿಖಾ ಠಾಣೆಗಳನ್ನು ನಿರ್ಮಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆ/ ಲೋಕೋಪಯೋಗಿ ಇಲಾಖೆ/ ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿ ನಿರಂತರವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ತಾಲ್ಲೂಕು ಮರಳು ಸಮಿತಿಯ ಸಭೆಯನ್ನು ನಡೆಸಿ ಅನಧಿಕೃತ ಮರಳು ಗಣಿ ಚಟುವಟಿಕೆಗಳನ್ನು ಕಂಡು ಬಂದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರಂತೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮಗಳಂತೆ ಕ್ರಮ ವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

(ಕ್ರಮ: ತಾಲ್ಲೂಕು ಮರಳು ಸಮಿತಿ/ ಪೊಲೀಸ್/ ಲೋಕೋಪಯೋಗಿ/ ಗಣಿ ಮತ್ತು ಭೂವಿಜ್ಞಾನ ಇಲಾಖೆ)

2. ದಕ್ಷಿಣ ಕನ್ನಡ ಜಿಲ್ಲೆಯ Non-CRZ ವ್ಯಾಪ್ತಿಯಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡಲು ತಾಲ್ಲೂಕು ಮರಳು ಸಮಿತಿಯಿಂದ ಬಂದಿರುವ ಪ್ರಸ್ತಾವನೆ ಕುರಿತು.

| ಕ್ರ ಸಂ. | ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ನದಿ ಪಾತ್ರ | ಮರಳು ಲಭ್ಯತೆಯ ಅಂದಾಜು ಪ್ರಮಾಣ (ಮೆ.ಟನ್) | ತಾಲ್ಲೂಕು ಮರಳು ಸಮಿತಿ ಸಭೆಯ ಶಿಫಾರಸ್ಸು |
|---|---|---|---|---|---|---|---|
| 1 | ಪುತ್ತೂರು | ಬಜತ್ತೂರು | 66 | 3.00 | ನೇತ್ರಾವತಿ | 12,689 | ದಿನಾಂಕ 22-08-2024 ರಂದು ನಡೆದ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ಸದರಿ ಮರಳು ಬ್ಲಾಕ್ ಅನ್ನು ಈಗಾಗಲೇ ಸ್ಥಳ ತನಿಖೆ ಮಾಡಲಾಗಿದ್ದು, ಜಂಟಿ ವರದಿಯನ್ವಯ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ನಿರ್ಣಯಿಸಲಾಗಿರುತ್ತದೆ.<br>ಸದರಿ ಮರಳು ಬ್ಲಾಕ್ ಅನ್ನು ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ, ಜಿಲ್ಲಾ ಮರಳು ಸಮಿತಿಗೆ ಮಂಡಿಸುವ |

| | | | | | | | |
|---|---|---|---|---|---|---|---|
| | | | | | | | ಸಂಬಂಧ ತಮ್ಮ ಇಲಾಖಾ ವತಿಯಿಂದ ನಿಯಮಾನುಸಾರ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ತಾಲ್ಲೂಕು ಮರಳು ಸಮಿತಿಯಿಂದ ದಿನಾಂಕ 10-09-2024 ರಂದು ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು **KMMCR 1994** ರ ನಿಯಮ **31-R(3)(iv)** ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |
| 2 | ಕಡಬ | ನೂಜಿಬಾಳ್ತಿಲ | 72/1 | 1.00 | ಗುಂಡ್ಯಹೊಳೆ | 5,224 | ದಿನಾಂಕ 20-09-2024 ರಂದು ನಡೆದ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರಿ ಕಾಮಗಾರಿ/ ಗ್ರಾಹಕರಿಗೆ ಮರಳಿನ ಕೊರತೆ ಉಂಟಾಗದಂತೆ ಮರಳು ಲಭ್ಯವಾಗುವ ನಿಟ್ಟಿನಲ್ಲಿ ಸದರಿ ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಹಾಗೂ ಸದರಿ ಮರಳು ಬ್ಲಾಕ್‌ನ ಜಂಟಿ ಸ್ಥಳ ಪರಿಶೀಲನಾ ವರದಿಯಲ್ಲಿ ನಮೂದಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅಭಿಪ್ರಾಯ/ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ನಿರ್ಣಯಿಸಿದೆ. ಈ ಕುರಿತು ತಾಲ್ಲೂಕು ಮರಳು ಸಮಿತಿಯಿಂದ ದಿನಾಂಕ 08-11-2024 ರಂದು ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು **KMMCR 1994** ರ ನಿಯಮ **31-R(3)(iv)** ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |
| 3 | ಕಡಬ | ಆಲಂಕಾರು | 1 | 2.30 | ಕುಮಾರಧಾರ | 9,082 | ದಿನಾಂಕ 20-09-2024 ರಂದು ನಡೆದ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರಿ ಕಾಮಗಾರಿ/ ಗ್ರಾಹಕರಿಗೆ ಮರಳಿನ ಕೊರತೆ ಉಂಟಾಗದಂತೆ ಮರಳು ಲಭ್ಯವಾಗುವ ನಿಟ್ಟಿನಲ್ಲಿ ಸದರಿ ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಹಾಗೂ ಸದರಿ ಮರಳು ಬ್ಲಾಕ್‌ನ ಜಂಟಿ ಸ್ಥಳ ಪರಿಶೀಲನಾ ವರದಿಯಲ್ಲಿ ನಮೂದಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅಭಿಪ್ರಾಯ/ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ನಿರ್ಣಯಿಸಿದೆ. |

| | | | | | | | |
|---|---|---|---|---|---|---|---|
| | | | | | | | ಈ ಕುರಿತು ತಾಲ್ಲೂಕು ಮರಳು ಸಮಿತಿಯಿಂದ ದಿನಾಂಕ 08-11-2024 ರಂದು ಪ್ರಸ್ತಾವನ ಸಲ್ಲಿಕೆಯಾಗಿರುತ್ತದೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು KMMCR 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |
| 4 | ಕಡಬ | ಕುದ್ಮಾರು & ಚಾರ್ವಾಕ | 135 & 95 | 10.00 | ಕುಮಾರಧಾರ | 48,253 | ದಿನಾಂಕ 20-09-2024 ರಂದು ನಡೆದ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರಿ ಕಾಮಗಾರಿ/ ಗ್ರಾಹಕರಿಗೆ ಮರಳಿನ ಕೊರತೆ ಉಂಟಾಗದಂತೆ ಮರಳು ಲಭ್ಯವಾಗುವ ನಿಟ್ಟಿನಲ್ಲಿ ಸದರಿ ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ಹಾಗೂ ಸದರಿ ಮರಳು ಬ್ಲಾಕ್‌ನ ಜಂಟಿ ಸ್ಥಳ ಪರಿಶೀಲನಾ ವರದಿಯಲ್ಲಿ ನಮೂದಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅಭಿಪ್ರಾಯ/ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ನಿರ್ಣಯಿಸಿದೆ. ಈ ಕುರಿತು ತಾಲ್ಲೂಕು ಮರಳು ಸಮಿತಿಯಿಂದ ದಿನಾಂಕ 08-11-2024 ರಂದು ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು KMMCR 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |
| 5 | ಸುಳ್ಯ | ಸಂಪಾಜೆ | 129 | 1.50 | ಪಯಸ್ವಿನಿ | 10.444 | ದಿನಾಂಕ 20-09-2024 ರಂದು ನಡೆದ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರಿ ಕಾಮಗಾರಿ/ ಗ್ರಾಹಕರಿಗೆ ಮರಳಿನ ಕೊರತೆ ಉಂಟಾಗದಂತೆ ತಾಲ್ಲೂಕು ವ್ಯಾಪ್ತಿಯಲ್ಲಿರುವ ಸರ್ಕಾರಿ ಕಾಮಗಾರಿಗಳ ಪಟ್ಟಿಯನ್ನು ಗ್ರಾಮ ಪಂಚಾಯತ್‌ವಾರು ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ ಲೋಕೋಪಯೋಗಿ ಇಲಾಖೆ, ಸುಳ್ಯ ಇವರಿಂದ ಪಟ್ಟಿಯನ್ನು ಪಡೆದು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಲ್ಲಿಸಿ, ಸದರಿ ಪಟ್ಟಿಯನ್ನು ಜಿಲ್ಲಾ ಮರಳು ಸಮಿತಿಯಲ್ಲಿ ಕಡತದೊಂದಿಗೆ ಸಲ್ಲಿಸುವಂತೆ ಸೂಚಿಸಿ, ಮರಳು ಲಭ್ಯವಾಗುವ ನಿಟ್ಟಿನಲ್ಲಿ ಸದರಿ ಮರಳು ಬ್ಲಾಕ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡುವ |

| | | | | | | | |
|---|---|---|---|---|---|---|---|
| | | | | | | | ಸಂಬಂಧ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಲು ನಿರ್ಣಯಿಸಿದೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು KMMCR 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ. |

ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿನ ನದಿ ಪಾತ್ರಗಳಲ್ಲಿ ತಾಲ್ಲೂಕು ಮರಳು ಸಮಿತಿಯಿಂದ ಹೊಸದಾಗಿ ಮೇಲ್ಕಂಡ ಮರಳು ಬ್ಲಾಕ್‌ಗಳನ್ನು ಗುರುತಿಸಿ, ಜಂಟಿ ಸ್ಥಳ ಪರಿಶೀಲನಾ ನಿಗದಿತ ನಮೂನೆ–JIR ವರದಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ, ಸದರಿ ಮರಳು ಬ್ಲಾಕ್‌ಗಳ ಕುರಿತು ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ಚರ್ಚಿಸಿ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡುವ ಬಗ್ಗೆ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಸದರಿ ಮರಳು ಬ್ಲಾಕ್‌ಗಳನ್ನು ಇ–ಟೆಂಡರ್–ಕಂ–ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಮರಳು ಬ್ಲಾಕ್‌ಗಳನ್ನು ಇ–ಟೆಂಡರ್–ಕಂ–ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಲು ನಿರ್ಣಯಿಸಿದಾಗ ಸಭೆಯು ಸರ್ವಾನುಮತದಿಂತ ತೀರ್ಮಾನಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಮಾನ್ಯ ಅಧ್ಯಕ್ಷರು ಈಗಾಗಲೇ Non-CRZ ಪ್ರದೇಶದಲ್ಲಿ ಮಂಜೂರಾತಿ ನೀಡಿರುವ ಮರಳು ಗುತ್ತಿಗೆ ಪ್ರದೇಶಗಳಲ್ಲಿ ಎಷ್ಟು ಪ್ರಮಾಣದ ಮರಳು ಲಭ್ಯವಿದ್ದು, ಇಲ್ಲಿಯವರೆಗೆ ಎಷ್ಟು ಪ್ರಮಾಣದ ಮರಳು ಜಿಲ್ಲೆಯಲ್ಲಿನ ಕಾಮಗಾರಿಗಳಿಗೆ ಪೂರೈಕೆಯಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರನ್ನು ಕೇಳಿದಾಗ, ಪರಿಸರ ವಿಮೋಚನಾ ಪತ್ರದಂತೆ ಒಟ್ಟು 6,36,914 ಮೆ.ಟನ್ ಪ್ರಮಾಣದ ಮರಳು ಮರಳು ಗುತ್ತಿಗೆ ಪ್ರದೇಶಗಳಲ್ಲಿ ತೆಗೆಯಬಹುದಾಗಿದ್ದು, ಇಲ್ಲಿಯವರೆಗೆ 36716 ಮೆ.ಟನ್ ಪ್ರಮಾಣದ ಮರಳು ಜಿಲ್ಲೆಯಲ್ಲಿನ ಕಾಮಗಾರಿಗಳಿಗೆ ಪೂರೈಕೆಯಾಗಿರುತ್ತದೆ. ಸದರಿ ಗುತ್ತಿಗೆಗಳಿಂದ ಏಪ್ರಿಲ್–2024 ರಿಂದ ಇಲ್ಲಿಯವರೆಗೆ ರೂ.1,01,05,848/– ಗಳ ರಾಜಧನ ಮತ್ತು ಇತರೆ ಶುಲ್ಕ ಪಾವತಿಯಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು ಈ ಹಿಂದೆ Non-CRZ ಪ್ರದೇಶದಲ್ಲಿ ಮಂಜೂರಾತಿ ನೀಡಿರುವ ಮರಳು ಗುತ್ತಿಗೆ ಪ್ರದೇಶಗಳಿಂದ ಮರಳನ್ನು ಗ್ರಾಹಕರಿಗೆ
ಸುಲಭವಾಗಿ ಲಭ್ಯವಾಗುವ ನಿಟ್ಟಿನಲ್ಲಿ ಸ್ಯಾಂಡ್ ಬಜಾರ್ ಆಪ್ ಅನ್ನು ಮರುಸ್ಥಾಪಿಸುವಂತೆ ನಿರ್ದೇಶನ ನೀಡಲಾಗಿದ್ದು, ಇಲ್ಲಿಯವರೆಗೆ ಸದರಿ ಆಪ್‌ನಲ್ಲಿ
ಎಷ್ಟು ಮರಳು ಬೇಡಿಕೆಗಳು ಸ್ವೀಕೃತವಾಗಿವೆ ಮತ್ತು ಎಷ್ಟು ಮರಳು ಪೂರೈಕೆಯಾಗಿದೆ ಎಂದು ಕೇಳಿದಾಗ, ಸ್ಯಾಂಡ್ ಬಜಾರ್ ಆ್ಯಪ್ ತಂತ್ರಾಂಶವು 2020
ನೇ ಸಾಲಿನಿಂದ ಚಾಲ್ತಿಯಲ್ಲಿದ್ದು, ಸಿ.ಆರ್.ಝಡ್ ವ್ಯಾಪ್ತಿಯಲ್ಲಿನ ಮರಳು ದಿಬ್ಬಗಳಿಂದ ಜಿಲ್ಲೆಯಲ್ಲಿನ ಕಾಮಗಾರಿಗಳಿಗೆ ಮರಳು ಪೂರೈಕೆ
ಮಾಡಲಾಗುತ್ತಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಹೆಚ್ಚಿನ ಮರಳಿನ ಬೇಡಿಕೆಯಿದ್ದು, ನಂತರ 2022 ನೇ ಸಾಲಿನಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವುದು
ಮಾನ್ಯ ರಾಷ್ಟ್ರೀಯ ಹಸಿರು ಪೀಠ ನ್ಯಾಯಾಲಯದಲ್ಲಿ ದಾಖಲಾಗಿರುವ Original Application No. 252 of 2017(SZ) ರ ಸಂಬಂಧ ಮಾನ್ಯ
ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ 18-05-2022 ರಂತೆ ಸ್ಥಗಿತಗೊಳಿಸಲಾಗಿರುತ್ತದೆ. ನಂತರ ನಾನ್-ಸಿ.ಆರ್.ಝಡ್ ಮರಳು
ಗುತ್ತಿಗೆಗಳಿಂದ ಮರಳನ್ನು ಗ್ರಾಹಕರಿಗೆ ಪೂರೈಸುವ ಸಲುವಾಗಿ ಸ್ಯಾಂಡ್ ಬಜಾರ್ ಆ್ಯಪ್ ಅನ್ನು ದಿನಾಂಕ 02-01-2024 ರಂದು ಪುನರ್
ಸ್ಥಾಪಿಸಲಾಗಿದ್ದು, ಸದರಿ ಆ್ಯಪ್ ಮೂಲಕ ಮರಳು ಬೇಡಿಕೆಗಳು ಸ್ವೀಕೃತವಾಗಿರುವುದಿಲ್ಲ ಎಂದು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, "SAND BAZAR" ಆ್ಯಪ್ ಮುಖಾಂತರ ಮರಳನ್ನು ಖರೀದಿಸುವ ಬಗ್ಗೆ ಹಲವುಬಾರಿ ಗಣಿ ಮತ್ತು
ಭೂ ವಿಜ್ಞಾನ ಇಲಾಖೆಗೆ ಸೂಚಿಸಿದರೂ, ಈವರೆಗೆ ಯಾವುದೇ ಕ್ರಮ ವಹಿಸಿರುವುದು ಕಂಡುಬಂದಿರುವುದಿಲ್ಲ. ಹಾಗೂ "ಸ್ಯಾಂಡ್ ಬಜಾರ್" ಆ್ಯಪ್
ಅಳವಡಿಕೆಗೆ ಅನುಮೋದನೆಯನ್ನು ಕೊಟ್ಟರೂ, ಗಣಿ ಇಲಾಖೆ, ದಕ್ಷಿಣ ಕನ್ನಡ ಇವರು ಆಪ್ ಕಾರ್ಯನಿರ್ವಹಿಸುತ್ತಿಲ್ಲ, ಎಂಬುದಾಗಿ
ನಿರ್ಲಕ್ಷ್ಯತೆಯಿಂದ ಉತ್ತರಿಸಿದರು. ಜನವರಿ 2024 ರಿಂದ ಈವರೆಗೆ ಯಾವುದೇ ಮರಳು ಮಾರಾಟವು ಆ್ಯಪ್ ಮುಖಾಂತರ ಆಗಿರುವುದಿಲ್ಲ.
ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

ಮುಂದುವರೆದು ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಪ್ರಸ್ತುತ ನಾನ್-ಸಿ.ಆರ್.ಝಡ್ ಮರಳು ಗುತ್ತಿಗೆಗಳಿಂದ ಮರಳನ್ನು ಗ್ರಾಹಕರಿಗೆ ಪೂರೈಸುವ
ಸಲುವಾಗಿ ಸ್ಯಾಂಡ್ ಬಜಾರ್ ಆ್ಯಪ್ ಅನ್ನು ಪುನರ್‌ಸ್ಥಾಪಿಸಿ ಜಿಲ್ಲೆಯಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳಿಗೆ ಉಪಯೋಗಿಸುವ ಸಾಮಾನ್ಯ
ಮರಳನ್ನು ಸ್ಯಾಂಡ್ ಬಜಾರ್ ಆ್ಯಪ್ ಮುಖಾಂತರವೇ ನಿಗದಿತ ಬೆಲೆ ಮತ್ತು ನಿಗದಿತ ಸಮಯದಲ್ಲಿ ಪೂರೈಕೆ ಮಾಡುವುದು, ಸದರಿ ಸ್ಯಾಂಡ್ ಬಜಾರ್
ಆ್ಯಪ್ ಅನ್ನು ಇಲಾಖೆಯ ILMS ತಂತ್ರಾಂಶದೊಂದಿಗೆ ಲಿಂಕ್ ಮಾಡುವುದು ಹಾಗೂ ಜಿಲ್ಲೆಯಲ್ಲಿ ನಡೆಯುವ ಎಲ್ಲಾ ಕನ್‌ಸ್ಟ್ರಕ್ಷನ್ಸ್ ಕಾಮಗಾರಿಗಳಿಗೆ
ಪೂರೈಕೆಯಾಗುತ್ತಿರುವ ಮರಳು ಸ್ಯಾಂಡ್ ಬಜಾರ್ ಆ್ಯಪ್ ಮೂಲಕ ಪರವಾನಿಗೆಯೊಂದಿಗೆ ಪೂರೈಕೆಯಾಗಿದೆಯೇ ಅಥವಾ ಅನಧಿಕೃತ ಎಂಬುದರ ಬಗ್ಗೆ
ತಾಲ್ಲೂಕು ಮರಳು ಸಮಿತಿಯ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಖಾತರಿಪಡಿಸಿಕೊಳ್ಳುವುದು ಹಾಗೂ ಕಾಮಗಾರಿ ಅನುಷ್ಠಾನ ಇಲಾಖೆಗಳು
ನಡೆಸುವ ಸರ್ಕಾರಿ ಕಾಮಗಾರಿಗಳಿಗೆ ಕಡ್ಡಾಯವಾಗಿ ಸ್ಯಾಂಡ್ ಬಜಾರ್ ಆ್ಯಪ್ ಮೂಲಕ ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಕಾಮಗಾರಿ
ಗುತ್ತಿಗೆದಾರರು ಮರಳನ್ನು ಪೂರೈಕೆ ಮಾಡುವುದು, ಕಾಮಗಾರಿ ಸ್ಥಳದಲ್ಲಿ ದಾಸ್ತಾನಿರುವ ಮರಳಿಗೆ ಸ್ಯಾಂಡ್ ಬಜಾರ್ ಆ್ಯಪ್ ಮೂಲಕ ಮರಳು

ಪೂರೈಕೆಯಾಗಿರುವ ಬಗ್ಗೆ ಖನಿಜ ಸಾಗಾಣಿಕೆ ಪರವಾನಿಗೆಯನ್ನು ಹಾಜರುಪಡಿಸದಿದ್ದಲ್ಲಿ ಸದರಿ ಕಾಮಗಾರಿ ಗುತ್ತಿಗೆದಾರರ ವಿರುದ್ಧ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಎಫ್.ಐ.ಆರ್. ದಾಖಲಿಸಲು ಕ್ರಮ ವಹಿಸುವುದು ಹಾಗೂ ಕಾಮಗಾರಿ ಅನುಷ್ಠಾನ ಇಲಾಖೆಯು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸುತ್ತೋಲೆ ಸಂಖ್ಯೆ: ಗಭೂಇ/ಕಗಗು/ಡಿಸಿಬಿ/2023-24/11265 ದಿನಾಂಕ 26-02-2024 ರಂತೆ ಕ್ರಮ ವಹಿಸಲು ಸಂಬಂಧಪಟ್ಟ ಕಾಮಗಾರಿ ಅನುಷ್ಠಾನ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

(ಕ್ರಮ: ತಾಲ್ಲೂಕು ಮರಳು ಸಮಿತಿಯ ಸದಸ್ಯ ಇಲಾಖಾಧಿಕಾರಿಗಳು/ ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಗಳು/ ಗಣಿ ಮತ್ತು ಭೂವಿಜ್ಞಾನ ಇಲಾಖೆ)

3. ಬಂಟ್ವಾಳ ತಾಲ್ಲೂಕು ಕರಿಯಂಗಳ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಫಲ್ಗುಣಿ ನದಿ ಪಾತ್ರದ ಸ.ನಂ.125 ರಲ್ಲಿನ 2.50 ಎಕರೆ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಅನ್ನು ವಿಲೇವಾರಿ ಮಾಡುವ ಕುರಿತು.

| ಕ್ರ ಸಂ. | ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ನದಿ ಪಾತ್ರ | ಮರಳು ಲಭ್ಯತೆಯ ಅಂದಾಜು ಪ್ರಮಾಣ (ಮೆ.ಟನ್) | ಷರಾ |
|---|---|---|---|---|---|---|---|
| 1 | ಬಂಟ್ವಾಳ | ಕರಿಯಂಗಳ | 125 | 2.50 | ಫಲ್ಗುಣಿ | 17,600 | ಕಾರ್ಯನಿರ್ವಾಹಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರು ಸದರಿ ಮರಳು ಬ್ಲಾಕ್‌ನಿಂದ ಬಂಟ್ವಾಳ ಉಪವಿಭಾಗಕ್ಕೆ ಮರಳು ಪಡೆಯುವ ಅವಶ್ಯಕತೆ ಇಲ್ಲದಿರುವ ಬಗ್ಗೆ ದಿನಾಂಕ 03-06-2024 ರ ಪತ್ರದಲ್ಲಿ ತಿಳಿಸಿರುತ್ತಾರೆ.<br>ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು KMMCR 1994 ರ ನಿಯಮ. 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |

ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುವ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಕೆ ಮಾಡಿಕೊಳ್ಳುವ ಸಲುವಾಗಿ ತಾಲ್ಲೂಕು ಮರಳು ಸಮಿತಿಯಿಂದ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ಮೇಲ್ಕಂಡ ಮರಳು ಬ್ಲಾಕ್ ಅನ್ನು ಗುರುತಿಸಿ ಜಂಟಿ ಸ್ಥಳ ಪರಿಶೀಲನಾ ನಿಗದಿತ

ನಮೂನೆ–JIR ವರದಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ, ಸದರಿ ಮರಳು ಬ್ಲಾಕ್‌ನ ಕುರಿತು ದಿನಾಂಕ 06–03–2023 ರಂದು ನಡೆದ ಬಂಟ್ವಾಳ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆಗಾಗಿ ಜಿಲ್ಲಾ ಮರಳು ಸಮಿತಿಯಲ್ಲಿ ಮಂಡಿಸಲು ನಿರ್ಣಯಿಸಲಾಗಿರುತ್ತದೆ. ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರು ಸದರಿ ಮರಳು ಬ್ಲಾಕ್‌ನಿಂದ ಬಂಟ್ವಾಳ ಉಪವಿಭಾಗಕ್ಕೆ ಮರಳು ಪಡೆಯುವ ಅವಶ್ಯಕತೆ ಇಲ್ಲದಿರುವ ಬಗ್ಗೆ ದಿನಾಂಕ 03–06–2024 ರ ಪತ್ರದಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ಮರಳು ಬ್ಲಾಕ್ ಅನ್ನು ಇ–ಟೆಂಡರ್–ಕಂ–ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಮರಳು ಬ್ಲಾಕ್ ಅನ್ನು ಇ–ಟೆಂಡರ್–ಕಂ–ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ನಿಯಮಾನುಸಾರ ಅಧಿಸೂಚನೆ ಹೊರಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಈಗಾಗಲೇ ಚಾಲ್ತಿಯಲ್ಲಿರುವ ಮರಳು ಗುತ್ತಿಗೆಗಳಲ್ಲಿ ಶೇ.10ರಷ್ಟು ಮರಳು ಕೂಡ ಹೊರತೆಗೆದಿಲ್ಲ. ಹಾಗೂ ಗಣಿ ಇಲಾಖೆಯವರು ಮಂಜೂರಾದ ಬ್ಲಾಕ್‌ಗಳಿಂದ ಮರಳನ್ನು ಹೊರತೆಗೆಯುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬ್ಲಾಕ್‌ಗಳಲ್ಲಿ ಪರವಾನಿಗೆ ಇಲ್ಲದೆ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂಬುವುದು ಅನುಮಾನಕ್ಕೆ ಕಾರಣವಾಗುತ್ತದೆ. ಸರಕಾರದ ಸುತ್ತೋಲೆಯಂತೆ 50% ಅಂದಾಜು ಮರಳನ್ನು(Estimated Sand) ಒದಗಿಸುವಂತೆ ಅದಕ್ಕೆ ಮುಂಗಡವಾಗಿ ರಾಜಧನವನ್ನು ಪಾವತಿಸ ಬೇಕೆಂದು ನಿರ್ದೇಶನವಿದ್ದು, ಅದರನುಸಾರ ಸುತ್ತೋಲೆಯಂತೆ ರೂ. 2.50 ಕೋಟಿ ರಾಜಧನ ಪಾವತಿಸ ಬೇಕಾಗಿದ್ದು, ಆದರೆ ಪರವಾಣಿಗೆಯಲ್ಲಿ ರೂ. 35 ಲಕ್ಷ ಮಾತ್ರ ಪಾವತಿಸಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ನೈಜ ಅಂಕಿ ಅಂಶಗಳೊಂದಿಗೆ ವಿವರಣೆ,ಹಾಗೂ ಸರ್ಕಾರದ ಆದೇಶ ಪಾಲನೆಗೆ ಕ್ರಮ ಕೈಗೊಳ್ಳಬೇಕು ತೆಗೆದುಕೊಂಡ ಕ್ರಮಗಳ ವರದಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಲಾಯಿತು.

27 ಮರಳು ಬ್ಲಾಕ್ ಗಳ ಪೈಕಿ ಒಂದು ವರ್ಷಕ್ಕೆ 8 ಬ್ಲಾಕ್ ಗಳಲ್ಲಿ ಶೂನ್ಯ ಪ್ರಮಾಣದ ಮರಳುಗಾರಿಕೆ ನಡೆದಿರುತ್ತದೆ ಎಂಬುದಾಗಿ ಹಿರಿಯ ಭೂ ವಿಜ್ಞಾನಿಯವರು ಸಭೆಯಲ್ಲಿ ತಿಳಿಸಿದಾಗ ಯಾವ ಕಾರಣಕ್ಕೆ ಶೂನ್ಯ ಪ್ರಮಾಣದ ಮರಳುಗಾರಿಕೆಯಾಗಿದೆ, ಪರವಾಣಿಗೆಯನ್ನು ತಡೆಹಿಡಿಯಲಾಗಿದೆಯೇ, ಪರವಾಣಿಗೆಯನ್ನು ರದ್ದುಗೊಳಿಸಲಾಗಿದೆಯೇ ಅಥವಾ ಪರವಾಣಿಗೆಯನ್ನು ಹಿಂಪಡೆಯಲಾಗಿದೆಯೇ ಎಂಬುವುದಕ್ಕೆ ಕಾರಣಗಳನ್ನು ಸಮಿತಿಗೆ ಮಂಡಿಸಿರುವುದಿಲ್ಲ. 27 ಮರಳು ಬ್ಲಾಕ್ ಗಳ ಪೈಕಿ 8 ಬ್ಲಾಕ್ ಗಳು ಶೂನ್ಯ ಪ್ರಗತಿಯಲ್ಲಿದ್ದು, 4 ಬ್ಲಾಕ್ ಗಳಲ್ಲಿ 1% ಹಾಗೂ 7 ಬ್ಲಾಕ್ ಗಳಲ್ಲಿ 10% ಪ್ರಗತಿಯನ್ನು ಸಾಧಿಸಿರುವುದಿಲ್ಲ. ಹಾಗೆಯೇ ಅಧಿಕೃತವಾಗಿ ಲಭ್ಯವಿರುವ ಮರಳಿನಲ್ಲಿ ಕಳೆದ ಒಂದು ವರ್ಷದಲ್ಲಿ 10% ಮರಳು ಸಾಗಣಿಕೆ

ಮಾಡಿರುವುದಿಲ್ಲ, ಇದರ ಬಗ್ಗೆ ನಿಗಾ ವಹಿಸಿ, ಕ್ರಮ ವಹಿಸಿರುವುದು ಗಣಿ ಇಲಾಖೆಯ ಕರ್ತವ್ಯವಾಗಿದ್ದು, ಆದರೆ ಕ್ರಮ ವಹಿಸದೇ ಇರುವುದು.ಶೋಚನೀಯ ಸಂಗತಿ ಎಂದು ಅಧ್ಯಕ್ಷರು ತೀವ್ರ ಅಸಮದಾನ ವ್ಯಕ್ತ ಪಡಿಸಿದರು.

ಮುಂದುವರೆದು, ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಗಳ ಕಾಮಗಾರಿಗಳಿಗೆ ಅಗತ್ಯವಿರುವ ಮರಳಿನ ಪ್ರಮಾಣದ ಬಗ್ಗೆ ಮಾಹಿತಿಯನ್ನು ಪಡೆಯಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿ, ಈಗಾಗಲೇ ಅನುಷ್ಠಾನ ಇಲಾಖೆಗಳ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳಿಗೆ ಯಾವ ಮೂಲಗಳಿಂದ ಮರಳು ಪೂರೈಕೆಯಾಗುತ್ತಿದೆ ಎಂದು ಸಂಬಂಧಪಟ್ಟ ಅನುಷ್ಠಾನ ಇಲಾಖೆಗಳು ವರದಿ ನೀಡಲು ಹಾಗೂ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಕಛೇರಿ ಸುತ್ತೋಲೆ ಸಂಖ್ಯೆ: ಗಭೂಇ/ಕಗಗು/ಡಿಸಿಬಿ/2023-24/11265 ದಿನಾಂಕ 26-02-2024 ರಂತೆ ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಉಪಖನಿಜ ಪೂರೈಕೆ ಮಾಡದೆ ಇರುವ ಗುತ್ತಿಗೆದಾರರ ಬಿಲ್ಲುಗಳಲ್ಲಿ ರಾಜಧನದ 05 ಪಟ್ಟು ದಂಡ, ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿ (AP) ಮತ್ತು ರಾಜಧನದ ಶೇಕಡ 10 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು ಪಾವತಿಸಿಕೊಂಡು ಬಿಲ್ಲುಗಳನ್ನು ತೀರುವಳಿಗೊಳಿಸಲು ಅನುಷ್ಠಾನ ಇಲಾಖೆಗಳಿಗೆ ಸೂಚಿಸಿದಾಗ ಸಭೆಯು ಅನುಮೋದಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ/ ಕಾಮಗಾರಿ ಅನುಷ್ಠಾನ ಇಲಾಖೆಗಳು)

4. ಬಂಟ್ವಾಳ ತಾಲ್ಲೂಕು ಕರಿಯಂಗಳ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಫಲ್ಗುಣಿ ನದಿ ಪಾತ್ರದ ಸ.ನಂ.7 (adjacent Sy.No.1, 3, 4) ರಲ್ಲಿನ 2.00 ಎಕರೆ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಅನ್ನು ವಿಲೇವಾರಿ ಮಾಡುವ ಕುರಿತು.

| ಕ್ರ. ಸಂ. | ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ನದಿ ಪಾತ್ರ | ಮರಳು ಲಭ್ಯತೆಯ ಅಂದಾಜು ಪ್ರಮಾಣ (ಮೆ.ಟನ್) | ಷರಾ |
|---|---|---|---|---|---|---|---|
| 1 | ಬಂಟ್ವಾಳ | ಕರಿಯಂಗಳ | 7 | 2.00 | ಫಲ್ಗುಣಿ | 13,921 | ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರು ಸದರಿ ಮರಳು ಬ್ಲಾಕ್‌ನ ಆವಶ್ಯಕತೆ ಇಲ್ಲದಿರುವ ಬಗ್ಗೆ ದಿನಾಂಕ 06-02-2020 ರ ಪತ್ರದಲ್ಲಿ ತಿಳಿಸಿರುತ್ತಾರೆ. |

| | | | | | | |
|---|---|---|---|---|---|---|
| | | | | | | ಸದರಿ ಮರಳು ಬ್ಲಾಕ್ ಅನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು KMMCR 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. |

ಸದರಿ ಮರಳು ಬ್ಲಾಕ್ ಅನ್ನು ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಮಾಡುವ ಸಲುವಾಗಿ ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಿ ದಿನಾಂಕ 13-12-2019 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಮರಳು ಬ್ಲಾಕ್‌ನ ಅವಶ್ಯಕತೆ ಇಲ್ಲವೆಂದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರು ದಿನಾಂಕ 06-02-2020 ರ ಪತ್ರದಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ಮರಳು ಬ್ಲಾಕ್‌ನಲ್ಲಿ ಮರಳಿನ ಲಭ್ಯತೆಯ ಬಗ್ಗೆ ಮತ್ತೊಮ್ಮೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ವರದಿ ಪಡೆದು ನಂತರ ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-R(3)(iv) ರಂತೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಮರಳು ಬ್ಲಾಕ್‌ನ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಮರಳಿನ ಲಭ್ಯತೆಯ ಬಗ್ಗೆ ವರದಿಯನ್ನು ಪಡೆದು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ನಿಯಮಾನುಸಾರ ಅಧಿಸೂಚನೆ ಹೊರಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

5. ಬೆಳ್ತಂಗಡಿ ತಾಲ್ಲೂಕು ಗುಂಡೂರಿ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಫಲ್ಗುಣಿ ನದಿ ಪಾತ್ರದ ಸ.ನಂ.38 ರಲ್ಲಿನ 1.66 ಎಕರೆ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗೆ "ಹೊಸಂಗಡಿ ಗ್ರಾಮದ ಸ.ನಂ.122/1ಎ" ಎಂದು ಸರಿಪಡಿಸಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಂಬಂಧ ತಿದ್ದುಪಡಿ ಅಧಿಸೂಚನೆ ಹೊರಡಿಸುವ ಕುರಿತು.

ಸದರಿ ಮರಳು ಬ್ಲಾಕ್‌ನ ಸ್ಥಳವು ಹೊಸಂಗಡಿ ಗ್ರಾಮದ ಸ.ನಂ.122/1ಎ ರಲ್ಲಿ 1.66 ಎಕರೆ ಪ್ರದೇಶದಲ್ಲಿ ಬರುತ್ತಿರುವುದಾಗಿ ತಹಶೀಲ್ದಾರರು, ಬೆಳ್ತಂಗಡಿ ತಾಲ್ಲೂಕು ಇವರು ನಕ್ಷೆಯೊಂದಿಗೆ ವರದಿಯನ್ನು ಪತ್ರ ಸಂಖ್ಯೆ: ಎಂ.ಎಂ.ಸಿ.ಸಿಆರ್:20/2022-23 ದಿನಾಂಕ 20-06-2023 ರಲ್ಲಿ ನೀಡಿರುತ್ತಾರೆ. ಆದುದರಿಂದ ಬೆಳ್ತಂಗಡಿ ತಾಲ್ಲೂಕು ಗುಂಡೂರಿ ಗ್ರಾಮದ ಸ.ನಂ.38 ರ ಫಲ್ಗುಣಿ ನದಿ ಪಾತ್ರದ 1.66 ಎಕರೆ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗೆ ಸಂಬಂಧಪಟ್ಟಂತೆ "ಹೊಸಂಗಡಿ ಗ್ರಾಮದ ಸ.ನಂ.122/1ಎ" ಎಂದು ಸರಿಪಡಿಸಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಂಬಂಧ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಮರಳು ಬ್ಲಾಕ್‌ಗೆ

ಸಂಬಂಧಪಟ್ಟಂತೆ "ಹೊಸಂಗಡಿ ಗ್ರಾಮದ ಸ.ನಂ.122/1ಎ" ಎಂದು ಸರಿಪಡಿಸಿ ತಿದ್ದುಪಡಿಗೊಳಿಸಲು ಎರಡು ವಾರಗಳೊಳಗೆ ಬೆಳ್ತಂಗಡಿ ತಾಲೂಕು ತಹಶೀಲ್ದಾರರು ಹಾಗೂ ಪುತ್ತೂರು ಉಪವಿಭಾಗಾಧಿಕಾರಿಗಳಿಂದ ವರದಿ ಪಡೆಯುವಂತೆ ಸೂಚಿಸಲಾಯಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

6. ಬೆಳ್ತಂಗಡಿ ತಾಲ್ಲೂಕು ಆರಂಬೋಡಿ ಗ್ರಾಮದ ಸ.ನಂ.77/1 ರ ಫಲ್ಗುಣಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೋಹಂ ಮನಪಿತ್ಲು ಪವರ್ ಪ್ರೈವೇಟ್ ಲಿಮಿಟೆಡ್ ಕಿರು ವಿದ್ಯುತ್ ಘಟಕದ ಡ್ಯಾಂನ 1 ಎಕರೆ – 95 ಸೆಂಟ್ಸ್ ಪ್ರದೇಶದಲ್ಲಿ ತುಂಬಿರುವ ಹೂಳು/ ಮರಳನ್ನು ತೆರವುಗೊಳಿಸಲು ಸದರಿ ಪ್ರದೇಶವನ್ನು ಅಥಾರಿಟಿ ಇಂಜಿನಿಯರ್ ಮತ್ತು ಕಾರ್ಯಪಾಲಕ ಇಂಜನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಮಂಗಳೂರು ಇವರಿಗೆ ಮೀಸಲಿರಿಸಲು ತಿದ್ದುಪಡಿ ಅಧಿಸೂಚನೆ ಹೊರಡಿಸುವ ಸಂಬಂಧ ಜಿಲ್ಲಾ ಮರಳು ಸಮಿತಿಯ ಘಟನೋತ್ತರ ಅನುಮೋದನೆಗೆ ಒಳಪಟ್ಟು ದಿನಾಂಕ 13-12-2024 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸಮಿತಿ ಘಟನೋತ್ತರ ಅನುಮೋದನೆಗೆ ಒಳಪಟ್ಟು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

7. ಬಂಟ್ವಾಳ ತಾಲ್ಲೂಕು ಅರಳ ಗ್ರಾಮದ ಸ.ನಂ.52, 53, 54 ರ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಫಲ್ಗುಣಿ ನದಿ ಪಾತ್ರದ 2.96 ಎಕರೆ ವಿಸ್ತೀರ್ಣದಲ್ಲಿ ಗುರುತಿಸಿ ಇ-ಟೆಂಡರ್ ಕರೆಯಲಾಗಿರುವ ಮರಳು ಬ್ಲಾಕ್ ಅನ್ನು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ವಿಲೇವಾರಿ ಮಾಡುವ ಕುರಿತು.

Non-CRZ ಪ್ರದೇಶದಲ್ಲಿ ಗುರುತಿಸಿ ಇ-ಟೆಂಡರ್ ಕರೆಯಲಾಗಿದ್ದ 30 ಮರಳು ಬ್ಲಾಕ್‌ಗಳಲ್ಲಿ ಅರ್ಹ ಬಿಡ್ಡುದಾರರು ಲಭ್ಯವಾಗದಿರುವ 12 ಮರಳು ಬ್ಲಾಕ್‌ಗಳ ಪೈಕಿ ಮಂಗಳೂರು ಉಪ ವಿಭಾಗ ವ್ಯಾಪ್ತಿಯ ಬಂಟ್ವಾಳ ತಾಲ್ಲೂಕಿನ 'ಅರಳ' ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ಬಿಡ್ಡುದಾರರಾದ ಶ್ರೀ ರಾಜೀವ ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 2709/2022 ರ ಕುರಿತು ಅರ್ಜಿದಾರರ ಬಿಡ್ (ಕೂಗು ಬೆಲೆ) ಅನ್ನು ಸ್ಟಾಕ್‌ಯಾರ್ಡ್‌ಗಾಗಿ 0.50 ಎಕರೆ ಪ್ರದೇಶವನ್ನು ಹೊಂದಿರಬೇಕು ಎಂದು ಒತ್ತಾಯಿಸದೆ ಸೂಕ್ತ ಕಾನೂನು ರೀತಿಯ ನಿರ್ಣಯ ಕೈಗೊಳ್ಳಲು ಆದೇಶಿಸಿರುತ್ತದೆ. ಮಾನ್ಯ ನ್ಯಾಯಾಲಯವು ಹೊರಡಿಸಿರುವ ಆದೇಶದ ಕುರಿತು ದಿನಾಂಕ 19-12-2024 ರಂದು ನಡೆದ ಜಿಲ್ಲಾ ಮರಳು ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸದರಿ ಮರಳು ಬ್ಲಾಕ್‌ಗೆ ದಿನಾಂಕ 12-07-2024 ರಂದು ಸರ್ವಿಸ್ ಬಿಡ್ ಕರೆಯಲಾಗಿರುತ್ತದೆ. ಸದರಿ ಮರಳು ಬ್ಲಾಕ್‌ಗೆ ಬಿಡ್ಡುದಾರರು ಬಿಡ್ ಮೊತ್ತವನ್ನು ನಮೂದಿಸಿದ್ದು, ವಿವರವು ಈ ಕೆಳಕಂಡಂತಿದೆ.

| ಕ್ರ ಸಂ. | ತಾಲ್ಲೂಕು | ಗ್ರಾಮ/ ಮರಳು ಬ್ಲಾಕ್‌ನ ಹೆಸರು | ಸ.ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ಬಿಡ್ಡುದಾರರು ನಮೂದಿಸಿರುವ ಅತೀ ಹೆಚ್ಚಿನ ಬಿಡ್ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | ಬಂಟ್ವಾಳ | ಅರಳ | 52, 53, 54 | 2.96 | 97 |

ಸದರಿ ಮರಳು ಬ್ಲಾಕ್‌ಗೆ ನಮೂದಿಸಿರುವ ಬಿಡ್ ಮೊತ್ತವನ್ನು ಇ-ಟೆಂಡರ್ ಪ್ರಕ್ರಿಯೆಯ ಮುಂದಿನ ಹಂತವಾದ ಇ-ಆಕ್ಷನ್‌ನ Floor Price ಆಗಿ ಪರಿಗಣಿಸಿ ಇ-ಟೆಂಡರ್ ಪ್ರಕ್ರಿಯೆಯ ಮುಂದಿನ ಹಂತವಾದ ಇ-ಹರಾಜು (Live Bidding) ಕರೆಯಬೇಕಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಪ್ರಕರಣವು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣವನ್ನು ಮಾನ್ಯ ಅಧ್ಯಕ್ಷರು ಹಲವಾರು ಬಾರಿ ಚರ್ಚಿಸಲು ಮೌಖಿಕವಾಗಿ ಸೂಚಿಸಿದರೂ ಕೂಡ ಈವರೆಗೂ ಯಾವುದೇ ಕ್ರಮವಹಿಸಿರುವುದಿಲ್ಲ. ಈ ಬಗ್ಗೆ ನ್ಯಾಯಾಲಯದಿಂದ ನಿಂದನೆ ಬಂದಲ್ಲಿ ಗಣಿ ಇಲಾಖೆಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು. ಆದ್ದರಿಂದ ತ್ವರಿತವಾಗಿ ಸದರಿ ಮರಳು ಬ್ಲಾಕ್‌ಗೆ ಸಂಬಂಧಪಟ್ಟಂತೆ ಇ-ಟೆಂಡರ್ ಪ್ರಕ್ರಿಯೆಯ ಮುಂದಿನ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಕಡತದೊಂದಿಗೆ ಮಂಡಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

8. **Non-CRZ** ಪ್ರದೇಶದಲ್ಲಿ ಗುತ್ತಿಗೆ ಮಂಜೂರಾತಿ ನೀಡಿರುವ ಮರಳು ಬ್ಲಾಕ್‌ಗಳ ಪ್ರದೇಶಗಳಲ್ಲಿನ ಮರಳಿಗೆ ಬೇಡಿಕೆ ಇಲ್ಲದೆ ಇರುವುದರಿಂದ ಹೊರ ಜಿಲ್ಲೆಗಳಿಗೆ ಸಾಮಾನ್ಯ ಮರಳನ್ನು ಸಾಗಾಟ ಮಾಡಲು ಅನುಮತಿ ನೀಡುವಂತೆ ಕೋರಿ ದ.ಕ. ಜಿಲ್ಲಾ ಮರಳು ವ್ಯಾಪಾರಸ್ಥರ ಸಂಘ ಇವರು ಸಲ್ಲಿಸಿರುವ ಮನವಿ ಪತ್ರದ ಕುರಿತು.

ಉಪ ನಿರ್ದೇಶಕರು (ಖ.ಆ), ಮಾನ್ಯ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/2024–25/15350 ದಿನಾಂಕ 11-11-2024 ರಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು–1994 ರ ನಿಯಮ ರನ್ವಯ ಅಂತರ ರಾಜ್ಯ ಮರಳು ಸಾಗಾಣಿಕೆಗೆ ನಿರ್ಬಂಧವಿದ್ದು, ರಾಜ್ಯದ ಜಿಲ್ಲೆಗಳ ಒಳಗೆ ಮರಳು ಸಾಗಾಣಿಕೆಗೆ ನಿರ್ಬಂಧವಿರುವುದಿಲ್ಲ. ಆದುದರಿಂದ ಈ ಕುರಿತು ಜಿಲ್ಲಾ ಮರಳು ಸಮಿತಿಯಲ್ಲಿ ಮಂಡಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ 2021 ನಿಯಮ 31–R(14) ಹಾಗೂ ತಿದ್ದುಪಡಿ 2023 ರ ನಿಯಮ 31–R(21) ರಲ್ಲಿ "ಇತರ ರಾಜ್ಯಗಳ ಸರಹದ್ದು ಪ್ರದೇಶಗಳಲ್ಲಿ ಮರಳನ್ನು ಸಾಗಾಣಿಕೆ ಮಾಡತಕ್ಕದ್ದಲ್ಲ ಪರಂತು ಅತೀ ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಜಿಲ್ಲಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಅಥವಾ ಸ್ವಯಂ ತಾನೇ ಇತರ ರಾಜ್ಯಗಳ ಸರಹದ್ದಿನಲ್ಲಿ ಮರಳು ಸಾಗಾಣಿಕೆಗೆ ಅನುಮತಿಯನ್ನು ನೀಡಬಹುದು" ಹಾಗೂ 31–U(15) ರಲ್ಲಿ "The sand extracted from IV V & VI order streams or rivers shall be transported anywhere in the state." ಎಂದು ತಿಳಿಸಲಾಗಿರುವುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಅನುಗುಣವಾಗಿ ಮರಳಿನ ಬೇಡಿಕೆ ಏನು? ನಾವು ಆ ಅಗತ್ಯಗಳನ್ನು ಪೂರೈಸುತ್ತಿದ್ದೇವೆಯೇ? ನಮ್ಮ ಜಿಲ್ಲೆಯಿಂದ ಹೊರ ಜಿಲ್ಲೆಗಳಿಗೆ ಮರಳು ಸಾಗಾಣಿಕೆಯನ್ನು ನಿರ್ಬಂಧಿಸಿದ್ದು ಯಾವಾಗ ಮತ್ತು ಏಕೆ ಎಂಬುದರ ಬಗ್ಗೆ ಮುಂದಿನ ಸಭೆಯಲ್ಲಿ ಮಂಡಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

9. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ Non-CRZ ಪ್ರದೇಶದ ನದಿಪಾತ್ರದಲ್ಲಿ ಸೇತುವೆಯಿಂದ 500 ಮೀಟರ್ ದೂರದಿಂದ ಹೊಸ ಮರಳು ಬ್ಲಾಕ್‌ಗಳಿಗೆ ಅನುಮತಿ ನೀಡುವಂತೆ ಶ್ರೀ ನಾರಾಯಣ ಪಂಚಮಿ, ಚಿಂತಕರು ಮತ್ತು ಸಾಮಾಜಿಕ ಹೋರಾಟಗಾರರು, ಬಿಸಿ ರೋಡ್, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಪತ್ರದ ಕುರಿತು.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ನಿಯಮ 8ಎ(ಬಿ) ರಲ್ಲಿ "ಯಾವುದೇ ನದಿ ದಡದಲ್ಲಿ ಮೇಲಿನ ತೊರೆಯ (upstream) ಸೇತುವೆಯ 5 ಪಟ್ಟು ಮತ್ತು ಕೆಳ ತೊರೆಯ (downstream) ಸೇತುವೆಯ 10 ಪಟ್ಟು ದೂರದಲ್ಲಿ ಮೇಲಿನ ತೊರೆಯಲ್ಲಿ ಕನಿಷ್ಠ 250 ಮೀಟರ್‌ಗಳ ಮತ್ತು ಕೆಳತೊರೆಯ ಕನಿಷ್ಠ 500 ಮೀಟರ್‌ಗಳ ಅಂತರದಲ್ಲಿ ಯಾವುದೇ ಗಣಿಗಾರಿಕೆ ನಡೆಸಲು ಅನುಮತಿಯನ್ನು ನೀಡತಕ್ಕದ್ದಲ್ಲ." ಎಂದು ತಿಳಿಸಿರುವುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿಯವರ ಮನವಿಯಂತೆ ಬಂಟ್ವಾಳ ತಾಲ್ಲೂಕು ಕೈರಂಗಳ ಗ್ರಾಮದ ಸ.ನಂ.46 ರಲ್ಲಿನ ಫಲ್ಗುಣಿ ನದಿ ಪಾತ್ರದಲ್ಲಿ ಮರಳು ಲಭ್ಯತೆಯ ಬಗ್ಗೆ ತಾಲ್ಲೂಕು ಮರಳು ಸಮಿತಿಯಿಂದ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ಮರಳು ಬ್ಲಾಕ್ ಅನ್ನು ಗುರುತಿಸಿ ಮರಳಿನ ಪ್ರಮಾಣವನ್ನು ಅಂದಾಜಿಸಿ ಮರಳು ಬ್ಲಾಕ್ ಶ್ರೇಣಿಯನ್ನು ಖಾತರಿಪಡಿಸಿಕೊಂಡು ನಿಗದಿತ ನಮೂನೆ-JIR ವರದಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ತಾಲ್ಲೂಕು ಮರಳು ಸಮಿತಿ ಸಭೆಯಲ್ಲಿ ಮಂಡಿಸಿ ಚರ್ಚಿಸಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ: ಸಂಬಂಧಪಟ್ಟ ತಾಲ್ಲೂಕು ಮರಳು ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳು)

10. ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿನ ಮರಳು ಬ್ಲಾಕ್‌ಗಳ ಟೆಂಡರ್‌ನಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಶ್ರೀಮತಿ ಗುಲಾಬಿ ಕೆ ಕೋಂ ಕೃಷ್ಣ ನಾಯ್ಕ್ ಮತ್ತು ಶ್ರೀ ರಾಮ ಬಿನ್ ಚೋಮ ಇವರು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಕುರಿತು.

ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಂಎಂಎನ್ 2019, ಬೆಂಗಳೂರು, ದಿನಾಂಕ 01-03-2019 ರಲ್ಲಿ "ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿ ಇ-ಟೆಂಡರ್ ಕರೆಯಲಾಗಿರುವ ಮರಳು ಬ್ಲಾಕ್‌ಗಳಿಗೆ ಯಾವುದೇ ಅರ್ಹ ಬಿಡ್ಡುದಾರರು ಲಭ್ಯವಾಗದೇ ಇದ್ದಲ್ಲಿ, ಸದರಿ ಮರಳು ಬ್ಲಾಕ್‌ಗಳಿಗೆ ಸಾಂಪ್ರದಾಯಿಕ ಮರಳುಗಾರಿಕೆ ಎಂಬ ನಿಬಂಧನೆಯಿಂದ ವಿನಾಯಿತಿ ನೀಡುವಂತೆ ಹಾಗೂ ಸದರಿ ಮರಳು ಬ್ಲಾಕ್‌ಗಳಿಗೆ ಒಬ್ಬ ಬಿಡ್ಡುದಾರರಿದ್ದಲ್ಲಿ ಅವರನ್ನೇ ಅರ್ಹ ಬಿಡ್ಡುದಾರರೆಂದು ಪರಿಗಣಿಸಬಹುದು" ಎಂದು ತಿಳಿಸಲಾಗಿರುತ್ತದೆ. ಕರ್ನಾಟಕ ಉಪಖನಿಜ ರಿಯಾಯಿತಿ

ನಿಯಮಾವಳಿ 1994 ರ ತಿದ್ದುಪಡಿ 2021 ರ ನಿಯಮ 31-ZB ರಲ್ಲಿ "The person shall furnish the document as proof of having engaged in extraction of sand in coastal area through manual methods for at least One year" ಎಂದು ತಿಳಿಸಲಾಗಿರುತ್ತದೆ.

ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿ ಹೊಸದಾಗಿ ಮರಳು ಬ್ಲಾಕ್‌ಗಳನ್ನು ಗುರುತಿಸಿ ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಇ-ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಿಗೆ ಭಾಗವಹಿಸಿರುವ ಬಿಡ್ಡುದಾರರಲ್ಲಿ ಹೆಚ್ಚಿನ ಬಿಡ್ಡುದಾರರು ಸಾಂಪ್ರದಾಯಿಕವಾಗಿ ಮರಳು ತೆಗೆಯುವ ಬಗ್ಗೆ ದಾಖಲೆಯನ್ನು ಹೊಂದಿಲ್ಲದೆ ಇರುವುದರಿಂದ ಸದರಿ ಮರಳು ಬ್ಲಾಕ್‌ನ ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸಲು ಅರ್ಹ ಬಿಡ್ಡುದಾರರು ಲಭ್ಯವಾಗಿರುವುದಿಲ್ಲ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ Non-CRZ ಪ್ರದೇಶದಲ್ಲಿ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿ ಟೆಂಡರ್ ಕರೆದಿರುವ ಮರಳು ಬ್ಲಾಕ್‌ಗಳಿಗೆ ಹಾಗೂ ಇನ್ನು ಮುಂದೆ ಹೊಸದಾಗಿ ಗುರುತಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸುವ ಮರಳು ಬ್ಲಾಕ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಂಎಂಎನ್ 2019, ಬೆಂಗಳೂರು, ದಿನಾಂಕ 01-03-2019 ರ ಆದೇಶದಲ್ಲಿ ನೀಡಿರುವ ವಿನಾಯಿತಿಯಂತೆ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ: ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ)

11. ಪುತ್ತೂರು ತಾಲ್ಲೂಕು ನೆಕ್ಕಿಲಾಡಿ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಕುಮಾರಧಾರ ನದಿ ಪಾತ್ರದ ಸ.ನಂ.106 ರಲ್ಲಿನ 5.93 ಎಕರೆ ವಿಸ್ತೀರ್ಣದಲ್ಲಿ ಮರಳು ಗಣಿಗಾರಿಕೆಗೆ ಲೋಕೋಪಯೋಗಿ ಇಲಾಖೆಗೆ ಗುತ್ತಿಗೆ ಮಂಜೂರಾತಿ ನೀಡಿದ್ದು, ಪ್ರಸ್ತುತ ಕೆ.ಆರ್.ಐ.ಡಿ.ಎಲ್ ರವರಿಗೆ ಕಾಮಗಾರಿಗಳಿಗೆ ಒಟ್ಟು 2477.00 ಕ್ಯುಮೀ. ಮರಳು ಅವಶ್ಯವಿರುವುದರಿಂದ ಸದರಿ ಮರಳು ಬ್ಲಾಕ್ ಅನ್ನು ಸದರಿಯವರಿಗೆ ಹಸ್ತಾಂತರಿಸುವಂತೆ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಪುತ್ತೂರು ಇವರು ದಿನಾಂಕ 10-01-2025 ರಂದು ಪತ್ರ ಬರೆದಿರುವ ಬಗ್ಗೆ ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದರು.

ಮಾನ್ಯ ಅಧ್ಯಕ್ಷರು ಸದರಿ ಮರಳು ಬ್ಲಾಕ್‌ನಿಂದ ಎಷ್ಟು ಪ್ರಮಾಣದ ಮರಳು ಸರ್ಕಾರಿ ಕಾಮಗಾರಿಗಳಿಗೆ ಪೂರೈಕೆಯಾಗಿದೆ, ಎಷ್ಟು ರಾಜಧನ ಸರ್ಕಾರಕ್ಕೆ ಪಾವತಿಯಾಗಿದೆ ಎಂಬುದರ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿತು.

ಮುಂದುವರೆದು, ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳಿಗೆ ಯಾವ ಮೂಲಗಳಿಂದ ಮರಳು ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ವರದಿ ನೀಡಲು ಹಾಗೂ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಕಛೇರಿ ಸುತ್ತೋಲ ಸಂಖ್ಯೆ ಗಭೂಇ/ಕಗಗು/ಡಿಸಿಬಿ/2023-24/11265 ದಿನಾಂಕ 26-02-2024 ರಂತೆ ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಉಪಖನಿಜ ಪೂರೈಕೆ ಮಾಡದೆ ಇರುವ ಗುತ್ತಿಗೆದಾರರ ಬಿಲ್ಲುಗಳಲ್ಲಿ ರಾಜಧನದ 05 ಪಟ್ಟು ದಂಡ, ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿ (AP) ಮತ್ತು ರಾಜಧನದ ಶೇಕಡ 10 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು ಪಾವತಿಸಿಕೊಂಡು ಬಿಲ್ಲುಗಳನ್ನು ತೀರುವಳಿಗೊಳಿಸಲು ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದಾಗ ಸಭೆಯು ಅನುಮೋದಿಸಿತು.

(ಕ್ರಮ: ಲೋಕೋಪಯೋಗಿ ಇಲಾಖೆ)

12. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಮರಳು ಪೂರೈಕೆಗಾಗಿ ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ಸ್ ಇವರಿಗೆ ಈ ಕೆಳಕಂಡ ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲಾಗಿದ್ದು, ಸದರಿಯವರಿಗೆ ಪ್ರಸ್ತುತ ಮರಳು ಬ್ಲಾಕ್‌ಗಳ ಆವಶ್ಯಕತೆ ಇಲ್ಲದಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡುವ ಕುರಿತು.

| ಕ್ರ. ಸಂ. | ತಾಲ್ಲೂಕು | ಗ್ರಾಮ | ಸ.ನಂ./ ವಿಸ್ತೀರ್ಣ (ಎಕರೆಗಳಲ್ಲಿ)/ ನದಿ ಹೆಸರು | ಅಧಿಸೂಚನೆ ದಿನಾಂಕ | EC ಪ್ರಮಾಣ |
|---|---|---|---|---|---|
| 1 | ಪುತ್ತೂರು | 34-ನೆಕ್ಕಿಲಾಡಿ | 67<br>9.00 ಎಕರೆ<br>ನೇತ್ರಾವತಿ | 04-02-2022 | 45,208 ಮೆ.ಟನ್ |
| 2 | ಪುತ್ತೂರು | ಉಪ್ಪಿನಂಗಡಿ | 62<br>8.00 ಎಕರೆ<br>ನೇತ್ರಾವತಿ | 04-02-2022 | 40,033 ಮೆ.ಟನ್ |

ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ಸ್ ಇವರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಮರಳನ್ನು ಪೂರೈಕೆ ಮಾಡುವ ಸಲುವಾಗಿ ಮೀಸಲಿರಿಸಲಾಗಿದ್ದ ಮೇಲ್ಕಂಡ ಮರಳು ಬ್ಲಾಕ್‌ಗಳು ಪ್ರಸ್ತುತ ಸದರಿಯವರಿಗೆ ಅವಶ್ಯಕತೆ ಇಲ್ಲದೆ ಇರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿ ಮೇಲ್ಕಂಡ ಮರಳು ಬ್ಲಾಕ್‌ಗಳು ಪ್ರಸ್ತುತ ಸದರಿಯವರಿಗೆ ಅವಶ್ಯಕತೆ ಇಲ್ಲದೆ ಇರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಗಳಿಗೆ ನೀಡುವ/ ಇ-ಟೆಂಡರ್ ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡುವ ಸಂಬಂಧ ತಿದ್ದುಪಡಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಮಂಗಳೂರು ಇವರು ಪತ್ರ ಸಂಖ್ಯೆ: ಸಸಮಂ/ತಾಶಾ/ಸ.ಇಂ/MDP/2023-24/811-812 ದಿನಾಂಕ 30-08-2023 ರಲ್ಲಿ "ಮಂಗಳೂರು ಉಪ ವಿಭಾಗದಡಿಯಲ್ಲಿ ಕಿಂಡಿ ಅಣೆಕಟ್ಟುಗಳ ನಿರ್ಮಾಣ, ಪ್ರವಾಹ ನಿಯಂತ್ರಣ ತಡೆಗೋಡೆಗಳ ನಿರ್ಮಾಣ ಕಾಮಗಾರಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ವಹಿಸುತ್ತಿದ್ದು, ಪ್ರಸಕ್ತ ವರ್ಷದಲ್ಲಿ ಸದರಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ನಿರ್ವಹಿಸಬೇಕಾಗಿರುವುದರಿಂದ ಉಪಖನಿಜವನ್ನು ಪೂರೈಸುವ ಸಲುವಾಗಿ ಸೂಕ್ತವಾದ ಬ್ಲಾಕ್ ಅನ್ನು ಈ ಇಲಾಖೆಗೆ ಮೀಸಲಿರಿಸಿ ಒದಗಿಸುವಂತೆ" ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಮಂಗಳೂರು ಇವರು ಪತ್ರ ಸಂಖ್ಯೆ: ಕಾಅ/ಕೆಆರ್‌ಐಡಿಎಲ್/ಮಂ/ಕಾಮಗಾರಿ/2023-24/1424 ದಿನಾಂಕ 05-09-2023 ರಲ್ಲಿ "ಮಂಗಳೂರು, ಬಂಟ್ವಾಳ, ಮೂಡಬಿದ್ರೆ ಹಾಗೂ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೆಆರ್‌ಐಡಿಎಲ್ ಸಂಸ್ಥೆಯಿಂದ ಪ್ರಸ್ತುತ ವರ್ಷದಲ್ಲಿ ಸುಮಾರು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಹೊಸ ಕಾಮಗಾರಿಗಳಿಗೆ ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ ಕಾಮಗಾರಿಗಳಿಗೆ ಮರಳಿನ ಅವಶ್ಯಕತೆ ಇರುತ್ತದೆ. ಆದ್ದರಿಂದ ಸದರಿ ಕಾಮಗಾರಿಗಳಿಗೆ ಬೇಕಾಗುವ ಉಪಖನಿಜವನ್ನು ಪೂರೈಸುವ ಸಲುವಾಗಿ ಸೂಕ್ತವಾದ ಬ್ಲಾಕ್ ಅನ್ನು ಇಲಾಖೆಗೆ ಒದಗಿಸುವಂತೆ" ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗಳ ಕುರಿತು ದಿನಾಂಕ 17-10-2023 ರಂದು ಮಾನ್ಯ ಸಹಾಯಕ ಆಯುಕ್ತರು, ಪುತ್ತೂರು ಉಪ ವಿಭಾಗ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ.ಆರ್.ಐ.ಡಿ.ಎಲ್ ಮತ್ತು ಸಣ್ಣ ನೀರಾವರಿ ಇಲಾಖೆ ವತಿಯಿಂದ ನಡೆಯುವ ಕಾಮಗಾರಿಗಳಿಗೆ ಮರಳನ್ನು ಪೂರೈಸಿಕೊಳ್ಳುವ ಸಂಬಂಧ ಸದರಿ ಮರಳು ಬ್ಲಾಕ್‌ಗಳನ್ನು ನಿಯಮಾನುಸಾರ ಕೆ.ಆರ್.ಐ.ಡಿ.ಎಲ್ ಮತ್ತು ಸಣ್ಣ ನೀರಾವರಿ ಇಲಾಖೆಗೆ ನೀಡಬಹುದಾಗಿದ್ದು, ಸದರಿ ಮರಳು ಬ್ಲಾಕ್‌ಗಳನ್ನು ನೀಡುವ ಮುನ್ನ ಮರಳು ಬ್ಲಾಕ್‌ಗಳಲ್ಲಿ ಮರಳಿನ ಲಭ್ಯತೆಯ ಪ್ರಮಾಣವನ್ನು ಸಂಬಂಧಪಟ್ಟ ತಹಶೀಲ್ದಾರರು ಮತ್ತು ಭೂವಿಜ್ಞಾನಿಯವರು ಜಂಟಿಯಾಗಿ ಸ್ಥಳ ಪರಿಶೀಲಿಸಿ ವರದಿ ನೀಡಲು" ನಿರ್ಣಯಿಸಲಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಸದರಿ ಮರಳು ಬ್ಲಾಕ್‌ಗಳನ್ನು ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ಸ್ ಇವರು ಅವಶ್ಯಕತೆ ಇಲ್ಲದಿರುವ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ನೀಡುವಂತೆ ಸದರಿಯವರಿಗೆ ನೋಟೀಸ್ ಜಾರಿ ಮಾಡಲು ಹಾಗೂ ಕೆ.ಎನ್.ಆರ್. ಇವರು ನಿರ್ವಹಿಸುತ್ತಿರುವ ಕಾಮಗಾರಿಗೆ ಯಾವ ಮೂಲದಿಂದ ಮರಳು ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ವರದಿ ನೀಡುವಂತೆ NHAI ಇವರಿಗೆ ಪತ್ರ ಬರೆಯಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

13. ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುವ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಿಕೊಳ್ಳಲು ಈ ಕೆಳಕಂಡ ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲಾಗಿದ್ದು, ಸದರಿಯವರಿಗೆ ಪ್ರಸ್ತುತ ಮರಳು ಬ್ಲಾಕ್‌ಗಳ ಅವಶ್ಯಕತೆ ಇಲ್ಲದಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡುವ ಕುರಿತು.

ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುವ ಸರ್ಕಾರಿ ಕಾಮಗಾರಿಗಳಿಗೆ ಹೆಚ್ಚಿನ ಮರಳು ಅವಶ್ಯಕತೆ ಇಲ್ಲದೆ ಇರುವುದರಿಂದ ಇಲಾಖೆಗೆ ಮೀಸಲಿರಿಸಿರುವ ಈ ಕೆಳಕಂಡ ಮರಳು ಬ್ಲಾಕ್‌ಗಳು ಅವಶ್ಯಕತೆ ಇರುವುದಿಲ್ಲವೆಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಪುತ್ತೂರು ಇವರು ಪತ್ರ ಸಂಖ್ಯೆ: ಸ.ಕಾ.ಇಂ/ನಂ4:ಲೋ.ಇ:ಮಉವಿ/ಮರಳು/ಸ.ಇಂ/23-24/507 ದಿನಾಂಕ 06-09-2023 ರ ಪತ್ರದಲ್ಲಿ ತಿಳಿಸಿರುತ್ತಾರೆ.

| ಕ್ರಸಂ. | ತಾಲ್ಲೂಕು | ಗ್ರಾಮ | ಸ.ನಂ./ ವಿಸ್ತೀರ್ಣ (ಎಕರೆಗಳಲ್ಲಿ)/ ನದಿ ಹೆಸರು | ಅಧಿಸೂಚನೆ ದಿನಾಂಕ/ ಗುತ್ತಿಗೆ ಮಂಜೂರಾತಿ ದಿನಾಂಕ/ ಅವಧಿ | EC ಪ್ರಮಾಣ |
|---|---|---|---|---|---|
| 1 | ಪುತ್ತೂರು | ಉಪ್ಪಿನಂಗಡಿ | 62/1ಎಪಿ2<br>5.00 ಎಕರೆ<br>ನೇತ್ರಾವತಿ | 31-05-2021<br>10-03-2023<br>05 ವರ್ಷ | 15,348 ಮೆ.ಟನ್ |
| 2 | ಕಡಬ | ಕೊಣಾಜೆ | 136/ಪಿ2<br>2.00 ಎಕರೆ<br>ಗುಂಡ್ಯಹೊಳೆ | 25-11-2021<br>10-03-2023<br>05 ವರ್ಷ | 5,011 ಮೆ.ಟನ್ |

ಸಹಾಯಕ ಯೋಜನಾ ವ್ಯವಸ್ಥಾಪಕರು, ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ (ರಿ.), ಎನ್.ಐ.ಟಿ.ಕೆ. ಸುರತ್ಕಲ್ ಇವರು ಪತ್ರ ಸಂಖ್ಯೆ ಕಾ/ಕ.ಅ.ಪ್ರಾ/ಮರಳು/2023-24 ದಿನಾಂಕ 05-10-2023 ರಲ್ಲಿ "ಸುಳ್ಯ ನಗರ, ಸುಳ್ಯ ವಿಧಾನಸಭಾ ಕ್ಷೇತ್ರ ಮತ್ತು ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳಿಗೆ ಒಟ್ಟು 10,000 ಮೆ.ಟನ್ ಮರಳು ಅಗತ್ಯವಿದ್ದು, ಈಗಾಗಲೇ ಲೋಕೋಪಯೋಗಿ ಇಲಾಖೆ ಪುತ್ತೂರು ಇವರಿಗೆ ಮೀಸಲಿರಿಸಿರುವ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಮತ್ತು ಕಡಬ ತಾಲ್ಲೂಕಿನ ಕೊಣಾಜೆ ಗ್ರಾಮದಲ್ಲಿನ ಮರಳು ಬ್ಲಾಕ್‌ಗಳ ಮರಳನ್ನು ಮೀಸಲಿಡುವಂತೆ" ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಕುರಿತು ದಿನಾಂಕ 17-10-2023 ರಂದು ಮಾನ್ಯ ಸಹಾಯಕ ಆಯುಕ್ತರು, ಪುತ್ತೂರು ಉಪ ವಿಭಾಗ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಮತ್ತು ಕಡಬ ತಾಲ್ಲೂಕಿನ ಕೊಣಾಜೆ ಗ್ರಾಮದಲ್ಲಿನ ಮರಳು ಬ್ಲಾಕ್‌ಗಳನ್ನು ದಕ್ಷಿಣ ಕನ್ನಡ

ನಿರ್ಮಿತಿ ಕೇಂದ್ರ (ರಿ.) ಇವರಿಗೆ ನಿಯಮಾನುಸಾರ ನೀಡಲು ನಿರ್ಣಯಿಸಲಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದಾಗ, ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳಿಗೆ ಯಾವ ಮೂಲಗಳಿಂದ ಮರಳು ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ವರದಿ ನೀಡಲು ಹಾಗೂ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಕಛೇರಿ ಸುತ್ತೋಲೆ ಸಂಖ್ಯೆ: ಗಭೂಇ/ಶಗಗು/ಡಿಸಿದಿ/2023-24/11265 ದಿನಾಂಕ 26-02-2024 ರಂತೆ ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಉಪಖನಿಜ ಪೂರೈಕೆ ಮಾಡದ ಇರುವ ಗುತ್ತಿಗೆದಾರರ ಬಿಲ್ಲುಗಳಲ್ಲಿ ರಾಜಧನದ 05 ಪಟ್ಟು ದಂಡ, ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿ (AP) ಮತ್ತು ರಾಜಧನದ ಶೇಕಡ 10 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು ಪಾವತಿಸಿಕೊಂಡು ಬಿಲ್ಲುಗಳನ್ನು ತೀರುವಳಿಗೊಳಿಸಲು ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದಾಗ ಸಭೆಯು ಅನುಮೋದಿಸಿತು.

(ಕ್ರಮ: ಲೋಕೋಪಯೋಗಿ ಇಲಾಖೆ/ ಗಣಿ ಮತ್ತು ಭೂವಿಜ್ಞಾನ ಇಲಾಖೆ)

14. ಬಂಟ್ವಾಳ ತಾಲ್ಲೂಕು ಕಡೆಶಿವಾಲಯ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ ಸ.ನಂ.1 ರಲ್ಲಿನ 6.92 ಎಕರೆ ವಿಸ್ತೀರ್ಣದಲ್ಲಿ ಮರಳು ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನೀಡಿರುವ ಪ್ರದೇಶದ ಸ್ಟಾಕ್‌ಯಾರ್ಡ್‌ನಲ್ಲಿ ದಾಸ್ತಾನಿರುವ ಸುಮಾರು 1,721 ಮೆ.ಟನ್ ಮರಳನ್ನು ವಿಲೇವಾರಿ ಮಾಡುವ ಕುರಿತು.

ಬಂಟ್ವಾಳ ತಾಲ್ಲೂಕು ಕಡೆಶಿವಾಲಯ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ನೇತ್ರಾವತಿ ನದಿ ಪಾತ್ರದ ಸ.ನಂ.1 ರಲ್ಲಿನ 6.92 ಎಕರೆ ವಿಸ್ತೀರ್ಣದಲ್ಲಿ ಮರಳು ಗಣಿಗಾರಿಕೆಗೆ ದಿನಾಂಕ 26-12-2019 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಪ್ರದೇಶದಲ್ಲಿ ಅನಧಿಕೃತ ಮರಳು ಚಟುವಟಿಕೆ ಸಂಬಂಧ ಮಾನ್ಯ ಕರ್ನಾಟಕ ಲೋಕಾಯುಕ್ತದಲ್ಲಿ ದೂರು ದಾಖಲಾಗಿದ್ದ ಮೇರೆಗೆ, ಸದರಿ ಪ್ರದೇಶದಲ್ಲಿ ಮುಂದಿನ ಆದೇಶದವರೆಗೆ ಮರಳು ಗಣಿಗಾರಿಕೆ ಕಾರ್ಯವನ್ನು ಸ್ಥಗಿತಗೊಳಿಸುವಂತೆ ಸೂಚಿಸಿ ಗುತ್ತಿಗೆದಾರರಿಗೆ ದಿನಾಂಕ 18-05-2022 ರಂದು ನೋಟೀಸ್ ಜಾರಿ ಮಾಡಿ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ ಹಾಗೂ ಪ್ರಸ್ತುತ ಸದರಿ ಮರಳು ಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುತ್ತದೆ. ಆದುದರಿಂದ ಸದರಿ ಮರಳು ಗುತ್ತಿಗೆಗೆ ಸಂಬಂಧಪಟ್ಟ ಸ್ಟಾಕ್‌ಯಾರ್ಡ್‌ನಲ್ಲಿ ದಾಸ್ತಾನಿರುವ ಸುಮಾರು 1,721 ಮೆ.ಟನ್ ಮರಳನ್ನು ವಿಲೇವಾರಿ ಮಾಡಬೇಕಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿರುವ ಮರಳು ದಾಸ್ತಾನನ್ನು ಯಾವುದೇ ರೀತಿಯ ಸೋರಿಗೆಯಾಗದಂತೆ ಮತ್ತು ನಿಯಮಗಳು ಉಲ್ಲಂಘನೆ ಆಗದಂತೆ ಖಚಿತ ಪಡಿಸಿಕೊಳ್ಳಲು ಜಂಟಿ ಸ್ಥಳ ಪರಿಶೀಲನೆ ನಡೆಸಿ, ದಾಸ್ತಾನು ಪ್ರಮಾಣವನ್ನು ಖಚಿತಪಡಿಸಿಕೊಂಡು

ವಿವರವಾದ ಕ್ರಿಯಾಯೋಜನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿತು.

(ಕ್ರಮ: ಕಂದಾಯ/ ಗಣಿ ಮತ್ತು ಭೂವಿಜ್ಞಾನ ಇಲಾಖೆ)

15. ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿ ಗುರುತಿಸಿ ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡುವ 06 ಮರಳು ಬ್ಲಾಕ್‌ಗಳ ಇ-ಟೆಂಡರ್ ತೆರೆದ ಸಂದರ್ಭದಲ್ಲಿ ಪ್ರಿ-ಕ್ವಾಲಿಫಿಕೇಶನ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಬಿಡ್ಡುದಾರರ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸಿರುವ ಕುರಿತು.

| ಕ್ರ ಸಂ. | ತಾಲ್ಲೂಕು | ಗ್ರಾಮ | ಗ್ರಾಮ | ವಿಸ್ತೀರ್ಣ (ಎಕರೆಗಳಲ್ಲಿ) | ನದಿ ಹೆಸರು | ಮೀಸಲಾತಿ | ಪ್ರಮಾಣ (ಮೆ.ಟನ್) | ಭಾಗವಹಿಸಿರುವ ಬಿಡ್ಡುದಾರರ ಸಂಖ್ಯೆ | ಲಭ್ಯವಾದ ಅರ್ಹ ಬಿಡ್ಡುದಾರರ ಸಂಖ್ಯೆ | ಷರಾ |
|---|---|---|---|---|---|---|---|---|---|---|
| 1 | ಬಂಟ್ವಾಳ | ಸಂಗಬೆಟ್ಟು | 96 | 5.00 | ಫಲ್ಗುಣಿ | ಪರಿಶಿಷ್ಟ ಜಾತಿ | 26,108 | 11 | 01 | ಕನಿಷ್ಟ 03 ಅರ್ಹ ಬಿಡ್ಡುದಾರರು ಲಭ್ಯವಿಲ್ಲದೆ ಇರುವುದರಿಂದ ಮನಃ ಇ-ಟೆಂಡರ್ ಕರೆಯಬೇಕಾಗಿರುತ್ತದೆ. |
| 2 | ಬಂಟ್ವಾಳ | ಅಮ್ಮುಂಜೆ | 28 | 5.00 | ಫಲ್ಗುಣಿ | ಪರಿಶಿಷ್ಟ ಪಂಗಡ | 17,373.7 | 09 | 0 | |
| 3 | ಮಂಗಳೂರು | ಅಡ್ಡೂರು | 63/1 | 5.00 | ಫಲ್ಗುಣಿ | ಸಾಮಾನ್ಯ | 26,626 | 22 | 07 | ಸರ್ವಿಸ್ ಬಿಡ್ ಕರೆಯಬೇಕಾಗಿದ್ದು, ಶ್ರೀ ಅಬ್ದುಲ್ ಖಾದರ್ ಹಾಗೂ ಪ್ರಜಾ ಜ್ಯೋತಿ ಪ್ರತಿಷ್ಠಾನ(ದ.ಕ) ಇವರು ಮರಳುಗಾರಿಕೆಗೆ ಅನುಮತಿ ನೀಡದಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. |

| | | | | | | | | | | |
|---|---|---|---|---|---|---|---|---|---|---|
| 4 | ಮಂಗಳೂರು | ಚೇಳ್ಯಾರು | 1/1ಸಿ | 8.00 | ನಂದಿನಿ | ಸಾಮಾನ್ಯ | 27,472 | 13 | 06 | ಸರ್ವಿಸ್ ಬಿಡ್ ಕರೆಯಬೇಕಾಗಿದ್ದು, ಅಧ್ಯಕ್ಷರು ಚೇಳ್ಯಾರು ಗ್ರಾಮ ಪಂಚಾಯತ್ ಇವರು ಮರಳು ಗಣಿಗಾರಿಕೆಗೆ ಅನುಮತಿ ನೀಡದಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. |
| 5 | ಮಂಗಳೂರು | ತೆಂಕಉಳಿಪಾಡಿ | 11/ಏ2 | 9.50 | ಫಲ್ಗುಣಿ | ಸಾಮಾನ್ಯ | 49,729 | 29 | 02 | ಕನಿಷ್ಟ 03 ಅರ್ಹ ಬಿಡ್ಡುದಾರರು ಲಭ್ಯವಿಲ್ಲದೆ ಇರುವುದರಿಂದ ಮನಃ ಇ-ಟೆಂಡರ್ ಕರೆಯಬೇಕಾಗಿರುತ್ತದೆ. |
| 6 | ಮೂಡಬಿದ್ರೆ | ಪುಚ್ಚಮೊಗರು | 82 | 10.00 | ಫಲ್ಗುಣಿ | ಸಾಮಾನ್ಯ | 35,005 | 18 | 01 | |

ಮೇಲ್ಕಂಡ ಮರಳು ಬ್ಲಾಕ್‌ಗಳ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಬಿಡ್ಡುದಾರರು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಗಳ ಮೂಲ ದಾಖಲಾತಿಗಳನ್ನು ದಿನಾಂಕ 19-12-2024 ರಂದು ಉಪ ವಿಭಾಗಾಧಿಕಾರಿಗಳು ಮಂಗಳೂರು ಉಪ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಮಂಗಳೂರು ಮತ್ತು ಪರಿಸರ ಅಧಿಕಾರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಂಗಳೂರು ಇವರುಗಳೊಂದಿಗೆ ಪರಿಶೀಲಿಸಲಾಗಿದ್ದು, ಟೆಂಡರ್ ಡಾಕ್ಯುಮೆಂಟ್ ಮತ್ತು ನಿಯಮಗಳಡಿಯಲ್ಲಿ ಈ ಕೆಳಕಂಡಂತೆ ಅಂಶಗಳನ್ನು ಗಮನಿಸಿ ಶಿಫಾರಸ್ಸು ವರದಿಯನ್ನು ನೀಡಲಾಗಿರುತ್ತದೆ.

1. ತಾಲ್ಲೂಕು ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಅದೇ ತಾಲ್ಲೂಕಿನಲ್ಲಿ ಕನಿಷ್ಟ 01 ವರ್ಷ ವಾಸವಿರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ದೃಢೀಕರಣ ಪತ್ರವನ್ನು ಹೊಂದಿರಬೇಕಾಗಿರುತ್ತದೆ. ಆದರೆ ಕೆಲವು ಬಿಡ್ಡುದಾರರು ಈ ಹಿಂದೆ ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ವಾಸ್ತವ್ಯವಿದ್ದು, ಪ್ರಸ್ತುತ ಸದರಿ ತಾಲ್ಲೂಕುಗಳ ಕೆಲವು ಗ್ರಾಮಗಳು ವಿಭಜನೆಗೊಂಡು ಹೊಸದಾಗಿ ಮೂಡಬಿದ್ರೆ, ಮುಲ್ಕಿ ಮತ್ತು ಉಳ್ಳಾಲ ತಾಲ್ಲೂಕು ರಚನೆಯಾಗಿರುತ್ತದೆ.

ಆದುದರಿಂದ ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳ ಕೆಲವು ಗ್ರಾಮಗಳು ವಿಭಜನೆಗೊಂಡು ಹೊಸದಾಗಿ ರಚನೆಯಾಗಿರುವ ಮೂಡಬಿದ್ರೆ, ಮುಲ್ಕಿ ಮತ್ತು ಉಳ್ಳಾಲ ತಾಲ್ಲೂಕುಗಳಲ್ಲಿ ಕನಿಷ್ಠ 01 ವರ್ಷ ವಾಸ್ತವ್ಯ ಇರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ದೃಢೀಕರಣ ಪತ್ರವನ್ನು ಸಲ್ಲಿಸಿದ ಬಿಡ್ಡುದಾರರನ್ನು ಪರಿಗಣಿಸಿದಲ್ಲಿ ಹೆಚ್ಚಿನ ಅರ್ಹ ಬಿಡ್ಡುದಾರರರು ಲಭ್ಯವಾಗುತ್ತಾರೆ.

2. ಕರಾವಳಿ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಮರಳು ತೆಗೆಯುತ್ತಿರುವ ಬಗ್ಗೆ ಕನಿಷ್ಠ 01 ವರ್ಷದ ದಾಖಲೆಯನ್ನು ಹೊಂದಿರಬೇಕಾಗಿರುತ್ತದೆ. ಆದರೆ ಕೆಲವು ಬಿಡ್ಡುದಾರರು ಈ ಹಿಂದೆ ಹೊಂದಿದ್ದಂತಹ 03 ತಿಂಗಳ ಅವಧಿಯ ಸಂಖ್ಯೆ 01/ 02/ 03 ರ ತಾತ್ಕಾಲಿಕ ಪರವಾನಿಗೆಗಳನ್ನು ಅಥವಾ ಅಬಿಬ ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ನೀಡಲಾದ CRZ Clearance ಪತ್ರವು ವಿತರಣೆಯಾದ ದಿನಾಂಕದಿಂದ 01 ವರ್ಷದ ಅವಧಿಗೆ ಮಾತ್ರ ಊರ್ಜಿತದಲ್ಲಿದ್ದು, CRZ Clearance ಪತ್ರ ಪಡೆದ 2–3 ತಿಂಗಳ ನಂತರದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ತಾತ್ಕಾಲಿಕ ಪರವಾನಿಗೆಯನ್ನು ನೀಡಲಾಗಿರುತ್ತದೆ. ಬಿಡ್ಡುದಾರರು ಕೇವಲ 01 ತಾತ್ಕಾಲಿಕ ಪರವಾನಿಗೆಯನ್ನು 01 ವರ್ಷದ ತಾತ್ಕಾಲಿಕ ಪರವಾನಿಗೆ ಎಂದು ಅರ್ಥೈಸಿಕೊಂಡು ಟೆಂಡರ್ ಪ್ರಕ್ರಿಯೆಯಲ್ಲಿ 01 ತಾತ್ಕಾಲಿಕ ಪರವಾನಿಗೆಯನ್ನು ಮಾತ್ರ ಅಪ್‌ಲೋಡ್ ಮಾಡಿರುತ್ತಾರೆ.

ಆದುದರಿಂದ 01 ತಾತ್ಕಾಲಿಕ ಪರವಾನಿಗೆಯನ್ನು 01 ವರ್ಷದ ಸಾಂಪ್ರದಾಯಿಕವಾಗಿ ಮರಳು ತೆಗೆಯುತ್ತಿರುವ ದಾಖಲೆ ಎಂದು ಪರಿಗಣಿಸಿದಲ್ಲಿ ಹೆಚ್ಚಿನ ಅರ್ಹ ಬಿಡ್ಡುದಾರರರು ಲಭ್ಯವಾಗುತ್ತಾರೆ.

ಮೇಲ್ಕಂಡ ಕ್ರಮ ಸಂಖ್ಯೆ 01 ಮತ್ತು 02 ರಲ್ಲಿನ ಅಂಶಗಳನ್ನು ಜಿಲ್ಲಾ ಮರಳು ಸಮಿತಿಯ ಗಮನಕ್ಕೆ ತರಬಯಸುತ್ತಾ, ಈ ಬಗ್ಗೆ ಸರ್ಕಾರದ ಮಾರ್ಗಸೂಚಿ ಮತ್ತು ನಿಯಮಗಳಲ್ಲಿ ಸಡಿಲಿಕೆಗೊಳಿಸಲು ಜಿಲ್ಲಾ ಮರಳು ಸಮಿತಿಯಿಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಪರಿಶೀಲನಾ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ದಿನಾಂಕ: 19-12-2023 ರಂದು ಟೆಂಡರ್ ಪ್ರಕ್ರಿಯೆಗೆ ಅನುಮೋದನ ನೀಡಿದ್ದು, ಜೂನ್ 2024 ರಲ್ಲಿ ಟೆಂಡರ್ ಕರೆದಿದ್ದು, ಜನವರಿ 2025 ರವರಗೂ ಪೂರ್ಣಗೊಂಡಿರುವುದಿಲ್ಲ ಹಾಗೂ ಸಮಿತಿಗೂ ಮಂಡಿಸಿರುವುದಿಲ್ಲ. ಉಪವಿಭಾಗಾಧಿಕಾರಿಗಳ ಮಟ್ಟದ ಸಭೆಯಲ್ಲಿ ಈ ಬಗ್ಗೆ ಪರಿಶೀಲಿಸಿ ಜಿಲ್ಲಾ ಮಟ್ಟದ ಸಮಿತಿಗೆ ಮಂಡಿಸಬೇಕಾಗಿದ್ದು, ಈವರಗೂ ಮಂಡಿಸಿರುವುದಿಲ್ಲ. ಇದರಲ್ಲಿ ಕನಿಷ್ಠ ಒಂದು ವರ್ಷದ ಮರಳುಗಾರಿಕೆಯ ಪರವಾಣಿಗ ಹೊಂದಿರುವಂತಹ ನಿಬಂಧನೆಯು 50% ಕಿಂತ ಹೆಚ್ಚು ಟೆಂಡರ್ ದಾರರು ಪೂರೈಸಿರುವುದಿಲ್ಲ. ಈ ವರ್ಷದವರೆಗೂ

ಕನಿಷ್ಠ ಒಂದು ವರ್ಷ ಪರವಾಣಿಗೆ ಇಲ್ಲದಿರುವುದಕ್ಕೆ ಸೂಕ್ತವಾದ ದಾಖಲೆಗಳನ್ನು ಮಂಡಿಸಿರುವುದಿಲ್ಲ. ಈ ರೀತಿ ಅಪೂರ್ಣವಾಗಿ ಮಂಡಿಸಿರುವುದರಿಂದ ಸಮಿತಿಯಲ್ಲಿ ನಿರ್ಣಯ ತೆಗೆದುಕೊಳ್ಳಲು ಅಸಾಧ್ಯವಾಗಿದ್ದು, ಇನ್ನು ಮುಂದೆ ಈ ರೀತಿ ವಿಳಂಭವಾಗದಂತೆ ತ್ವರಿತ ಗತಿಯಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಸೇತುವೆಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವಂತೆ ಮತ್ತು ಫೀಡ್ (footage)ಅನ್ನು ಈ ಮೇಲಿನ ಅಂಶಗಳಲ್ಲಿ ಈಗಾಗಲೇ ಸೂಚಿಸಿರುವಂತೆ ಸ್ಮಾರ್ಟ್.ಸಿಟಿ, ಕಮಾಂಡ್ ಸೆಂಟರ್ ಗೆ ರವಾನೆ ಆಗುವಂತೆ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸಿ ಸದರಿ ಸಿ.ಸಿ.ಕ್ಯಾಮೆರಾಗಳ ಫೋಟೇಜ್ ಅನ್ನು ಪರಿಶೀಲಿಸಿ ಅನಧಿಕೃತ ಮರಳು ಸಾಗಾಣಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕಾರ್ಯ ಪ್ರವೃತ್ತರಾಗಲು ಸಭೆಯು ಸರ್ವಾನುಮತದಿಂತ ತೀರ್ಮಾನಿಸಿತು.

(ಕ್ರಮ: ಪೊಲೀಸ್ , ಸೇತುವೆಗೆ ಸಂಬಂಧಪಟ್ಟ ಇಲಾಖೆಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಸಮಿತಿಯು ಮೇಲ್ಕಂಡ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಿ ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿನ ಮರಳು ಬ್ಲಾಕ್‌ಗಳ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಅರ್ಹ ಬಿಡ್ಡುದಾರರು ಲಭ್ಯವಾಗುವ ನಿಟ್ಟಿನಲ್ಲಿ ಈ ಕೆಳಕಂಡಂತೆ ನಿಯಮಗಳಲ್ಲಿ ಸಡಿಲಿಕೆ/ ವಿನಾಯಿತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

1. ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳ ಕೆಲವು ಗ್ರಾಮಗಳು ವಿಭಜನೆಗೊಂಡು ಹೊಸದಾಗಿ ರಚನೆಯಾಗಿರುವ ಮೂಡಬಿದ್ರೆ, ಮುಲ್ಕಿ ಮತ್ತು ಉಳ್ಳಾಲ ತಾಲ್ಲೂಕುಗಳಲ್ಲಿ ಕನಿಷ್ಠ 01 ವರ್ಷ ವಾಸ್ತವ್ಯ ಇರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ದೃಢೀಕರಣ ಪತ್ರವನ್ನು ಸಲ್ಲಿಸಿದ ಬಿಡ್ಡುದಾರರನ್ನು ಪರಿಗಣಿಸುವುದು.

2. 01 ತಾತ್ಕಾಲಿಕ ಪರವಾನಿಗೆಯನ್ನು 01 ವರ್ಷದ ಸಾಂಪ್ರದಾಯಿಕವಾಗಿ ಮರಳು ತೆಗೆಯುತ್ತಿರುವ ದಾಖಲೆ ಎಂದು ಪರಿಗಣಿಸುವುದು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿ ಈಗಾಗಲೇ ಟೆಂಡರ್ ಕರೆದಿರುವ ಮರಳು ಬ್ಲಾಕ್‌ಗಳಿಗೆ ಹಾಗೂ ಇನ್ನು ಮುಂದೆ ಹೊಸದಾಗಿ ಗುರುತಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸುವ ಮರಳು ಬ್ಲಾಕ್‌ಗಳಿಗೆ ಯಾವುದೇ ಅರ್ಹ ಬಿಡ್ದುದಾರರು ಲಭ್ಯವಾಗದೇ ಇದ್ದಲ್ಲಿ, ಸದರಿ ಮರಳು ಬ್ಲಾಕ್‌ಗಳಿಗೆ ಸಾಂಪ್ರದಾಯಿಕ ಮರಳುಗಾರಿಕೆ ಎಂಬ ನಿಬಂಧನೆಯಿಂದ ವಿನಾಯಿತಿ ನೀಡುವಂತೆ ಹಾಗೂ ಸದರಿ ಮರಳು ಬ್ಲಾಕ್‌ಗಳಿಗೆ ಒಬ್ಬ ಬಿಡ್ದುದಾರರಿದ್ದಲ್ಲಿ ಅವರನ್ನೇ ಅರ್ಹ ಬಿಡ್ದುದಾರರೆಂದು ಪರಿಗಣಿಸಬಹುದು.

(ಕ್ರಮ: ಗಣಿ ಮತ್ತು ಭೂವಿಜ್ಞಾನ ಇಲಾಖೆ)

ಹಿರಿಯ ಭೂವಿಜ್ಞಾನಿ/ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಜಿಲ್ಲಾಧಿಕಾರಿಗಳು/ ಅಧ್ಯಕ್ಷರು
ಜಿಲ್ಲಾ ಮರಳು ಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-08

# ದಿನಾಂಕ: 19.11.2024 ರಂದು ಮಾನ್ಯ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿ.

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಉಪ ವಿಭಾಗಾಧಿಕಾರಿಯವರು, ಕುಂದಾಪುರ, ಉಡುಪಿ ಜಿಲ್ಲೆ | ಅಧ್ಯಕ್ಷರು, |
| 2. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಉಡುಪಿ ತಾಲ್ಲೂಕು | ಸದಸ್ಯರು, |
| 3. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಬ್ರಹ್ಮಾವರ ತಾಲ್ಲೂಕು | ಸದಸ್ಯರು, |
| 4. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಕಾಪು ತಾಲ್ಲೂಕು | ಸದಸ್ಯರು, |
| 5. | ಪೊಲೀಸ್ ಉಪಾಧೀಕ್ಷಕರು, ಉಡುಪಿ ತಾಲ್ಲೂಕು | ಸದಸ್ಯರು, |
| 6. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ತಾಲ್ಲೂಕು. | ಸದಸ್ಯರು, |
| 7. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬ್ರಹ್ಮಾವರ ತಾಲ್ಲೂಕು. | ಸದಸ್ಯರು |
| 8. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಉಡುಪಿ. | ಸದಸ್ಯರು |
| 9. | ಸಹಾಯಕ ಪರಿಸರ ಅಧಿಕಾರಿ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಉಡುಪಿ ತಾಲ್ಲೂಕು. | ಸದಸ್ಯರು, |
| 10. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ತಾಲ್ಲೂಕು. | ಸದಸ್ಯರು, |
| 11. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೈಂದೂರು ತಾಲ್ಲೂಕು. | ಸದಸ್ಯರು, |
| 12. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾಪು ತಾಲ್ಲೂಕು. | ಸದಸ್ಯರು, |
| 13. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರ್ಕಳ ತಾಲ್ಲೂಕು. | ಸದಸ್ಯರು, |
| 14. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹೆಬ್ರಿ ತಾಲ್ಲೂಕು. | ಸದಸ್ಯರು, |
| 15. | ತಹಶೀಲ್ದಾರರು ಉಡುಪಿ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 16. | ತಹಶೀಲ್ದಾರರು ಬ್ರಹ್ಮಾವರ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 17. | ತಹಶೀಲ್ದಾರರು ಕಾಪು ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 18. | ತಹಶೀಲ್ದಾರರು ಕಾರ್ಕಳ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 19. | ತಹಶೀಲ್ದಾರರು ಹೆಬ್ರಿ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಉಪವಿಭಾಗಾಧಿಕಾರಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು/ನಾಮ ನಿರ್ದೇಶಿತ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಉಪವಿಭಾಗಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಭೂವಿಜ್ಞಾನಿಯವರು ಕಾರ್ಯಸೂಚಿಗಳನುಸಾರ ವಿವರ ನೀಡಿದರು. ನಂತರ ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

**ವಿಷಯಸೂಚಿ–1: ಉಡುಪಿ ಜಿಲ್ಲಾ ವ್ಯಾಪ್ತಿಯ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಈಗಾಗಲೇ ಗುರುತಿಸಿ ಆಶಯ ಪತ್ರ ನೀಡಿರುವ ಮರಳು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಂದ ಮರಳು ತೆಗೆದು ವಿಲೇವಾರಿ ಮಾಡುವ ಕುರಿತು:**

- ಉಡುಪಿ ಜಿಲ್ಲಾ ವ್ಯಾಪ್ತಿಯ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಈಗಾಗಲೇ ಗುರುತಿಸಿರುವ 99 ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿರುತ್ತದೆ.
- ಈಗಾಗಲೇ 31 ಮರಳು ಬ್ಲಾಕ್‌ನ ಅವಧಿಯು ದಿನಾಂಕ: 02.10.2024 ರಂದು ಮುಕ್ತಾಯಗೊಂಡಿದ್ದು, 38 ಮರಳು ಬ್ಲಾಕ್‌ಗಳ ಅವಧಿಯು ದಿನಾಂಕ: 20.12.2024 ರವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ 30 ಮರಳು ಬ್ಲಾಕ್‌ಗಳ ಕಾರ್ಯಾದೇಶದ ಅವಧಿಯು ದಿನಾಂಕ: 30.01.2025 ರವರೆಗೆ ಚಾಲ್ತಿಯಲ್ಲಿರುತ್ತದೆ.
- ಒಟ್ಟು 99 ಮರಳು ಬ್ಲಾಕ್‌ಗಳಲ್ಲಿ 42 ಮರಳು ಬ್ಲಾಕ್‌ಗಳು ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯ ಕೈಗೊಂಡಿರುವುದಿಲ್ಲ. ಈಗಾಗಲೇ ಅವಧಿ ಮುಕ್ತಾಯಗೊಂಡಿರುವ ಮರಳು ಬ್ಲಾಕ್‌ಗಳ ವಿವರಗಳನ್ನು ಈ ಕೆಳಕಂಡಂತೆ ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸಿದರು.

| ಕ್ರ.ಸಂ | User ID | ತಾಲೂಕು | ವಿಧಾನ ಸಭಾ ಕ್ಷೇತ್ರ | ಗ್ರಾಮ ಪಂಚಾಯತ್ | ಗ್ರಾಮ | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹೊಳೆ/ ತೊರೆ | ಮಂಜೂರಾದ ದಿನಾಂಕ | ಅವಧಿ ಮುಕ್ತಾಯಗೊಳ್ಳುವ ದಿನಾಂಕ |
|---|---|---|---|---|---|---|---|---|---|---|
| 1 | UDPNSGP112 | ಹೆಬ್ರಿ | ಕಾರ್ಕಳ | ವರಂಗ | ವರಂಗ | 20 | 0.69 | ಮಾತಿಬೆಟ್ಟು | 03.10.2023 | 02.10.2024 |
| 2 | UDPNSGP113 | ಹೆಬ್ರಿ | ಕಾರ್ಕಳ | ವರಂಗ | ಪಡುಕುಡೂರು | 36 | 0.59 | ಮಾತಿಬೆಟ್ಟು | 03.10.2023 | 02.10.2024 |

| | | | | | | | | | | |
|---|---|---|---|---|---|---|---|---|---|---|
| 3 | UDPNSGP114 | ಹೆಬ್ರಿ | ಕಾರ್ಕಳ | ವರಂಗ | ವರಂಗ | 20 | 0.56 | ಮಾತಿಬೆಟ್ಟು (ಕಿಂಡಿ ಅಣೆಕಟ್ಟು) | 03.10.2023 | 02.10.2024 |
| 4 | UDPNSGP115 | ಹೆಬ್ರಿ | ಕಾರ್ಕಳ | ವರಂಗ | ಅಂಡಾರು | 146 | 0.61 | ಕಾಡುಹೊಳೆ | 03.10.2023 | 02.10.2024 |
| 5 | UDPNSGP116 | ಹೆಬ್ರಿ | ಕಾರ್ಕಳ | ಮುದ್ರಾಡಿ | ಮುದ್ರಾಡಿ | 70 | 0.16 | ಕೆಲಕಿಲ ಬೆಟ್ಟು | 03.10.2023 | 02.10.2024 |
| 6 | UDPNSGP117 | ಹೆಬ್ರಿ | ಕಾರ್ಕಳ | ಶಿವಪುರ | ಶಿವಪುರ | 314 | 1.24 | ಕಾಚಿಲ | 03.10.2023 | 02.10.2024 |
| 7 | UDPNSGP118 | ಹೆಬ್ರಿ | ಕಾರ್ಕಳ | ಶಿವಪುರ | ಶಿವಪುರ | 100/2 | 0.25 | ಗೊನಮಾರು | 03.10.2023 | 02.10.2024 |
| 8 | UDPNSGP119 | ಹೆಬ್ರಿ | ಕಾರ್ಕಳ | ಶಿವಪುರ | ಶಿವಪುರ | 17/34, 17/31 | 0.50 | ಕುಂದಾರು | 03.10.2023 | 02.10.2024 |
| 9 | UDPNSGP120 | ಬೈಂದೂರು | ಬೈಂದೂರು | ಕಾಲ್ತೋಡು | ಕಾಲ್ತೋಡು | 249, 333 | 1.25 | ಅಲ್ಸಾಡಿ ಹಳ್ಳ | 03.10.2023 | 02.10.2024 |
| 10 | UDPNSGP121 | ಕುಂದಾಪುರ | ಕುಂದಾಪುರ | ಕಾಳಾವರ | ವಕ್ವಾಡಿ | 7, 8, 18,19, 20,21, 22,23, 24,25, 26,27, 55,56, 57,58, 60 | 0.50 | ತೆಂಕಬೆಟ್ಟು ಹಳ್ಳ | 03.10.2023 | 02.10.2024 |
| 11 | UDPNSGP122 | ಕುಂದಾಪುರ | ಕುಂದಾಪುರ | ಕಾಳಾವರ | ಕಾಳಾವರ | 29 | 0.50 | ಕಾಳಾವರ ಹಳ್ಳ | 03.10.2023 | 02.10.2024 |
| 12 | UDPNSGP123 | ಕುಂದಾಪುರ | ಬೈಂದೂರು | ಆಲೂರು | ಹರ್ಕೂರು | 62 | 1.70 | ನಡುಬೆಟ್ಟು ಹಳ್ಳ | 03.10.2023 | 02.10.2024 |
| 13 | UDPNSGP125 | ಕಾರ್ಕಳ | ಕಾರ್ಕಳ | ಕೆರ್ವಾಶೆ | ಕೆರ್ವಾಶೆ (ಪಾಲ್ದಕ್ಯಾರು) | 267/01 | 0.19 | ಅಡ್ಡನಡ್ಕ ಹಳ್ಳ | 03.10.2023 | 02.10.2024 |
| 14 | UDPNSGP126 | ಕಾರ್ಕಳ | ಕಾರ್ಕಳ | ಪಳ್ಳಿ | ಪಳ್ಳಿ | 318 | 0.47 | ಪಾಪನಾಶಿನಿ ಹಳ್ಳ | 03.10.2023 | 02.10.2024 |
| 15 | UDPNSGP127 | ಕಾರ್ಕಳ | ಕಾರ್ಕಳ | ಮುಂಡ್ಕೂರು | ಮುಂಡ್ಕೂರು | 97 | 1.00 | ಪಡಿತಾರ್ ನಾಲ | 03.10.2023 | 02.10.2024 |
| 16 | UDPNSGP128 | ಕಾರ್ಕಳ | ಕಾರ್ಕಳ | ಶಿರ್ಲಾಲು | ಶಿರ್ಲಾಲು (ಹೆಗ್ಡೆಬೆಟ್ಟು) | 195 | 0.16 | ಚೌಕಿ ಹಳ್ಳ | 03.10.2023 | 02.10.2024 |
| 17 | UDPNSGP129 | ಕಾರ್ಕಳ | ಕಾರ್ಕಳ | ಶಿರ್ಲಾಲು | ಶಿರ್ಲಾಲು (ಮುದಲ್ ಕಡಿ) | 226 | 0.18 | ಎಣ್ಣೆಹೊಳೆ ಉಪನದಿ | 03.10.2023 | 02.10.2024 |
| 18 | UDPNSGP130 | ಕಾರ್ಕಳ | ಕಾರ್ಕಳ | ಶಿರ್ಲಾಲು | ಶಿರ್ಲಾಲು (ಅರಸು ಬೈಲು) | 10 | 0.12 | ಚೌಕಿ ಹಳ್ಳ | 03.10.2023 | 02.10.2024 |
| 19 | UDPNSGP131 | ಕಾರ್ಕಳ | ಕಾರ್ಕಳ | ಶಿರ್ಲಾಲು | ಶಿರ್ಲಾಲು (ಮಹಾತ್ಮಾ ಗಾಂಧಿ) | 60 | 0.06 | ಎಣ್ಣೆಹೊಳೆ ಉಪನದಿ | 03.10.2023 | 02.10.2024 |
| 20 | UDPNSGP132 | ಕಾರ್ಕಳ | ಕಾರ್ಕಳ | ಬೆಳ್ಮಣ್ | ಸೂಡಾ (ಕೊಂಬಳ್ಳೆ) | 110, 30 | 0.58 | ಸೂಡಾ ಹಳ್ಳ | 03.10.2023 | 02.10.2024 |

| | | | | | | | | | | |
|---|---|---|---|---|---|---|---|---|---|---|
| 21 | UDPNSGP133 | ಕಾರ್ಕಳ | ಕಾರ್ಕಳ | ಬೆಳ್ಮಣ್ | ಸೂಡಾ (ಮದ್ಮಲ್ ಬೈಲು) | 20 | 0.83 | ಸೂಡಾ ಹಳ್ಳ | 03.10.2023 | 02.10.2024 |
| 22 | UDPNSGP134 | ಕಾರ್ಕಳ | ಕಾರ್ಕಳ | ಯರ್ಲಪಾಡಿ | ಯರ್ಲಪಾಡಿ (ಶೆಟ್ಟಿಬೆಟ್ಟು) | 121 | 0.08 | ಶೆಟ್ಟಿಬೆಟ್ಟು ಹಳ್ಳ | 03.10.2023 | 02.10.2024 |
| 23 | UDPNSGP135 | ಕಾರ್ಕಳ | ಕಾರ್ಕಳ | ಬೋಳ | ಬೋಳ | 252/ಎ | 0.85 | ಶಾಂಭವಿ ಹೊಳೆ | 03.10.2023 | 02.10.2024 |
| 24 | UDPNSGP136 | ಕಾರ್ಕಳ | ಕಾರ್ಕಳ | ಇನ್ನಾ | ಇನ್ನಾ | 71/1 | 0.17 | ಕಲ್ಲಟ್ಟೆ | 03.10.2023 | 02.10.2024 |
| 25 | UDPNSGP137 | ಕಾರ್ಕಳ | ಕಾರ್ಕಳ | ಕಡ್ತಲ | ಎಳ್ಳಾರೆ | 22/2ಎ | 0.27 | ಕೊಂಬೆತೋಡು | 03.10.2023 | 02.10.2024 |
| 26 | UDPNSGP138 | ಕಾರ್ಕಳ | ಕಾರ್ಕಳ | ಮುಡಾರು | ಮುಡಾರು | 178 | 0.12 | ಕಡಾರಿ | 03.10.2023 | 02.10.2024 |
| 27 | UDPNSGP139 | ಕಾರ್ಕಳ | ಕಾರ್ಕಳ | ಬೈಲೂರು | ಕೌಡೂರು | 229/1ಎ1 | 0.25 | ಸುಧಾ | 03.10.2023 | 02.10.2024 |
| 28 | UDPNSGP140 | ಕಾರ್ಕಳ | ಕಾರ್ಕಳ | ಬೈಲೂರು | ಕೌಡೂರು | 229/1ಎ1 | 0.36 | ಸುಧಾ | 03.10.2023 | 02.10.2024 |
| 29 | UDPNSGP141 | ಕಾರ್ಕಳ | ಕಾರ್ಕಳ | ಮರ್ಣೆ | ಮರ್ಣೆ | 77 | 0.10 | ಅಂಚಿಕಟ್ಟೆ ಕೌಡೂರು | 03.10.2023 | 02.10.2024 |
| 30 | UDPNSGP142 | ಕಾರ್ಕಳ | ಕಾರ್ಕಳ | ಮರ್ಣೆ | ಹೆರ್ಮುಂಡೆ | 145/4 | 0.20 | ಕುಡಿಯೆ | 03.10.2023 | 02.10.2024 |
| 31 | UDPNSGP143 | ಕಾಪು | ಕಾಪು | ಶಿರ್ವ | ಶಿರ್ವ (ಪನ್ನಾಡಿ) | - | 0.60 | ಪಾಪನಾಶಿನಿ | 03.10.2023 | 02.10.2024 |

<u>ನಿರ್ಣಯ:</u> ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಗ್ರಾಮ ಪಂಚಾಯತ್‌ಗಳಿಗೆ ಈಗಾಗಲೇ ಆಶಯ ಪತ್ರ ನೀಡಿರುವ ಆಶಯ ಪತ್ರದ ಅವಧಿ ಮುಕ್ತಾಯಗೊಂಡಿದ್ದು, ಸದರಿ 31 ಮರಳು ಬ್ಲಾಕ್‌ಗಳನ್ನು ಮರು ಜಂಟಿ ಸ್ಥಳ ಪರಿಶೀಲನೆ ನಡೆಸಿ, ಸದರಿ ಮರಳು ನಿಕ್ಷೇಪಗಳಲ್ಲಿ ಮರಳು ಲಭ್ಯತೆ ಇದ್ದಲ್ಲಿ ಅಂತಹ ಮರಳು ಬ್ಲಾಕ್‌ಗಳನ್ನು ಮುಂದಿನ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ಇದುವರೆಗೂ ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯ ಕೈಗೊಳ್ಳದೇ ಇರುವ 42 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸೂಕ್ತ ಸಮಜಾಯಿಷಿಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಕಚೇರಿಗೆ ನೀಡಿದ ನಂತರ ಸದರಿ ಮರಳು ಬ್ಲಾಕ್‌ಗಳನ್ನು ರದ್ದುಗೊಳಿಸಲು ತಾಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಮುಂದಿನ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–2: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ಬಗ್ಗೆ ಚರ್ಚೆ.

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಈಗಾಗಲೇ ಒಟ್ಟು 20 ಮರಳು ನಿಕ್ಷೇಪಗಳನ್ನು ಗುರುತಿಸಿ ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ. ಸದರಿ ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಹಿರಿಯ ಭೂಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

## ಉಡುಪಿ ತಾಲ್ಲೂಕು:

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಉಡುಪಿ | ಆಲೆವೂರು | ಆಲೆವೂರು | 109 | 0.60 | ಚಕ್ರೊಮತಿ ಹೊಳೆ | III | A. N 13° 18' 6.32" E 74° 47' 44.14"<br>B. N 13° 18' 6.02" E 74° 47' 43.96"<br>C. N 13° 18' 8.38" E 74° 47' 40.24"<br>D. N 13° 18' 7.95" E 74° 47' 40.18"<br>E. N 13° 18' 6.30" E 74° 47' 37.73"<br>F. N 13° 18' 6.20" E 74° 47' 37.91" | 4000 |
| 2. | ಉಡುಪಿ | ಮಣಿಪುರ | ಮಣಿಪುರ | 84 | 1.80 | ಪಾಪನಾಶಿನಿ ಹೊಳೆ | III | A. N 13° 17' 0.95" E 74° 46' 49.25"<br>B. N 13° 17' 0.00" E 74° 46' 49.58"<br>C. N 13° 17' 3.88" E 74° 46' 56.37"<br>D. N 13° 17' 2.88" E 74° 46' 56.77" | 4000 |
| 3. | ಉಡುಪಿ | ಮಣಿಪುರ | ಮಣಿಪುರ | 84 | 1.00 | ಪಾಪನಾಶಿನಿ ಹೊಳೆ | III | A. N 13° 17' 9.23" E 74° 47' 4.65"<br>B. N 13° 17' 8.23" E 74° 47' 4.48"<br>C. N 13° 17' 5.35" E 74° 47' 0.37"<br>D. N 13° 17' 6.13" E 74° 46' 59.95" | 3800 |
| 4. | ಉಡುಪಿ | ಮಣಿಪುರ | ಮಣಿಪುರ | 31,32 & 35 | 2.00 | ಚಕ್ರೊಮತಿ ಹೊಳೆ | III | A. N 13° 17' 50.50" E 74° 46' 2.57"<br>B. N 13° 17' 50.12" E 74° 46' 2.83"<br>C. N 13° 17' 57.52" E 74° 46' 16.44"<br>D. N 13° 17' 57.77" E 74° 46' 16.10" | 4800 |
| 5. | ಉಡುಪಿ | ಪೆರ್ಡೂರು | ಪೆರ್ಡೂರು | 523 | 0.65 | ಮತ್ತಿಗೆ ಹೊಳೆ | III | A. N 13° 21' 55.15" E 74° 52' 59.04"<br>B. N 13° 21' 54.38" E 74° 52' 58.97"<br>C. N 13° 21' 54.69" E 74° 52' 55.59"<br>D. N 13° 21' 53.85" E 74° 52' 55.53" | 3000 |
| 6. | ಉಡುಪಿ | ಪೆರ್ಡೂರು | ಪೆರ್ಡೂರು | 253 | 1.00 | ಅಡಪಾಡಿ ಹೊಳೆ | III | A. N 13° 24' 22.09" E 74° 53' 1.02"<br>B. N 13° 24' 21.66" E 74° 53' 1.48"<br>C. N 13° 24' 26.02" E 74° 53' 5.11"<br>D. N 13° 24' 25.35" E 74° 53' 5.38" | 3800 |
| 7. | ಉಡುಪಿ | ಮಣಿಪುರ | ಮಣಿಪುರ | 71/8 | 0.20 | ಪಾಪನಾಶಿನಿ ಹೊಳೆ | II | A. N 13° 17' 20.70" E 74° 46' 40.53"<br>B. N 13° 17' 20.86" E 74° 46' 41.84"<br>C. N 13° 17' 20.98" E 74° 46' 44.08"<br>D. N 13° 17' 19.45" E 74° 46' 44.51" | 1500 |

## ಕಾಪು ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಕಾಪು | ಮೂಡುಬೆಳ್ಳೆ | ಮೂಡು ಬೆಳ್ಳೆ | 71 | 0.75 | ಪಾಪನಾಶಿನಿ | III | A. N 13° 16' 5.15" E 74° 48' 52.76"<br>B. N 13° 16' 2.07" E 74° 48' 54.30" | 2690 |
| 2 | ಕಾಪು | ಮೂಡುಬೆಳ್ಳೆ | ಮೂಡು ಬೆಳ್ಳೆ | 71 | 1.76 | ಪಾಪನಾಶಿನಿ | III | A. N 13° 16' 55.62" E 74° 47' 38.32"<br>B. N 13° 16' 46.00" E 74° 47' 37.28" | 3800 |
| 3 | ಕಾಪು | ಮುದರಂಗಡಿ | ಸಾಂತೂರು | 350 | 0.77 | - | II | A. N 13° 9' 36.46" E 74° 49' 58.62"<br>B. N 13° 9' 36.57" E 74° 49' 58.97"<br>C. N 13° 9' 37.78" E 74° 50' 6.04"<br>D. N 13° 9' 37.65" E 74° 50' 6.48" | 2020 |
| 4 | ಕಾಪು | ಪಡುಬಿದ್ರಿ | ನಡ್ಸಾಲು | 241 & 6 | 0.50 | - | III | A. N 13° 9' 2.80" E 74° 45' 47.94"<br>B. N 13° 9' 7.19" E 74° 45' 53.64" | 1740 |
| 5. | ಕಾಪು | ಕುತ್ಯಾರು | 108 ಕಳತ್ತೂರು | 69 & 108 | 0.80 | ಬ್ರಹ್ಮರಗಂಡಿ ಹಳ್ಳ | III | A. N 13° 12' 57.30" E 74° 46' 34.78"<br>B. N 13° 12' 56.99" E 74° 46' 34.32"<br>C. N 13° 12' 54.05" E 74° 46' 39.26"<br>D. N 13° 12' 54.12" E 74° 46' 39.57" | 2784 |
| 6. | ಕಾಪು | ಕುತ್ಯಾರು | 108 ಕಳತ್ತೂರು | 93 | 0.60 | ಗುರುಗುಂಡಿ ಗರಡಿ | III | A. N 13° 12' 29.72" E 74° 47' 26.51"<br>B. N 13° 12' 29.65" E 74° 47' 25.91"<br>C. N 13° 12' 27.03" E 74° 47' 26.68"<br>D. N 13° 12' 25.46" E 74° 47' 28.89"<br>E. N 13° 12' 25.93" E 74° 47' 29.13"<br>F. N 13° 12' 27.28" E 74° 47' 27.04" | 2088 |
| 7. | ಕಾಪು | ಕುತ್ಯಾರು | 108 ಕಳತ್ತೂರು | 42 | 0.30 | ಗುರುಗುಂಡಿ ಹಳ್ಳ | III | A. N 13° 12' 42.80" E 74° 47' 20.26"<br>B. N 13° 12' 40.60" E 74° 47' 23.58"<br>C. N 13° 12' 40.43" E 74° 47' 23.31"<br>D. N 13° 12' 42.44" E 74° 47' 20.29" | 1044 |
| 8. | ಕಾಪು | ಇನ್ನಂಜೆ | ಇನ್ನಂಜೆ | 69 | 0.60 | ಮಾರ್ಕೋಡಿ ನದಿ | II | A. N 13° 14' 42.15" E 74° 45' 26.15"<br>B. N 13° 14' 37.69" E 74° 45' 21.12" | 2088 |
| 9. | ಕಾಪು | ಇನ್ನಂಜೆ | ಪಾಂಗಾಳ | 107 & 108 | 0.35 | ಪಿನಾಕಿನಿ | II | A. N 13° 15' 28.07" E 74° 44' 29.01"<br>B. N 13° 15' 23.55" E 74° 44' 27.08" | 1600 |

## ಕಾರ್ಕಳ ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕಾರ್ಕಳ | ಬೆಳ್ಮಣ್ | ಸೂಡಾ | 127. 129 & 114 | 0.97 | ಸೂಡಾ ಹಳ್ಳ | III | A. N 13° 12' 21.58" E 74° 52' 20.88"<br>B. N 13° 12' 14.46" E 74° 52' 18.66" | 1012 |
| 2. | ಕಾರ್ಕಳ | ಶಿರ್ಲಾಲು | ಶಿರ್ಲಾಲು | 25 | 0.50 | ಪಾಕಿ ಹಳ್ಳ | III | A. N 13° 19' 4.38" E 75° 2' 59.11"<br>B. N 13° 19' 4.82" E 75° 2' 59.31"<br>C. N 13° 19' 3.95" E 75° 3' 1.42"<br>D. N 13° 19' 0.15" E 75° 2' 59.37"<br>E. N 13° 19' 0.27" E 75° 2' 59.13"<br>F. N 13° 19' 3.68" E 75° 3' 0.94" | 1043 |

| | | | | | | | | | |
|---|---|---|---|---|---|---|---|---|---|
| 3. | ಕಾರ್ಕಳ | ಮುಂಡ್ಕೂರು | ಮುಂಡ್ಕೂರು | 205, 206, 208, 209G & 209H | 1.00 | ಅರದಾಲು ಹಳ್ಳ | III | A. N 13° 5' 53.41" E 74° 53' 5.06"<br>B. N 13° 5' 53.13" E 74° 53' 5.15"<br>C. N 13° 5' 56.29" E 74° 53' 16.00"<br>D. N 13° 5' 56.73" E 74° 53' 15.90" | 1391 |

**<u>ಕುಂದಾಪುರ ತಾಲ್ಲೂಕು:</u>**

| ಕ್ರ ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕುಂದಾಪುರ | ಕಾವ್ರಾಡಿ | ಕಾವ್ರಾಡಿ | 158 | 1.17 | ಕುಬ್ಜ ಹೊಳೆ | III | A. N 13° 38' 44.22" E 74° 46' 11.35"<br>B. N 13° 38' 47.48" E 74° 46' 14.80"<br>C. N 13° 38' 55.11" E 74° 46' 19.48"<br>D. N 13° 38' 54.86" E 74° 46' 19.85"<br>E. N 13° 38' 49.48" E 74° 46' 16.35"<br>F. N 13° 38' 46.41" E 74° 46' 14.36"<br>G. N 13° 38' 43.99" E 74° 46' 11.74" | 3000 |

<u>ನಿರ್ಣಯ:</u> ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಜಿಲ್ಲಾ ವ್ಯಾಪ್ತಿಯಲ್ಲಿ ಹೆಚ್ಚುವರಿ ಮರಳು ನಿಕ್ಷೇಪಗಳು ಲಭ್ಯವಿದ್ದಲ್ಲಿ ಅವುಗಳನ್ನು ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ಜಂಟಿ ತಂಡದಿಂದ ಗುರುತಿಸಿ, ಜಂಟಿ ಸ್ಥಳ ಪರಿಶೀಲನೆ ವರದಿಯನ್ನು ನಕ್ಷೆಯೊಂದಿಗೆ ಮುಂದಿನ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ತಿಳಿಸಲಾಯಿತು. ಮೇಲ್ಕಂಡ ಹೊಸದಾಗಿ ಗುರುತಿಸಿರುವ ಒಟ್ಟು 20 ಮರಳು ಬ್ಲಾಕ್‌ಗಳನ್ನು ಅನುಮೋದಿಸಲು ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ–3:</u> ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳ ಬಗ್ಗೆ ಚರ್ಚೆ.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಈಗಾಗಲೇ ಒಟ್ಟು **03** ಮರಳು ಬ್ಲಾಕ್‌ಗಳನ್ನು ಗುರುತಿಸಿ, ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ. ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಹಿರಿಯ ಭೂಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

**<u>ಬ್ರಹ್ಮಾವರ ತಾಲ್ಲೂಕು:</u>**

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1 | ಬ್ರಹ್ಮಾವರ | ಕಾಡೂರು | 230/2 | 4.00 | ಸೀತಾ | IV | A. N 13° 28' 44.77" E 74° 50' 28.04"<br>B. N 13° 28' 44.09" E 74° 50' 28.87"<br>C. N 13° 28' 39.40" E 74° 50' 26.77"<br>D. N 13° 28' 32.75" E 74° 50' 25.47"<br>E. N 13° 28' 33.07" E 74° 50' 24.47"<br>F. N 13° 28' 39.95" E 74° 50' 25.02"<br>G. N 13° 28' 44.00" E 74° 50' 29.00" | 20000 |

## ಬೈಂದೂರು ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1 | ಬೈಂದೂರು | ಬಡಾಕೆರೆ & ಮರವಂತೆ | 36 & 156 | 10.00 | ಕೊಲ್ಲೂರು ನದಿ | V | A. N 13° 44' 4.87" E 74° 39' 24.27"<br>B. N 13° 43' 52.69" E 74° 39' 32.09"<br>C. N 13° 43' 42.92" E 74° 39' 36.29"<br>D. N 13° 43' 42.18" E 74° 39' 34.39"<br>E. N 13° 43' 51.41" E 74° 39' 30.90"<br>F. N 13° 44' 4.05" E 74° 39' 22.82" | 69660 |

## ಕುಂದಾಪುರ ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1. | ಕುಂದಾಪುರ | ಹಳ್ನಾಡು | 56 | 4.65 | ಹಾಲಾಡಿ | V | A. N 13° 37' 8.13" E 74° 46' 23.33"<br>B. N 13° 37' 8.61" E 74° 46' 24.98"<br>C. N 13° 36' 56.94" E 74° 46' 29.75"<br>D. N 13° 36' 56.56" E 74° 46' 28.30" | 32353 |

ನಿರ್ಣಯ: ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಜಿಲ್ಲಾ ವ್ಯಾಪ್ತಿಯಲ್ಲಿ ಹೆಚ್ಚುವರಿ ಮರಳು ನಿಕ್ಷೇಪಗಳು ಲಭ್ಯವಿದ್ದಲ್ಲಿ ಅವುಗಳನ್ನು ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ಜಂಟಿ ತಂಡದಿಂದ ಗುರುತಿಸಿ, ಜಂಟಿ ಸ್ಥಳ ಪರಿಶೀಲನೆ ವರದಿಯನ್ನು ನಕ್ಷೆಯೊಂದಿಗೆ ಮುಂದಿನ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ತಿಳಿಸಲಾಯಿತು. ಮೇಲ್ಕಂಡ ಹೊಸದಾಗಿ ಗುರುತಿಸಿರುವ ಒಟ್ಟು 03 ಮರಳು ಬ್ಲಾಕ್‌ಗಳನ್ನು ಅನುಮೋದಿಸಲು ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ–4: ಕುರ್ಕಾಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಆಶಯ ಪತ್ರ ನೀಡಿರುವ ಮರಳು ನಿಕ್ಷೇಪದಲ್ಲಿ ಗ್ರಾಮದ ಸರ್ವೆ ನಂಬರ್ ಬದಲಾವಣೆ ಮಾಡುವ ಬಗ್ಗೆ.**

ಕಾಪು ತಾಲ್ಲೂಕು ಕುರ್ಕಾಲು ಗ್ರಾಮದ ಸ.ನಂ. 123/1 ರಲ್ಲಿ 2.40 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ (ಪಾಪನಾಶಿನಿ ಹೊಳೆ) ಮರಳು ತೆಗೆದು ಸಾಗಾಣಿಕೆ ನಡೆಸಲು ದಿನಾಂಕ: 21.12.2023 ರಿಂದ ಅನ್ವಯವಾಗುವಂತೆ 01 ವರ್ಷದ ಅವಧಿಗೆ ಆಶಯ ಪತ್ರ ನೀಡಲಾಗಿರುತ್ತದೆ. ಸದರಿ ಆಶಯ ಪತ್ರದಲ್ಲಿ ಸರ್ವೆ ನಂಬರ್ ತಪ್ಪಾಗಿ 73 ಎಂದು ನಮೂದಾಗಿದ್ದು, ಸದರಿ ಸ.ನಂ. ಉಡುಪಿ ತಾಲ್ಲೂಕು ಮಣಿಪುರ ಗ್ರಾಮಕ್ಕೆ ಸಂಬಂಧಿಸಿದಾಗಿರುವುದರಿಂದ, ನಮೂದು ಮಾಡಲಾದ ಗ್ರಾಮದ ಸರ್ವೆ ನಂಬರ್ 123/1

ಪ್ರದೇಶವು ಕಾಪು ತಾಲ್ಲೂಕು ಕುರ್ಕಾಲು ಗ್ರಾಮಕ್ಕೆ ಸೇರಿರುವ ಬಗ್ಗೆ ಕಂದಾಯ ನಕಾಶೆಯಲ್ಲಿ ಗುರುತಿಸಿ ಹಾಗೂ ದೃಢೀಕರಿಸಿ ನೀಡುವಂತೆ ತಹಶೀಲ್ದಾರರು, ಕಾಪು ತಾಲ್ಲೂಕು ರವರಿಗೆ ಪತ್ರ ಬರೆಯಲಾಗಿರುತ್ತದೆ. ಅದರಂತೆ ಕಾಪು ತಾಲ್ಲೂಕು ಕುರ್ಕಾಲು ಗ್ರಾಮಕ್ಕೆ ಸ.ನಂ. 123/1 ರಲ್ಲಿ 2.40 ಎಕರೆ ಜಮೀನಿನಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕೋರಿರುವ ಸ್ಥಳವಾಗಿರುತ್ತದೆ ಎಂಬುದಾಗಿ ನಕ್ಷೆಯೊಂದಿಗೆ ವರದಿ ನೀಡಿರುತ್ತಾರೆ. ಈ ಬಗ್ಗೆ ಚರ್ಚೆ.

<u>ನಿರ್ಣಯ:</u> ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಕಾಪು ತಾಲ್ಲೂಕು ಕುರ್ಕಾಲು ಗ್ರಾಮದ ಸ.ನಂ. 123/1 ರಲ್ಲಿ 2.40 ಎಕರೆ ಜಮೀನಿನಲ್ಲಿ ಮರಳು ತೆರವುಗೊಳಿಸಲು ನೀಡಿದ ಆಶಯ ಪತ್ರದಲ್ಲಿ ತಿದ್ದುಪಡಿ ಮಾಡಲು ಸಭೆಯಲ್ಲಿ ತೀರ್ಮಾನಿಸಿ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಗೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ-5:</u> ಅನಧಿಕೃತ ಸಾಮಾನ್ಯ ಮರಳು ಗಣಿಗಾರಿಕೆ/ ದಾಸ್ತಾನು/ ಸಾಗಾಣಿಕೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸುವ ಬಗ್ಗೆ.**

ಜಿಲ್ಲಾ ವ್ಯಾಪ್ತಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಅನಧಿಕೃತ ಸಾಮಾನ್ಯ ಮರಳು ಗಣಿಗಾರಿಕೆ/ ಸಾಗಾಣಿಕೆಗೆ/ ದಾಸ್ತಾನು ತಡೆಗಟ್ಟುವ ಸಂಬಂಧ ಕೈಗೊಂಡ ಕ್ರಮದ ಕುರಿತು ಹಿರಿಯ ಭೂವಿಜ್ಞಾನಿಯವರು ಸಭೆಗೆ ವಿವರಿಸುತ್ತಾ, 2024-25 ನೇ ಸಾಲಿನಲ್ಲಿ (ಅಕ್ಟೋಬರ್ ಅಂತ್ಯದವರೆಗೆ) ವಿಧಿಸಿರುವ ದಂಡ ಹಾಗೂ ಮಾನ್ಯ ನ್ಯಾಯಾಲಯದಲ್ಲಿ ದಾಖಲಿಸಿರುವ ದೂರುಗಳ ವಿವರ ಈ ಕೆಳಕಂಡಂತಿರುತ್ತದೆ.

| ಉಪಖನಿಜ | ತಾಲ್ಲೂಕು | ಗಣಿಗಾರಿಕೆ | | ದಾಸ್ತಾನು | | ಸಾಗಾಣಿಕೆ | | ಒಟ್ಟು ಪ್ರಕರಣ | ಒಟ್ಟು ದಂಡ (ರೂ.ಗಳಲ್ಲಿ) |
|---|---|---|---|---|---|---|---|---|---|
| | | ಪ್ರಕರಣ | ದಂಡ (ರೂ.) | ಪ್ರಕರಣ | ದಂಡ (ರೂ.) | ಪ್ರಕರಣ | ದಂಡ (ರೂ.) | | |
| ಸಾಮಾನ್ಯ ಮರಳು | ಉಡುಪಿ | 0 | 0 | 0 | 0 | 8 | 169300 | 8 | 169300 |
| | ಕಾಪು | 0 | 0 | 0 | 0 | 2 | 39240 | 2 | 39240 |
| | ಬ್ರಹ್ಮಾವರ | 1 | 20000 | 0 | 0 | 1 | 38480 | 2 | 58480 |
| | ಕುಂದಾಪುರ | 8 | 144780 | 1 | 9000 | 42 | 664240 | 51 | 818020 |
| | ಬೈಂದೂರು | 0 | 0 | 0 | 0 | 3 | 98470 | 3 | 98470 |
| | ಕಾರ್ಕಳ | 0 | 0 | 1 | 21560 | 0 | 0 | 1 | 21560 |
| | ಹೆಬ್ರಿ | 0 | 0 | 0 | 0 | 1 | 10000 | 1 | 10000 |
| ಒಟ್ಟು | | 9 | 164780 | 2 | 30560 | 57 | 1019730 | 68 | 1215070 |

➢ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆಗೆ/ದಾಸ್ತಾನು ತಡೆಗಟ್ಟಲು ಇತರೆ ಇಲಾಖೆಗಳು ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚೆ.

ನಿರ್ಣಯ: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಯವರು, ಉಡುಪಿ ಜಿಲ್ಲೆ ರವರ ಪತ್ರ ಸಂಖ್ಯೆ: ಗಭೂಇ/ಹಿಭೂ(ಉಡುಪಿ)/ ಟಾ.ಫೋ/ ಜಂ.ತಂಡ/2023-24, ದಿನಾಂಕ: 24.08.2024 ರಲ್ಲಿ ರಚಿಸಿರುವ ಜಂಟಿ ತಂಡದ ಅಧಿಕಾರಿಗಳು ಎಲ್ಲಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ತಡೆಗಟ್ಟಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಲಾಯಿತು. ಸಂಬಂಧಿಸಿದ ಗ್ರಾಮ ಪಂಚಾಯತ್‌ನಲ್ಲಿ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಗುರುತಿಸಿರುವ ಅಥವಾ ಗುರುತಿಸದೇ ಇರುವ/ಆಶಯ ಪತ್ರ ನೀಡಿರುವ ಪ್ರದೇಶದಲ್ಲಿ ಯಾವುದೇ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆ ನಡೆಯದಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ಮತ್ತು MMRD 1954 ರನ್ವಯ ನಿಯಮಾನುಸಾರ ಕ್ರಮವಹಿಸುವಂತೆ ಹಾಗೂ ಅನಧಿಕೃತ ಗಣಿಗಾರಿಕೆ ಚಟುವಟಿಕೆಗಳು ಕಂಡುಬಂದಲ್ಲಿ ನೇರವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೇ ಹೊಣೆಗಾರರಾಗುವುದಾಗಿ ಸಭೆಯಲ್ಲಿ ಹಾಜರಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ಸಭೆಯಲ್ಲಿ ಸೂಚಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-6: ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ತಡೆಗಟ್ಟುವ ಸಂಬಂಧ ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ.**

ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ಉಡುಪಿ ತಾಲ್ಲೂಕಿನ ಕುಕ್ಕೆಹಳ್ಳಿ ಗ್ರಾಮದಲ್ಲಿ-01, ಬ್ರಹ್ಮಾವರ ತಾಲ್ಲೂಕಿನ ಚೇರ್ಕಾಡಿ ಗ್ರಾಮದಲ್ಲಿ-01, ಕುಂದಾಪುರ ತಾಲೂಕಿನ ಗುಡಿಬೆಟ್ಟು ಗ್ರಾಮದಲ್ಲಿ-01, ಹಳ್ನಾಡು ಗ್ರಾಮದಲ್ಲಿ-02, ಕಂಡ್ಲೂರು ಗ್ರಾಮದಲ್ಲಿ-01, ಒಟ್ಟು 06 ಚೆಕ್‌ಪೋಸ್ಟ್ ನಿರ್ಮಿಸಲು ನಿರ್ಮಿತಿ ಕೇಂದ್ರ, ಉಡುಪಿ ರವರಿಗೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಮುಂದುವರೆದು ಕುಂದಾಪುರ ತಾಲೂಕಿನ ಹೊಸಂಗಡಿ, ಕಾರ್ಕಳ ತಾಲೂಕಿನ ಸಾಣೂರು ಎಂಬಲ್ಲಿ ಈ ಹಿಂದೆ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದ್ದು, ಹೆಬ್ರಿ ತಾಲ್ಲೂಕಿನ ಸೋಮೇಶ್ವರ, ಬೈಂದೂರು ತಾಲ್ಲೂಕಿನ ಶಿರೂರು ಹಾಗೂ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮದಲ್ಲಿ ಹೊಸದಾಗಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲು ಈಗಾಗಲೇ ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಪೊಲೀಸ್

ಇಲಾಖೆಯೊಂದಿಗೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ಸ್ಥಳವನ್ನು ಗುರುತಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಹೆಬ್ರಿ ತಾಲ್ಲೂಕಿನ ಸೋಮೇಶ್ವರ, ಬೈಂದೂರು ತಾಲ್ಲೂಕಿನ ಶಿರೂರು ಹಾಗೂ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮದಲ್ಲಿ ಈಗಾಗಲೇ ಜಂಟಿ ಸ್ಥಳ ಪರಿಶೀಲನೆ ನಡೆಸಿ ಗುರುತಿಸಿರುವ ಸ್ಥಳಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸುವ ಬಗ್ಗೆ ಮುಂದಿನ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-7:** ಉಡುಪಿ ಜಿಲ್ಲೆಯಲ್ಲಿ ವಶಪಡಿಸಿಕೊಂಡ ಉಪಖನಿಜಗಳಿಗೆ ದಾಸ್ತಾನು ಕೇಂದ್ರ ನಿರ್ಮಿಸುವ ಕುರಿತು.

ತಾಲ್ಲೂಕು ವ್ಯಾಪ್ತಿಯಲ್ಲಿ ಅನಧಿಕೃತ ಖನಿಜ ಸಾಗಾಣಿಕೆ ನಡೆಸಿರುವ ವಾಹನಗಳನ್ನು ಹಾಗೂ ವಶಪಡಿಸಿಕೊಂಡಿರುವ ಉಪಖನಿಜವನ್ನು ದಾಸ್ತಾನಿರಿಸಲು ಯಾವುದೇ ದಾಸ್ತಾನು ಕೇಂದ್ರ ಇಲ್ಲದಿರುವುದರಿಂದ ತಾಲ್ಲೂಕು ವ್ಯಾಪ್ತಿಯಲ್ಲಿ ದಾಸ್ತಾನು ಕೇಂದ್ರ ನಿರ್ಮಿಸಲು ನಿವೇಶನ/ಸ್ಥಳ ಒದಗಿಸುವ ಬಗ್ಗೆ ಚರ್ಚೆ.

ನಿರ್ಣಯ: ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಉಡುಪಿ ತಾಲ್ಲೂಕಿನ ನೇಜಾರುನಲ್ಲಿ ಈ ಹಿಂದೆ ಗುರುತಿಸಿರುವ ದಾಸ್ತಾನು ಕೇಂದ್ರದಲ್ಲಿಯೇ ಅನಧಿಕೃತ ಖನಿಜ ಸಾಗಾಣಿಕೆ ನಡೆಸಿರುವ ವಾಹನಗಳನ್ನು ಹಾಗೂ ವಶಪಡಿಸಿಕೊಂಡಿರುವ ಉಪಖನಿಜವನ್ನು ದಾಸ್ತಾನಿರಿಸುವಂತೆ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ ಕೊನೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ತಾಲ್ಲೂಕು ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ

ಸಹಾಯಕ ಆಯುಕ್ತರು ಹಾಗೂ ಅಧ್ಯಕ್ಷರು
ತಾಲ್ಲೂಕು ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ

## ದಿನಾಂಕ: 03.03.2025 ರಂದು ಮಾನ್ಯ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿ.

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಉಪ ವಿಭಾಗಾಧಿಕಾರಿಯವರು, ಕುಂದಾಪುರ, ಉಡುಪಿ ಜಿಲ್ಲೆ | ಅಧ್ಯಕ್ಷರು. |
| 2. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಉಡುಪಿ ತಾಲ್ಲೂಕು | ಸದಸ್ಯರು. |
| 3. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಬ್ರಹ್ಮಾವರ ತಾಲ್ಲೂಕು | ಸದಸ್ಯರು, |
| 4. | ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಕಾಪು ತಾಲ್ಲೂಕು | ಸದಸ್ಯರು, |
| 5. | ಪೊಲೀಸ್ ಉಪಾಧೀಕ್ಷಕರು, ಉಡುಪಿ ತಾಲ್ಲೂಕು | ಸದಸ್ಯರು, |
| 6. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ತಾಲ್ಲೂಕು. | ಸದಸ್ಯರು, |
| 7. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬ್ರಹ್ಮಾವರ ತಾಲ್ಲೂಕು. | ಸದಸ್ಯರು |
| 8. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಉಡುಪಿ. | ಸದಸ್ಯರು |
| 9. | ಸಹಾಯಕ ಪರಿಸರ ಅಧಿಕಾರಿ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಉಡುಪಿ ತಾಲ್ಲೂಕು. | ಸದಸ್ಯರು, |
| 10. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ತಾಲ್ಲೂಕು. | ಸದಸ್ಯರು, |
| 11. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೈಂದೂರು ತಾಲ್ಲೂಕು. | ಸದಸ್ಯರು, |
| 12. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾಪು ತಾಲ್ಲೂಕು. | ಸದಸ್ಯರು. |
| 13. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರ್ಕಳ ತಾಲ್ಲೂಕು. | ಸದಸ್ಯರು. |
| 14. | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹೆಬ್ರಿ ತಾಲ್ಲೂಕು. | ಸದಸ್ಯರು, |
| 15. | ತಹಶೀಲ್ದಾರರು ಉಡುಪಿ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 16. | ತಹಶೀಲ್ದಾರರು ಬ್ರಹ್ಮಾವರ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 17. | ತಹಶೀಲ್ದಾರರು ಕಾಪು ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 18. | ತಹಶೀಲ್ದಾರರು ಕಾರ್ಕಳ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |
| 19. | ತಹಶೀಲ್ದಾರರು ಹೆಬ್ರಿ ತಾಲ್ಲೂಕು. | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಉಪವಿಭಾಗಾಧಿಕಾರಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು/ನಾಮ ನಿರ್ದೇಶಿತ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಉಪವಿಭಾಗಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಭೂವಿಜ್ಞಾನಿಯವರು ಕಾರ್ಯಸೂಚಿಗಳನುಸಾರ ವಿವರ ನೀಡಿದರು. ನಂತರ ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

**<u>ವಿಷಯಸೂಚಿ-1</u>: ಉಡುಪಿ ಜಿಲ್ಲಾ ವ್ಯಾಪ್ತಿಯ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಈಗಾಗಲೇ ಗುರುತಿಸಿ ಆಶಯ ಪತ್ರ ನೀಡಿರುವ ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಂದ ಮರಳು ತೆಗೆದು ವಿಲೇವಾರಿ ಮಾಡುವ ಕುರಿತು:**

- ಉಡುಪಿ ಜಿಲ್ಲಾ ವ್ಯಾಪ್ತಿಯ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ 19 ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿರುತ್ತದೆ. ಅವುಗಳಲ್ಲಿ 16 ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆಯುವ ಕಾರ್ಯನಿರ್ವಹಿಸುತ್ತಿದ್ದು, 03 ಮರಳು ಬ್ಲಾಕ್‌ಗಳು ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯ ಕೈಗೊಂಡಿರುವುದಿಲ್ಲ. ಈ ಬಗ್ಗೆ ಚರ್ಚೆ.

**<u>ನಿರ್ಣಯ:</u> ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಗ್ರಾಮ ಪಂಚಾಯತ್‌ಗಳಿಗೆ ಈಗಾಗಲೇ ಆಶಯ ಪತ್ರ ನೀಡಿರುವ ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಕಾರ್ಯ ಕೈಗೊಳ್ಳದೇ ಇರುವ 03 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸೂಕ್ತ ಸಮಜಾಯಿಷಿಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಕಚೇರಿಗೆ ನೀಡಿದ ನಂತರ ಸದರಿ ಮರಳು ಬ್ಲಾಕ್‌ಗಳನ್ನು ರದ್ದುಗೊಳಿಸಲು ತಾಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಮುಂದಿನ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

<u>ವಿಷಯಸೂಚಿ-2:</u> ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ಬಗ್ಗೆ ಚರ್ಚೆ.

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ಶ್ರೇಣಿಯ ಹಳ್ಳ/ತೊರೆಗಳಲ್ಲಿ ಈಗಾಗಲೇ ಒಟ್ಟು 20 ಮರಳು ನಿಕ್ಷೇಪಗಳನ್ನು ಗುರುತಿಸಿ ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ. ಸದರಿ ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

<u>ಉಡುಪಿ ತಾಲ್ಲೂಕು:</u>

| ಕ್ರಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಉಡುಪಿ | ಆಲೆವೂರು | ಕೊರಂಗ್ರಪಾಡಿ | 82,64 & 62 | 0.86 | ಚಕ್ಕೂಮತಿ ಹಳ್ಳ | III | A. N 13° 17' 49.27" E 74° 45' 56.31"<br>B. N 13° 17' 50.26" E 74° 45' 59.29"<br>C. N 13° 17' 50.93" E 74° 46' 2.22"<br>D. N 13° 17' 52.34" E 74° 46' 4.06"<br>E. N 13° 17' 52.13" E 74° 46' 4.27"<br>F. N 13° 17' 50.50" E 74° 46' 2.44"<br>G. N 13° 17' 49.78" E 74° 45' 59.22"<br>H. N 13° 17' 48.65" E 74° 45' 56.16" | 1796 |
| 2. | ಉಡುಪಿ | ಮಣಿಪುರ | ಮಣಿಪುರ | 85, 87 & 88 | 1.26 | ಪಾಪನಾಶಿನಿ ಹೊಳೆ | III | A. N 13° 16' 55.61" E 74° 47' 12.69"<br>B. N 13° 16' 55.43" E 74° 47' 12.89"<br>C. N 13° 16' 59.53" E 74° 47' 18.18"<br>D. N 13° 16' 59.92" E 74° 47' 18.09"<br>E. N 13° 16' 59.13" E 74° 47' 27.46"<br>F. N 13° 16' 58.89" E 74° 47' 27.46". | 1796 |
| 3. | ಉಡುಪಿ | ಮಣಿಪುರ | ಮಣಿಪುರ | 54, 99, 33 & 100 | 0.78 | ಚಕ್ಕೂಮತಿ ಹಳ್ಳ | III | A. N 13° 17' 58.77" E 74° 46' 54.41"<br>B. N 13° 18' 0.07" E 74° 46' 57.62"<br>C. N 13° 17' 59.69" E 74° 47' 2.15"<br>D. N 13° 17' 59.24" E 74° 47' 2.68"<br>E. N 13° 17' 59.64" E 74° 46' 57.77"<br>F. N 13° 18' 58.33" E 74° 46' 54.37" | 1628 |

<u>ಬ್ರಹ್ಮಾವರ ತಾಲ್ಲೂಕು:</u>

| ಕ್ರಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಬ್ರಹ್ಮಾವರ | 16 ನೇ ಕೊಕ್ಕರ್ಣೆ | ಪೆಜಮಂಗೂರು | 44 | 0.17 | ಮೊಗವೀರ ಪೇಟೆ ಸಾಲು ಹಳ್ಳ | II | A. N 13° 26' 59.03" E 74° 49' 7.40"<br>B. N 13° 27' 1.93" E 74° 49' 10.56"<br>C. N 13° 27' 1.88" E 74° 49' 11.12"<br>D. N 13° 26' 58.55" E 74° 49' 7.43" | 2500 |
| 2 | ಬ್ರಹ್ಮಾವರ | 16 ನೇ ಕೊಕ್ಕರ್ಣೆ | ಕುದಿ | 150 | 0.40 | – | III | A. N 13° 27' 1.06" E 74° 51' 23.02"<br>B. N 13° 27' 0.70" E 74° 51' 25.64"<br>C. N 13° 27' 0.92" E 74° 51' 28.26"<br>D. N 13° 27' 0.57" E 74° 51' 28.28"<br>E. N 13° 27' 0.35" E 74° 51' 25.77"<br>F. N 13° 27' 0.75" E 74° 51' 23.03" | 1650 |

| | | | | | | | | | |
|---|---|---|---|---|---|---|---|---|---|
| 3 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 167 | 0.32 | ಶಿರಿಯಾರ ಹಳ್ಳ | III | A. N 13° 32' 21.20" E 74° 47' 39.61"<br>B. N 13° 32' 21.01" E 74° 47' 40.82"<br>C. N 13° 32' 20.03 E 74° 47' 40.91"<br>D. N 13° 32' 19.83" E 74° 47' 39.81"<br>E. N 13° 32' 18.82" E 74° 47' 40.53"<br>F. N 13° 32' 19.11" E 74° 47' 41.47"<br>G. N 13° 32' 18.84" E 74° 47' 41.47"<br>H. N 13° 32' 18.52" E 74° 47' 40.42"<br>I. N 13° 32' 19.98" E 74° 47' 39.41"<br>J. N 13° 32' 20.15" E 74° 47' 40.57"<br>K. N 13° 32' 20.79" E 74° 47' 40.65"<br>L. N 13° 32' 20.89" E 74° 47' 39.68" | 1088 |
| 4 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 17 | 0.36 | ಶಿರಿಯಾರ ಹಳ್ಳ | III | A. N 13° 31' 44.30" E 74° 45' 37.06"<br>B. N 13° 31' 44.58" E 74° 45' 37.28"<br>C. N 13° 31' 43.33" E 74° 45' 38.85"<br>D. N 13° 31' 42.79" E 74° 45' 40.58"<br>E. N 13° 31' 41.60" E 74° 45' 40.94"<br>F. N 13° 31' 41.58" E 74° 45' 40.64"<br>G. N 13° 31' 42.57" E 74° 45' 40.37"<br>H. N 13° 31' 43.02" E 74° 45' 38.69" | 1253 |
ನಿರ್ಣಯ 2.2: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮೇಲ್ಕಂಡ ಮರಳು ಬ್ಲಾಕ್‌ಗಳನ್ನು ದಿನಾಂಕ: 18.07.2024 ರಂದು ನಡೆದ ಟೆಂಡರ್ ಉಪಸಮಿತಿ ಸಭೆಯಲ್ಲಿ ಈಗಾಗಲೇ ತಿರಸ್ಕರಿಸಿ ಮರುಟೆಂಡರ್ ಕರೆಯಲು ತೀರ್ಮಾನಿಸಿರುವುದರಿಂದ ಹಾಗೂ ದಿನಾಂಕ: 14.12.2022 ರಲ್ಲಿ ನೀಡಿರುವ ಮಾರ್ಗಸೂಚಿಯಲ್ಲಿನ 10 (j) ರಲ್ಲಿ " The qualified bidder who offers the highest final price offer shall be declared as the successful bidder in the auction process" ಎಂಬುದಾಗಿ ತಿಳಿಸಿರುವುದರಿಂದ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ–ಎಂಎಂಎನ್/189/2022, ಬೆಂಗಳೂರು, ದಿನಾಂಕ: 14.12.2022 ರ ಆದೇಶದನ್ವಯ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಾಮವಳಿ 1994 ರ ತಿದ್ದುಪಡಿ ನಿಯಮಾವಳಿ 2021 ರ ನಿಯಮ 31ZB (1) (a) ರಂತೆ A person shall be resident of the concerned District for not less than one year & to that effect residential certificate shall be obtained from jurisdictional tahsildar ಎಂದು ಉಲ್ಲೇಖಿಸಲಾಗಿರುತ್ತದೆ. ಅದರಂತೆ ಒಟ್ಟು 39 ಮರಳು ಬ್ಲಾಕ್‌ಗಳನ್ನು ಟೆಂಡರ್ ಕರೆಯುವ ಸಂಬಂಧ ಮೀಸಲಾತಿ ನಿಗಧಿಪಡಿಸಿ ದಿನಾಂಕ: 10.01.2023 ರಂದು ಅಧಿಸೂಚನೆ

ಹೊರಡಿಸಿ, ದಿನಾಂಕ: 13.01.2023 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ದಿನಾಂಕ: 09.01.2024 ರಂದು ಸಾಂಪ್ರದಾಯಿಕ ಸಮುದಾಯಕ್ಕೆ ಮರಳು ಬ್ಲಾಕ್‌ಗಳಿಗೆ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಆದರೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ 1994 ರ ತಿದ್ದುಪಡಿ ಅಧಿನಿಯಮ 2023 ದಿನಾಂಕ: 17.03.2023 ರಂದು ಜಾರಿಗೆ ಬಂದಿದ್ದು, ಸದರಿ ತಿದ್ದುಪಡಿ ನಿಯಮ 2023 ರ 31ZB (i) ರಲ್ಲಿ in sub-rule (1), in clause (a) for the word "District" the word "Taluk" Shall be substituted ಎಂಬುದಾಗಿ ಸರ್ಕಾರವು ನಿಯಮಾವಳಿಯಲ್ಲಿ ತಿದ್ದುಪಡಿಯನ್ನು ತಂದಿರುವುದಾಗಿರುತ್ತದೆ. ಆದ್ದರಿಂದ ಸದರಿ 04 ಮರಳು ಬ್ಲಾಕ್‌ಗಳನ್ನು ಮರು ಟೆಂಡರ್ ಕರೆಯಲು ಮುಂದಿನ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ–3:</u> ಟೆಂಡರ್ ಪ್ರಕ್ರಿಯೆಯ ಆರ್ಥಿಕ ಲೈವ್ ಬಿಡ್‌ನಲ್ಲಿ ಯಶಸ್ವಿಯಾಗದೇ ಇರುವ ಬಿಡ್ಡುದಾರರ EMD ಮೊತ್ತವನ್ನು ಮರುಪಾವತಿಸಿರುವ ಕುರಿತು.

ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ, ಉಳಿದ ಒಟ್ಟು 48 ಜನ ಬಿಡ್ಡುದಾರರಿಗೆ EMD ಮೊತ್ತವನ್ನು ದಿನಾಂಕ: 16.08.2024 ರಂದು ಮರುಪಾವತಿಸಲಾಗಿದ್ದು, ಈ ಕುರಿತು ಘಟನೋತ್ತರ ಮಂಜೂರಾತಿ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಬಿಡ್ಡುದಾರರ ವಿವರಗಳನ್ನು ಈ ಕೆಳಕಂಡಂತೆ ಸಲ್ಲಿಸಿದರು.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಭಾಗವಹಿಸುವವರು | ಬಿಡ್ಡುದಾರರು ವಾಸ್ತವ್ಯ ಹೊಂದಿರುವ ತಾಲೂಕು | EMD ಮೊತ್ತ |
|---|---|---|---|---|---|---|
| A | B | C | D | E | F | G |
| DSB-4 | ಬೈಂದೂರು | ಹೆರಂಜಾಲು, ಕಂಬದಕೋಣೆ | S175359 | ಪವನ್ ಕುಮಾರ್ ಶೆಟ್ಟಿ ಬಿನ್ ಕರುಣಾಕರ ಶೆಟ್ಟಿ | ಉಡುಪಿ | 152940 |
| | | | S116374 | ಬಿ. ಅಶೋಕ್ ಕುಮಾರ್ ಶೆಟ್ಟಿ | ಕುಂದಾಪುರ | 152940 |
| | | | S12928 | ಪ್ರವೀಣ್ ಕುಮಾರ್ ಶೆಟ್ಟಿ | ಕುಂದಾಪುರ | 152940 |
| DSB-5 | ಬ್ರಹ್ಮಾವರ | ಹೊಸಾಳ, ನಾಗರಮಠ | S116374 | ಬಿ. ಅಶೋಕ್ ಕುಮಾರ್ ಶೆಟ್ಟಿ | ಕುಂದಾಪುರ | 2274720 |
| | | | S115886 | ಬಿ. ನರಸಿಂಹ ಪೂಜಾರಿ | ಕುಂದಾಪುರ | 2274720 |
| | | | S115889 | ಭುಜಂಗ | ಕುಂದಾಪುರ | 2274720 |
| | | | S35592 | ಹೆಚ್. ಕೆ. ದೇವಾನಂದ ಶೆಟ್ಟಿ | ಕುಂದಾಪುರ | 2274720 |
| | | | S175468 | ಹರೀಶ್ ಭುಜಂಗ ಶೆಟ್ಟಿ | ಬ್ರಹ್ಮಾವರ | 2274720 |
| | | | S188196 | ಹರೀಶ್ ಪೂಜಾರಿ | ಉಡುಪಿ | 2274720 |
| | | | S188493 | ಜಾನ್ಸನ್ ರೋಡ್ರಿಗಸ್ | ಬ್ರಹ್ಮಾವರ | 2274720 |
| | | | S188494 | ಜೋಸೆಫ್ ರೋಡ್ರಿಗಸ್ | ಬ್ರಹ್ಮಾವರ | 2274720 |
| | | | S167462 | ಮಧುಕರ ನಾಯಕ್ | ಉಡುಪಿ | 2274720 |
| | | | S115791 | ನರಸಿಂಹ ಪೂಜಾರಿ | ಕುಂದಾಪುರ | 2274720 |
| | | | S175359 | ಪವನ್ ಕುಮಾರ್ ಶೆಟ್ಟಿ ಬಿನ್ ಕರುಣಾಕರ ಶೆಟ್ಟಿ | ಉಡುಪಿ | 2274720 |
| | | | S12928 | ಪ್ರವೀಣ್ ಕುಮಾರ್ ಶೆಟ್ಟಿ | ಕುಂದಾಪುರ | 2274720 |
| | | | S167863 | ಆರ್ ಅಶ್ವಥ್ | ಕುಂದಾಪುರ | 2274720 |
| | | | S175549 | ರಾಜು | ಕುಂದಾಪುರ | 2274720 |
| | | | S188399 | ರತ್ನಾಕರ ಶೆಟ್ಟಿ | ಉಡುಪಿ | 2274720 |

| | | | | | | |
|---|---|---|---|---|---|---|
| | | | S154380 | ರಿತೇಶ್ ಕುಮಾರ್ | ಬ್ರಹ್ಮಾವರ | 2274720 |
| | | | S116315 | ಎಸ್. ಅಮೀರ್ ಬಾಷಾ | ಕುಂದಾಪುರ | 2274720 |
| SB-11 | ಕುಂದಾಪುರ | ರಟ್ಟಾಡಿ | S132652 | ಚಂದ್ರಶೇಖರ ಶೆಟ್ಟಿ | ಕುಂದಾಪುರ | 146080 |
| | | | S115637 | ಮಹಾಬಲ ನಾಯ್ಕ್ | ಕುಂದಾಪುರ | 146080 |
| | | | S115791 | ನರಸಿಂಹ ಪೂಜಾರಿ | ಕುಂದಾಪುರ | 146080 |
| | | | S175359 | ಪವನ್ ಕುಮಾರ್ ಶೆಟ್ಟಿ ಬಿನ್ ಕರುಣಾಕರ ಶೆಟ್ಟಿ | ಉಡುಪಿ | 146080 |
| | | | S12928 | ಪ್ರವೀಣ್ ಕುಮಾರ್ ಶೆಟ್ಟಿ | ಕುಂದಾಪುರ | 146080 |
| | | | S175549 | ರಾಜು | ಕುಂದಾಪುರ | 146080 |
| | | | S116315 | ಎಸ್ ಅಮೀರ್ ಬಾಷಾ | ಕುಂದಾಪುರ | 146080 |
| SB-16 | ಬ್ರಹ್ಮಾವರ | ಹೊಸೂರು | S115889 | ಭುಜಂಗ | ಕುಂದಾಪುರ | 208720 |
| | | | S175468 | ಹರೀಶ್ ಭುಜಂಗ ಶೆಟ್ಟಿ | ಬ್ರಹ್ಮಾವರ | 208720 |
| | | | S167462 | ಮಧುಕರ ನಾಯಕ್ | ಉಡುಪಿ | 208720 |
| | | | S175359 | ಪವನ್ ಕುಮಾರ್ ಶೆಟ್ಟಿ ಬಿನ್ ಕರುಣಾಕರ ಶೆಟ್ಟಿ | ಉಡುಪಿ | 208720 |
| | | | S175862 | ಸಂತೋಷ್ | ಉಡುಪಿ | 208720 |
| | | | S184363 | ಶಂಕರ್ | ಉಡುಪಿ | 208720 |
| SB-21 | ಬ್ರಹ್ಮಾವರ | ಚೇರ್ಕಾಡಿ | S188537 | ಸೀತಾರಾಮ ವಡೇರಹೋಬಳಿ | ಕುಂದಾಪುರ | 167020 |
| | | | S175862 | ಸಂತೋಷ್ | ಉಡುಪಿ | 167020 |
| | | | S184363 | ಶಂಕರ್ | ಉಡುಪಿ | 167020 |
| SB-30 | ಬ್ರಹ್ಮಾವರ | ಕುಕ್ಕೆಹಳ್ಳಿ & ಚೇರ್ಕಾಡಿ | S175468 | ಹರೀಶ್ ಭುಜಂಗ ಶೆಟ್ಟಿ | ಬ್ರಹ್ಮಾವರ | 417600 |
| | | | S175862 | ಸಂತೋಷ್ | ಉಡುಪಿ | 417600 |
| SB-31 | ಉಡುಪಿ & ಬ್ರಹ್ಮಾವರ | ಕುಕ್ಕೆಹಳ್ಳಿ & ಚೇರ್ಕಾಡಿ | S175862 | ಸಂತೋಷ್ | ಉಡುಪಿ | 439740 |
| | | | S184363 | ಶಂಕರ್ | ಉಡುಪಿ | 439740 |
| SB-37 | ಉಡುಪಿ | ಕುಕ್ಕೆಹಳ್ಳಿ | S175468 | ಹರೀಶ್ ಭುಜಂಗ ಶೆಟ್ಟಿ | ಬ್ರಹ್ಮಾವರ | 112740 |
| | | | S175862 | ಸಂತೋಷ್ | ಉಡುಪಿ | 112740 |
| | | | S184363 | ಶಂಕರ್ | ಉಡುಪಿ | 112740 |
| | | | S184867 | ಕಿರಣ್ ಕುಮಾರ್ ಹೆಗ್ಡೆ | ಉಡುಪಿ | 112740 |
| SB-38 | ಉಡುಪಿ | ಕುಕ್ಕೆಹಳ್ಳಿ | S175843 | ಜೋಗಪ್ಪ ಕುಂದರ್ | ಬ್ರಹ್ಮಾವರ | 69600 |
| | | | S175468 | ಹರೀಶ್ ಭುಜಂಗ ಶೆಟ್ಟಿ | ಬ್ರಹ್ಮಾವರ | 69600 |
| | | | S175862 | ಸಂತೋಷ್ | ಉಡುಪಿ | 69600 |
| | | | S184363 | ಶಂಕರ್ | ಉಡುಪಿ | 69600 |

ನಿರ್ಣಯ 3: ಅದರಂತೆ ಸಭೆಯಲ್ಲಿ ಪರಿಶೀಲಿಸಲಾಗಿ, ದಿನಾಂಕ: 18.07.2024 ರಂದು ನಡೆದ ಟೆಂಡರ್ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಒಟ್ಟು 48 ಜನ ಬಿಡ್ಡುದಾರರಿಗೆ ದಿನಾಂಕ: 16.08.2024 ರಂದು EMD ಮೊತ್ತವನ್ನು ಮರುಪಾವತಿಸಿರುವುದಕ್ಕೆ ಘಟನೋತ್ತರ ಮಂಜೂರಾತಿಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿ ಅನುಮೋದಿಸಲಾಯಿತು.

ವಿಷಯಸೂಚಿ-4: ಟೆಂಡರ್ ಯಶಸ್ವಿಯಾಗದೇ ಇರುವ ಮರಳು ಬ್ಲಾಕ್‌ಗಳ ಮರು ಟೆಂಡರ್ ಕರೆಯುವ ಕುರಿತು.

ಪ್ರಸ್ತುತ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ 26 ಮರಳು ಬ್ಲಾಕ್‌ಗಳಲ್ಲಿ 05 ಮರಳು ಬ್ಲಾಕ್‌ಗಳ ಟೆಂಡರ್ ಯಶಸ್ವಿಯಾಗಿದ್ದು, ಉಳಿದ 21 ಮರಳು ಬ್ಲಾಕ್‌ಗಳಿಗೆ ಹಾಗೂ ಹೊಸದಾಗಿ ಗುರುತಿಸಿರುವ 01 ಮರಳು ಬ್ಲಾಕ್‌ಗೆ ಟೆಂಡರ್ ಕರೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ವಿವರ ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ. ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಾತಿ |
|---|---|---|---|---|---|---|---|---|
| ಮೂರು ಬಾರಿ ಟೆಂಡರ್ ಕರೆದಿರುವ ಮರಳು ಬ್ಲಾಕ್‌ಗಳು | | | | | | | | |
| 1 | SB-8 | ಕುಂದಾಪುರ | ಹಾಲಾಡಿ, ಹೆಂಗವಳ್ಳಿ, ಕುಳ್ಳುಂಜೆ | 137, 130, 99 | 6.50 | ಹಾಲಾಡಿ ಹೊಳೆ | 31.663 | ಪರಿಶಿಷ್ಟ ಜಾತಿ |
| 2 | SB-9 | ಕುಂದಾಪುರ | ಹಾರ್ದಳ್ಳಿ-ಮಂಡಳ್ಳಿ | 109 | 5.00 | ವರಾಹಿ | 27.829 | ಪರಿಶಿಷ್ಟ ಪಂಗಡ |
| 3 | SB-10 | ಕುಂದಾಪುರ | ಕುಳ್ಳುಂಜೆ | 117 | 2.50 | ವರಾಹಿ | 13.044 | ವಿಶೇಷ ಚೇತನ |
| 4 | SB-19 | ಬ್ರಹ್ಮಾವರ | 33 ಶಿರೂರು | 137 & 79 | 1.00 | ಸೀತಾ | 4.174 | ಸಾಮಾನ್ಯ ವರ್ಗ |
| 5 | SB-21 | ಬ್ರಹ್ಮಾವರ | ಚೇರ್ಕಾಡಿ | Adjecent 29, 93, 11 | 1.20 | ಮಡಿಸಾಲು ಹೊಳೆ | 8.351 | ಪರಿಶಿಷ್ಟ ಜಾತಿ |
| 6 | SB-24 | ಬ್ರಹ್ಮಾವರ | ನೀಲಾವರ | 154 | 5.00 | ಸೀತಾನದಿ | 34.796 | ಪರಿಶಿಷ್ಟ ಪಂಗಡ |
| 7 | SB-25 | ಬ್ರಹ್ಮಾವರ | ನೀಲಾವರ (ಕೆಳಗಿನಬೆಟ್ಟು) | 154 | 3.10 | ಸೀತಾನದಿ | 21.573 | ಸಾಮಾನ್ಯ ವರ್ಗ |
| 8 | SB-27 | ಬ್ರಹ್ಮಾವರ | ಹಾವಂಜೆ (ದಾಸಬೆಟ್ಟು) | 127 | 1.00 | ನಡ್ಪಾಲು ಹೊಳೆ | 6.959 | ಸಾಮಾನ್ಯ ವರ್ಗ |
| 9 | SB-29 | ಬ್ರಹ್ಮಾವರ | ಕರ್ಜೆ | Adjecent 253 & 7 | 3.00 | ಮಡಿಸಾಲು ಹೊಳೆ | 20.883 | ಸಾಮಾನ್ಯ ವರ್ಗ |
| 10 | SB-37 | ಉಡುಪಿ | ಕುಕ್ಕೆಹಳ್ಳಿ | 133 | 1.35 | ಮಡಿಸಾಲು ಹೊಳೆ | 5.637 | ಸಾಮಾನ್ಯ ವರ್ಗ |
| 11 | SB-38 | ಉಡುಪಿ | ಕುಕ್ಕೆಹಳ್ಳಿ | 133 | 1.00 | ಮಡಿಸಾಲು ಹೊಳೆ | 3.480 | ಸಾಮಾನ್ಯ ವರ್ಗ |
| 12 | SB-39 | ಕಾರ್ಕಳ & ಉಡುಪಿ | ಯರ್ಲಪಾಡಿ & ಶಿರೂರು | 59 & 225 | 5.75 | ಸ್ವರ್ಣಾ ನದಿ | 40.022 | ಸಾಮಾನ್ಯ ವರ್ಗ |
| 13 | SB-40 | ಕಾರ್ಕಳ | ಮುಂಡ್ಕೂರು (ಕೂಪ್ಲಳ ಪರಿಸರ) | 209/1ಎ | 1.00 | ಶಾಂಭವಿ | 3.478 | ಸಾಮಾನ್ಯ ವರ್ಗ |
| 14 | SB-42 | ಕಾರ್ಕಳ | ಕಾರ್ಕಳ ಕಸಬಾ | 341/1 | 1.00 | ದುರ್ಗಾ | 5.566 | ಪರಿಶಿಷ್ಟ ಪಂಗಡ |
| 15 | SB-43 | ಕಾರ್ಕಳ | ಹೆರ್ಮುಂಡೆ & ಹಿರ್ಗಾನ | 45 | 25.50 | ಸ್ವರ್ಣಾ ನದಿ | 1,77,500 | ವಿಶೇಷ ಚೇತನ |
| 16 | SB-44 | ಕಾರ್ಕಳ | ಮರ್ಣೆ & ಹಿರ್ಗಾನ | 225 & 150 | 5.20 | ಸ್ವರ್ಣಾ ನದಿ | 10.856 | ಸಾಮಾನ್ಯ ವರ್ಗ |
| 17 | SB-45 | ಕಾರ್ಕಳ | ಮರ್ಣೆ & ಹಿರ್ಗಾನ | 225 & 150 | 5.00 | ಸ್ವರ್ಣಾ ನದಿ | 10.438 | ಸಾಮಾನ್ಯ ವರ್ಗ |
| 18 | SB-46 | ಹೆಬ್ರಿ | ಮುದ್ರಾಡಿ | 40 | 1.00 | ಗುಂಡಾಳ ಹೊಳೆ | 5.566 | ಸಾಮಾನ್ಯ ವರ್ಗ |
| ಒಂದು ಬಾರಿ ಟೆಂಡರ್ ಕರೆದಿರುವ ಮರಳು ಬ್ಲಾಕ್‌ಗಳು | | | | | | | | |
| 19 | SB-2 | ಕುಂದಾಪುರ | ಶಂಕರ ನಾರಾಯಣ | 295/1ಎ | 3.66 | ಹಾಲಾಡಿ ಹೊಳೆ | 38.184 | ಪರಿಶಿಷ್ಟ ಜಾತಿ |
| 20 | SB-4 | ಬ್ರಹ್ಮಾವರ | ಹಲುವಳ್ಳಿ | 7 | 3.00 | ಮಡಿಸಾಲು ಹೊಳೆ | 10.436 | ಸಾಮಾನ್ಯ ವರ್ಗ |

| | | | | | | | | |
|---|---|---|---|---|---|---|---|---|
| 21 | DSB-4 | ಬೈಂದೂರು | ಹೆರಂಜಾಲು ಕಂಬದಕೋಣೆ | 121 | 1.80 | ಎಡಮಾವಿನಹೊಳೆ | 7,647 | ಸಾಮಾನ್ಯ ವರ್ಗ |
| ಹೊಸದಾಗಿ ಟೆಂಡರ್ ಕರೆಯಬೇಕಾಗಿರುವ ಮರಳು ಬ್ಲಾಕ್ ಗಳು | | | | | | | | |
| 22 | SB-50 | ಬೈಂದೂರು & ಕುಂದಾಪುರ | ಹಡವು, ತ್ರಾಸಿ & ನಾಡ | 108, 198 & 57 | 9.00 | ಸೌಪರ್ಣಿಕ ನದಿ | 63,468 | ಸಾಮಾನ್ಯ ವರ್ಗ |
| ಒಟ್ಟು | | | | | | | 4,92,422 | |

ಮುಂದುವರೆದು ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/ಉ/2023-24/15748, ದಿನಾಂಕ: 23.02.2024 ರಲ್ಲಿ ಕನಿಷ್ಠ 03 ಬಾರಿ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಕನಿಷ್ಟ 03 ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ತದನಂತರದ ಹರಾಜು ಪ್ರಕ್ರಿಯೆಯಲ್ಲಿ ನಿಗಧಿತ ಬಿಡ್ಡುದಾರರಿಗಿಂತ ಕಡಿಮೆ ಬಿಡ್ಡುದಾರರು ಭಾಗವಹಿಸಿದಲ್ಲಿ ಸದರಿ ಬಿಡ್ಡುದಾರರುಗಳನ್ನು ಪರಿಗಣಿಸುವ ಕುರಿತು ಜಿಲ್ಲಾ ಮರಳು ಸಮಿತಿಯಿಂದ ಕ್ರಮಕೈಗೊಳ್ಳಬಹುದಾಗಿರುತ್ತದೆ ಎಂಬುದಾಗಿ ತಿಳಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಏಕ ಬಿಡ್ಡುದಾರರನ್ನು ಪರಿಗಣಿಸಲು ಅವಕಾಶವಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ **4:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮೇಲ್ಕಂಡ ಮರಳು ಬ್ಲಾಕ್‌ಗಳಲ್ಲಿ ಕ್ರಸಂ. 1 ರಿಂದ 18 ರವರೆಗಿನ ಮರಳು ಬ್ಲಾಕ್‌ಗಳನ್ನು ಹಾಗೂ ದಿನಾಂಕ: 18.07.2024 ರಂದು ನಡೆದ ಟೆಂಡರ್ ಉಪ ಸಮಿತಿ ಸಭೆಯಲ್ಲಿ ತಿರಸ್ಕರಿಸಿರುವ 04 ಮರಳು ಬ್ಲಾಕ್‌ಗಳು ಸೇರಿ ಒಟ್ಟು 22 ಮರಳು ಬ್ಲಾಕ್‌ಗಳನ್ನು ದಿನಾಂಕ: 14.12.2022 ರಂದು ನೀಡಿರುವ ಟೆಂಡರ್ ಮಾರ್ಗಸೂಚಿಯನ್ವಯ ಮತ್ತು ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/ಉ/2023-24/15748, ದಿನಾಂಕ: 23.02.2024 ರಲ್ಲಿ "ಕನಿಷ್ಠ 03 ಬಾರಿ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಕನಿಷ್ಟ 03 ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ತದನಂತರದ ಹರಾಜು ಪ್ರಕ್ರಿಯೆಯಲ್ಲಿ ನಿಗಧಿತ ಬಿಡ್ಡುದಾರರಿಗಿಂತ ಕಡಿಮೆ ಬಿಡ್ಡುದಾರರು ಭಾಗವಹಿಸಿದಲ್ಲಿ ಸದರಿ ಬಿಡ್ಡುದಾರರುಗಳನ್ನು ಪರಿಗಣಿಸುವ ಕುರಿತು ಜಿಲ್ಲಾ ಮರಳು ಸಮಿತಿಯಿಂದ ಕ್ರಮಕೈಗೊಳ್ಳಬಹುದಾಗಿರುತ್ತದೆ" ಎಂಬುದಾಗಿ ತಿಳಿಸಲಾಗಿದ್ದು, ಅದರಂತೆ ಸದರಿ ಮರಳು ಬ್ಲಾಕ್‌ಗಳನ್ನು ಮರು ಟೆಂಡರ್ ಕರೆದು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು. ಮುಂದುವರೆದು ಕ್ರಮ ಸಂಖ್ಯೆ: 22 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-50 ಕ್ಕೆ ಸಂಬಂಧಿಸಿಂತೆ ದಿನಾಂಕ: 13.06.2024 ರಂದು ನಡೆದ ಟೆಂಡರ್ ಉಪ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗಧಿಪಡಿಸಿ, ಅಧಿಸೂಚನೆ ಹೊರಡಿಸಲು ಹಾಗೂ ಕ್ರಸಂ: 19 ರಿಂದ 22 ರವರೆಗಿನ ಮರಳು ಬ್ಲಾಕ್‌ಗಳನ್ನು ಮರು ಟೆಂಡರ್ ಕರೆದು ಕರ್ನಾಟಕ ಉಪಖನಿಜ ರಿಯಾಯಿತಿ

ನಿಯಮಾವಳಿ 1994 ರನ್ವಯ ಹಾಗೂ ದಿನಾಂಕ: 14.12.2022 ರಂದು ನೀಡಿರುವ ಟೆಂಡರ್ ಮಾರ್ಗಸೂಚಿಯನ್ವಯ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ 2023 ರನ್ವಯ ಕ್ರಮವಹಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-5: ಆಶಯ ಪತ್ರ ನೀಡಿರುವ/ ಮರಳು ಗುತ್ತಿಗೆ ಮಂಜೂರು ಮಾಡಿರುವ ಮರಳು ಬ್ಲಾಕ್‌ಗಳ ಸರ್ವೆ ನಂಬರಿನಲ್ಲಿನ ಬದಲಾವಣೆ ಕುರಿತು.</u>

<u>ವಿಷಯಸೂಚಿ-5.1:</u> ಜಿಲ್ಲಾ ವ್ಯಾಪ್ತಿಯಲ್ಲಿ ಮರಳು ಬ್ಲಾಕ್‌ಗಳನ್ನು ಗುರುತಿಸಿ ಸಲ್ಲಿಸಿರುವ ತಾಂತ್ರಿಕ ವರದಿಯಲ್ಲಿ ಕಣ್ತಪ್ಪಿನಿಂದಾಗಿ ಕೆಲವು ಮರಳು ಬ್ಲಾಕ್‌ಗಳ ಸರ್ವೆ ನಂಬರ್ ಹಾಗೂ ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶಗಳು ತಪ್ಪಾಗಿ ನಮೂದಿಸಲಾಗಿದ್ದು, ಸದರಿ ಬ್ಲಾಕ್‌ಗಳನ್ನು ಜಂಟಿಯಾಗಿ ಮರುಪರಿಶೀಲಿಸಿ ಸರ್ವೆ ನಂಬರ್ ಹಾಗೂ ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶಗಳನ್ನು ಸರಿಪಡಿಸಲಾಗಿರುತ್ತದೆ. ಈ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಮರಳು ಬ್ಲಾಕ್‌ಗಳ ವಿವರ ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಾತಿ | ಯಶಸ್ವಿ ಬಿಡ್ದುದಾರರು | ಅಕ್ಷಾಂಶ- ರೇಖಾಂಶ |
|---|---|---|---|---|---|---|---|---|---|---|
| 1 | SB-22 | ಬ್ರಹ್ಮಾವರ | ಚೇರ್ಕಾಡಿ | 93 | 2.00 | ಮಡಿಸಾಲು ಹೊಳೆ | 13,918 | ಸಾಮಾನ್ಯ ವರ್ಗ | ಶ್ರೀ ಜಯರಾಮ ಶೆಟ್ಟಿ | A. N13° 24' 28.82" E74° 49' 45.13"<br>B. N13° 24' 31.83" E74° 49' 46.00"<br>C. N13° 24' 31.55" E74° 49' 47.14"<br>D. N13° 24' 27.86" E74° 49' 46.22"<br>E. N13° 24' 24.98" E74° 49' 43.13"<br>F. N13° 24' 25.52" E74° 49' 42.55" |
| 2 | SB-26 | ಬ್ರಹ್ಮಾವರ | 52 ನೇ ಹೇರೂರು | 107 | 2.70 | ನಡ್ಪಾಲು ಹೊಳೆ | 18,790 | ಸಾಮಾನ್ಯ ವರ್ಗ | ಶ್ರೀ ಸಂತೋಷ್ . | A. N13° 25' 0.09" E74° 46' 33.31"<br>B. N13° 24' 47.00" E74° 46' 28.16"<br>C. N13° 24' 46.73" E74° 46' 28.77"<br>D. N13° 24' 59.64" E74° 46' 34.16" |
| 3 | SB-1 | ಬ್ರಹ್ಮಾವರ | ಹೊಸಾಳ ನಾಗರಮಠ | 97 & 112 | 2.70 | ಸೀತಾನದಿ | 18,790 | ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ | | A. N 13° 29' 07.82" E 74° 44' 00.36"<br>B. N 13° 29' 10.50" E 74° 43' 59.70"<br>C. N 13° 29' 15.05" E 74° 44' 1.19"<br>D. N 13° 29' 15.53" E 74° 44' 0.58 "<br>E. N 13° 29' 10.96" E 74° 43' 57.46"<br>F. N 13° 29' 07.30" E 74° 43' 58.19" |
| 4 | SB-6 | ಬ್ರಹ್ಮಾವರ | ಕಾರ್ಕಡ | 181 | 1.50 | ಸೀತಾನದಿ | 10,439 | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ | | A. N 13 29 53.58 E 74 43 57.37<br>B. N 13 29 55.21 E 74 43 52.01<br>C. N 13 29 54.95 E 74 43 52.41<br>D. N 13 29 53.51 E 74 43 57.80 |

<u>ನಿರ್ಣಯ 5:</u> ಮೇಲ್ಕಂಡ ಮರಳು ಬ್ಲಾಕ್‌ಗಳ ಸರ್ವೆ ನಂಬರ್, ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶ ಹಾಗೂ ನಕ್ಷೆಗಳನ್ನು ಸಭೆಯಲ್ಲಿ ಪರಿಶೀಲಿಸಲಾಗಿ, ಸದರಿ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿಂತೆ ತಿದ್ದುಪಡಿ ಅಧಿಸೂಚನೆ

ಹೊರಡಿಸಿ, ಪರಿಷ್ಕೃತ ಆಶಯ ಪತ್ರವನ್ನು/ ತಿದ್ದುಪಡಿ ಆದೇಶವನ್ನು ನೀಡಲು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ಸೂಚಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–6: ವಿವಿಧ ಇಲಾಖೆಗಳಿಂದ ಸ್ವೀಕೃತವಾಗಿರುವ ಮನವಿಯ ಕುರಿತು.

ವಿಷಯ ಸೂಚಿ 6.1: ಉಡುಪಿ ಜಿಲ್ಲೆ ಕುಂದಾಪುರ ತಾಲೂಕಿನ ಹಳ್ನಾಡು ಗ್ರಾಮದ ಸರ್ವೆ ನಂ: 101/1ಎ1 ರಲ್ಲಿ 7.00 ಎಕರೆ ಪ್ರದೇಶದಲ್ಲಿ ಗುರುತಿಸಲಾದ ಮರಳು ಬ್ಲಾಕ್ ಸಂಖ್ಯೆ: SB-3 ರಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಕುರಿತು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ರವರು ಕೋರಿರುವುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ಈ ಕುರಿತು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ರವರು ಮಾತನಾಡುತ್ತಾ, ಕುಂದಾಪುರ ತಾಲೂಕಿನ ಹಳ್ನಾಡು ಗ್ರಾಮದ ಸರ್ವೆ ನಂ: 101/1ಎ1 ರಲ್ಲಿ 7.00 ಎಕರೆ ಪ್ರದೇಶದಲ್ಲಿ ಗುರುತಿಸಲಾದ ಮರಳು ಬ್ಲಾಕ್ ಸಂಖ್ಯೆ: SB-3 ರ ಪರಿಸರ ವಿಮೋಚನಾ ಪತ್ರದಲ್ಲಿ ವಾರ್ಷಿಕವಾಗಿ 48,725 ಮೆ.ಟನ್ ಪ್ರಮಾಣವನ್ನು ನಿಗಧಿಪಡಿಸಲಾಗಿದ್ದು, ಲೋಕೋಪಯೋಗಿ ಇಲಾಖೆಗೆ 2023 ರ ಅಂತ್ಯದಲ್ಲಿ ಅನುಮೋದನೆಗೊಂಡ ಕಾಮಗಾರಿಗಳನ್ನು ತಡೆಹಿಡಿಯಲಾಗಿರುವುದರಿಂದ ಹಾಗೂ ಪ್ರಸ್ತುತ ಹೊಸ ಕಾಮಗಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಂಜೂರಾಗದ ಕಾರಣ ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗದಡಿ ಒಟ್ಟು 9,213.00 ಘ.ಮೀ. (15,846 ಮೆ.ಟನ್) ಮರಳು ಅವಶ್ಯವಿರುತ್ತದೆ ಎಂಬುದಾಗಿ ಸಭೆಗೆ ತಿಳಿಸಿದರು.

ನಿರ್ಣಯ 6.1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಸಾಕಷ್ಟು ಮರಳಿನ ಬೇಡಿಕೆ ಇರುವುದರಿಂದ ಬೇರೆ ಇಲಾಖೆಗಳಿಗೆ ಸದರಿ ಮರಳು ಬ್ಲಾಕ್‌ಗಳನ್ನು ಹಸ್ತಾಂತರಿಸಲು ಅಥವಾ ಹೊಸತಾಗಿ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು 06 ತಿಂಗಳಿಗಿಂತ ಹೆಚ್ಚಿನ ಸಮಯಾವಕಾಶ ಬೇಕಾಗಿದ್ದು, ಈಗಾಗಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಸುಮಾರು 08 ತಿಂಗಳಾಗಿದ್ದು, ಇದು ದೀರ್ಘಕಾಲಿಕ ಪ್ರಕ್ರಿಯೆಯಾಗಿರುತ್ತದೆ. ಆದ್ದರಿಂದ ದಿನಾಂಕ: 01.12.2023 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಸದರಿ ಮರಳು ಬ್ಲಾಕ್‌ನಲ್ಲಿ ಪರಿಸರ ವಿಮೋಚನಾ ಪತ್ರದಲ್ಲಿ ವಾರ್ಷಿಕವಾಗಿ ನಿಗಧಿಪಡಿಸಿರುವ ಒಟ್ಟು 48,725 ಮೆ.ಟನ್ ಪ್ರಮಾಣದಲ್ಲಿ ಶೇ.50 ರಷ್ಟು ಮರಳನ್ನು ಸಾರ್ವಜನಿಕರಿಗೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಪೂರೈಸಲು ಹಾಗೂ ಉಳಿದ ಶೇ. 50 ರಷ್ಟು ಮರಳಿನ ಪ್ರಮಾಣವನ್ನು ತಮ್ಮ ಇಲಾಖೆಯ ಸರ್ಕಾರಿ ಕಾಮಗಾರಿಗಳಿಗೆ ವಿನಿಯೋಗಿಸಿಕೊಳ್ಳಲು ಸೂಕ್ತ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ರವರಿಗೆ ಸೂಚಿಸಲಾಗಿತ್ತು. ಈ ಸಂಬಂಧ ಸರ್ಕಾರದ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಲೋಇ 6 ಬಿಎಂಎಸ್ 2024, ದಿನಾಂಕ: 12.07.2024 ರ ಪತ್ರದಲ್ಲಿ ತಿಳಿಸಿರುವಂತೆ ಲೋಕೋಪಯೋಗಿ ಇಲಾಖೆಯ ಸರ್ಕಾರಿ ಕಾಮಗಾರಿಗಳಿಗೆ

ಮಾತ್ರ ಅವಶ್ಯವಿರುವ ಪ್ರಮಾಣಕ್ಕೆ ಮರಳು ಗಣಿಗಾರಿಕೆ ಕೈಗೊಳ್ಳುವ ಬಗ್ಗೆ ಜಿಲ್ಲಾಧಿಕಾರಿ, ಉಡುಪಿ ರವರಿಂದ ಸಹಮತಿ ಪಡೆದು ಅದರಂತೆ ಅಂದಾಜು ಪಟ್ಟಿ ತಯಾರಿಸಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಶಿವಮೊಗ್ಗ ಇವರಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಸೂಚಿಸಿರುವಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ರವರಿಗೆ ಸರ್ಕಾರಿ ಕಾಮಗಾರಿಗೆ ಮರಳು ಗಣಿಗಾರಿಕೆ ಮಾಡಲು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಶಿವಮೊಗ್ಗ ಇವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳಲು ಸೂಚಿಸಲಾಯಿತು. ಅಲ್ಲದೆ ಟೆಂಡರ್ ಕರೆಯುವ ಅಥವಾ 4(g) ಯಲ್ಲಿ ಅವಕಾಶವಿದ್ದಲ್ಲಿ ಅನುಮೋದನೆ ನೀಡಲು ಹಾಗೂ ಸರ್ಕಾರಿ ಕಾಮಗಾರಿಗೆ ಅವಶ್ಯವಿರುವ 9,213.00 ಘ.ಮೀ. (15,846 ಮೆ.ಟನ್) ಮರಳನ್ನು ಹೊರತುಪಡಿಸಿ ಉಳಿದ 32,879 ಮೆ.ಟನ್ ಮರಳನ್ನು ಸಾರ್ವಜನಿಕರಿಗೆ ಪೂರೈಸಲು ಅನುಮೋದನೆ ನೀಡುವಂತೆ ಪತ್ರದ ಮೂಲಕ ಕೋರಲು ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸೂಚಿ 6.2: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದವರಿಗೆ ಮರಳು ತೆಗೆಯುವ ಪರವಾನಿಗೆ ನೀಡಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವ ಕುರಿತು ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಂಸದರು, ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ ರವರು ಕೋರಿರುವುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 6.2: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಗುರುತಿಸಿರುವ ಮರಳು ಬ್ಲಾಕ್‌ಗಳಿಗೆ ದಿನಾಂಕ: 09.11.2022 & 04.01.2022 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ ಹಾಗೂ ದಿನಾಂಕ: 10.01.2023 ರಂದು ಜರುಗಿದ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಟೆಂಡರ್-ಕಂ- ಹರಾಜು ಮೂಲಕ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡುವ ಸಂಬಂಧ ಮರಳು ಬ್ಲಾಕ್‌ಗಳನ್ನು ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ವಿಶೇಷ ಚೇತನ ಸಮುದಾಯದವರಿಗೆ ಮೀಸಲಿಡುವ ಸಲುವಾಗಿ ರಚಿಸಿರುವ ಉಪ ಸಮಿತಿ ಸಭೆಯ ನಿರ್ಣಯದಂತೆ ಸಮಾಜ ಕಲ್ಯಾಣ ಇಲಾಖೆಯ ರೋಸ್ಟರ್ ಪದ್ಧತಿಯಲ್ಲಿ ಮೀಸಲಾತಿ ನಿಗಧಿಪಡಿಸಿ ಪರಿಶಿಷ್ಟ ಪಂಗಡದವರಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪರಿಶಿಷ್ಟ ಪಂಗಡದವರಿಗೆ ಟೆಂಡರ್ ಪ್ರಕ್ರಿಯೆ ರಹಿತವಾಗಿ ಮರಳು ಪರವಾನಿಗೆ ನೀಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ 1994 ರ ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಸದರಿ ಮಾಹಿತಿಯನ್ನು ಮಾನ್ಯ ಸಂಸದರಿಗೆ ಹಾಗೂ ಮನವಿದಾರರಿಗೆ ಈ ಕುರಿತು ಪತ್ರ ಮುಖೇನ ಮಾಹಿತಿಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು ಜಿಲ್ಲಾ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ರೋಸ್ಟರ್ ಪದ್ಧತಿಯಲ್ಲಿ ಮೀಸಲಾತಿ ನಿಗಧಿಪಡಿಸುವ ಸಂದರ್ಭದಲ್ಲಿ ಕಡಿಮೆ ಪ್ರಮಾಣವಿರುವ ಅಥವಾ ರಸ್ತೆ ಸಮಸ್ಯೆಯಿರುವ

ಮರಳು ಬ್ಲಾಕ್‌ಗಳನ್ನು ಪರಿಶಿಷ್ಟ ಜಾತಿ/ ಪಂಗಡದವರಿಗೆ ಮೀಸಲಿರಿಸಿರುವುದಾಗಿ ಸಾಕಷ್ಟು ದೂರುಗಳು ಸ್ವೀಕೃತವಾಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಹೊಸತಾಗಿ ಗುರುತಿಸುವ ಮರಳು ಬ್ಲಾಕ್‌ಗಳ ಗ್ರಾಮಗಳು ಅಕಾರಾದಿಯಲ್ಲಿ ಬರುವಂತೆ ಕ್ರಮಸಂಖ್ಯೆಯನ್ನು ನೀಡಿ ರೋಸ್ಟರ್ ಪದ್ಧತಿಯಲ್ಲಿ ಮೀಸಲಾತಿಯನ್ನು ನಿಗಧಿಪಡಿಸಲು ಸಭೆಯಲ್ಲಿ ಸೂಚಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ-7: ಅನಧಿಕೃತ ಸಾಮಾನ್ಯ ಮರಳು ಗಣಿಗಾರಿಕೆ/ ದಾಸ್ತಾನು/ ಸಾಗಾಣಿಕೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸುವ ಬಗ್ಗೆ.

ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಸಾಮಾನ್ಯ ಮರಳು ಗಣಿಗಾರಿಕೆ/ ಸಾಗಾಣಿಕೆಗೆ/ ದಾಸ್ತಾನು ತಡೆಗಟ್ಟುವ ಸಂಬಂಧ ಕೈಗೊಂಡ ಕ್ರಮದ ಕುರಿತು ಹಿರಿಯ ಭೂವಿಜ್ಞಾನಿಯವರು ಸಭೆಗೆ ವಿವರಿಸುತ್ತಾ, 2024-25 ನೇ ಸಾಲಿನಲ್ಲಿ (ದಿನಾಂಕ: 01.04.2024 ರಿಂದ ದಿನಾಂಕ: 30.08.2024 ರವರೆಗೆ) ವಿಧಿಸಿರುವ ದಂಡ ಹಾಗೂ ಮಾನ್ಯ ನ್ಯಾಯಾಲಯದಲ್ಲಿ ದಾಖಲಿಸಿರುವ ದೂರುಗಳ ವಿವರ ಈ ಕೆಳಕಂಡಂತಿರುತ್ತದೆ.

| ಉಪಖನಿಜ | ಗಣಿಗಾರಿಕೆ | | ದಾಸ್ತಾನು | | ಸಾಗಾಣಿಕೆ | | ಒಟ್ಟು ಪ್ರಕರಣ | ಒಟ್ಟು ದಂಡ (ರೂ.ಗಳಲ್ಲಿ) |
|---|---|---|---|---|---|---|---|---|
| | ಪ್ರಕರಣ | ದಂಡ (ರೂ.) | ಪ್ರಕರಣ | ದಂಡ (ರೂ.) | ಪ್ರಕರಣ | ದಂಡ (ರೂ.) | | |
| ಸಾಮಾನ್ಯ ಮರಳು | 6 | 1,07,920 | 2 | 30,560 | 42 | 7,31,590 | 50 | **8,70,070/-** |

ನಿರ್ಣಯ 7: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಯವರು, ಉಡುಪಿ ಜಿಲ್ಲೆ ರವರ ಪತ್ರ ಸಂಖ್ಯೆ: ಗಭೂಇ/ಹಿಭೂ(ಉಡುಪಿ)/ ಟಾ.ಫೋ/ ಜಂ.ತಂಡ/2023-24, ದಿನಾಂಕ: 24.08.2024 ರಲ್ಲಿ ರಚಿಸಿರುವ ಜಂಟಿ ತಂಡದ ಅಧಿಕಾರಿಗಳು ಎಲ್ಲಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ತಡೆಗಟ್ಟಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದಾಗ, ಸಬೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ-8: ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ತಡೆಗಟ್ಟುವ ಸಂಬಂಧ ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ.

ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ಉಡುಪಿ ತಾಲ್ಲೂಕಿನ ಕುಕ್ಕೆಹಳ್ಳಿ ಗ್ರಾಮದಲ್ಲಿ-01, ಬ್ರಹ್ಮಾವರ ತಾಲ್ಲೂಕಿನ ಚೇರ್ಕಾಡಿ ಗ್ರಾಮದಲ್ಲಿ-01, ಕುಂದಾಪುರ ತಾಲೂಕಿನ ಗುಡಿಬೆಟ್ಟು ಗ್ರಾಮದಲ್ಲಿ-01, ಹಳ್ನಾಡು ಗ್ರಾಮದಲ್ಲಿ-02, ಕಂಡ್ಲೂರು ಗ್ರಾಮದಲ್ಲಿ-01, ಒಟ್ಟು 06 ಚೆಕ್‌ಪೋಸ್ಟ್ ನಿರ್ಮಿಸಲು ನಿರ್ಮಿತಿ ಕೇಂದ್ರ, ಉಡುಪಿ ರವರಿಗೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಮುಂದುವರೆದು ಕುಂದಾಪುರ ತಾಲೂಕಿನ ಹೊಸಂಗಡಿ, ಕಾರ್ಕಳ ತಾಲೂಕಿನ ಸಾಣೂರು ಎಂಬಲ್ಲಿ ಈ ಹಿಂದೆ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದ್ದು, ಹೆಬ್ರಿ ತಾಲ್ಲೂಕಿನ

ಸೋಮೇಶ್ವರ ಹಾಗೂ ಬೈಂದೂರು ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಹೊಸದಾಗಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಬೇಕಾಗಿರುತ್ತದೆ.

ಈ ಹಿಂದೆ ಕಾರ್ಪಸ್‌ಫಂಡ್ ನಿಂದ ಗೃಹರಕ್ಷಕ ಸಿಬ್ಬಂದಿಗಳನ್ನು (Home Guard) ಸೇವೆ ಒದಗಿಸಲಾಗುತ್ತಿದ್ದು, ಪ್ರಸ್ತುತ ಕಾರ್ಪಸ್ ಫಂಡ್ ಅನುದಾನ ಸ್ಥಗಿತಗೊಳಿಸಿರುವ ಕಾರಣ, ಪ್ರಸ್ತುತ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ 10 ಚೆಕ್‌ಪೋಸ್ಟ್‌ಗಳಿಗೆ ಒಟ್ಟು 20 ಗೃಹರಕ್ಷಕ ಸಿಬ್ಬಂದಿಗಳನ್ನು (Home Guard) ಹೊಸದಾಗಿ ನಿಯೋಜಿಸಿ, ಸದರಿಯವರ ವೇತನವನ್ನು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಬ್ಯಾಂಕ್ ಖಾತೆಯಿಂದ ಭರಿಸಲು ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 8:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ತನಿಖಾ ಠಾಣೆಗಳ ಅವಶ್ಯವಿರುವುದರಿಂದ ಸದರಿ ತನಿಖಾ ಠಾಣೆಗಳಿಗೆ 20 ಗೃಹರಕ್ಷಕ ಸಿಬ್ಬಂದಿಗಳನ್ನು (Home Guard) ಹೊಸದಾಗಿ ನಿಯೋಜಿಸಿಕೊಳ್ಳಲು ಮತ್ತು ಹೆಬ್ರಿ ತಾಲ್ಲೂಕಿನ ಸೋಮೇಶ್ವರ ಮತ್ತು ಬೈಂದೂರು ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಹೊಸದಾಗಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲು ಹಾಗೂ ಗೃಹರಕ್ಷಕ ಸಿಬ್ಬಂದಿಗಳ ವೇತನವನ್ನು ಮತ್ತು ಚೆಕ್‌ಪೋಸ್ಟ್ ನಿರ್ಮಾಣದ ವೆಚ್ಚವನ್ನು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಬ್ಯಾಂಕ್ ಖಾತೆಯಿಂದ ಭರಿಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-9:</u> ಸರ್ಕಾರಿ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳಿಗೆ ಸಂಬಂಧಪಟ್ಟಂತೆ ಕಡ್ಡಾಯವಾಗಿ ರಾಜಧನ ಪಾವತಿಸಿಕೊಂಡು ರವಾನೆ ಪರವಾನಿಗೆ ಮೂಲಕ ಉಪಖನಿಜಗಳನ್ನು ಸಾಗಾಣಿಕೆ ಮಾಡುವ ಕುರಿತು.

ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಗಭೂಇ/ಡಿಸಿಬಿ/ಡಿಸಿಬಿ ತಃಖ್ತೆ/2019-20, ದಿನಾಂಕ: 22.10.2019 ರಲ್ಲಿ ಸರ್ಕಾರಿ ಕಾಮಗಾರಿಗಳಲ್ಲಿ ಗುತ್ತಿಗೆದಾರರು ಪರವಾನಿಗೆಯೊಂದಿಗೆ ಪಡೆದ ಖನಿಜದ ಜೊತೆಗೆ ಹೆಚ್ಚುವರಿಯಾಗಿ ಅನಧಿಕೃತವಾಗಿ ನಡೆಯುತ್ತಿರುವ ಕಲ್ಲುಗಣಿ ಗುತ್ತಿಗೆಗಳಿಂದ ಪಡೆದ ಉಪಖನಿಜಗಳನ್ನು ಖರೀದಿಸಿ ಉಪಯೋಗಿಸುತ್ತಿದ್ದು, ಇವಕ್ಕೆ ಸಂಬಂಧಪಟ್ಟ ರಾಜಧನದ ಮೊತ್ತ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆಯಾಗುತ್ತಿದ್ದರೂ ಸಹ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ಪ್ರಕಾರ ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆ ಅನಧಿಕೃತವಾಗಿ ನಡೆದ ಗಣಿಗಾರಿಕೆಯಿಂದ ಉಪಖನಿಜಕ್ಕೆ ರಾಜಧನದ 5 ಪಟ್ಟು ದಂಡದ ರೂಪದಲ್ಲಿ ವಸೂಲಾತಿಯಾಗದೇ ಇರುವ ಬಗ್ಗೆ ಲೆಕ್ಕಪರಿಶೋಧನೆ ಇಲಾಖೆಯಿಂದ ಕೈಗೊಂಡ ಆಡಿಟ್‌ನಲ್ಲಿ ಸರ್ಕಾರದ ಬೊಕ್ಕಸಕ್ಕೆ ರಾಜಧನ ನಷ್ಟವುಂಟಾಗಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ಸರ್ಕಾರಿ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳಿಗೆ ಸಂಬಂಧಪಟ್ಟಂತೆ ಕಡ್ಡಾಯವಾಗಿ ರಾಜಧನ ಪಾವತಿಸಿಕೊಂಡು ರವಾನೆ ಪರವಾನಿಗೆ ಮೂಲಕ ಉಪಖನಿಜಗಳನ್ನು ಸಾಗಾಣಿಕೆ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ ಹಾಗೂ

ದಿನಾಂಕ: 19.08.2024 ರಂದು ಕೇಂದ್ರ ಕಛೇರಿಯಲ್ಲಿ ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಈ ಕುರಿತು ಕಟ್ಟುನಿಟ್ಟಾಗಿ ಸೂಚಿಸಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 22.08.2022 & ದಿನಾಂಕ: 01.09.2023 ರಂದು ಈಗಾಗಲೇ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ಸುತ್ತೋಲೆ ಹೊರಡಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 9:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರಿ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳಿಗೆ ಸಂಬಂಧಪಟ್ಟಂತೆ ಕಡ್ಡಾಯವಾಗಿ ರಾಜಧನ ಪಾವತಿಸಿಕೊಂಡು ರವಾನೆ ಪರವಾನಿಗೆ ಮೂಲಕ ಉಪಖನಿಜಗಳನ್ನು ಸಾಗಾಣಿಕೆ ಮಾಡಿದಲ್ಲಿ ಯಾವುದೇ ಅನಧಿಕೃತ ಚಟುವಟಿಕೆಗಳು ನಡೆಯದಂತೆ ಕ್ರಮವಹಿಸಿದಂತಾಗುವುದರಿಂದ ಹಾಗೂ ಸರ್ಕಾರದ ಬೊಕ್ಕಸಕ್ಕೆ ರಾಜಧನ ನಷ್ಟವುಂಟಾಗುವುದನ್ನು ತಡೆಗಟ್ಟುವ ಸಂಬಂಧ ಸರ್ಕಾರಿ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳಿಗೆ ಸಹ ಕಡ್ಡಾಯವಾಗಿ ರಾಜಧನ ಪಾವತಿಸಿಕೊಂಡು ರವಾನೆ ಪರವಾನಿಗೆ ಮೂಲಕ ಉಪಖನಿಜಗಳನ್ನು ಸಾಗಾಣಿಕೆ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಯಿತು ಹಾಗೂ ಒಂದು ವೇಳೆ ಖನಿಜ ಸಾಗಾಣಿಕೆ ಪರವಾನಿಗೆ ಹೊಂದದೆ ಇದ್ದಲ್ಲಿ ಅಂತಿಮ ಬಿಲ್ಲು ನೀಡಲು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ರವರಿಗೆ ಸಂಬಂಧಪಟ್ಟ ಇಲಾಖೆಯವರು ಪತ್ರದ ಮೂಲಕ ಕಾಮಗಾರಿಗೆ ತಗಲುವ ಖನಿಜದ ಪ್ರಮಾಣದ ವಿವರಗಳನ್ನು ನೀಡಲು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿಯಿಂದ ಸದರಿ ಉಪಖನಿಜದ ಪ್ರಮಾಣಕ್ಕೆ ತಗಲುವ ರಾಜಧನ/ ದಂಡ/ ಇತರೆ ಅನ್ವಯಿಸುವ ಶುಲ್ಕ ಪಾವತಿಸಿಕೊಳ್ಳಲು ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ ಕೊನೆಯಲ್ಲಿ ವಂದನಾರ್ಪಣೆಗಳೊಂದಿಗೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

13/09/2024

(ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ
ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

(ಡಾ. ಕೆ. ವಿದ್ಯಾಕುಮಾರಿ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

## ದಿನಾಂಕ: 03.12.2024 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು:

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಉಡುಪಿ | ಅಧ್ಯಕ್ಷರು |
| 2. | ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ(ಪರವಾಗಿ) | ಸದಸ್ಯರು |
| 3. | ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ಉಡುಪಿ ಜಿಲ್ಲೆ, ಉಡುಪಿ | ಸದಸ್ಯರು |
| 4. | ಉಪಅರಣ್ಯ ಸಂರಕ್ಷಣಾಧಿಕಾರಿಯವರು, ಕುಂದಾಪುರ ಉಪವಿಭಾಗ, ಕುಂದಾಪುರ | ಸದಸ್ಯರು |
| 5. | ಕಾರ್ಯಪಾಲಕ ಅಭಿಯಂತರರು, ಲೋ.ಬಂ.ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ | ಸದಸ್ಯರು |
| 6. | ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾರಿಗೆ ಇಲಾಖೆ, ಉಡುಪಿ | ಸದಸ್ಯರು |
| 7. | ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಉಡುಪಿ | ಸದಸ್ಯರು |
| 8. | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು | ಸದಸ್ಯರು |
| 9. | ತಹಶೀಲ್ದಾರರು, ಉಡುಪಿ/ ಬ್ರಹ್ಮಾವರ/ ಹೆಬ್ರಿ/ಕುಂದಾಪುರ/ಬೈಂದೂರು (ಪರವಾಗಿ)/ ಕಾಪು | ಸದಸ್ಯರು |
| 10. | ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ | ಆಹ್ವಾನಿತರು |
| 11. | ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ | ಆಹ್ವಾನಿತರು |
| 12. | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ | ಆಹ್ವಾನಿತರು |
| 13. | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ-1, ಸಿದ್ದಾಪುರ | ಆಹ್ವಾನಿತರು |
| 14. | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ-2, ಸಿದ್ದಾಪುರ | ಆಹ್ವಾನಿತರು |
| 15. | ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಉಡುಪಿ ಜಿಲ್ಲೆ | ಆಹ್ವಾನಿತರು |
| 16. | ಕಮಾಂಡಂಟ್, ಗೃಹರಕ್ಷಕದಳ, ಉಡುಪಿ | ಆಹ್ವಾನಿತರು |
| 17. | ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಇತರೆ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಗಳ ವಿವರ ನೀಡಿದರು. ಅದರಂತೆ ಈ ಕೆಳಗಿನ ಕಾರ್ಯಸೂಚಿಗಳನ್ವಯ ನಿರ್ಣಯ ಕೈಗೊಳ್ಳಲಾಯಿತು.

<u>ವಿಷಯಸೂಚಿ–1:</u> ದಿನಾಂಕ: 12.09.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಯಂತೆ ಕೈಗೊಂಡ ಕ್ರಮಗಳನ್ನು ದೃಢೀಕರಿಸುವುದು.

<u>ವಿಷಯಸೂಚಿ 1.1:</u> ಟೆಂಡರ್ ಪ್ರಕ್ರಿಯೆ ಯಶಸ್ವಿಯಾಗಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಕುರಿತು.

ಟೆಂಡರ್ ಪ್ರಕ್ರಿಯೆ ಯಶಸ್ವಿಯಾಗಿರುವ ಮರಳು ಬ್ಲಾಕ್‌ಗಳಲ್ಲಿ ಮರಳು ಬ್ಲಾಕ್ ಸಂಖ್ಯೆ: SB-11 & SB-16 ರ ಅಕ್ಷಾಂಶ ಮತ್ತು ರೇಖಾಂಶಗಳಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಜಂಟಿ ಮೋಜಣಿ ನಡೆಸಿ, ಸರಿಪಡಿಸಿ ಆಶಯ ಪತ್ರ ನೀಡಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತರುತ್ತಾ, ಸದರಿ ಮರಳು ಬ್ಲಾಕ್‌ಗಳ ಪ್ರಗತಿಯ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ & ಸ.ನಂ | ವಿಸ್ತೀರ್ಣ (ಎಕರೆ) | ನದಿ & | ಪ್ರಮಾಣ (ಮೆ.ಟನ್) | ಯಶಸ್ವಿ ಬಿಡ್ಡುದಾರರು | ಅಕ್ಷಾಂಶ-ರೇಖಾಂಶ | ಷರಾ |
|---|---|---|---|---|---|---|---|---|---|
| 1 | DSB-5 | ಬ್ರಹ್ಮಾವರ | ಹೊಸಾಳ – 140 ನಾಗರಮಠ-111 | 8.90 | ಸೀತಾ ನದಿ | 1,13,736 | ಶ್ರೀ ಬನ್ನಾಡಿ ಕುಶ ಕುಮಾರ್ | A. N 13° 29' 17.58" E 74° 44' 3.24"<br>B. N 13° 29' 16.56" E 74° 44' 4.26"<br>C. N 13° 29' 30.35" E 74° 44' 19.94"<br>D. N 13° 29' 30.92" E 74° 44' 16.46" | ದಿನಾಂಕ: 15.11.2024 ರಂದು ಯಶಸ್ವಿ ಬಿಡ್ಡುದಾರರಿಗೆ ಆಶಯ ಪತ್ರ ನೀಡಲಾಗಿರುತ್ತದೆ |
| 2 | SB-30 | ಬ್ರಹ್ಮಾವರ | ಕುಕ್ಕೆಹಳ್ಳಿ & ಚೇರ್ಕಾಡಿ 133 | 3.00 | ಮಡಿಸಾಲು ಹೊಳೆ | 20,880 | ಶ್ರೀ ಶಂಕರ | A. N 13° 24' 36.02" E 74° 50' 32.02"<br>B. N 13° 24' 36.93" E 74° 50' 31.22"<br>C. N 13° 24' 40.52" E 74° 50' 39.34"<br>D. N 13° 24' 35.41" E 74° 50' 40.85"<br>E. N 13° 24' 35.85" E 74° 50' 40.13"<br>F. N 13° 24' 39.64" E 74° 50' 37.55"<br>G N 13° 24' 39.79" E 74° 50' 33.50"<br>H. N 13° 24' 38.42" E 74° 50' 34.56" | |
| 3 | SB-31 | ಉಡುಪಿ & ಬ್ರಹ್ಮಾವರ | ಕುಕ್ಕೆಹಳ್ಳಿ & ಚೇರ್ಕಾಡಿ 133 | 3.50 | ಮಡಿಸಾಲು ಹೊಳೆ | 21,987 | ಶ್ರೀ ಹರೀಶ ಭುಜಂಗ ಶೆಟ್ಟಿ | A. N 13° 24' 18.31" E 74° 50' 08.41"<br>B. N 13° 24' 17.74" E 74° 50' 07.63"<br>C. N 13° 24' 11.92" E 74° 50' 14.98"<br>D. N 13° 24' 11.61" E 74° 50' 20.43"<br>E. N 13° 24' 12.58" E 74° 50' 20.59"<br>F. N 13° 24' 12.55" E 74° 50' 17.10" | |
| 4 | SB-11 | ಕುಂದಾಪುರ | ರಟ್ಟಾಡಿ 96 | 1.50 | ವರಾಹಿ | 7,304 | ಶ್ರೀ ಬಿ. ಅಶೋಕ್ ಕುಮಾರ್ ಶೆಟ್ಟಿ | A. N 13° 36' 39.04" E 74° 54' 55.53"<br>B. N 13° 36' 42.35" E 74° 55' 00.06"<br>C. N 13° 36' 41.35" E 74° 55' 1.04"<br>D. N 13° 36' 37.90" E 74° 54' 56.50" | ಸದರಿ 02 ಮರಳು ಬ್ಲಾಕುಗಳ ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ದಿನಾಂಕ: 28.11.2024 ರಂದು ಜಂಟಿ ಮೋಜಣಿ ನಡೆಸಿ ಸರಿಪಡಿಸಲಾಗಿದ್ದು, ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆದು ಆಶಯ ಪತ್ರ ನೀಡಬೇಕಾಗಿರುತ್ತದೆ |
| 5 | SB-16 | ಬ್ರಹ್ಮಾವರ | ಹೊಸೂರು 7 | 3.00 | ಮಡಿಸಾಲು ಹೊಳೆ | 10,436 | ಶ್ರೀ ಜಯರಾಮ ಶೆಟ್ಟಿ | A. N 13° 25' 56.0" E 74° 55' 09.2"<br>B. N 13° 25' 54.4" E 74° 55' 10.5"<br>C. N 13° 25' 53.0" E 74° 55' 08.8"<br>D. N 13° 25' 53.6" E 74° 55' 05.5"<br>E N 13° 25' 51.7" E 74° 55' 01.9"<br>F. N 13° 25' 51.2" E 74° 55' 02.2" | |

<u>ನಿರ್ಣಯ: 1.1:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬ್ಲಾಕ್ ಸಂಖ್ಯೆ: SB-11 & SB-16 ರ ಅಕ್ಷಾಂಶ ಮತ್ತು ರೇಖಾಂಶಗಳನ್ನು ಜಂಟಿ ಮೋಜಣಿ ವರದಿಯಂತೆ ಸರಿಪಡಿಸಿ ಆಶಯ ಪತ್ರ ನೀಡಲು ಮುಂದಿನ ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ 1.2:** ದಿನಾಂಕ: 13.11.2024 ರಿಂದ ದಿನಾಂಕ: 30.11.2024 ರವರೆಗೆ 22 ಮರಳು ಬ್ಲಾಕ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ: 30.11.2024 ರಂದು ಸ್ವೀಕೃತವಾದ ಮನವಿಯನ್ವಯ 17 ಮರಳು ಬ್ಲಾಕ್‌ಗಳ ಟೆಂಡರ್ ಅವಧಿಯನ್ನು ದಿನಾಂಕ: 13.12.2024 ರವರೆಗೆ ವಿಸ್ತರಿಸಲಾಗಿರುತ್ತದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ತಾಂತ್ರಿಕ ದೋಷದಿಂದಾಗಿ ಉಳಿದ 05 ಮರಳು ಬ್ಲಾಕ್‌ಗಳ ಅವಧಿಯನ್ನು ವಿಸ್ತರಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**ನಿರ್ಣಯ 1.2:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ದಿನಾಂಕ: 13.11.2024 ರಂದು ಸದರಿ 22 ಮರಳು ಬ್ಲಾಕ್‌ಗಳನ್ನು ಟೆಂಡರ್ ಕರೆಯಲಾಗಿದ್ದು, ದಿನಾಂಕ: 30.11.2024 ರಂದು ಅವಧಿಯು ಮುಕ್ತಾಯಗೊಳ್ಳಲು ಬಾಕಿ ಇರುವಾಗ ಸದರಿ ಮರಳು ಬ್ಲಾಕ್‌ಗಳ ಟೆಂಡರ್ ಅವಧಿಯನ್ನು ವಿಸ್ತರಿಸುವ ಸಮಯದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ತಾಂತ್ರಿಕ ದೋಷದಿಂದಾಗಿ/ ಇಂಟರ್‌ನೆಟ್ ಸಮಸ್ಯೆಯಿಂದಾಗಿ 01 ಮರಳು ಬ್ಲಾಕ್‌ನ್ನು ಅಪಲೋಡ್ ಮಾಡಲು ಕನಿಷ್ಠ 15 ರಿಂದ 20 ನಿಮಿಷ ಬೇಕಾಗಿರುವುದರಿಂದ 05 ಮರಳು ಬ್ಲಾಕ್‌ಗಳ ದಿನಾಂಕ: 30.11.2024 ರಂದು 5.00 ಗಂಟೆಯೊಳಗೆ ಅವಧಿಯನ್ನು ವಿಸ್ತರಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಅವಧಿ ವಿಸ್ತರಿಸಲಾದ 17 ಮರಳು ಬ್ಲಾಕ್‌ಗಳ ಟೆಂಡರ್ ಅವಧಿಯು ದಿನಾಂಕ: 13.12.2024 ರಂದು ಮುಕ್ತಾಯಗೊಳ್ಳುತ್ತಿದ್ದು, ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಪ್ರಸ್ತುತ ಅವಧಿ ವಿಸ್ತರಿಸಿರುವ 17 ಮರಳು ಬ್ಲಾಕ್‌ಗಳು ಮತ್ತು ದಿನಾಂಕ: 30.11.2024 ರಂದು ಅವಧಿ ಮುಕ್ತಾಯಗೊಂಡ 05 ಮರಳು ಬ್ಲಾಕ್‌ಗಳ ಟೆಂಡರ್‌ನ್ನು ತೆರೆದು ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ 1.3:** ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವ ಈ ಕೆಳಕಂಡ ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಲು ಮರಳು ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಾತಿ | ಯಶಸ್ವಿ ಬಿಡ್ಡುದಾರರು | ಆಶಯ ಪತ್ರ ನೀಡಿರುವ ದಿನಾಂಕ | SEIAA ಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆದು ಕಛೇರಿಗೆ ಸಲ್ಲಿಸಿದ ದಿನಾಂಕ | ಮರಳು ಗುತ್ತಿಗೆ ಮಂಜೂರಾತಿ ಮಾಡಲಾದ ದಿನಾಂಕ |
|---|---|---|---|---|---|---|---|---|---|---|---|---|
| 1 | SB-12 | ಕುಂದಾಪುರ | ಮೊಳಹಳ್ಳಿ | 249 | 2.50 | ವರಾಹಿ | 9.030 | ಸಾಮಾನ್ಯ ವರ್ಗ | ಶ್ರೀ ನರಸಿಂಹ ಪೂಜಾರಿ | 24.03.2023 | 08.08.2024 | 19.11.2024 |
| 2 | SB-47 | ಬೈಂದೂರು & ಕುಂದಾಪುರ | ಹದವು & ತ್ರಾಸಿ | 108 & 192 | 5.00 | ಸೌಪರ್ಣಿಕಾ | 84.123 | ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ | | 14.02.2024 | 09.09.2024 | 25.11.2024 |
| 3 | SB-48 | ಬೈಂದೂರು & ಕುಂದಾಪುರ | ಕಟ್ ಬೆಳ್ತೂರು | 120 | 10.00 | ಚಕ್ರ | 34.109 | ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್. ಉಡುಪಿ | | 14.02.2024 | 09.09.2024 | 25.11.2024 |
| 4 | SB-49 | ಕುಂದಾಪುರ | ಮೊಳಹಳ್ಳಿ | 249/* | 10.00 | ಹಾಲಾಡಿ ಹೊಳೆ | 33.906 | | | 14.02.2024 | 09.09.2024 | |
| | | ಒಟ್ಟು | | | | | 1,61,168 | | | | | |

ಉಡುಪಿ ಜಿಲ್ಲೆಯ ನಾನ್ ಸಿ.ಆರ್.ಝಡ್ ವ್ಯಾಪ್ತಿಯ IV, V, VI ನೇ ಶ್ರೇಣಿಯ ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ ಸರ್ಕಾರಿ ಇಲಾಖೆ/ ಸಂಸ್ಥೆ/ ನಿಗಮ/ ಮಂಡಳಿಗಳನ್ನು ಅಧಿಸೂಚಿತ ಏಜೆನ್ಸಿಯಾಗಿ (Notified Agency) ನಿಗಧಿಪಡಿಸುವ ಬಗ್ಗೆ ದಿನಾಂಕ:

08.02.2024, 18.09.2024 & 03.10.2024 ರಂದು ಮಾನ್ಯ ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದ್ದು. ಇದುವರೆಗೆ ಅಧಿಸೂಚಿತ ಏಜೆನ್ಸಿಯಾಗಿ (Notified Agency) ನಿಗಧಿಪಡಿಸುವ ಬಗ್ಗೆ ಯಾವುದೇ ಪತ್ರ ಸ್ವೀಕೃತವಾಗಿರುವುದಿಲ್ಲ. ಪ್ರಸ್ತುತ ಜಿಲ್ಲಾ ವ್ಯಾಪ್ತಿಯಲ್ಲಿ ಮರಳಿನ ಅಭಾವವಿರುವುದರಿಂದ ಮರಳು ಬ್ಲಾಕ್ ಸಂಖ್ಯೆ: SB-47 & SB-48 ಗಳಿಗೆ ಸಂಬಂಧಿಸಿದಂತೆ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದರಿಂದ ಸಂಬಂಧಪಟ್ಟ ಇಲಾಖೆಗಳಿಗೆ ಮರಳು ಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ. ಮರಳು ಬ್ಲಾಕ್ ಸಂಖ್ಯೆ: SB-49 ರ ಅಕ್ಷಾಂಶ ಮತ್ತು ರೇಖಾಂಶಗಳನುಸಾರ 8.00 ಎಕರೆ ಇದ್ದು, ಕಣ್ತಪ್ಪಿನಿಂದಾಗಿ 10.00 ಎಕರೆ ಎಂಬುದಾಗಿ ನಮೂದಾಗಿರುತ್ತದೆ. ಆದ್ದರಿಂದ ಸದರಿ ಮರಳು ಬ್ಲಾಕ್‌ನ ವಿಸ್ತೀರ್ಣವನ್ನು 8.00 ಎಕರೆ ಎಂಬುದಾಗಿ ತಿದ್ದುಪಡಿ ಅಧಿಸೂಚನೆ ಹೊರಡಿಸಿ ಮರಳು ಗುತ್ತಿಗೆ ಮಂಜೂರು ಮಾಡಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 1.3:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬ್ಲಾಕ್ ಸಂಖ್ಯೆ: SB-49 ರ ಅಕ್ಷಾಂಶ ಮತ್ತು ರೇಖಾಂಶಗಳನುಸಾರ 10.00 ಎಕರೆಯ ಬದಲಾಗಿ 8.00 ಎಕರೆ ಎಂಬುದಾಗಿ ತಿದ್ದುಪಡಿ ಅಧಿಸೂಚನೆ ಹೊರಡಿಸಿ ಮರಳು ಗುತ್ತಿಗೆ ಮಂಜೂರು ಮಾಡಲು ಕ್ರಮವಹಿಸುವಂತೆ ತೀರ್ಮಾನಿಸಿ, ಸಭೆಯಲ್ಲಿ ಅನುಮೋದಿಸಲಾಯಿತು.

<u>ವಿಷಯಸೂಚಿ 1.4:</u> ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ಗಳಿಗೆ ಸಿಬ್ಬಂದಿಗಳನ್ನು ಒದಗಿಸಲು ಆರಕ್ಷಕ ಮಹಾ ನಿರ್ದೇಶಕರು ಮತ್ತು ಗೃಹರಕ್ಷಕದಳದ ಮಹಾಸಮಾದೇಷ್ಟರು ರವರಿಗೆ ದಿನಾಂಕ: 14.10.2024 ರ ಪತ್ರದಲ್ಲಿ ಕೋರಲಾಗಿದ್ದು, ಈ ಕುರಿತು ಸದರಿಯವರು ಪೊಲೀಸ್ ಪಡೆಗೆ ಗೃಹರಕ್ಷಕರನ್ನು ಸಹಾಯಕರಾಗಿ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದ್ದು, ಚೆಕ್‌ಪೋಸ್ಟ್‌ಗಳಿಗೆ ಕೇವಲ ಗೃಹರಕ್ಷಕರನ್ನು ಮಾತ್ರ ಪ್ರತ್ಯೇಕವಾಗಿ ನಿಯೋಜಿಸತಕ್ಕದ್ದಲ್ಲ. ಪೊಲೀಸ್ ಸಿಬ್ಬಂದಿಯೊಂದಿಗೆ ಹೆಚ್ಚುವರಿ ಸಿಬ್ಬಂದಿಯಾಗಿ ನಿಯೋಜಿಸಬಹುದಾಗಿದೆ ಎಂಬುದಾಗಿ ದಿನಾಂಕ: 24.10.2024 ತಿಳಿಸಿರುತ್ತಾರೆ. ಈ ಸಂಬಂಧ ಸದರಿ ಚೆಕ್‌ಪೋಸ್ಟ್‌ಗಳಿಗೆ ಗೃಹರಕ್ಷಕ ದಳದ ಸಿಬ್ಬಂದಿಗಳೊಂದಿಗೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ ಅನುಮತಿಗಾಗಿ ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಯವರು, ಉಡುಪಿ ರವರಿಗೆ ದಿನಾಂಕ: 26.11.2024 ರ ಪತ್ರದಲ್ಲಿ ಕೋರಲಾಗಿರುತ್ತದೆ. ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜ ಸಾಗಾಣಿಕೆಯನ್ನು ನಿಯಂತ್ರಿಸುವ ಸಲುವಾಗಿ ಕುಕ್ಕೆಹಳ್ಳಿ, ಚೇರ್ಕಾಡಿ, ಕಂಡ್ಲೂರು ಹಾಗೂ ಹಳ್ನಾಡು ಗ್ರಾಮಗಳಲ್ಲಿ ನಿರ್ಮಿಸಿರುವ ಒಟ್ಟು 04 ಚೆಕ್ ಪೋಸ್ಟ್‌ಗಳನ್ನು ನಿರ್ಮಿತಿ ಕೇಂದ್ರ ಉಡುಪಿ ರವರು ದಿನಾಂಕ: 02.12.2024 ರಂದು ಹಸ್ತಾಂತರಿಸಿದ್ದು, ಸದರಿ ಚೆಕ್‌ಪೋಸ್ಟ್‌ಗಳಿಗೆ ಗೃಹರಕ್ಷಕ ದಳದಿಂದ ಸಿಬ್ಬಂದಿಗಳನ್ನು ನಿಯೋಜಿಸಬೇಕಾಗಿರುತ್ತದೆ ಎಂಬುವಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 1.4:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಿಸಿರುವ 04 ಚೆಕ್‌ಪೋಸ್ಟ್‌ಗಳಿಗೆ ಒಟ್ಟು 12 ಗೃಹರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಲು ಸಭೆಯಲ್ಲಿ ಹಾಜರಿದ್ದ ಕಮಾಂಡಂಟ್, ಜಿಲ್ಲಾ ಗೃಹರಕ್ಷಕ ದಳ, ಉಡುಪಿ ರವರಿಗೆ ತಿಳಿಸಲಾಯಿತು ಹಾಗೂ ಆರಕ್ಷಕ ಮಹಾ ನಿರ್ದೇಶಕರು ಮತ್ತು ಗೃಹರಕ್ಷಕದಳದ ಮಹಾಸಮಾದೇಷ್ಟರು ಕೋರಿರುವಂತೆ ಸದರಿ ಗೃಹರಕ್ಷಕ ದಳದ ಸಿಬ್ಬಂದಿಗಳೊಂದಿಗೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲು ಕ್ರಮವಹಿಸುವುದಾಗಿ ಪೊಲೀಸ್ ಅಧೀಕ್ಷಕರು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಚೆಕ್‌ಪೋಸ್ಟ್‌ಗಳಿಗೆ ನಿಯೋಜಿಸುವ ಗೃಹರಕ್ಷಕ ಸಿಬ್ಬಂದಿಗಳಿಗೆ ವೇತನವನ್ನು ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ಬ್ಯಾಂಕ್ ಖಾತೆಯಿಂದ ಭರಿಸಲು ಕ್ರಮವಹಿಸುವಂತೆ ತೀರ್ಮಾನಿಸಿ, ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯಸೂಚಿ–2: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಕುರಿತು.

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈಗಾಗಲೇ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ಪ್ರಗತಿಯ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಮರಳು ಬ್ಲಾಕ್ ಗಳ ವಿವರ | | | | ಒಟ್ಟು ಮರಳು ಬ್ಲಾಕ್ ಗಳ ಸಂಖ್ಯೆ | ಪರಿಸರ ವಿಮೋಚನಾ ಪತ್ರದಲ್ಲಿ ನಿಗದಿಪಡಿಸಿರುವ ಮರಳಿನ ಪ್ರಮಾಣ (ಮೆ.ಟನ್) | ಪ್ರಸಕ್ತ ಸಾಲಿನಲ್ಲಿ ತೆರವುಗೊಳಿಸಿರುವ ಮರಳಿನ ಪ್ರಮಾಣ (ಮೆ.ಟನ್) | ಉಳಿಕೆ ಇರುವ ಮರಳಿನ ಪ್ರಮಾಣ (ಮೆ.ಟನ್) |
|---|---|---|---|---|---|---|---|
| I, II, III ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿದ್ದು, ಸದರಿ ಮರಳು ನಿಕ್ಷೇಪಗಳ ವಿವರ | | | Working | 42 | 118970 | 28273 | 90697 |
| | | | Idle | 26 | 89934 | 0 | 89934 |
| | | | TOTAL (A) | **68** | **208904** | **28273** | **180631** |
| IV, V & VI ನೇ ಶ್ರೇಣಿಯ ನದಿ ಪಾತ್ರಗಳಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ | ಮರಳು ಗುತ್ತಿಗೆ ಮಂಜೂರು ಮಾಡಲಾದ ಮರಳು ಬ್ಲಾಕ್ ಗಳು | Tender Blocks | Working | 5 | 74551 | 20901 | 53650 |
| | | GOVT Blocks | Working | 2 | 45297 | 8721 | 36576 |
| | | | Idle | 3 | 183868 | 0 | 183868 |
| | | TOTAL (B) | | **10** | **303716** | **29622** | **274094** |
| | ಮರಳು ಗುತ್ತಿಗೆ ಮಂಜೂರು ಮಾಡಲು ಬಾಕಿ ಇರುವ ಮರಳು ಬ್ಲಾಕ್ ಗಳು | Tender Blocks | | 16 | 297187 | 0 | 297187 |
| | | GOVT Blocks | | 8 | 159181 | 0 | 159181 |
| | | TOTAL (C ) | | **24** | **456368** | **0** | **456368** |
| | ಪ್ರಸ್ತುತ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುವ ಮರಳು ಬ್ಲಾಕ್ ಗಳ ಸಂಖ್ಯೆ (D) | | | 22 | 551550 | 0 | 551550 |
| IV, V & VI ನೇ ಶ್ರೇಣಿಯ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ವ್ಯಾಪ್ತಿಯಲ್ಲಿ ಹೂಳಿನಲ್ಲಿ ದೊರಕುವ ಮರಳನ್ನು ತೆಗೆಯಲು (Desilting) ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ (E) | | | | 3 | 425404 | 0 | 425404 |
| ಒಟ್ಟು | | | | **127** | **1945942** | **57895** | **1888047** |

ಮುಂದುವರೆದು I, II, III ನೇ ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಸಂಬಂಧ ಗುರುತಿಸಿರುವ 99 ಮರಳು ಬ್ಲಾಕ್‌ಗಳಲ್ಲಿ 31 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್‌ಗಳಿಗೆ ನೀಡಿರುವ ಕಾರ್ಯಾದೇಶದ ಅವಧಿಯು ದಿನಾಂಕ: 02.10.2024 ರಂದು ಮುಕ್ತಾಯಗೊಂಡಿದ್ದು, ಸದರಿ ಮರಳು ಬ್ಲಾಕ್‌ಗಳನ್ನು ಪುನಃ ಜಂಟಿ ಸ್ಥಳ ಪರಿಶೀಲನೆ ನಡೆಸಿ, ಸದರಿ ಮರಳು ನಿಕ್ಷೇಪಗಳಲ್ಲಿ ಮರಳು ಲಭ್ಯತೆ ಇದ್ದಲ್ಲಿ ಅಂತಹ ಮರಳು ಬ್ಲಾಕ್‌ಗಳನ್ನು ಮುಂದಿನ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಗಳು, ಕುಂದಾಪುರ, ತಹಶೀಲ್ದಾರರು ಹಾಗೂ ಭೂವಿಜ್ಞಾನಿಗಳಿಗೆ ಸೂಚಿಸಲಾಯಿತು ಹಾಗೂ ಇದುವರೆಗೂ ಮರಳನ್ನು ತೆಗೆಯುವ ಕಾರ್ಯ ನಿರ್ವಹಿಸದ ಒಟ್ಟು 26 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸೂಕ್ತ ಸಮಜಾಯಿಷಿಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ,

ಉಡುಪಿ ಕಚೇರಿಗೆ ನೀಡಿದ ನಂತರ ತಾಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಸದರಿ ಮರಳು ಬ್ಲಾಕ್‌ಗಳನ್ನು ಮುಂದುವರೆಸಲು/ ರದ್ದುಗೊಳಿಸಲು ಮುಂದಿನ ಕ್ರಮಕೈಗೊಳ್ಳುವಂತೆ ದಿನಾಂಕ: 19.11.2024 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**<u>ನಿರ್ಣಯ-2:</u>** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, I, II, III ನೇ ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಗುರುತಿಸಿರುವ 99 ಮರಳು ಬ್ಲಾಕ್‌ಗಳ ಪೈಕಿ ಪ್ರಸ್ತುತ ಚಾಲ್ತಿಯಲ್ಲಿರುವ 68 ಮರಳು ಬ್ಲಾಕ್‌ಗಳಲ್ಲಿ ಒಟ್ಟು 208904 ಮೆ.ಟನ್ ಪ್ರಮಾಣದ ಮರಳು ಲಭ್ಯವಿದ್ದು, ಕಾರ್ಯನಿರ್ವಹಿಸದೇ ನಿಷ್ಕ್ರಿಯವಾಗಿರುವ 26 ಮರಳು ಬ್ಲಾಕ್‌ಗಳಲ್ಲಿ 89,934 ಮೆ.ಟನ್ ಮರಳು ಲಭ್ಯವಿರುತ್ತದೆ. ಆದ್ದರಿಂದ ಸದರಿ ಮರಳು ಬ್ಲಾಕ್‌ಗಳಲ್ಲಿ ಕಾರ್ಯ ನಿರ್ವಹಿಸದೇ ಇರುವ ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ಮರಳು ತೆಗೆಯುವ ಕಾರ್ಯವನ್ನು ಪ್ರಾರಂಭಿಸಲು ಸೂಚಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಈಗಾಗಲೇ ಅವಧಿ ಮುಕ್ತಾಯಗೊಂಡ 31 ಮರಳು ಬ್ಲಾಕ್‌ಗಳಲ್ಲಿ ಒಟ್ಟು 32,096 ಮೆ.ಟನ್ ಮರಳು ಲಭ್ಯತೆಯಿರುವುದರಿಂದ ಸದರಿ ಮರಳು ನಿಕ್ಷೇಪಗಳ ವ್ಯಾಪ್ತಿಯಲ್ಲಿ ಜಂಟಿ ಇಲಾಖೆಗಳು ಸ್ಥಳ ಪರಿಶೀಲನೆ ಕೈಗೊಂಡು, ಮರಳು ಲಭ್ಯವಿರುವ ಪ್ರದೇಶಗಳನ್ನು ಗುರುತಿಸಿ, ತಾಲ್ಲೂಕು ಮರಳು ಉಸ್ತುವಾರಿ ಮತ್ತು ಜಿಲ್ಲಾ ಮರಳು ಉಸ್ತುವಾರಿಯಲ್ಲಿ ಮಂಡಿಸಿ ಸದರಿ ಪ್ರದೇಶಗಳಲ್ಲಿ ಮರಳು ತೆಗೆಯಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ, ಉಪವಿಭಾಗಾಧಿಕಾರಿಗಳು, ಕುಂದಾಪುರ, ತಹಶೀಲ್ದಾರರು ಹಾಗೂ ಭೂವಿಜ್ಞಾನಿಗಳಿಗೆ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಮರಳು ಗುತ್ತಿಗೆ ಮಂಜೂರಾತಿ ಮಾಡಲು ಬಾಕಿ ಇರುವ ಮರಳು ಬ್ಲಾಕ್‌ಗಳ ಕುರಿತು ವಿಚಾರಿಸಲಾಗಿ, ಆಶಯ ಪತ್ರ ನೀಡಲಾಗಿರುವ ಒಟ್ಟು 22 ಮರಳು ಬ್ಲಾಕ್‌ಗಳಲ್ಲಿ 18 ಮರಳು ಬ್ಲಾಕ್‌ಗಳ ಕ್ವಾರಿ ಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸದೇ ಇರುವುದರಿಂದ ಮರಳು ಗುತ್ತಿಗೆ ಮಂಜೂರು ಮಾಡಲಾಗಿರುವುದಿಲ್ಲ. ಉಳಿದ 04 ಮರಳು ಬ್ಲಾಕ್‌ಗಳ ಪರಿಸರ ವಿಮೋಚನಾ ಪತ್ರ ಸ್ವೀಕೃತವಾಗಿದ್ದು, 02 ಸಂಖ್ಯೆಯ ಮರಳು ಗುತ್ತಿಗೆ ಮಂಜೂರಾತಿ ಹಂತದಲ್ಲಿರುತ್ತದೆ. 02 ಸಂಖ್ಯೆಯ ಮರಳು ಬ್ಲಾಕ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ಜಂಟಿ ಮೋಜಣಿ ವರದಿಯಂತೆ ಸರಿಪಡಿಸಿ ಆಶಯ ಪತ್ರ ನೀಡಲು ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು

ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕ್ವಾರಿ ಪ್ಲಾನ್ ಸಲ್ಲಿಸದೇ ಇರುವ 18 ಮರಳು ಬ್ಲಾಕ್‌ಗಳ ಟೆಂಡರ್‌ದಾರರಿಗೆ 02 ತಿಂಗಳೊಳಗಾಗಿ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರವನ್ನು ಪಡೆದು, ಜಂಟಿ ಸ್ಥಳ ಪರಿಶೀಲನೆ ಕಾರ್ಯವನ್ನು ಕೈಗೊಂಡು ಕ್ವಾರಿ ಪ್ಲಾನ್ ಅನುಮೋದನೆ ಪಡೆದುಕೊಂಡು, ಪರಿಸರ ವಿಮೋಚನಾ ಪತ್ರವನ್ನು ಸಲ್ಲಿಸದಿದ್ದಲ್ಲಿ, ಈಗಾಗಲೇ ನೀಡಲಾಗಿರುವ ಆಶಯ ಪತ್ರವನ್ನು ರದ್ದುಪಡಿಸುವುದಾಗಿ ಸೂಚಿಸಿ ನೋಟೀಸ್ ಜಾರಿ ಮಾಡಲು ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ದಿನಾಂಕ: 20.09.2023 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸುವ ಮರಳು ಬ್ಲಾಕ್‌ಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣದಲ್ಲಿ ಶೇ. 50 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಾಗಿ ಹಾಗೂ ಶೇ. 50 ರಷ್ಟು ಮರಳಿನ ಪ್ರಮಾಣವನ್ನು ಸಾರ್ವಜನಿಕರಿಗೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಪೂರೈಸಲು ತೀರ್ಮಾನಿಸಲಾಗಿರುತ್ತದೆ. ಆದರೆ ಈ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಸ್ವೀಕೃತವಾಗುತ್ತಿರುವುದರಿಂದ ದಿನಾಂಕ: 09.11.2022 ರ ಸಭೆಯಲ್ಲಿ ತೀರ್ಮಾನಿಸಿರುವಂತೆಯೇ ಮರಳು ಬ್ಲಾಕ್‌ಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣದಲ್ಲಿ ಶೇ. 75 ರಷ್ಟು

ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಾಗಿ ಹಾಗೂ ಶೇ. 25 ರಷ್ಟು ಮರಳಿನ ಪ್ರಮಾಣವನ್ನು ಸಾರ್ವಜನಿಕರಿಗೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಪೂರೈಸಲು ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಮರಳು ಗಣಿ ಗುತ್ತಿಗೆ ಪಡೆದಿರುವ ಪರವಾನಿಗೆದಾರರು ಸದರಿಯವರುಗಳ ವಾಹನಗಳಲ್ಲಿಯೇ ಮರಳನ್ನು ಸಾಗಿಸುವುದರಿಂದ ಲಾರಿ ಮಾಲೀಕರಿಗೆ ನಷ್ಟವಾಗುತ್ತಿರುವುದಾಗಿ ದೂರು ಸ್ವೀಕೃತವಾಗುತ್ತಿರುವುದರಿಂದ ಮರಳು ಗಣಿ ಗುತ್ತಿಗೆದಾರರ ವಾಹನಗಳಿಗೆ ಮರಳಿನ ಪ್ರಮಾಣದ ಶೇ. 20 ರಷ್ಟು ಹಾಗೂ ಇತರೆ ಖಾಸಗಿ ವಾಹನಗಳಿಗೆ ಮರಳಿನ ಪ್ರಮಾಣದ ಶೇ. 80 ರಷ್ಟು ಮರಳನ್ನು ವಿತರಿಸಲು ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ ಅನುಮೋದಿಸಲಾಯಿತು.

**<u>ವಿಷಯಸೂಚಿ-3</u>: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ಬಗ್ಗೆ ಚರ್ಚೆ.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ವಿವರಗಳನ್ನು ದಿನಾಂಕ: 19.11.2024 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಸದರಿ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡುವ ಸಂಬಂಧ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

**<u>ಉಡುಪಿ ತಾಲ್ಲೂಕು:</u>**

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ಹಳ್ಳ/ ಹೊಳೆ/ ತೊರೆ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಉಡುಪಿ | ಅಲೆವೂರು | ಅಲೆವೂರು | 109 | 0.60 | ಚಕ್ರೊಮತಿ ಹೊಳೆ | III | A. N 13° 18' 6.32" E 74° 47' 44.14"<br>B. N 13° 18' 6.02" E 74° 47' 43.96"<br>C. N 13° 18' 8.38" E 74° 47' 40.24"<br>D. N 13° 18' 7.95" E 74° 47' 40.18"<br>E. N 13° 18' 6.30" E 74° 47' 37.73"<br>F. N 13° 18' 6.20" E 74° 47' 37.91" | 4000 |
| 2. | ಉಡುಪಿ | ಮಣಿಪುರ | ಮಣಿಪುರ | 84 | 1.80 | ಪಾಪನಾಶಿನಿ ಹೊಳೆ | III | A. N 13° 17' 0.95" E 74° 46' 49.25"<br>B. N 13° 17' 0.00" E 74° 46' 49.58"<br>C. N 13° 17' 3.88" E 74° 46' 56.37"<br>D. N 13° 17' 2.88" E 74° 46' 56.77" | 4000 |
| 3. | ಉಡುಪಿ | ಮಣಿಪುರ | ಮಣಿಪುರ | 84 | 1.00 | ಪಾಪನಾಶಿನಿ ಹೊಳೆ | III | A. N 13° 17' 9.23" E 74° 47' 4.65"<br>B. N 13° 17' 8.23" E 74° 47' 4.48"<br>C. N 13° 17' 5.35" E 74° 47' 0.37"<br>D. N 13° 17' 6.13" E 74° 46' 59.95" | 3800 |
| 4. | ಉಡುಪಿ | ಮಣಿಪುರ | ಮಣಿಪುರ | 31,32 & 35 | 2.00 | ಚಕ್ರೊಮತಿ ಹೊಳೆ | III | A. N 13° 17' 50.50" E 74° 46' 2.57"<br>B. N 13° 17' 50.12" E 74° 46' 2.83"<br>C. N 13° 17' 57.52" E 74° 46' 16.44"<br>D. N 13° 17' 57.77" E 74° 46' 16.10" | 4800 |
| 5. | ಉಡುಪಿ | ಪೆರ್ಡೂರು | ಪೆರ್ಡೂರು | 523 | 0.65 | ಪುತ್ತಿಗೆ ಹೊಳೆ | III | A. N 13° 21' 55.15" E 74° 52' 59.04"<br>B. N 13° 21' 54.38" E 74° 52' 58.97"<br>C. N 13° 21' 54.69" E 74° 52' 55.59"<br>D. N 13° 21' 53.85" E 74° 52' 55.53" | 3000 |

| | | | | | | | | | |
|---|---|---|---|---|---|---|---|---|---|
| 6. | ಉಡುಪಿ | ಪೆರ್ಡೂರು | ಪೆರ್ಡೂರು | 253 | 1.00 | ಅಡಪಾಡಿ ಹೊಳೆ | III | A. N 13° 24' 22.09" E 74° 53' 1.02"<br>B. N 13° 24' 21.66" E 74° 53' 1.48"<br>C. N 13° 24' 26.02" E 74° 53' 5.11"<br>D. N 13° 24' 25.35" E 74° 53' 5.38" | 3800 |
| 7. | ಉಡುಪಿ | ಮಣಿಪುರ | ಮಣಿಪುರ | 71/8 | 0.20 | ಪಾಪನಾಶಿನಿ | I | A. N 13° 17' 20.70" E 74° 46' 40.53"<br>B. N 13° 17' 20.86" E 74° 46' 41.84"<br>C. N 13° 17' 20.98" E 74° 46' 44.08"<br>D. N 13° 17' 19.45" E 74° 46' 44.51" | 1500 |

## ಕಾಪು ತಾಲ್ಲೂಕು:

| ಕ್ರ ಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ಹಳ್ಳ/ ಹೊಳೆ/ ತೊರೆ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಕಾಪು | ಮೂಡುಬೆಳ್ಳೆ | ಮೂಡುಬೆಳ್ಳೆ | 71 | 0.75 | ಪಾಪನಾಶಿನಿ | III | A. N 13° 16' 5.15" E 74° 48' 52.76"<br>B. N 13° 16' 2.07" E 74° 48' 54.30" | 2690 |
| 2 | ಕಾಪು | ಮೂಡುಬೆಳ್ಳೆ | ಮೂಡುಬೆಳ್ಳೆ | 71 | 1.76 | ಪಾಪನಾಶಿನಿ | III | A. N 13° 16' 55.62" E 74° 47' 38.32"<br>B. N 13° 16' 46.00" E 74° 47' 37.28" | 3800 |
| 3 | ಕಾಪು | ಮುದರಂಗಡಿ | ಸಾಂತೂರು | 350 | 0.77 | ಗುಂಡಿದಕೊಡಿ ಹೊಳೆ | II | A. N 13° 9' 36.46" E 74° 49' 58.62"<br>B. N 13° 9' 36.57" E 74° 49' 58.97"<br>C. N 13° 9' 37.78" E 74° 50' 6.04"<br>D. N 13° 9' 37.65" E 74° 50' 6.48" | 2020 |
| 4 | ಕಾಪು | ಪಡುಬಿದ್ರಿ | ನಡ್ಸಾಲು | 241 & 6 | 0.50 | ಕಾಮಿನಿ | III | A. N 13° 9' 2.80" E 74° 45' 47.94"<br>B. N 13° 9' 7.19" E 74° 45' 53.64" | 1740 |
| 5. | ಕಾಪು | ಕುತ್ಯಾರು | 108 ಕಳತ್ತೂರು | 69 & 108 | 0.80 | ಬ್ರಹ್ಮರಗಂಡಿ ಹಳ್ಳ | III | A. N 13° 12' 57.30" E 74° 46' 34.78"<br>B. N 13° 12' 56.99" E 74° 46' 34.32"<br>C. N 13° 12' 54.05" E 74° 46' 39.26"<br>D. N 13° 12' 54.12" E 74° 46' 39.57" | 2784 |
| 6. | ಕಾಪು | ಕುತ್ಯಾರು | 108 ಕಳತ್ತೂರು | 93 | 0.60 | ಗುರಗುಂಡಿ ಗರಡಿ | III | A. N 13° 12' 29.72" E 74° 47' 26.51"<br>B. N 13° 12' 29.65" E 74° 47' 25.91"<br>C. N 13° 12' 27.03" E 74° 47' 26.68"<br>D. N 13° 12' 25.46" E 74° 47' 28.89"<br>E. N 13° 12' 25.93" E 74° 47' 29.13"<br>F. N 13° 12' 27.28" E 74° 47' 27.04" | 2088 |
| 7. | ಕಾಪು | ಕುತ್ಯಾರು | 108 ಕಳತ್ತೂರು | 42 | 0.30 | ಗುರಗುಂಡಿ ಗರಡಿ | III | A. N 13° 12' 42.80" E 74° 47' 20.26"<br>B. N 13° 12' 40.60" E 74° 47' 23.58"<br>C. N 13° 12' 40.43" E 74° 47' 23.31"<br>D. N 13° 12' 42.44" E 74° 47' 20.29" | 1044 |
| 8. | ಕಾಪು | ಇನ್ನಂಜೆ | ಇನ್ನಂಜೆ | 69 | 0.6 0 | ಮಾರ್ಕೋಡಿ | II | A. N 13° 14' 42.15" E 74° 45' 26.15"<br>B. N 13° 14' 37.69" E 74° 45' 21.12" | 2088 |
| 9. | ಕಾಪು | ಇನ್ನಂಜೆ | ಪಾಂಗಾಳ | 107 & 108 | 0.35 | ಪಿನಾಕಿನಿ | II | A. N 13° 15' 28.07" E 74° 44' 29.01"<br>B. N 13° 15' 23.55" E 74° 44' 27.08" | 610 |

ಕಾರ್ಕಳ ತಾಲ್ಲೂಕು:

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ಹಳ್ಳ/ ಹೊಳೆ/ ತೊರೆ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕಾರ್ಕಳ | ಬೆಳ್ಮಣ್ | ಸೂಡಾ | 127, 129 & 114 | 0.97 | ಸೂಡಾ ಹಳ್ಳ | III | A. N 13° 12' 21.58" E 74° 52' 20.88"<br>B. N 13° 12' 14.46" E 74° 52' 18.66" | 1012 |
| 2. | ಕಾರ್ಕಳ | ಶಿರ್ಲಾಲು | ಶಿರ್ಲಾಲು | 25 | 0.50 | ಚೌಕಿ ಹಳ್ಳ | III | A. N 13° 19' 4.38" E 75° 2' 59.11"<br>B. N 13° 19' 4.82" E 75° 2' 59.31"<br>C. N 13° 19' 3.95" E 75° 3' 1.42"<br>D. N 13° 19' 0.15" E 75° 2' 59.37"<br>E. N 13° 19' 0.27" E 75° 2' 59.13"<br>F. N 13° 19' 3.68" E 75° 3' 0.94" | 1043 |
| 3. | ಕಾರ್ಕಳ | ಮುಂಡ್ಕೂರು | ಮುಂಡ್ಕೂರು | 205, 206, 208, 209G & 209H | 1.00 | ಅರದಾಲು ಹಳ್ಳ | III | A. N 13° 5' 53.41" E 74° 53' 5.06"<br>B. N 13° 5' 53.13" E 74° 53' 5.15"<br>C. N 13° 5' 56.29" E 74° 53' 16.00"<br>D. N 13° 5' 56.73" E 74° 53' 15.90" | 1391 |

ಕುಂದಾಪುರ ತಾಲ್ಲೂಕು:

| ಕ್ರ ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ಹಳ್ಳ/ ಹೊಳೆ/ ತೊರೆ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕುಂದಾಪುರ | ಕಾವ್ರಾಡಿ | ಕಾವ್ರಾಡಿ | 158 | 1.17 | ಹುಬ್ಬ ಹೊಳೆ | III | A. N 13° 38' 44.22" E 74° 46' 11.35"<br>B. N 13° 38' 47.48" E 74° 46' 14.80"<br>C. N 13° 38' 55.11" E 74° 46' 19.48"<br>D. N 13° 38' 54.86" E 74° 46' 19.85"<br>E. N 13° 38' 49.48" E 74° 46' 16.35"<br>F. N 13° 38' 46.41" E 74° 46' 14.36"<br>G. N 13° 38' 43.99" E 74° 46' 11.74" | 3000 |

ನಿರ್ಣಯ–3: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ದಿನಾಂಕ: 19.11.2024 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ 20 ಮರಳು ಬ್ಲಾಕ್‌ಗಳಿಗೆ ಅನುಮೋದನೆ ನೀಡಿರುವುದರಿಂದಾಗಿ, ಅಧಿಸೂಚನೆ ಹೊರಡಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಿ ವಿಲೇವಾರಿ ಮಾಡಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ–4: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳ ಬಗ್ಗೆ ಚರ್ಚೆ.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಗುರುತಿಸಿ, ವಿವರಗಳನ್ನು ದಿನಾಂಕ: 19.11.2024 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಹೊಸದಾಗಿ ಗುರುತಿಸುವ ಮರಳು ಬ್ಲಾಕ್‌ಗಳಿಗೆ ಅಕಾರಾದಿಯಲ್ಲಿ ಸಂಖ್ಯೆಗಳನ್ನು ನೀಡಿ ಮೀಸಲಾತಿಯನ್ನು ನಿಗಧಿಪಡಿಸಲು ದಿನಾಂಕ: 12.09.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

ಕುಂದಾಪುರ ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1. | ಕುಂದಾಪುರ | ಹಳ್ನಾಡು | 56 | 4.65 | ಹಾಲಾಡಿ | V | A. N 13° 37' 8.13" E 74° 46' 23.33"<br>B. N 13° 37' 8.61" E 74° 46' 24.98"<br>C. N 13° 36' 56.94" E 74° 46' 29.75"<br>D. N 13° 36' 56.56" E 74° 46' 28.30" | 32353 |

ಬ್ರಹ್ಮಾವರ ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1 | ಬ್ರಹ್ಮಾವರ | ಕಾಡೂರು | 230/2 | 4.00 | ಸೀತಾ | IV | A. N 13° 28' 44.77" E 74° 50' 28.04"<br>B. N 13° 28' 44.09" E 74° 50' 28.87"<br>C. N 13° 28' 39.40" E 74° 50' 26.77"<br>D. N 13° 28' 32.75" E 74° 50' 25.47"<br>E. N 13° 28' 33.07" E 74° 50' 24.47"<br>F. N 13° 28' 39.95" E 74° 50' 25.02"<br>G. N 13° 28' 44.00" E 74° 50' 29.00" | 20000 |

ಬೈಂದೂರು ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1 | ಬೈಂದೂರು | ಬಡಾಕೆರೆ & ಮರವಂತೆ | 36 & 156 | 10.00 | ಕೊಲ್ಲೂರು ನದಿ | V | A. N 13° 44' 4.87" E 74° 39' 24.27"<br>B. N 13° 43' 52.69" E 74° 39' 32.09"<br>C. N 13° 43' 42.92" E 74° 39' 36.29"<br>D. N 13° 43' 42.18" E 74° 39' 34.39"<br>E. N 13° 43' 51.41" E 74° 39' 30.90"<br>F. N 13° 44' 4.05" E 74° 39' 22.82" | 69660 |

ನಿರ್ಣಯ–4: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಮರಳು ಬ್ಲಾಕ್‌ಗಳ ವರದಿಯನ್ನು ಟೆಂಡರ್ ಉಪಸಮಿತಿಯಲ್ಲಿ ಮಂಡಿಸಿ, ದಿನಾಂಕ: 12.09.2024 ರ ಸಭೆಯ ನಿರ್ಣಯದಂತೆ ಮರಳು ಬ್ಲಾಕ್‌ಗಳನ್ನು ಅಕಾರಾದಿಯಲ್ಲಿ ಕ್ರಮಸಂಖ್ಯೆ ಬರುವಂತೆ ಕ್ರಮವಹಿಸಿ ಮರಳು ಟೆಂಡರ್ ಉಪಸಮಿತಿ/ ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆದು ಮೀಸಲಾತಿ ನಿಗಧಿಪಡಿಸಿ, ಅಧಿಸೂಚನೆ ಹೊರಡಿಸಿ, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕ್ರಮವಹಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಅನುಮೋದಿಸಲಾಯಿತು.

**ವಿಷಯಸೂಚಿ–5: ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 8316/2024 ಕ್ಕೆ ಸಂಬಂಧಿಸಿದಂತೆ ದಿನಾಂಕ: 26.06.2024 ರಂದು ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಕುರಿತು.**

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಕಾರ್ಕಡ ಗ್ರಾಮದ ಸೀತಾನದಿ ಪಾತ್ರದಲ್ಲಿ ಮಂಜೂರು ಮಾಡಲಾಗಿರುವ ಮರಳು ಗುತ್ತಿಗೆ ಸಂಖ್ಯೆ: UDPNS452 ರಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡಿರುವ ಸಂಬಂಧ ಶ್ರೀ ದಿನೇಶ್ ಮೊಗವೀರ ರವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 8316/2024 ಕ್ಕೆ ಸಂಬಂಧಿಸಿದಂತೆ ದಿನಾಂಕ: 26.06.2024 ರಂದು ಮಾನ್ಯ ನ್ಯಾಯಾಲಯವು ಹೊರಡಿಸಿರುವ ಮಧ್ಯಂತರ ಆದೇಶದಲ್ಲಿ ತಾಂತ್ರಿಕ ತಜ್ಞರನ್ನೊಳಗೊಂಡ ತಂಡವನ್ನು ರಚಿಸಿ ವರದಿ ಸಲ್ಲಿಸಲು ಸೂಚಿಸಿದ್ದು, ಅದರಂತೆ ಜಿಲ್ಲಾಧಿಕಾರಿಗಳು, ಉಡುಪಿ ರವರ ನೇತೃತ್ವದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,

ಕುಂದಾಪುರ, ಕಾರ್ಯಪಾಲಕ ಅಭಿಯಂತರರು, ಜಲಸಂಪನ್ಮೂಲ ಇಲಾಖೆ, ಮಂಗಳೂರು, ತಾಂತ್ರಿಕ ತಜ್ಞರು ಎನ್.ಐ.ಟಿ.ಕೆ, ಸುರತ್ಕಲ್ ಮತ್ತು ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ರವರನ್ನೊಳಗೊಂಡ ತಂಡವನ್ನು ರಚಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದ್ದು, ಅದರಂತೆ ಸದರಿ ತಂಡವು ಜಂಟಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದು ಸದರಿ ವರದಿಯಲ್ಲಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿರುತ್ತದೆ.

1. ಪ್ರವಾಹ ಪೀಡಿತ ನದಿ ಪಾತ್ರಗಳಲ್ಲಿ ಕಾಲಕಾಲಕ್ಕೆ ಮರಳು ದಿಬ್ಬಗಳನ್ನು ತೆರವುಗೊಳಿಸುವುದು ಅವಶ್ಯವಿರುತ್ತದೆ. ಅದರಂತೆ ಸದರಿ ಮರಳು ಗಣಿ ಗುತ್ತಿಗೆ ಪ್ರದೇಶವು ಸೀತಾ ನದಿ ಪಾತ್ರದಲ್ಲಿದ್ದು, ಮರಳು ದಿಬ್ಬಗಳನ್ನು ಭಾರಿ ಯಂತ್ರಗಳಾದ JCB Machines ಮತ್ತು mechanized boats ಗಳನ್ನು ಉಪಯೋಗಿಸದೇ ಕೇವಲ ಮಾನವ ಶ್ರಮದಿಂದ ಮರಳು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.
2. ಮರಳು ದಿಬ್ಬಗಳ ಗಡಿಬಾಂದುಗಳನ್ನು ಸದರಿ ವರದಿಯಲ್ಲಿ ನೀಡಲಾಗಿರುವ Referenced Coordinates ಗಳಂತೆ ಸ್ಪಷ್ಟವಾಗಿ ಗುರುತಿಸಿ ಮರಳು ಗಣಿಗಾರಿಕೆ ನಡೆಸುವುದು.
3. ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಮರಳು ಗಣಿಗಾರಿಕೆ, ಸಾಗಾಣಿಕೆ ಹಾಗೂ ದಾಸ್ತಾನು ಕಾರ್ಯದಲ್ಲಿ ಸಂಪೂರ್ಣ ಪಾರದರ್ಶಕ ಕಾರ್ಯವೈಖರಿಯನ್ನು ಪಾಲಿಸುವುದು. ಮುಖ್ಯವಾಗಿ ಎಲ್ಲಾ ಮರಳು ಗಣಿಗಾರಿಕೆ ಸಂಬಂಧ ಕೆಲಸ ಕಾರ್ಯಗಳನ್ನು ಹಗಲಿನ ಸಮಯದಲ್ಲಿ ಮಾತ್ರ ನಿರ್ವಹಿಸುವುದು.
4. ಪರಿಸರ ಸಮತೋಲನವನ್ನು ಕಾಯ್ದುಕೊಳ್ಳಲು ಹಾಗೂ ಮರಳು ತೆರವುಗೊಳಿಸುವ ಕಾರ್ಯವನ್ನು Layered or Slice-wise Pattern Across the river bed ಮಾದರಿಯಲ್ಲಿ ಕೈಗೊಳ್ಳಬೇಕು.
5. ಮರಳು ತೆರವುಗೊಳಿಸುವ ಕಾರ್ಯಕ್ಕಾಗಿ ನದಿಯ ಹರಿವಿನ ಮಾರ್ಗವನ್ನು ಬದಲಾಯಿಸುವಂತಿಲ್ಲ ಹಾಗೂ ಪರಿಸರ ರಕ್ಷಣೆಗಾಗಿ ಸ್ವಾಭಾವಿಕ ನೀರಿನ ದಿಕ್ಕನ್ನು ಅಥವಾ ನೀರಿನ ಮೂಲಗಳನ್ನು ತಡೆಹಿಡಿಯುವಂತಿಲ್ಲ.

ಮೇಲ್ಕಂಡಂತೆ NITK ತಾಂತ್ರಿಕ ತಜ್ಞರು, ಸುರತ್ಕಲ್‌ರವರ ನೀಡಿರುವ ವರದಿಯನ್ನು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಲ್ಲಿ ಮಂಡಿಸಿ ಸದರಿ ವರದಿಯಲ್ಲಿನ ಅಂಶಗಳನ್ನು ಮಾನ್ಯ ನ್ಯಾಯಾಲಯದ ಆದೇಶದ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ದಿನಾಂಕ: 20.11.2024 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮುಂದುವರೆದು ದಿನಾಂಕ: 29.11.2024 ರಂದು "As per the directions of the Hon'ble Court dated 26.06.2024, a report was filed on 27.11.2024 when the Petition was taken up for hearing before the Hon'ble Division Bench of the High Court of Karnataka C.H.No.1 presided over by the Hon'ble Chief Justice. The same was taken on record. Arguments were heard and Petition has been dismissed." ಎಂಬುದಾಗಿ ಆದೇಶಿಸಿರುತ್ತದೆ ಎಂಬುವಾಗಿ ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

<u>ನಿರ್ಣಯ-5:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬ್ರಹ್ಮಾವರ ತಾಲ್ಲೂಕಿನ ಕಾರ್ಕಡ ಗ್ರಾಮದ ಸೀತಾನದಿ ಪಾತ್ರದಲ್ಲಿ ಮಂಜೂರು ಮಾಡಲಾಗಿರುವ ಮರಳು ಗುತ್ತಿಗೆ ಸಂಖ್ಯೆ: UDPNS452 ರಲ್ಲಿ NITK ತಾಂತ್ರಿಕ ತಜ್ಞರು, ಸುರತ್ಕಲ್‌ರವರ ನೀಡಿರುವ ವರದಿಯಲ್ಲಿನ ಅಂಶಗಳನ್ವಯ ದಿನಾಂಕ: 20.11.2024 ರ ಪತ್ರದಲ್ಲಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ತಿಳಿಸಿರುವಂತೆ ಸದರಿ ಅಂಶಗಳನುಸಾರ ಹಾಗೂ ಮಾನ್ಯ ನ್ಯಾಯಾಲಯವು ಹೊರಡಿಸಿರುವ ಆದೇಶಗಳನುಸಾರ ಸದರಿ ಷರತ್ತುಗಳನ್ನು ಪಾಲಿಸಲು ಹಾಗೂ ಯಾವುದೇ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ ನಡೆಯದಂತೆ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ

ಕಾರ್ಯ ನಡೆಸಲು ಸಭೆಯಲ್ಲಿ ಹಾಜರಿದ್ದ ಕೆ.ಆರ್.ಐ.ಡಿ.ಎಲ್ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಚಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ-6: ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 25936/2024 ಕ್ಕೆ ಸಂಬಂಧಿಸಿದಂತೆ ದಿನಾಂಕ: 06.11.2024 ರಂದು ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಕುರಿತು.

ಉಡುಪಿ ಜಿಲ್ಲೆಯ, ಉಡುಪಿ ತಾಲ್ಲೂಕಿನ ಬೊಮ್ಮರಬೆಟ್ಟು ಗ್ರಾಮದ ಕರಾವಳಿ ನಿಯಂತ್ರಣ ವಲಯ ಹಾಗೂ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಮುಳುಗಿ ಮರಳು ತೆಗೆಯಲು ಅನುಮತಿಯನ್ನು ನೀಡುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 25936/2024 ರಂತೆ ಶ್ರೀ ಹರೀಶ, ಉಡುಪಿ ಜಿಲ್ಲೆ ರವರು ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 06.11.2024 ರಂದು "The Hon'ble Court has disposed of the Writ Petition granting limited observations in favour of the petitioner that the representation of the petitioner shall be considered by the competent authority of the respondents and the decision on merits shall be rendered within ten weeks from today, which shall be communicated to the petitioner and the Order dated 06.11.2024 is complied with and the representation of the Petitioner is considered within 8 weeks from 06.11.2024 to avoid any Contempt Proceedings that might be against you." ಎಂಬುದಾಗಿ ಅಂತಿಮ ಆದೇಶ ನೀಡಿರುತ್ತದೆ. ಶ್ರೀ ಹರೀಶ ರವರು ಹಿಂದೆ ಮರಳು ಗುತ್ತಿಗೆ ನೀಡುವಂತೆ ಕೋರಿ ಸಲ್ಲಿಸಿರುವ 02 ಮನವಿಯನ್ನು 08 ವಾರದೊಳಗಾಗಿ ನಿಯಮಾನುಸಾರ ಪರಿಗಣಿಸಿ, ಅರ್ಜಿದಾರರಿಗೆ ಸೂಕ್ತ ಮಾಹಿತಿಯನ್ನು ನೀಡಲು ಸೂಚಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-6: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ರಿಟ್ ಅರ್ಜಿ ಸಂಖ್ಯೆ: 25936/2024 ಕ್ಕೆ ಸಂಬಂಧಿಸಿದಂತೆ ದಿನಾಂಕ: 06.11.2024 ರಂದು ಮಾನ್ಯ ನ್ಯಾಯಾಲಯವು ನೀಡಿದ ಆದೇಶದಂತೆ ಶ್ರೀ ಹರೀಶ, ಉಡುಪಿ ರವರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2023 ರ ನಿಯಮ 31-ZB ರಂತೆ ಸಾಂಪ್ರದಾಯಿಕ ಮರಳುಗಾರಿಕೆ ಮಾಡಿರುವ ದಾಖಲೆಗಳಿದ್ದಲ್ಲಿ ಮರಳು ಬ್ಲಾಕ್‌ಗಳ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಿ ಸೂಕ್ತ ಕಾನೂನು ಅಭಿಪ್ರಾಯ ಪಡೆದು ಮಾನ್ಯ ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಬೆಂಗಳೂರು ರವರಿಗೆ ಪತ್ರ ಬರೆಯಲು ಹಾಗೂ ಕಾನೂನು ಅಭಿಪ್ರಾಯದನ್ವಯ ಶ್ರೀ ಹರೀಶ, ಉಡುಪಿ ರವರಿಗೆ ಹಿಂಬರಹವನ್ನು ನೀಡಲು ಸಭೆಯಲ್ಲಿ ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-7: ಮರಳುಗಾರಿಕೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಂದ ಸ್ವೀಕೃತಗೊಂಡ ಪತ್ರಗಳ ಕುರಿತು.**

**ವಿಷಯಸೂಚಿ 7.1: ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಉಡುಪಿ ಜಿಲ್ಲೆ, ಉಡುಪಿ**

- ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದ ಸ.ನಂ: 93 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-5 ರ ಮಧ್ಯ ಭಾಗದ ನದಿಯ ದಂಡೆ ಪಾತ್ರದಲ್ಲಿ ಯಾವುದೋ ದೂರದ ಬ್ಲಾಕ್‌ಗೆ ಸಂಬಂಧಿಸಿದ ಸ್ಟಾಕ್ ಯಾರ್ಡ್ ಕಂಡುಬಂದಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ

ಯಾವುದೇ ಅಹಿತಕರ ಘಟನೆಗಳು ಜರುಗದಂತಿರಲು ಅತಿಕ್ರಮವಾಗಿ ಸ್ಥಾಪಿಸಿರುವ ಸ್ಟಾಕ್ ಯಾರ್ಡ್‌ನ್ನು ತೆರವುಗೊಳಿಸಿಕೊಡಬೇಕಾಗಿ ದಿನಾಂಕ: 25.11.2024 ರ ಪತ್ರದಲ್ಲಿ ಕೋರಿರುತ್ತಾರೆ.

- ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹೊಸಾಳ ನಾಗರಮಠ ಗ್ರಾಮದ ಸ.ನಂ: 97 & 112 ರಲ್ಲಿ 2.70 ಎಕ್ರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-1 ರ ಪರವಾನಿಗೆಯನ್ನು ಬೇರೆ ಏಜೆನ್ಸಿಯವರಿಗೆ ನೀಡುವಂತೆ ದಿನಾಂಕ: 12.11.2024 ರ ಪತ್ರದಲ್ಲಿ ಕೋರಿರುತ್ತಾರೆ. ದಿನಾಂಕ: 30.11.2024 ರಂದು ಮರಳು ಬ್ಲಾಕ್ ಸಂಖ್ಯೆ: SB-1 & SB-5 ರ ಪರಿಸರ ವಿಮೋಚನಾ ಪತ್ರವನ್ನು ಕಛೇರಿಗೆ ಸಲ್ಲಿಸಿ, ಮರಳು ಗುತ್ತಿಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ.
- ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರು ಸದರಿ ಮರಳು ಬ್ಲಾಕ್ ಸಂಖ್ಯೆ: SB-1 ರಲ್ಲಿನ ಮರಳನ್ನು ಕೆ.ಆರ್.ಐ.ಡಿ.ಎಲ್ ವತಿಯಿಂದ ಹಂಚಿಕೆ ಮಾಡಲು ಸೂಕ್ತ ಕ್ರಮಕ್ಕಾಗಿ ದಿನಾಂಕ: 13.11.2024 ರ ಪತ್ರದಲ್ಲಿ ಕೋರಿರುತ್ತಾರೆ.
- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರು ದಿನಾಂಕ: 031.2024 ರಂದು ನೀಡಿರುವ ಪತ್ರದಲ್ಲಿ ಕಾರ್ಕಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ DBOT ಗುತ್ತಿಗೆದಾರರಾದ ಶಂಕರ ನಾರಾಯಣ ಕನ್‌ಸ್ಟ್ರಕ್ಷನ್ ಪ್ರೈ.ಲಿ ಇವರು ಎಂ-ಸ್ಯಾಂಡ್‌ನ್ನು ಬಳಕೆ ಮಾಡುತ್ತಿರುವುದರಿಂದ ಸಾಮಾನ್ಯ ಮರಳು ಅವಶ್ಯಕತೆಯಿರುವುದಿಲ್ಲ ಎಂಬುದಾಗಿ ಲಿಖಿತವಾಗಿ ಪತ್ರ ನೀಡಿದ್ದು, ಬೈಂದೂರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಗುತ್ತಿಗೆದಾರರಾದ ಸುಪ್ರಧಾ ಕನ್‌ಸ್ಟ್ರಕ್ಷನ್ ಇವರು ಒಂದೇ ಬ್ಲಾಕ್‌ಗೆ ಅರ್ಜಿ ಸಲ್ಲಿಸಿರುವುದರಿಂದ ಮರಳು ಬ್ಲಾಕ್ ಸಂಖ್ಯೆ: SB-1 ರ ಅವಶ್ಯಕತೆ ಇರುವುದಿಲ್ಲ. ಸದರಿ ಹೆಚ್ಚುವರಿ ಮರಳು ಬ್ಲಾಕ್‌ನ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಬಹುದಾಗಿದೆ ಎಂಬುದಾಗಿ ತಿಳಿಸಿರುತ್ತಾರೆ.
- ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹೊಸಾಳ ನಾಗರಮಠ ಗ್ರಾಮದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-1 ರಲ್ಲಿ ತೆಗೆಯುವ ಮರಳಿನಲ್ಲಿ ಶೇ. 75 ರಷ್ಟು ಸರ್ಕಾರಿ ಕಾಮಗಾರಿಗಳಿಗೆ ಹಾಗೂ ಶೇ. 25 ರಷ್ಟು ವಸತಿ, ಮನೆ, ಉದ್ಯೋಗ ಖಾತರಿ ಯೋಜನೆ ಹಾಗೂ ಇತರ ಸರ್ಕಾರಿ ಕಾಮಗಾರಿಗಳಿಗೆ ಉಪಯೋಗಿಸಲು ತೀರ್ಮಾನಿಸಿ, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಉಡುಪಿ ರವರಿಗೆ ಮೀಸಲಿಟ್ಟಿದ್ದು, 02 ವರ್ಷವಾದರೂ ಸದರಿ ಮರಳು ಬ್ಲಾಕ್ ಅನುಷ್ಠಾನಕ್ಕೆ ಬಂದಿರುವುದಿಲ್ಲ ಹಾಗೂ ಸದರಿ ಮರಳು ಬ್ಲಾಕ್‌ನ್ನು ತಿರಸ್ಕರಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪತ್ರ ಬರೆದಿರುತ್ತಾರೆ. ಆದ್ದರಿಂದ ಸದರಿ ಮರಳು ಬ್ಲಾಕ್‌ನ್ನು ಬ್ರಹ್ಮಾವರ ತಾಲ್ಲೂಕಿನ ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿ, ಟೆಂಡರ್ ಕರೆಯಬೇಕಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ (ರಿ.), ಉಡುಪಿ ಜಿಲ್ಲೆ, ಉಡುಪಿ ರವರು ದಿನಾಂಕ: 20.11.2024 ರ ಪತ್ರದಲ್ಲಿ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**ನಿರ್ಣಯ-7.1:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರು ಸಭೆಯಲ್ಲಿ ಮಾತನಾಡಿ, ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದ ಸ.ನಂ: 93 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-5 ರಲ್ಲಿ ಸುಪ್ರಧಾ ಕನ್‌ಸ್ಟ್ರಕ್ಷನ್ ಇವರು ಕಾರ್ಯನಿರ್ವಹಿಸುವುದಾಗಿ ಸಭೆಯಲ್ಲಿ ತಿಳಿಸುತ್ತಾ, ಬ್ರಹ್ಮಾವರ ತಾಲ್ಲೂಕಿನ ಹೊಸಾಳ ನಾಗರಮಠ ಗ್ರಾಮದ ಸ.ನಂ: 97 & 112 ರಲ್ಲಿ 2.70 ಎಕ್ರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-1 ರಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಸರ್ಕಾರಿ/ ಖಾಸಗಿ ಕಾಮಗಾರಿಗಳಿಗೆ ಮರಳು ಗಣಿಗಾರಿಕೆ/ ಸಾಗಾಣಿಕೆ ನಿರ್ವಹಿಸಬಹುದಾಗಿದೆ ಎಂಬುದಾಗಿ ಅಭಿಪ್ರಾಯಿಸಿದರು. ಈ ಬಗ್ಗೆ ಚರ್ಚಿಸಿ ಜಿಲ್ಲಾ ವ್ಯಾಪ್ತಿಯಲ್ಲಿ ಮರಳಿನ

ಅಭಾವವಿರುವುದರಿಂದ ಮರಳು ಬ್ಲಾಕ್ ಸಂಖ್ಯೆ: SB-1 ರಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ತಾತ್ಕಾಲಿಕವಾಗಿ ಮರಳುಗಾರಿಕೆ ಕಾರ್ಯ ನಿರ್ವಹಿಸಲು ಹಾಗೂ ಪರಿಸರ ವಿಮೋಚನಾ ಪತ್ರವನ್ನು ವರ್ಗಾಯಿಸಲು ಸರ್ಕಾರದಿಂದ ಅನುಮೋದನೆ ಪಡೆದು, ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ವರ್ಗಾಯಿಸಲು ಅನುಮೋದನೆ ಪಡೆದು ಮುಂದಿನ ಕ್ರಮವಹಿಸಲು ಹಾಗೂ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದ ಸ.ನಂ: 93 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-5 ರಲ್ಲಿ ಮರಳುಗಾರಿಕೆ ಕಾರ್ಯ ನಿರ್ವಹಿಸಲು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರಿಗೆ ಮರಳು ಗಣಿ ಗುತ್ತಿಗೆ ಅಮಲ್ಜಾರಿ ಮಾಡಲು ಸಭೆಯಲ್ಲಿ ಒಮ್ಮತದ ಅಭಿಪ್ರಾಯದಂತೆ ತೀರ್ಮಾನಿಸಿ, ಅನುಮೋದಿಸಲಾಯಿತು.

<u>ವಿಷಯಸೂಚಿ 7.2:</u> ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದಲ್ಲಿ ಗುರುತಿಸಲಾದ ಮರಳು ಬ್ಲಾಕ್ ಸಂಖ್ಯೆ: SB-3 ರಲ್ಲಿ ಸಾರ್ವಜನಿಕರಿಗೆ ಹಂಚಿಕೆ ಬಾಕಿ ಉಳಿಯುವ 32,879 ಮೆ.ಟನ್ ಮರಳನ್ನು ಕೆ.ಆರ್.ಐ.ಡಿ.ಎಲ್ ಮೂಲಕ ವಿಲೇವಾರಿ ಮಾಡಲು ನಿಯಮಾನುಸಾರ ಕೈಗೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಇಲಾಖಾ ಕಾಮಗಾರಿಗಳಿಗೆ ಅಗತ್ಯವಿರುವ 15,846 ಮೆ.ಟನ್ ಮರಳನ್ನು ಇಲಾಖಾ ವತಿಯಿಂದ ತೆಗೆದು ಹಂಚಿಕೆ ಮಾಡಲು ಅಂದಾಜು ಪಟ್ಟಿಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುಮೋದನೆ ಹಾಗೂ ಮಂಜೂರಾತಿಯೊಂದಿಗೆ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ನಿರ್ದೇಶನ ದೊರಕಿಸಿಕೊಡುವಂತೆ ದಿನಾಂಕ: 15.10.2024 ರ ಪತ್ರದಲ್ಲಿ ಕೋರಿದ್ದು ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

<u>ನಿರ್ಣಯ–7.2:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದಲ್ಲಿ ಗುರುತಿಸಲಾದ ಮರಳು ಬ್ಲಾಕ್ ಸಂಖ್ಯೆ: SB-3 ಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ ರವರಿಗೆ ಮರಳು ಗುತ್ತಿಗೆ ಮಂಜೂರು ಮಾಡಲು ಹಾಗೂ ಲೋಕೋಪಯೋಗಿ ಇಲಾಖೆಗೆ ನೀಡಿರುವ ಪರಿಸರ ವಿಮೋಚನಾ ಪತ್ರವನ್ನು ಕೆ.ಆರ್.ಐ.ಡಿ.ಎಲ್ ರವರಿಗೆ ವರ್ಗಾವಣೆ ಮಾಡಲು ಸರ್ಕಾರದಿಂದ ಅನುಮತಿ ಪಡೆದು ಮರಳು ಗಣಿ ಗುತ್ತಿಗೆ ವರ್ಗಾಯಿಸುವವರೆಗೂ ಸದರಿ ಮರಳು ಬ್ಲಾಕ್‌ನಲ್ಲಿ ತಾತ್ಕಾಲಿಕವಾಗಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಮರಳು ಗಣಿಗುತ್ತಿಗೆ ಪ್ರದೇಶದಲ್ಲಿ ಮರಳುಗಾರಿಕೆ ಕಾರ್ಯ ನಿರ್ವಹಿಸಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಆರ್.ಐ.ಡಿ.ಎಲ್ ಇಲಾಖೆಯ ಸರ್ಕಾರಿ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಪೂರೈಸಲು ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ 7.3:</u> ಉಡುಪಿ ಜಿಲ್ಲೆಯಲ್ಲಿ ಮರಳು ಪರವಾನಿಗೆ ಹೊಂದಿರುವ ವಿಶೇಷ ಚೇತನರ ಸಂಖ್ಯೆ ಕಡಿಮೆಯಿರುವುದರಿಂದ ವಿಶೇಷ ಚೇತನರಿಗೆ ಜಿಲ್ಲಾವಾರು ಟೆಂಡರ್ ಕರೆದು ಭಾಗವಹಿಸಲು ಅವಕಾಶ ಕಲ್ಪಿಸಿಕೊಡಬೇಕಾಗಿ ಶ್ರೀ ಅಪ್ಪು ಮೊಗವೀರ ರವರು ದಿನಾಂಕ: 30.11.2024 ರಂದು ಮನವಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ–7.3:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ 2023 ರ ನಿಯಮ 31 ZB ರಂತೆ ಅದೇ ತಾಲ್ಲೂಕು ವ್ಯಾಪ್ತಿಯಲ್ಲಿ ವಾಸ್ತವ್ಯವಿರುವ ಪರಿಶಿಷ್ಟ ಜಾತಿ/ ಪಂಗಡ ಹಾಗೂ ವಿಕಲಚೇತನ ಪರವಾನಿಗೆದಾರರು ಕಡಿಮೆ ಇರುವುದರಿಂದ ಪರಿಶಿಷ್ಟ ಜಾತಿ/ ಪಂಗಡ ಹಾಗೂ ವಿಕಲಚೇತನರಿಗೆ ಮೀಸಲಿಸಿರುವ ಮರಳು ಬ್ಲಾಕ್‌ಗಳಲ್ಲಿ ಸದರಿಯವರುಗಳು ಭಾಗವಹಿಸಲು ಕಷ್ಟ

ಸಾಧ್ಯವಾಗಿರುತ್ತದೆ. ಆದ್ದರಿಂದ ಈ ಕುರಿತು ಪರಿಶಿಷ್ಟ ಜಾತಿ/ ಪಂಗಡ ಹಾಗೂ ವಿಕಲಚೇತನ ಪರವಾನಿಗೆದಾರರಿಗೆ ತಾಲ್ಲೂಕು ವ್ಯಾಪ್ತಿಯ ಬದಲಾಗಿ ಜಿಲ್ಲಾ ವ್ಯಾಪ್ತಿ ಎಂಬುದಾಗಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲು ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/ಉ/2023-24/15748, ದಿನಾಂಕ: 23.02.2024 ರಲ್ಲಿ ಮರಳು ಬ್ಲಾಕ್‌ಗಳನ್ನು ಕನಿಷ್ಠ 03 ಬಾರಿ ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ. ತದನಂತರ ಹರಾಜು ಪ್ರಕ್ರಿಯೆಯಲ್ಲಿ ನಿಗಧಿತ ಬಿಡ್ಡುದಾರರುಗಳಿಗಿಂತ ಕಡಿಮೆ ಬಿಡ್ಡುದಾರರುಗಳು ಭಾಗವಹಿಸಿದಲ್ಲಿ ಸದರಿ ಬಿಡ್ಡುದಾರರುಗಳನ್ನು ಪರಿಗಣಿಸುವ ಕುರಿತು ಜಿಲ್ಲಾ ಮರಳು ಸಮಿತಿಯಿಂದ ಕ್ರಮಕೈಗೊಳ್ಳಬಹುದಾಗಿರುತ್ತದೆ" ಎಂಬುದಾಗಿ ಉಲ್ಲೇಖಿಸಲಾಗಿರುವುದರಿಂದ ನಿಯಮಾವಳಿ ತಿದ್ದುಪಡಿಯಾಗುವವರೆಗೂ ಪರಿಶಿಷ್ಟ ಜಾತಿ/ ಪಂಗಡ ಹಾಗೂ ವಿಕಲಚೇತನರಿಗೆ ಮೀಸಲಿರಿಸಿ, 03 ಬಾರಿ ಟೆಂಡರ್ ಕರೆದರೂ ಯಶಸ್ವಿಯಾಗದ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ವ್ಯಾಪ್ತಿಯ ಬದಲಾಗಿ ಜಿಲ್ಲಾ ವ್ಯಾಪ್ತಿಯಲ್ಲಿ ವಾಸ್ತವ್ಯವಿರುವ ಪರವಾನಿಗೆದಾರರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ನೀಡುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-8: ಮರಳು ದಕ್ಕೆಯ ಬದಲಾವಣೆ ಕೋರಿ ಸಲ್ಲಿಸಿರುವ ಮನವಿಯ ಕುರಿತು.**

ಈ ಕೆಳಕಂಡ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಮರಳು ದಕ್ಕೆಯ ಬದಲಾವಣೆ ಕೋರಿ ಮರಳು ಗುತ್ತಿಗೆದಾರರು ಮನವಿಯನ್ನು ಸಲ್ಲಿಸಿದ್ದು, ಈ ಕುರಿತು ಕಛೇರಿಯ ತಾಂತ್ರಿಕ ಅಧಿಕಾರಿಯವರು ಹಾಗೂ ಕಿರಿಯ ಅಭಿಯಂತರರು ತಾಲ್ಲೂಕು ಭೂಮಾಪಕರೊಂದಿಗೆ ಸ್ಥಳ ಪರಿಶೀಲಿಸಿ ದಿನಾಂಕ: 02.11.2024 ರಂದು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ ಮರಳು ಬ್ಲಾಕ್ ಸಂಖ್ಯೆ: SB-12 ರಿಂದ ಮರಳು ದಕ್ಕೆಯು 3.48 K.M ದೂರದಲ್ಲಿರುವುದಾಗಿ ಹಾಗೂ ಮರಳು ಬ್ಲಾಕ್ ಸಂಖ್ಯೆ: SB-13 ರಿಂದ ಮರಳು ದಕ್ಕೆಯು 8 K.M ದೂರದಲ್ಲಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಆದರೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ತಿದ್ದುಪಡಿ 2021 ರ ನಿಯಮ 31- U(10) ರಲ್ಲಿ "The permission holder or lease holder shall store the sand beyond fifty meters but within one kilometers or such distance from the river bank, as decided by the District sand committee, depending on the geographical conditions" ಎಂಬುದಾಗಿ ಉಲ್ಲೇಖಿಸಲಾಗಿರುತ್ತದೆ. ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಮರಳು ಬ್ಲಾಕ್‌ಗಳ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ. ಸಂ | ಮರಳು ಬ್ಲಾಕ್ ಸಂಖ್ಯೆ | ಮರಳು ಗುತ್ತಿಗೆ ಸಂಖ್ಯೆ | Date Of Execution | ಮರಳು ಗುತ್ತಿಗೆದಾರರ ಹೆಸರು | ತಾಲೂಕು | ಗ್ರಾಮ | ನದಿ | ಸ.ನಂ | ವಿಸ್ತೀರ್ಣ | ಪರಿಸರ ವಿಮೋಚನಾ ಪತ್ರದಲ್ಲಿ ನಿಗದಿಪಡಿಸಿರುವ ಮರಳಿನ ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|---|
| 1 | SB-13 | UDPNS AOS06 | 21.12.2023 | ಶ್ರೀ ಬಿ.ಕೆ. ಮಹಾಬಲ ನಾಯ್ಕ | ಕುಂದಾಪುರ | ಮೊಳಹಳ್ಳಿ | ಹಾಲಾಡಿ ಹೊಳೆ | 249 | 3.70 | 24,465 |
| 2 | SB-12 | UDPNS AOS07 | 19.11.2024 | ಶ್ರೀ ನರಸಿಂಹ ಪೂಜಾರಿ | ಕುಂದಾಪುರ | ಮೊಳಹಳ್ಳಿ & ಶಂಕರ ನಾರಾಯಣ | ವಾರಾಹಿ | 249 & 295 | 2.50 | 9,030 |
| ಒಟ್ಟು | | | | | | | | | 6.20 | 33,495 |

**ನಿರ್ಣಯ-8:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ತಿದ್ದುಪಡಿ 2021 ರ ನಿಯಮ 31- U(10) ರಲ್ಲಿ ತಿಳಿಸಿರುವಂತೆ ಸದರಿ ಮರಳು ಬ್ಲಾಕ್‌ಗಳಿಂದ ಮರಳು ದಕ್ಕೆಯು 1 ಕಿ.ಮೀಟರ್‌ಗಿಂತ ಹೆಚ್ಚಿನ ದೂರದಲ್ಲಿರುವುದರಿಂದ ಅನಧಿಕೃತವಾಗಿ ಸಾಮಾನ್ಯ ಮರಳು ಉಪಖನಿಜವನ್ನು ಸಾಗಾಣಿಕೆ ಮಾಡುವ ಸಂಭವವಿದ್ದು, ನದಿಯಲ್ಲಿ ಒಟ್ಟು 03 ಮರಳು ಗುತ್ತಿಗೆಗಳು ಬರುತ್ತಿದ್ದು, ಈ ಬಗ್ಗೆ ವಿಷಯಸೂಚಿ 7.1 ರಲ್ಲಿ ತಿಳಿಸಿರುವಂತೆ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರು ದಕ್ಕೆ ನಿರ್ಮಾಣಕ್ಕೆ ದಿನಾಂಕ: 25.11.2024 ರ ಪತ್ರದಲ್ಲಿ ದೂರು ಸಲ್ಲಿಸಿರುತ್ತಾರೆ. ಅಲ್ಲದೇ ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿರವರು ದಿನಾಂಕ: 27.11.2024 ರಂದು ಪತ್ರ ಮುಖೇನ ಹಾಗೂ ದಿನಾಂಕ: 28.11.2024 ರಂದು ಇ-ಮೇಲ್ ಮುಖಾಂತರ ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಮೊಳಹಳ್ಳಿ ಗ್ರಾಮದ ಮರಳು ಬ್ಲಾಕ್ ಸಂಖ್ಯೆ: SB-12 ರಲ್ಲಿ ಮರಳು ಟೆಂಡರ್ ಪಡೆದ ನರಸಿಂಹ ಪೂಜಾರಿರವರು ಮರಳು ಬ್ಲಾಕ್‌ನಿಂದ ಸುಮಾರು 15 ಕಿ.ಮೀ. ದೂರದಲ್ಲಿ 1000 ಲೋಡ್‌ಗಿಂತ ಹೆಚ್ಚು ಮರಳನ್ನು ದಾಸ್ತಾನಿರಿಸಿದ್ದು, ಇದು ಬಹುದೊಡ್ಡ ಅಕ್ರಮ ಮರಳು ಗಣಿಗಾರಿಕೆಯಾಗಿದ್ದು, ಈ ಬಗ್ಗೆ ಕ್ರಮಕೈಗೊಳ್ಳುವಂತೆ ದೂರು ಸಲ್ಲಿಸಿರುತ್ತಾರೆ. ಆದ್ದರಿಂದ ದಿನಾಂಕ: 26.08.2024 ಸದರಿ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಹಾಗೂ ಮೊದಲು ನಿರ್ವಹಿಸುತ್ತಿರುವ ದಕ್ಕೆಯಲ್ಲಿಯೇ ಕೆಲಸ ನಿರ್ವಹಿಸಲು ಮರಳು ಗಣಿ ಗುತ್ತಿಗೆದಾರರಿಗೆ ಪತ್ರ ಮೂಲಕ ನೋಟೀಸ್ ಜಾರಿಗೊಳಿಸಿ ಸಮಜಾಯಿಷಿ ಪಡೆಯಲು ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-9:** ಮರಳು ಪರವಾನಿಗೆಯನ್ನು ವರ್ಗಾವಣೆ ಮಾಡುವಂತೆ ಕೋರಿರುವ ಬಗ್ಗೆ.

**ವಿಷಯಸೂಚಿ-9.1:** ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಬೆಳ್ಳಂಪಳ್ಳಿ ಗ್ರಾಮದ ಸ.ನಂ: 11/1 ರ ಮಡಿಸಾಲು ಹೊಳೆ ಪಾತ್ರದಲ್ಲಿ 1.10 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-33 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ದುದಾರರಾಗಿ ಆಯ್ಕೆಯಾದ ಶ್ರೀ ಜೋಗಪ್ಪ ಕುಂದರ್ ರವರು ದಿನಾಂಕ: 21.08.2024 ರಂದು ಮರಣ ಹೊಂದಿದ್ದು, ಸದರಿಯವರ ಮಗನಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿನಲ್ಲಿ ಸದರಿ ಮರಳು ಪರವಾನಿಗೆಯನ್ನು ವರ್ಗಾವಣೆ ಮಾಡಿಕೊಡಬೇಕಾಗಿ ದಿನಾಂಕ:15.11.2024 ರ ಪತ್ರದಲ್ಲಿ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**ನಿರ್ಣಯ-9.1:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಶ್ರೀ ಜೋಗಪ್ಪ ಕುಂದರ್ ರವರು ಮರಳು ಬ್ಲಾಕ್ ಸಂಖ್ಯೆ: SB-33 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ದುದಾರರಾಗಿ ಆಯ್ಕೆಯಾಗಿ ಆಶಯ ಪತ್ರ ನೀಡಿದ ನಂತರ ಮರಣ ಹೊಂದಿರುವುದರಿಂದ ಸದರಿಯವರ ವಾರೀಸುದಾರರಾದ ಮಗನಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿನಲ್ಲಿ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನ/ ಕಾನೂನು ಅಭಿಪ್ರಾಯ ನೀಡಲು ಕೋರಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಿ ಅನುಮೋದಿಸಲಾಯಿತು.

**ವಿಷಯಸೂಚಿ-9.2:** ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಮರಳು ಪರವಾನಿಗೆ ಹೊಂದಿದ್ದ ಶ್ರೀ ಜಿ. ರಾಜೇಶ್ ರಾವ್ ರವರು ದಿನಾಂಕ: 11.08.2023 ರಂದು ನಿಧನವಾಗಿರುವುದರಿಂದ ಶ್ರೀ ಜಿ. ರಾಜೇಶ್ ರಾವ್ ರವರ ಹೆಸರಿನಲ್ಲಿರುವ ಮರಳು ಪರವಾನಿಗೆಯನ್ನು ಸದರಿಯವರ ವಾರೀಸುದಾರರಿಗೆ ವರ್ಗಾವಣೆ ಮಾಡಿಕೊಡುವಂತೆ ಸದರಿಯವರ ಪತ್ನಿಯಾದ ಶ್ರೀಮತಿ ರೇಣುಕಾ ರವರು ದಿನಾಂಕ: 27.09.2024 ರ ಪತ್ರದಲ್ಲಿ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-9.2: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಶ್ರೀ ಜಿ. ರಾಜೇಶ್ ರಾವ್ ರವರು ಸಾಂಪ್ರದಾಯಿಕ ಮರಳು ಪರವಾನಿಗೆ ಹೊಂದಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದು, ಸದರಿಯವರು ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ರೇಣುಕಾ ರವರು ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ 31-ZB ರಂತೆ ಭಾಗವಹಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ/ ಕಾನೂನು ಅಭಿಪ್ರಾಯ ನೀಡಲು ಕೋರಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಿ ಅನುಮೋದಿಸಲಾಯಿತು.

**ವಿಷಯಸೂಚಿ-10: ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸಾಮಾನ್ಯ ಮರಳು ಉಪಖನಿಜವನ್ನು ವಿಲೇವಾರಿ ಮಾಡುವ ಬಗ್ಗೆ.**

ಪಡುಬಿದ್ರಿ ಠಾಣಾ ಸರಹದ್ದಿನ ನಾಡ್ಸಾಲು ಗ್ರಾಮದ ಕಂಚಿನಡ್ಕ ಪಡುಬಿದ್ರಿ ಪೊಲೀಸ್ ಠಾಣೆಯ ಪೊಲೀಸ್ ವಸತಿ ಗೃಹದ ಆವರಣದಲ್ಲಿ ಅನಧಿಕೃತ ಮರಳುಗಾರಿಕೆ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮರಳನ್ನು ಸಂಗ್ರಹಿಸಿ ಇಡಲಾಗಿದ್ದು, ಪ್ರಸ್ತುತ ಸ್ಥಳಾವಕಾಶದ ಕೊರತೆಯಿಂದ ಮತ್ತು ಸೂಕ್ತ ಭದ್ರತೆ ಇಲ್ಲದಿರುವುದರಿಂದ ಸಂಗ್ರಹಿಸಿಟ್ಟಿರುವ ಮರಳು ವಿಪರೀತ ಮಳೆಯ ಕಾರಣದಿಂದ ಭಾಗಶಃ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಉಳಿದ ಮರಳು ಕೂಡ ನಾಶವಾಗುವ ಸಾಧ್ಯತೆ ಇರುವುದರಿಂದ ಈ ಕೆಳಕಂಡ ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾದ ಮರಳನ್ನು ಆದಷ್ಟು ಬೇಗ ವಿಲೇವಾರಿ ಮಾಡಬೇಕಾಗಿ ಪೊಲೀಸ್ ಉಪನಿರೀಕ್ಷಕರು, ಪಡುಬಿದ್ರಿ ಪೊಲೀಸ್ ಠಾಣೆ ರವರ ಪತ್ರ ದಿನಾಂಕ: 22.10.2024 ರ ಪತ್ರದಲ್ಲಿ ಕೋರಿದ್ದು, ಅದರಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಕಛೇರಿಯಲ್ಲಿ ದಾಸ್ತಾನು ಕೇಂದ್ರ ಇಲ್ಲದ ಕಾರಣ KMMCR, 1994 ನಿಯಮ 31R(6) ರಂತೆ ಸದರಿ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶವಿರುವುದರಿಂದ ಸರ್ಕಾರಿ ಕಾಮಗಾರಿಗಳಿಗೆ ಮರಳಿನ ಅವಶ್ಯಕತೆಯಿದ್ದಲ್ಲಿ ಲೋಕೋಪಯೋಗಿ ಇಲಾಖೆಯ SR ದರದಲ್ಲಿ ವಿಲೇವಾರಿ ಮಾಡಲು ಕೋರಿ ಲೋಕೋಪಯೋಗಿ ಇಲಾಖೆ, ಕೆ.ಆರ್.ಐ.ಡಿ.ಎಲ್, ಪಂಚಾಯತ್ ರಾಜ್ ಇಲಾಖೆ ಹಾಗೂ ನಿರ್ಮಿತಿ ಕೇಂದ್ರ ಉಡುಪಿ ರವರಿಗೆ ದಿನಾಂಕ: 30.10.2024 ರಂದು ಪತ್ರ ಬರೆಯಲಾಗಿರುತ್ತದೆ. ಆದರೆ ಈ ಕುರಿತು ಸದರಿ ಇಲಾಖೆಗಳಿಂದ ಇದುವರೆಗೆ ಯಾವುದೇ ಪತ್ರ ಸ್ವೀಕೃತವಾಗದ ಕಾರಣ, KMMCR, 1994 ನಿಯಮ 31R(6) ರಲ್ಲಿ "if the seized sand is not required for any Government works, action shall be taken by the District Sand Committee to dispose such sand to the general public" ಎಂಬುದಾಗಿ ಉಲ್ಲೇಖಿಸಲಾಗಿರುವುದರಿಂದ ಈ ಕೆಳಕಂಡ ಮರಳನ್ನು ಸಾರ್ವಜನಿಕರಿಗೆ ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಂಡು ವಿಲೇವಾರಿ ಮಾಡಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ.

| ಕ್ರ.ಸಂ. | ಅಪರಾಧ ಕ್ರಮಾಂಕ | ಕಲಂ | ಮರಳಿನ ಅಂದಾಜು ಪ್ರಮಾಣ & ಅಂದಾಜು ಮೌಲ್ಯ | ಸೂಚನಾ ಪತ್ರ ಸಂಖ್ಯೆ |
|---|---|---|---|---|
| 1 | 138/2023 | ಕಲಂ 379, ಜೊತೆಗೆ 34 ಬಾದಂಸಂ ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | 0.5 ಮೆ.ಟನ್ ರೂ. 1540/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗನು/2023-24/3991, ದಿನಾಂಕ: 03.11.2023 |
| 2 | 174/2023 | ಕಲಂ 379, ಜೊತೆಗೆ 34 ಬಾದಂಸಂ ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 3 ಯುನಿಟ್, ರೂ. 7000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗನು/2024-25, ದಿನಾಂಕ: 15.06.2024 |

| | | | | |
|---|---|---|---|---|
| 3 | 02/2024 | ಕಲಂ 379, ಜೊತೆಗೆ 34 ಬಾದಂಸಂ ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 3 ಯುನಿಟ್, ರೂ. 7000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/1639, ದಿನಾಂಕ: 10.06.2024 |
| 4 | 08/2024 | ಕಲಂ 379, ಜೊತೆಗೆ 34 ಬಾದಂಸಂ ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 1.5 ಯುನಿಟ್, ರೂ. 3,150/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/1638, ದಿನಾಂಕ: 10.06.2024 |
| 5 | ಅ.ಕ್ರ 14/2024 | ಕಲಂ 379, ಜೊತೆಗೆ 34 ಬಾದಂಸಂ ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 3 ಯುನಿಟ್, ರೂ. 7,000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/1637, ದಿನಾಂಕ: 10.06.2024 |
| 6 | ಅ.ಕ್ರ 27/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957 ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 3 ಯುನಿಟ್, ರೂ. 7,000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/3324, ದಿನಾಂಕ: 22.08.2024 |
| 7 | ಅ.ಕ್ರ 51/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957 ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 6 ಯುನಿಟ್, ರೂ. 14,000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/3323, ದಿನಾಂಕ: 22.08.2024 |
| 8 | ಅ.ಕ್ರ 53/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957 ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 3 ಯುನಿಟ್, ರೂ. 7,000/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/3325, ದಿನಾಂಕ: 22.08.2024 |
| 9 | ಅ.ಕ್ರ 80/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957 ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 15 ಯುನಿಟ್, ರೂ. 10,500/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/1636, ದಿನಾಂಕ: 10.06.2024. |
| 10 | ಅ.ಕ್ರ 81/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 15 ಯುನಿಟ್, ರೂ. 10,500/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/1640, ದಿನಾಂಕ: 10.06.2024. |
| 11 | ಅ.ಕ್ರ 82/2024 | ಕಲಂ 379, ಐಪಿಸಿ, ಕಲಂ: 4(1-A), 21 (4) Mines and Minerals Regulation Act 1957, ಮತ್ತು ಕಲಂ 66 ಜೊತೆಗೆ 192(ಎ) ಐಎಂವಿ ಕಾಯಿದೆ | ಸುಮಾರು 15 ಯುನಿಟ್, ರೂ. 10,500/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/635, ದಿನಾಂಕ: 10.06.2024. |
| 12 | ಅ.ಕ್ರ 120/2024 | ಕಲಂ 303(2) ಕಲಂ:66 ಜೊತೆಗೆ 192(ಎ) ಐಎಂವಿ ಕಾಯ್ದೆ | ಸುಮಾರು 3 ಯುನಿಟ್, ರೂ. 6,300/- | ಸಂಖ್ಯೆ: ಗಭೂಇ/ಹಿ.ಭೂ (ಉಡುಪಿ)/ಕಗಗು/2024-25/3808, ದಿನಾಂಕ: 20.09.2024 |

ಅದರಂತೆ ಜಿಲ್ಲಾ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಸ್ತಾನಿರಿಸಿರುವ ಮರಳನ್ನು ಹಸ್ತಾಂತರ ಪಡೆಯುವಂತೆ ಪತ್ರಗಳು ಸ್ವೀಕೃತವಾಗಿದ್ದು, ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ದಾಸ್ತಾನು ಕೇಂದ್ರ ಇಲ್ಲದ ಕಾರಣ KMMCR, 1994 ನಿಯಮ 31R(6) ರಂತೆ ಸಾಮಾನ್ಯ ಮರಳು ಉಪಖನಿಜದ ವಿಲೇವಾರಿಗೆ ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**ನಿರ್ಣಯ-10:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಉಪಖನಿಜಗಳು ಸರ್ಕಾರಿ ಕಾಮಗಾರಿಗಳಿಗೆ ಅವಶ್ಯವಿದ್ದಲ್ಲಿ, ಸದರಿ ಉಪಖನಿಜಗಳನ್ನು ಲೋಕೋಪಯೋಗಿ ಇಲಾಖೆಯ SR ದರದಲ್ಲಿ ವಿಲೇವಾರಿ ಮಾಡಲು ಕೋರಿ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದು, ಸದರಿ ಇಲಾಖೆಗಳಿಂದ ಯಾವುದೇ ಬೇಡಿಕೆ ಇಲ್ಲವಾದಲ್ಲಿ KMMCR, 1994 ನಿಯಮ 31R(6) ರಂತೆ ಬಹಿರಂಗ ಹರಾಜು ನಡೆಸಿ ಸಾರ್ವಜನಿಕರಿಗೆ ಪೂರೈಸಲು ಕ್ರಮಕೈಗೊಳ್ಳುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ-11:</u> ಮರಳು ಬ್ಲಾಕ್‌ಗಳನ್ನು ಸರ್ಕಾರಿ ಇಲಾಖೆಗಳಿಗೆ ನೀಡಬಾರದಾಗಿ ಸಲ್ಲಿಸಿರುವ ಮನವಿಯ ಬಗ್ಗೆ.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಗುರುತಿಸಿರುವ ಕೆಲವು ಮರಳು ಬ್ಲಾಕ್‌ಗಳನ್ನು ಸರ್ಕಾರಿ ಇಲಾಖೆಗಳಿಗೆ ಮೀಸಲಿಟ್ಟಿದ್ದು, ಸರ್ಕಾರಿ ಇಲಾಖೆಗಳ ಹೆಸರಿನಲ್ಲಿ ಮರಳು ಗುತ್ತಿಗೆ ಮಂಜೂರು ಮಾಡಿಕೊಂಡು ಕಾಣದ ರಾಜಕೀಯ ಬಲಿಷ್ಠ ಮತ್ತು ಪ್ರಭಾವಿ ವ್ಯಕ್ತಿಗಳು ಮರಳು ವ್ಯಾಪಾರ ಮಾಡುತ್ತಿರುತ್ತಾರೆ. ಆದ್ದರಿಂದ ಸದರಿ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಾಂಪ್ರದಾಯಿಕ ಮರಳುಗಾರರಿಗೆ ಮರಳನ್ನು ತೆರವುಗೊಳಿಸಿ ಜೀವನ ನಿರ್ವಹಣೆಗೆ ಅನುವು ಮಾಡಿಕೊಡಬೇಕೆಂದು ತಾತ್ಕಾಲಿಕ ಮರಳು ಪರವಾನಿಗೆದಾರರ ಪರವಾಗಿ ಶ್ರೀ ಸತ್ಯರಾಜ್ ಬಿರ್ತಿ ರವರು ದಿನಾಂಕ: 02.12.2024 ರಂದು ಮನವಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**<u>ನಿರ್ಣಯ-11:</u>** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಸರ್ಕಾರಿ ಇಲಾಖೆಗಳಿಗೆ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ಕಾರ್ಯ ನಿರ್ವಹಿಸಲು ಸಂಬಂಧಪಟ್ಟ ಇಲಾಖೆಗಳು ಪರಿಸರ ವಿಮೋಚನಾ ಪತ್ರ ಬಂದರೂ ಸಹ ಮರಳು ಗಣಿಗಾರಿಕೆ ನಡೆಸಲು ನಿರಾಕರಿಸುತ್ತಿರುವುದರಿಂದ, ಸದರಿ ಮನವಿ ಮತ್ತು ಇತರೆ ಮನವಿಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸುವ ಮರಳು ಬ್ಲಾಕ್‌ಗಳನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ಒಮ್ಮತದ ಅಭಿಪ್ರಾಯದಂತೆ ತೀರ್ಮಾನಿಸಿ, ಅನುಮೋದಿಸಲಾಯಿತು.

**<u>ವಿಷಯಸೂಚಿ-12:</u> ಕಾಪು ತಾಲ್ಲೂಕಿನ <u>ಕುರ್ಕಾಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ನೀಡಿರುವ ಆಶಯ ಪತ್ರದಲ್ಲಿ ಮರಳು ನಿಕ್ಷೇಪದ ಸರ್ವೆ ನಂಬರ್ ಬದಲಾವಣೆ ಮಾಡುವ ಬಗ್ಗೆ.</u>**

ಉಡುಪಿ ಜಿಲ್ಲೆಯ ಕಾಪು ತಾಲ್ಲೂಕು ಕುರ್ಕಾಲು ಗ್ರಾಮದ ಸ.ನಂ. 123/1 ರಲ್ಲಿ 2.40 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ (ಪಾಪನಾಶಿನಿ ಹೊಳೆ) ಮರಳು ತೆಗೆದು ಸಾಗಾಣಿಕೆ ನಡೆಸಲು ದಿನಾಂಕ: 21.12.2023 ರಿಂದ ಅನ್ವಯವಾಗುವಂತೆ 01 ವರ್ಷದ ಅವಧಿಗೆ ಆಶಯ ಪತ್ರ ನೀಡಲಾಗಿರುತ್ತದೆ. ಸದರಿ ಆಶಯ ಪತ್ರದಲ್ಲಿ ಸರ್ವೆ

ನಂಬರ್ ತಪ್ಪಾಗಿ 73 ಎಂದು ನಮೂದಾಗಿದ್ದು, ಸದರಿ ಸ.ನಂ. ಉಡುಪಿ ತಾಲ್ಲೂಕು ಮಣಿಪುರ ಗ್ರಾಮಕ್ಕೆ ಸಂಬಂಧಿಸಿದ್ದಾಗಿರುವುದರಿಂದ, ನಮೂದು ಮಾಡಲಾದ ಗ್ರಾಮದ ಸರ್ವೆ ನಂಬರ್ 123/1 ಪ್ರದೇಶವು ಕಾಪು ತಾಲ್ಲೂಕು ಕುರ್ಕಾಲು ಗ್ರಾಮಕ್ಕೆ ಸೇರಿರುವ ಬಗ್ಗೆ ಕಂದಾಯ ನಕಾಶೆಯಲ್ಲಿ ಗುರುತಿಸಿ ಹಾಗೂ ದೃಢೀಕರಿಸಿ ನೀಡುವಂತೆ ತಹಶೀಲ್ದಾರರು, ಕಾಪು ತಾಲ್ಲೂಕು ರವರಿಗೆ ಪತ್ರ ಬರೆಯಲಾಗಿರುತ್ತದೆ. ಅದರಂತೆ ಕಾಪು ತಾಲ್ಲೂಕು ಕುರ್ಕಾಲು ಗ್ರಾಮಕ್ಕೆ ಸ.ನಂ. 123/1 ರಲ್ಲಿ 2.40 ಎಕರೆ ಜಮೀನಿನಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕೋರಿರುವ ಸ್ಥಳವಾಗಿರುತ್ತದೆ ಎಂಬುದಾಗಿ ನಕ್ಷೆಯೊಂದಿಗೆ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ದಿನಾಂಕ: 19.11.2024 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಕಾಪು ತಾಲ್ಲೂಕು ಕುರ್ಕಾಲು ಗ್ರಾಮದ ಸ.ನಂ. 123/1 ರಲ್ಲಿ 2.40 ಎಕರೆ ಜಮೀನಿನಲ್ಲಿ ಮರಳು ತೆರವುಗೊಳಿಸಲು ನೀಡಿದ ಆಶಯ ಪತ್ರದಲ್ಲಿ ತಿದ್ದುಪಡಿ ಮಾಡಲು ಸಭೆಯಲ್ಲಿ ತೀರ್ಮಾನಿಸಿ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಗೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ-12:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಮರಳು ನಿಕ್ಷೇಪಕ್ಕೆ ಸಂಬಂಧಿಸಿದಂತೆ ಕಾಪು ತಾಲ್ಲೂಕು ಕುರ್ಕಾಲು ಗ್ರಾಮ ಪಂಚಾಯತ್‌ಗೆ ನೀಡಿರುವ ಆಶಯ ಪತ್ರದಲ್ಲಿ ಕುರ್ಕಾಲು ಗ್ರಾಮದ ಸ.ನಂ. 123/1 ಎಂಬುದಾಗಿ ತಿದ್ದುಪಡಿ ಮಾಡಿ ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ-13:</u> ಸಾರ್ವಜನಿಕರಿಗೆ SAND APP ಮುಖಾಂತರ ಮರಳು ಬುಕ್ಕಿಂಗ್ ಮಾಡಲು ಮೊಬೈಲ್ ಆಪ್ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಬಗ್ಗೆ.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ E-sand ತಂತ್ರಾಂಶಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಮರಳು ಬುಕ್ಕಿಂಗ್ ಮಾಡಲು ಪ್ರಸ್ತುತ ವೆಬ್ ಪೋರ್ಟಲ್ ಮಾತ್ರ ಲಭ್ಯವಿದ್ದು, ಮೊಬೈಲ್ ಆಪ್ ಅಭಿವೃದ್ಧಿಪಡಿಸಿದಲ್ಲಿ ಸಾರ್ವಜನಿಕರಿಗೆ ಮರಳು ಬುಕ್ಕಿಂಗ್ ಮಾಡಲು ನೆರವಾಗುವುದರಿಂದ ಈ ಸಂಬಂಧ ಮೊಬೈಲ್ ಆಪ್ ಅಭಿವೃದ್ಧಿಪಡಿಸಲು ಟೆಂಡರ್ ಕರೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

<u>ನಿರ್ಣಯ-13:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬುಕ್ಕಿಂಗ್ ಮಾಡಲು ಮೊಬೈಲ್ ಆಪ್ ಅಭಿವೃದ್ಧಿಪಡಿಸಿದಲ್ಲಿ ಸಾರ್ವಜನಿಕರಿಗೆ ಮರಳು ಬುಕ್ಕಿಂಗ್ ಮಾಡಲು ನೆರವಾಗುವುದರಿಂದ ಈ ಸಂಬಂಧ ಮೊಬೈಲ್ ಆಪ್ ಅಭಿವೃದ್ಧಿಪಡಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ ಕೊನೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

09/12/2024

(ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ
ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

(ಡಾ. ಕೆ. ವಿದ್ಯಾಕುಮಾರಿ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

**ದಿನಾಂಕ: 18.01.2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು:**

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಉಡುಪಿ | ಅಧ್ಯಕ್ಷರು |
| 2. | ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ(ಪರವಾಗಿ) | ಸದಸ್ಯರು |
| 3. | ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ಉಡುಪಿ ಜಿಲ್ಲೆ, ಉಡುಪಿ | ಸದಸ್ಯರು |
| 4. | ಉಪಅರಣ್ಯ ಸಂರಕ್ಷಣಾಧಿಕಾರಿಯವರು, ಕುಂದಾಪುರ ಉಪವಿಭಾಗ, ಕುಂದಾಪುರ (ಪರವಾಗಿ) | ಸದಸ್ಯರು |
| 5. | ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ, ಕುಂದಾಪುರ | ಸದಸ್ಯರು |
| 6. | ಕಾರ್ಯಪಾಲಕ ಅಭಿಯಂತರರು, ಲೋ.ಬಂ.ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ (ಪರವಾಗಿ) | ಸದಸ್ಯರು |
| 7. | ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾರಿಗೆ ಇಲಾಖೆ, ಉಡುಪಿ | ಸದಸ್ಯರು |
| 8. | ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳು, ಉಡುಪಿ | ಸದಸ್ಯರು |
| 9. | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು | ಸದಸ್ಯರು |
| 10. | ತಹಶೀಲ್ದಾರರು, ಬ್ರಹ್ಮಾವರ(ಪರವಾಗಿ)/ ಕುಂದಾಪುರ/ಬೈಂದೂರು (ಪರವಾಗಿ)/ ಹೆಬ್ರಿ (ಪರವಾಗಿ)/ಕಾಪು (ಪರವಾಗಿ)/ ಕಾರ್ಕಳ | ಸದಸ್ಯರು |
| 11. | ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ | ಆಹ್ವಾನಿತರು |
| 12. | ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ | ಆಹ್ವಾನಿತರು |
| 13. | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ | ಆಹ್ವಾನಿತರು |
| 14. | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ-I, ಸಿದ್ದಾಪುರ | ಆಹ್ವಾನಿತರು |
| 15. | ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ | ಆಹ್ವಾನಿತರು |
| 16. | ಪೌರಾಯುಕ್ತರು, ನಗರಸಭೆ, ಉಡುಪಿ | ಆಹ್ವಾನಿತರು |
| 17. | ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಇತರೆ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಗಳ ವಿವರ ನೀಡಿದರು. ಅದರಂತೆ ಈ ಕೆಳಗಿನ ಕಾರ್ಯಸೂಚಿಗಳನ್ವಯ ನಿರ್ಣಯ ಕೈಗೊಳ್ಳಲಾಯಿತು.

ವಿಷಯಸೂಚಿ–1: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಕುರಿತು.

| ಮರಳು ಬ್ಲಾಕ್ ಗಳ ವಿವರ | | | | ಒಟ್ಟು ಮರಳು ಬ್ಲಾಕ್ ಗಳ ಸಂಖ್ಯೆ | ಪರಿಸರ ವಿಮೋಚನಾ ಪತ್ರದಲ್ಲಿ ನಿಗದಿಪಡಿಸಿರುವ ಮರಳಿನ ಪ್ರಮಾಣ (ಮೆ.ಟನ್) | ಪ್ರಸಕ್ತ ಸಾಲಿನಲ್ಲಿ ತೆರವುಗೊಳಿಸಿರುವ ಮರಳಿನ ಪ್ರಮಾಣ (ಮೆ.ಟನ್) | ಉಳಿಕೆ ಇರುವ ಮರಳಿನ ಪ್ರಮಾಣ (ಮೆ.ಟನ್) |
|---|---|---|---|---|---|---|---|
| I, II, III ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿದ್ದು, ಸದರಿ ಮರಳು ನಿಕ್ಷೇಪಗಳ ವಿವರ | | | Working | 21 | 81677 | 21901 | 59776 |
| | | | Idle | 23 | 56118 | 0 | 56118 |
| | | | TOTAL (A) | 44 | 137795 | 21901 | 115894 |
| IV, V & VI ನೇ ಶ್ರೇಣಿಯ ನದಿ ಪಾತ್ರಗಳಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ | ಮರಳು ಗುತ್ತಿಗೆ ಮಂಜೂರು ಮಾಡಲಾದ ಮರಳು ಬ್ಲಾಕ್ ಗಳು | Tender Blocks | Working | 5 | 65521 | 22401 | 43120 |
| | | | Idle | 1 | 9030 | 0 | 9030 |
| | | GOVT Blocks | Working | 2 | 45297 | 8721 | 36576 |
| | | | Idle | 5 | 211302 | 0 | 183868 |
| | | **TOTAL (B)** | | **13** | **331150** | **31122** | **272594** |
| | SEIAA ಇಂದ ಪರಿಸರ ವಿಮೋಚನಾ ಪತ್ರ ಸ್ವೀಕೃತವಾಗಲು ಬಾಕಿ ಇರುವ ಮರಳು ಬ್ಲಾಕ್ ಗಳು | Tender Blocks | | 16 | 297187 | 0 | 297187 |
| | | GOVT Blocks | | 6 | 76550 | 0 | 76550 |
| | | **TOTAL (C )** | | **22** | **373737** | **0** | **373737** |
| | ಪ್ರಸ್ತುತ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುವ ಮರಳು ಬ್ಲಾಕ್ ಗಳ ಸಂಖ್ಯೆ (D) | | | 22 | 551550 | 0 | 551550 |
| IV, V & VI ನೇ ಶ್ರೇಣಿಯ ಅಣೆಕಟ್ಟೆನ ಹಿನ್ನೀರಿನ ನದಿ ಪಾತ್ರದ ವ್ಯಾಪ್ತಿಯಲ್ಲಿ ಹೂಳಿನಲ್ಲಿ ದೊರಕುವ ಮರಳನ್ನು ತೆಗೆಯಲು (Desilting) ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ (E) | | | | 3 | 425404 | 0 | 425404 |
| **ಒಟ್ಟು** | | | | **104** | **1819636** | **53023** | **1739179** |

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಿರುವ ಮರಳು ಬ್ಲಾಕ್‌ಗಳ ಪ್ರಗತಿಯ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು/ ಸದಸ್ಯ ಕಾರ್ಯದರ್ಶಿಯವರು ಸಭೆಗೆ ಮಂಡಿಸುತ್ತಾ, ಗ್ರಾಮ ಪಂಚಾಯತ್‌ಗೆ ಆಶಯ ಪತ್ರಗಳನ್ನು ನೀಡಿರುವ 21 ಮರಳು ಬ್ಲಾಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 19 ಗ್ರಾಮ ಪಂಚಾಯತ್‌ಗಳಿಗೆ ದಿನಾಂಕ: 16.01.2025 ರಂದು ಕೇಂದ್ರ ಕಛೇರಿಯಿಂದ ILMS ತಂತ್ರಾಂಶದಲ್ಲಿ ನೋಂದಣಿ ಮಾಡಲಾಗಿರುತ್ತದೆ. ಉಳಿದ 04 ಮರಳು ಬ್ಲಾಕ್‌ಗಳಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯತ್‌ನವರು ಕಾರ್ಯ ನಿರ್ವಹಿಸಿರುವುದಿಲ್ಲ. ಅಲ್ಲದೇ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿಯಾದ 01 ಮರಳು ಬ್ಲಾಕ್‌ನಲ್ಲಿ ಮತ್ತು ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ 05 ಮರಳು ಬ್ಲಾಕ್‌ಗಳಲ್ಲಿ ಇದುವರೆಗೆ ಕಾರ್ಯ ನಿರ್ವಹಿಸಿರುವುದಿಲ್ಲ. ಉಳಿದಂತೆ 22 ಮರಳು ಬ್ಲಾಕ್‌ಗಳಲ್ಲಿ 07 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಕ್ವಾರಿಪ್ಲಾನ್ ತಯಾರಿಸಿ ಕಛೇರಿಗೆ ಸಲ್ಲಿಸಿರುವುದಿಲ್ಲ ಹಾಗೂ 15 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಇದುವರೆಗೆ ಕಾರ್ಯ ನಿರ್ವಹಿಸದೇ ಇರುವ ಮರಳು ಬ್ಲಾಕ್‌ಗಳಲ್ಲಿ 07 ದಿನಗಳೊಳಗಾಗಿ ಮರಳು ಗಣಿಗಾರಿಕೆ ಕಾರ್ಯ ನಿರ್ವಹಿಸಲು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯತಿ/ ಮರಳು ಗಣಿ ಗುತ್ತಿಗೆದಾರರು/ ಸರ್ಕಾರಿ ಇಲಾಖೆಗಳಿಗೆ ನೋಟೀಸ್ ಜಾರಿಗೊಳಿಸಲು ಹಾಗೂ 07 ದಿನಗಳೊಳಗಾಗಿ ಮರಳುಗಾರಿಕೆ ಕಾರ್ಯ ಪ್ರಾರಂಭಿಸದೇ ಇದ್ದಲ್ಲಿ ಸದರಿ ಮರಳು ಗಣಿ ಗುತ್ತಿಗೆಗಳನ್ನು ರದ್ದುಪಡಿಸಿ ಸದರಿ ಮರಳು ಬ್ಲಾಕ್‌ಗಳನ್ನು ಹೊಸದಾಗಿ ಟೆಂಡರ್ ಕರೆಯಲು ಕ್ರಮಕೈಗೊಳ್ಳುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಲಾಯಿತು. ಮುಂದುವರೆದು ಉಳಿದ 22 ಮರಳು ಬ್ಲಾಕ್‌ಗಳಲ್ಲಿ ಈಗಾಗಲೇ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು, ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ 07 ಮರಳು ಬ್ಲಾಕ್‌ಗಳಿಗೆ ಶೀಘ್ರವಾಗಿ ಪರಿಸರ ವಿಮೋಚನಾ ಪತ್ರವನ್ನು ಪಡೆಯುವ ಸಂಬಂಧ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರಕ್ಕೆ/ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲು ಹಾಗೂ ಕ್ವಾರಿ ಪ್ಲಾನ್ ಸಲ್ಲಿಸದೇ ಇರುವ 15 ಟೆಂಡರ್‌ದಾರರಿಗೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು, ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಲು ನೋಟೀಸ್ ಜಾರಿ ಮಾಡಲು ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಪ್ರಸ್ತುತ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುವ 22 ಮರಳು ಬ್ಲಾಕ್‌ಗಳ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಮೊದಲನೇ ತಾಂತ್ರಿಕ ಬಿಡ್‌ನಲ್ಲಿ ಭಾಗವಹಿಸಿರುವ ಬಿಡ್ಡುದಾರರ ತಾಂತ್ರಿಕ ದಾಖಲಾತಿಗಳನ್ನು ಪರಿಶೀಲಿಸಿ, ಅರ್ಹರಾಗಿರುವ ಬಿಡ್‌ದಾರರನ್ನು ಆರ್ಥಿಕ ಬಿಡ್‌ನಲ್ಲಿ ಪರಿಗಣಿಸಿ, ಅರ್ಹರಾದವರ ಪಟ್ಟಿಯನ್ನು ಅಂತಿಮಗೊಳಿಸಬೇಕಾಗಿರುತ್ತದೆ. ಆದರೆ The Karnataka Stamp (Amendment) Act, 2023 ರ Section 3 ರಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:DPAL 39 SHASANA 2023, BENGALURU, DATED: 03.02.2024 ರಂದು ಸರ್ಕಾರವು ನೀಡಿರುವ ಮಾರ್ಗಸೂಚಿ/ಟೆಂಡರ್ Specification/ Document 3(iii)(a)(b) ರನ್ವಯ in clause (b), in column (3), the words "subject to a maximum of rupees one thousand" Shall be omitted, in clause (e), in sub-clause (ii), in column (3), for the words, " ten paise", the words, "fifty paise" shall be substituted, and for the words :subject to a maximum of rupees twenty thousand but not less than rupees five hundred", the words "but not less than rupees five hundred"shall be substituted ಎಂಬುದಾಗಿ ಉಲ್ಲೇಖಿಸಲಾಗಿರುತ್ತದೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ 22 ಮರಳು ಬ್ಲಾಕ್‌ಗಳ ಟೆಂಡರ್ ಪ್ರಕಿಯೆಯಲ್ಲಿ ಈ ಹಿಂದೆ ನಡೆಸಿರುವ ಟೆಂಡರ್ ಪ್ರಕ್ರಿಯೆಯಂತೆಯೇ ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲು ಕ್ರಮವಹಿಸುವಂತೆ ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿ ಸ್ಟಾಕ್‌ಯಾರ್ಡ್‌ಗೆ ಸಂಬಂಧಿಸಿದಂತೆ ರೂ. 500/- ಕ್ಕಿಂತ ಕಡಿಮೆ ಮೊತ್ತದ ಇ-ಸ್ಟಾಂಪ್ ಒಪ್ಪಂದ ಪತ್ರವನ್ನು ಸಲ್ಲಿಸಿರುವ ಬಿಡ್ಡುದಾರರಿಗೆ, ರೂ. 500/- ಮೊತ್ತದ ಇ-ಸ್ಟಾಂಪ್ ಒಪ್ಪಂದ ಪತ್ರವನ್ನು ಸಲ್ಲಿಸಲು ನೋಟೀಸ್ ಜಾರಿಗೊಳಿಸಿ, ಅವಕಾಶ ನೀಡಲು ಮತ್ತು ಸದರಿ ಬಿಡ್ಡುದಾರರನ್ನು ಆರ್ಥಿಕ ಲೈವ್‌ಬಿಡ್‌ನಲ್ಲಿ ಭಾಗವಹಿಸಲು ಪರಿಗಣಿಸುವಂತೆ ಉಪಸಮಿತಿಯು ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಪ್ರಸ್ತುತ ಟೆಂಡರ್ ಕರೆಯಲಾದ 22 ಮರಳು ಬ್ಲಾಕ್‌ಗಳಲ್ಲಿ 18 ಮರಳು ಬ್ಲಾಕ್‌ಗಳನ್ನು 04 ಬಾರಿ ಟೆಂಡರ್ ಕರೆಯಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/189/2022, ಬೆಂಗಳೂರು, ದಿನಾಂಕ: 14.12.2022 ರ ಕಂಡಿಕೆ 10(d) ರಲ್ಲಿ "If the total number of technically qualified bidders is less than three, the auction process shall be annulled, it shall not be applicable for the auction process after third and subsequent call" ಎಂಬುದಾಗಿ ಉಲ್ಲೇಖಿಸಲಾಗಿದ್ದು, ಅದರಂತೆ ಕನಿಷ್ಠ 03 ಬಾರಿ ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು, ತದನಂತರದ ಹರಾಜು ಪ್ರಕ್ರಿಯೆಯಲ್ಲಿ ನಿಗದಿತ ಬಿಡ್ಡುದಾರರುಗಳಿಗಿಂತ ಕಡಿಮೆ ಬಿಡ್ಡುದಾರರುಗಳು ಭಾಗವಹಿಸಿದಲ್ಲಿ ಸದರಿ ಮರಳು ಬ್ಲಾಕ್‌ಗಳನ್ನು ಮುಂದಿನ ಹಂತದ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಪರಿಗಣಿಸುವ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ಕ್ರಮಕೈಗೊಳ್ಳಬಹುದಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕನಿಷ್ಟ 03 ಬಾರಿ ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಳ್ಳಲಾದ ಮರಳು ಬ್ಲಾಕ್‌ಗಳ ತದನಂತರದ ಟೆಂಡರ್ ಪ್ರಕ್ರಿಯೆಯಲ್ಲಿ 03 ಕ್ಕಿಂತ ಕಡಿಮೆ ಬಿಡ್ಡುದಾರರು ಭಾಗವಹಿಸಿದಲ್ಲಿ ಸದರಿ ಮರಳು ಬ್ಲಾಕ್‌ಗಳನ್ನು ಮುಂದಿನ ಹಂತದ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಪರಿಗಣಿಸಲು ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ-2</u>: ದಿನಾಂಕ: 03.12.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಯಂತೆ ಕೈಗೊಂಡ ಕ್ರಮಗಳನ್ನು ದೃಢೀಕರಿಸುವುದು.**

**ವಿಷಯಸೂಚಿ-2.1**: ಕುಂದಾಪುರ ತಾಲೂಕಿನ ಹಳ್ನಾಡು ಗ್ರಾಮದ ಸರ್ವೆ ನಂ: 101/1ಎ1 ರಲ್ಲಿ 7.00 ಎಕರೆ ಪ್ರದೇಶದಲ್ಲಿ ಗುರುತಿಸಲಾದ ಮರಳು ಬ್ಲಾಕ್ ಸಂಖ್ಯೆ: SB-3 ಗೆ ಸಂಬಂಧಿಸಿದಂತೆ ಮರಳು ಗಣಿ ಗುತ್ತಿಗೆ ಕರಾರು ಮಾಡಿಕೊಳ್ಳುವಂತೆ ತಿಳಿಸಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ರವರಿಗೆ ದಿನಾಂಕ: 12.12.2024 ರಂದು ಪತ್ರ ಬರೆಯಲಾಗಿದ್ದು, ಅದರಂತೆ ಸದರಿಯವರು ದಿನಾಂಕ: 13.12.2024 ರಂದು ಕರಾರು ಮಾಡಿಕೊಂಡು ಮರಳು ಗಣಿ ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ.

ಮುಂದುವರೆದು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹಳ್ನಾಡು ಗ್ರಾಮದ ಸ.ನಂ. 101/1ಎ1 ಮತ್ತು 56 ರ 7.00 ಎಕರೆ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-3 ಗೆ ಸಂಬಂಧಿಸಿದಂತೆ ಕಾರ್ಯನಿರ್ವಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ರವರ ಹೆಸರಿನಲ್ಲಿ ಸ್ವೀಕೃತವಾದ ಪರಿಸರ ವಿಮೋಚನಾ ಪತ್ರವನ್ನು ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ ರವರಿಗೆ ವರ್ಗಾಯಿಸುವ ಬಗ್ಗೆ ಅನುಮತಿ ಹಾಗೂ ಸೂಕ್ತ ಮಾರ್ಗದರ್ಶನ ಕೋರಿ ದಿನಾಂಕ: 16.12.2024 ರಂದು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-Y (VI) ರಂತೆ ಮರಳು ಗುತ್ತಿಗೆ ವರ್ಗಾವಣೆಯನ್ನು ನಿಷೇಧಿಸಲಾಗಿರುತ್ತದೆ. ಒಂದು ಇಲಾಖೆಯ ಹೆಸರಿನಲ್ಲಿ ಸ್ವೀಕೃತವಾದ ಪರಿಸರ ಅನುಮತಿ ಪತ್ರವನ್ನು ಇನ್ನೊಂದು ಸರ್ಕಾರಿ ಇಲಾಖೆಗೆ ವರ್ಗಾಯಿಸಿ ಗಣಿಗಾರಿಕೆ ನಡೆಸಲು ಅವಕಾಶವಿರುವುದಿಲ್ಲ ಹಾಗೂ ಸರ್ಕಾರಿ ಕಾಮಗಾರಿಯ ಉದೇಶಕ್ಕಾಗಿ ಪಡೆದ ಮರಳನ್ನು ಸದರಿ ಸರ್ಕಾರಿ ಕಾಮಗಾರಿಗೆ ಮಾತ್ರ ಬಳಸತಕ್ಕದ್ದು, ಸದರಿ ಮರಳನ್ನು ಸಾರ್ವಜನಿಕ ಕಾಮಗಾರಿಗಳಿಗೆ ನೀಡಲು ಬರುವುದಿಲ್ಲ ಎಂಬುದಾಗಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ದಿನಾಂಕ: 23.12.2024 ರ ಪತ್ರದಲ್ಲಿ ತಿಳಿಸಿರುತ್ತಾರೆ. ಮರಳು ಗಣಿ ಗುತ್ತಿಗೆ ಮಂಜೂರಾತಿಯಾಗಿದ್ದಲ್ಲಿ ನಿಯಮ 31-Y(6) ರಂತೆ ಮರಳು ಗಣಿ ಗುತ್ತಿಗೆಯನ್ನು ವರ್ಗಾವಣೆ ಮಾಡುವಂತಿಲ್ಲ. ಮರಳು ಗಣಿ ಗುತ್ತಿಗೆಯನ್ನು

ರದ್ದುಗೊಳಿಸಿ, ಪರಿಸರ ವಿಮೋಚನಾ ಪತ್ರವನ್ನು ಪಡೆದುಕೊಂಡು ಇಲಾಖೆಗೆ ಮರಳು ಗಣಿ ಗುತ್ತಿಗೆ ಮಂಜೂರಾತಿ ನೀಡಬಹುದಾಗಿದೆ. ಆದರೆ ಪರಿಸರ ವಿಮೋಚನಾ ಪತ್ರ ಪಡೆದು ಮರಳು ಗಣಿ ಗುತ್ತಿಗೆ ಮಂಜೂರಾಗದೇ ಇದ್ದಲ್ಲಿ ಪರಿಸರ ವಿಮೋಚನಾ ಪತ್ರವನ್ನು ಬದಲಾವಣೆ ಮಾಡಿಕೊಂಡು ಮರಳು ಗಣಿ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 2.1, 2.2</u>: ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ದಿನಾಂಕ: 23.12.2024 ರ ಪತ್ರದಲ್ಲಿ ತಿಳಿಸಿರುವಂತೆ ಕ್ರಮವಹಿಸಲು ಹಾಗೂ ದಿನಾಂಕ: 03.12.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ ಮರಳು ಬ್ಲಾಕ್ ಸಂಖ್ಯೆ: SB-3 ರಲ್ಲಿ ಲೋಕೋಪಯೋಗಿ ಇಲಾಖೆಯ ಹೆಸರಿನಲ್ಲಿ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-2.3</u>: ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹೊಸಾಳ ನಾಗರಮಠ ಗ್ರಾಮದ ಸ.ನಂ: 97 & 112 ರಲ್ಲಿ 2.70 ಎಕ್ರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-1 ಗೆ ಸಂಬಂಧಿಸಿದಂತೆ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರ ಹೆಸರಿನಲ್ಲಿ ಸ್ವೀಕೃತವಾದ ಪರಿಸರ ವಿಮೋಚನಾ ಪತ್ರವನ್ನು ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ ರವರಿಗೆ ವರ್ಗಾಯಿಸುವ ಬಗ್ಗೆ ಅನುಮತಿ ಹಾಗೂ ಸೂಕ್ತ ಮಾರ್ಗದರ್ಶನ ಕೋರಿ ದಿನಾಂಕ: 16.12.2024 ರಂದು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 2.3</u>: ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ನೀಡುವ ಮಾರ್ಗದರ್ಶನದನುಸಾರ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆದುಕೊಳ್ಳಲು ದಿನಾಂಕ: 03.12.2024 ರ ಸಭೆಯಲ್ಲಿ ತಿಳಿಸಿರುವಂತೆ ಸಭೆಯಲ್ಲಿ ಚರ್ಚಿಸಿ, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರ ಹೆಸರಿನಲ್ಲಿ ಸ್ವೀಕೃತವಾದ ಪರಿಸರ ವಿಮೋಚನಾ ಪತ್ರವನ್ನು ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ ರವರಿಗೆ ವರ್ಗಾಯಿಸಲು ಮುಂದಿನ ಕ್ರಮವಹಿಸಲು ಸಭೆಯಲ್ಲಿ ಸರ್ವ ಸದಸ್ಯರುಗಳ ಒಮ್ಮತದ ಅಭಿಪ್ರಾಯದಂತೆ ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-2.4</u>: ಕುಂದಾಪುರ ತಾಲ್ಲೂಕಿನ ಮೊಳಹಳ್ಳಿ ಗ್ರಾಮದ ಸ.ನಂ: 253 ರಲ್ಲಿನ ಹಾಲಾಡಿ ಹೊಳೆಯಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: **SB-13** ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ವಯ ಮೊಳಹಳ್ಳಿ ಗ್ರಾಮದ ಸ.ನಂ: 253 ರಲ್ಲಿನ ಮರಳು ದಕ್ಕೆಯಲ್ಲಿಯೇ ಕೆಲಸ ನಿರ್ವಹಿಸಲು ಶ್ರೀ ಜಿ.ಕೆ ಮಹಾಬಲ ನಾಯ್ಕ ರವರಿಗೆ ದಿನಾಂಕ: 13.12.2024 ರಂದು ನೋಟೀಸ್ ಜಾರಿ ಮಾಡಲಾಗಿದ್ದು, ಅದರಂತೆ ಸದರಿಯವರು ಮೊಳಹಳ್ಳಿ ಗ್ರಾಮದ ಸ.ನಂ: 253 ರಲ್ಲಿಯೇ ಮರಳುಗಾರಿಕೆ ಕಾರ್ಯನಿರ್ವಹಿಸುವುದಾಗಿ ದಿನಾಂಕ: 13.12.2024 ರಂದು ಪತ್ರ ಮುಖೇನ ತಿಳಿಸಿರುತ್ತಾರೆ. ಈ ಹಿಂದೆ ಶ್ರೀ ಜಿ.ಕೆ ಮಹಾಬಲ ನಾಯ್ಕ ರವರು ಹಳ್ನಾಡು ಗ್ರಾಮದ ಸ.ನಂ: 64/1ಪಿ3 ರಲ್ಲಿ ಅನುಮತಿ ಇಲ್ಲದೇ ದಾಸ್ತಾನಿರಿಸಿದ್ದ ಅಂದಾಜು 14,000 ಮೆ.ಟನ್ ಮರಳನ್ನು ಇಲಾಖಾ ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ.

ಕುಂದಾಪುರ ತಾಲ್ಲೂಕಿನ ಮೊಳಹಳ್ಳಿ ಗ್ರಾಮದ ಸ.ನಂ: 249 ಹಾಗೂ ಶಂಕರನಾರಾಯಣ ಗ್ರಾಮದ ಸ.ನಂ: 295 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: **SB-12** ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಸಲ್ಲಿಸಿರುವ

ದಾಖಲೆಗಳನ್ವಯ ಮೊಳಹಳ್ಳಿ ಗ್ರಾಮದ ಸ.ನಂ: 38/6 & 40/53 ರಲ್ಲಿನ ಮರಳು ದಕ್ಕೆಯಲ್ಲಿಯೇ ಕೆಲಸ ನಿರ್ವಹಿಸಲು ಶ್ರೀ **ನರಸಿಂಹ ಪೂಜಾರಿ** ರವರಿಗೆ ರಂದು ನೋಟೀಸ್ ಜಾರಿ ಮಾಡಲಾಗಿದ್ದು, ಅದರಂತೆ ಸದರಿಯವರು ಮೊಳಹಳ್ಳಿ ಗ್ರಾಮದ ಸ.ನಂ: 38/6 & 40/53 ರಲ್ಲಿಯೇ ಮರಳುಗಾರಿಕೆ ಕಾರ್ಯನಿರ್ವಹಿಸುವುದಾಗಿ ದಿನಾಂಕ: 15.01.2025 ರಂದು ಪತ್ರ ಮುಖೇನ ತಿಳಿಸಿರುತ್ತಾರೆ. ಈ ಹಿಂದೆ ಶ್ರೀ ನರಸಿಂಹ ಪೂಜಾರಿ ರವರು ಹಳ್ನಾಡು ಗ್ರಾಮದ ಸ.ನಂ: 92/6 ರಲ್ಲಿ ಅನುಮತಿ ಇಲ್ಲದೇ ದಾಸ್ತಾನಿರಿಸಿದ್ದ ಅಂದಾಜು 5,000 ಮೆ.ಟನ್ ಮರಳನ್ನು ಇಲಾಖಾ ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-ಆರ್ (6) ರಲ್ಲಿ "Disposal of seized sand.-If sand found stored illegally, it shall be seized and confiscated by any member of the District or Taluk sand committee through mahajar and be handed over to the Public Works Department or any other department, as decided by the District sand committee, who in turn dispose the same to the Central or the State Government works or to low income housing scheme or MGNAREGA work, at the rate as fixed by the District sand committee with Computerized Mineral Dispatch Permit issued by the Department of Mines and Geology of the concerned district.

Provided that, if the seized sand is not required for any Government works, action shall be taken by the District Sand Committee to dispose such sand to the general public" ಎಂದು ಉಲ್ಲೇಖಿಸಲಾಗಿರುತ್ತದೆ.

ಅದರಂತೆ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರ ಪತ್ರ ಸಂಖ್ಯೆ: ಕಾಅ/ಕೆಆರ್ಐಡಿಎಲ್/ಉ/ಮರಳು/2024-25/838(ಎ), ದಿನಾಂಕ: 16.01.2025 ರ ಪತ್ರದಲ್ಲಿ 20,000 ಮೆ.ಟನ್ ಮರಳಿನ ಬೇಡಿಕೆ ಇರುವುದಾಗಿ ಹಾಗೂ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ರವರ ಪತ್ರ ಸಂಖ್ಯೆ: ಕಾಇಂ:ಲೋ.ಇ.ಉವಿ:ಕುಂದಾಪುರ ಹಳ್ನಾಡ್-ಮರಳು ಸ್ಟಾಕ್ ಯಾರ್ಡ್: 2024-25:ಇಎ-2/5706-07, ದಿನಾಂಕ: 10.01.2025 ರಲ್ಲಿ 1200 ಘನ ಮೀಟರ್ (2,064 ಮೆ.ಟನ್) ಮರಳಿನ ಬೇಡಿಕೆ ಇರುವುದಾಗಿ ಮನವಿ ಸಲ್ಲಿಸಿರುತ್ತಾರೆ. ಈ ಕುರಿತು ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ-2.4</u>: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬ್ಲಾಕ್ ಸಂಖ್ಯೆ: SB-12 & SB-13 ರ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ವಶಪಡಿಸಿಕೊಂಡ ಮರಳನ್ನು ಕೆ.ಆರ್.ಐ.ಡಿ.ಎಲ್ ಇಲಾಖೆಗೆ 20,000 ಮೆ.ಟನ್ ಮರಳು ಹಾಗೂ ಲೋಕೋಪಯೋಗಿ ಇಲಾಖೆಗೆ 2,064 ಮೆ.ಟನ್ ಮರಳನ್ನು ಖನಿಜ ಸಾಗಾಟ ಪರವಾನಿಗೆ ಮುಖಾಂತರ ನಿಯಮಾನುಸಾರ ವಿಲೇವಾರಿಗೆ ಕ್ರಮವಹಿಸಲು ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-2.5</u>: ದಿನಾಂಕ: 30.12.2024 ರಂದು ಜರುಗಿದ ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ 2021, 2023 ರ ನಿಯಮ 31R (II) ರನ್ವಯ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿರುವ ಪ್ರದೇಶಗಳಲ್ಲಿ ಅನಧಿಕೃತ ಮರಳು ಸಾಗಾಣಿಕೆ/ ಗಣಿಗಾರಿಕೆಯನ್ನು ನಿಯಂತ್ರಿಸುವ ಸಲುವಾಗಿ 03 ಮೆ.ಟನ್‌ಗಿಂತ ಕಡಿಮೆ ಸಾಮರ್ಥ್ಯದ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಿಕೊಂಡು One State One GPS ತಂತ್ರಾಂಶದಲ್ಲಿ

ನೋಂದಣಿಯಾಗಿರುವ ವಾಹನಗಳಿಗಷ್ಟೇ ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮರಳು ನಿಕ್ಷೇಪಗಳಿಂದ ಪರವಾನಿಗೆ ವಿತರಿಸಲು ILMS ತಂತ್ರಾಂಶದಲ್ಲಿ ಅನುವು ಮಾಡಿಕೊಡುವಂತೆ ಹಾಗೂ ತಂತ್ರಾಂಶಗಳಲ್ಲಿ Integrate /ಬದಲಾವಣೆ ಮಾಡಿಕೊಡಬೇಕಾಗಿ ದಿನಾಂಕ: 07.01.2025 ರ ಪತ್ರದಲ್ಲಿ ಕೋರಲಾಗಿರುತ್ತದೆ.

ನಿರ್ಣಯ-2.5: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, 03 ಮೆ.ಟನ್‌ಗಿಂತ ಕಡಿಮೆ ಸಾಮರ್ಥ್ಯದ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಿಕೊಂಡು One State One GPS ತಂತ್ರಾಂಶದಲ್ಲಿ ನೋಂದಣಿಯಾಗಿರುವ ವಾಹನಗಳಿಗಷ್ಟೇ ಗ್ರಾಮ ಪಂಚಾಯತ್ ವ್ಯಾಪ್ತಿಯ ಮರಳು ನಿಕ್ಷೇಪಗಳಿಂದ ILMS ತಂತ್ರಾಂಶದಲ್ಲಿ ಪರವಾನಿಗೆ ವಿತರಿಸುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡುವಂತೆ ಹಾಗೂ ಸದರಿ ಮರಳು ನಿಕ್ಷೇಪಗಳಿಗೆ ಗಡಿಬಾಂದುಗಳನ್ನು ನಿರ್ಮಿಸಿ ಜಿಯೋ ಫೆನ್ಸಿಂಗ್ ಮಾಡಿ ನಿಯಮ ಉಲ್ಲಂಘನೆಯಾಗದಂತೆ ಮರಳು ತೆರವುಗೊಳಿಸಲು ಹಾಗೂ ಮರಳು ಸಾಗಾಣಿಕೆ ಕಾರ್ಯ ನಿರ್ವಹಿಸಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ-2.6: ಪರಿಸರ ವಿಮೋಚನಾ ಪತ್ರದಲ್ಲಿ ವಾರ್ಷಿಕ ನಿಗಧಿಪಡಿಸಿರುವ ಮರಳಿನ ಪ್ರಮಾಣಕ್ಕನುಗುಣವಾಗಿ Sand App ಮುಂಖಾಂತರ ವಿಲೇವಾರಿ ಮಾಡುವ ಮರಳಿನ ಪ್ರಮಾಣದಲ್ಲಿ ಶೇ. 20 ರಷ್ಟು ಪ್ರಮಾಣದ ಮರಳನ್ನು ಮರಳು ಗುತ್ತಿಗೆದಾರರ ವಾಹನಗಳಿಗೆ ಹಾಗೂ ಶೇ. 80 ರಷ್ಟು ಮರಳಿನ ಪ್ರಮಾಣವನ್ನು ಇತರೆ ಖಾಸಗಿ ವಾಹನಗಳಿಗೆ ಪೂರೈಸುವಂತೆ ಸೂಚಿಸಿ ಸಂಬಂಧಪಟ್ಟ ಮರಳು ಗಣಿ ಗುತ್ತಿಗೆದಾರರಿಗೆ ದಿನಾಂಕ: 20.12.2024 ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ನಿರ್ಣಯ-2.6: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮುಂದಿನ ದಿನಗಳಲ್ಲಿಯೂ Sand App ಮುಂಖಾಂತರ ವಿಲೇವಾರಿ ಮಾಡುವ ಮರಳಿನ ಪ್ರಮಾಣದಲ್ಲಿ ಶೇ. 20 ರಷ್ಟು ಪ್ರಮಾಣದ ಮರಳನ್ನು ಮರಳು ಗುತ್ತಿಗೆದಾರರ ವಾಹನಗಳಿಗೆ ಹಾಗೂ ಶೇ. 80 ರಷ್ಟು ಮರಳಿನ ಪ್ರಮಾಣವನ್ನು ಇತರೆ ಖಾಸಗಿ ವಾಹನಗಳಿಗೆ ಪೂರೈಸಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯಸೂಚಿ-2.7: ಪರಿಸರ ವಿಮೋಚನಾ ಪತ್ರದಲ್ಲಿ ವಾರ್ಷಿಕ ನಿಗಧಿಪಡಿಸಿರುವ ಮರಳಿನ ಪ್ರಮಾಣಕ್ಕನುಗುಣವಾಗಿ Sand App ಮುಂಖಾಂತರ ವಿಲೇವಾರಿ ಮಾಡುವ ಮರಳಿನ ಪ್ರಮಾಣದಲ್ಲಿ ಶೇ. 75 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಾಗಿ ಹಾಗೂ ಶೇ. 25 ರಷ್ಟು ಮರಳಿನ ಪ್ರಮಾಣವನ್ನು ಸಾರ್ವಜನಿಕರಿಗೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಪೂರೈಸುವಂತೆ ತಿಳಿಸಿ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ದಿನಾಂಕ: 20.12.2024 ರಂದು ಪತ್ರ ಬರೆಯಲಾಗಿರುತ್ತದೆ.

ನಿರ್ಣಯ-2.7: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮುಂದಿನ ದಿನಗಳಲ್ಲಿಯೂ Sand App ಮುಂಖಾಂತರ ವಿಲೇವಾರಿ ಮಾಡುವ ಮರಳಿನ ಪ್ರಮಾಣದಲ್ಲಿ ಶೇ. 75 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಾಗಿ ಹಾಗೂ ಶೇ. 25 ರಷ್ಟು ಮರಳಿನ ಪ್ರಮಾಣವನ್ನು ಸಾರ್ವಜನಿಕರಿಗೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಪೂರೈಸುವಂತೆ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯಸೂಚಿ-2.8: ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸದಾಗಿ ಗುರುತಿಸಿರುವ 19 ಮರಳು ನಿಕ್ಷೇಪಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಸಲುವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ದಿನಾಂಕ: 30.12.2024 ರಂದು ಆಶಯ ಪತ್ರವನ್ನು ನೀಡಲಾಗಿರುತ್ತದೆ. ದಿನಾಂಕ: 16.01.2025 ರಂದು ಕೇಂದ್ರ ಕಛೇರಿಯಿಂದ ILMS ತಂತ್ರಾಂಶದಲ್ಲಿ ನೋಂದಾವಣೆ ಮಾಡಲಾಗಿರುತ್ತದೆ.

ನಿರ್ಣಯ-2.8: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, 03 ಮೆ.ಟನ್‌ಗಿಂತ ಕಡಿಮೆ ಸಾಮರ್ಥ್ಯದ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಿಕೊಂಡು One State One GPS ತಂತ್ರಾಂಶದಲ್ಲಿ ನೋಂದಣಿಯಾಗಿರುವ ವಾಹನಗಳಿಗಷ್ಟೇ ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಯ 19 ಮರಳು ತೆರವುಗೊಳಿಸುವ ಪ್ರದೇಶಗಳಿಗೆ ILMS ತಂತ್ರಾಂಶದಲ್ಲಿ ಪರವಾನಿಗೆ ವಿತರಿಸಲು ಹಾಗೂ ಸದರಿ 19 ಮರಳು ತೆರವುಗೊಳಿಸುವ ಪ್ರದೇಶಗಳಿಗೆ ಗಡಿಬಾಂದುಗಳನ್ನು ನಿರ್ಮಿಸಿ ಜಿಯೋ ಫೆನ್ಸಿಂಗ್ ಮಾಡಿ ನಿಯಮ ಉಲ್ಲಂಘನೆಯಾಗದಂತೆ ಮರಳು ತೆರವುಗೊಳಿಸಲು ಹಾಗೂ ಮರಳು ಸಾಗಾಣಿಕೆ ಕಾರ್ಯ ನಿರ್ವಹಿಸಲು ಕ್ರಮವಹಿಸುವಂತೆ ಮತ್ತು ಸದರಿ ವಾಹನಗಳ ಮೇಲೆ ಜಿ.ಪಿ.ಎಸ್ ನಿಗಾವಹಿಸಲು ಹಾಗೂ ಜಿ.ಪಿ.ಎಸ್ ಷರತ್ತು ಉಲ್ಲಂಘನೆಯಾದಲ್ಲಿ ನಿಯಮಾನುಸಾರ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯಸೂಚಿ-2.9: ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕು ಕಾರ್ಕಡ ಗ್ರಾಮದ ಸ.ನಂ: 181 ರ ಸೀತಾ ನದಿ ಪಾತ್ರದ ಮರಳು ಬ್ಲಾಕ್ ಸಂಖ್ಯೆ: SB-6 ರಲ್ಲಿ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆ ಸಂಖ್ಯೆ: UDPNS452 ರಲ್ಲಿ NITK ತಾಂತ್ರಿಕ ತಜ್ಞರು, ಸುರತ್ಕಲ್‌ರವರು ನೀಡಿರುವ ವರದಿಯಲ್ಲಿನ ಅಂಶಗಳನ್ವಯ, ದಿನಾಂಕ: 20.11.2024 ರ ಪತ್ರದಲ್ಲಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ನೀಡಿರುವ ಷರತ್ತುಗಳನ್ವಯ ಹಾಗೂ ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8316/2024 ಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶಗಳನುಸಾರ ಸದರಿ ಷರತ್ತುಗಳನ್ನು ಪಾಲಿಸಲು ಹಾಗೂ ಯಾವುದೇ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ ನಡೆಯದಂತೆ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ಕಾರ್ಯವನ್ನು ಪ್ರಾರಂಭಿಸಲು ತಿಳಿಸಿ ದಿನಾಂಕ: ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರಿಗೆ ದಿನಾಂಕ: 18.12.2024 ರಂದು ಪತ್ರ ಬರೆಯಲಾಗಿರುತ್ತದೆ.

ನಿರ್ಣಯ-2.9: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಜಿಲ್ಲಾ ವ್ಯಾಪ್ತಿಯಲ್ಲಿ ಮರಳಿಗೆ ಸಾಕಷ್ಟು ಬೇಡಿಕೆ ಇರುವುದರಿಂದ ಮರಳು ಗಣಿ ಗುತ್ತಿಗೆ ಸಂಖ್ಯೆ: UDPNS452 ರಲ್ಲಿ ಯಾವುದೇ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆ ನಡೆಯದಂತೆ ಮರಳು ಗಣಿಗಾರಿಕೆ ಕಾರ್ಯವನ್ನು 07 ದಿನಗಳಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಉಡುಪಿ ರವರಿಗೆ ತಿಳಿಸಲಾಯಿತು ಹಾಗೂ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ 07 ದಿನಗಳೊಳಗಾಗಿ ಮರಳು ಗಣಿಗಾರಿಕೆ ಕಾರ್ಯ ಪ್ರಾರಂಭಿಸದೇ ಇದ್ದಲ್ಲಿ ಸದರಿ ಮರಳು ಗಣಿ ಗುತ್ತಿಗೆಯನ್ನು ರದ್ದುಪಡಿಸಿ ಸದರಿ ಮರಳು ಬ್ಲಾಕ್‌ನ್ನು ಟೆಂಡರ್ ಕಂ ಹರಾಜು ಪ್ರಕ್ರಿಯೆಗೆ ಪರಿಗಣಿಸಲು ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ-3: ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ಸಲ್ಲಿಸಿರುವ ಅಂದಾಜು ಪಟ್ಟಿಯ ಕುರಿತು.**

ಉಡುಪಿ ಜಿಲ್ಲೆಯ ಬೈಂದೂರು ಮತ್ತು ಕುಂದಾಪುರ ತಾಲ್ಲೂಕಿನ ಕಟ್‌ಬೆಲ್ತೂರು ಗ್ರಾಮದ ಸ.ನಂ: 120 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-48 ರಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ರೂ. 1,93,87,556/- ಮೊತ್ತದ ಅಂದಾಜು ಪಟ್ಟಿಯನ್ನು, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಳಹಳ್ಳಿ ಗ್ರಾಮದ ಸ.ನಂ: 249 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-49 ರಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ರೂ. 1,92,72,170/- ಮೊತ್ತದ ಅಂದಾಜು ಪಟ್ಟಿಯನ್ನು ಹಾಗೂ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದ ಸ.ನಂ: 101/1ಎ1 ರಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-3 (PWD) ರಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ರೂ. 1,86,88,467/- ಮೊತ್ತದ ಅಂದಾಜು ಪಟ್ಟಿಯನ್ನು ಕಾರ್ಯಪಾಲಕ

ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರು ಸಲ್ಲಿಸಿರುತ್ತಾರೆ. ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ ಎಂಎಂಎನ್/115/2024, ಬೆಂಗಳೂರು ದಿನಾಂಕ: 03.12.2024 ರಂತೆ ನಾನ್ ಸಿ.ಆರ್.ಝಡ್ ವ್ಯಾಪ್ತಿಯ ನಾಲ್ಕನೇ, ಐದನೇ ಮತ್ತು ಆರನೇ ಶ್ರೇಣಿಯ (IV, V & VI Order Streams) ಹೊಳೆ/ನದಿಗಳ ವ್ಯಾಪ್ತಿಯಲ್ಲಿ ತೆರವುಗೊಳಿಸುವ ಮರಳಿನ ಬೆಲೆಯನ್ನು ಸಾರ್ವಜನಿಕರಿಗೆ/ ಖಾಸಗಿ ಟೆಂಡರ್ ಬ್ಲಾಕ್‌ಗಳಿಗೆ/ ಸರ್ಕಾರಿ ಇಲಾಖೆಗಳಿಗೆ/ ನಿಗಮಗಳಿಗೆ ಪ್ರತೀ ಮೆ.ಟನ್‌ಗೆ ರೂ. 850/- ನ್ನು ನಿಗಧಿಪಡಿಸಲು ತಿಳಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ ಕೆ.ಆರ್.ಐ.ಡಿ.ಎಲ್ ರವರು ಸಲ್ಲಿಸಿರುವ ಪ್ರತಿ ಮೆ.ಟನ್ ಮರಳನ್ನು ತೆರವುಗೊಳಿಸಲು ತಗಲುವ ವೆಚ್ಚದ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| Sl No. | Description | Rate/MT (in Rs.) |
|---|---|---|
| 1 | Royalty Charges | 80.00 |
| 2 | DMF (10%) | 8.00 |
| 3 | AP (40%) | 32.00 |
| 4 | SSPP (per Sheet) | 10.00 |
| 5 | TCS (2%) | 1.60 |
| 6 | Sand Extraction Charges | 463.00 |
| 7 | KRIDL Agency (3%) | 13.89 |
| 8 | GST Charges (18%) | 86.70 |
| 9 | Labour Charges (1%) | 4.77 |
| | **TOTAL** | **700.00** |

ನಿರ್ಣಯ-2.9: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ ಎಂಎಂಎನ್/115/2024, ಬೆಂಗಳೂರು ದಿನಾಂಕ: 03.12.2024 ರಲ್ಲಿ ಸರ್ಕಾರಿ ಕಾಮಗಾರಿ/ ಸಾರ್ವಜನಿಕರಿಗೆ ಪೂರೈಸುವ ಮರಳು ಬ್ಲಾಕ್‌ಗಳಲ್ಲಿ ಪ್ರತಿ ಮೆ.ಟನ್‌ಗೆ ಮರಳಿನ ಮಾರಾಟ ದರ ರೂ. 850/- ಎಂಬುದಾಗಿ ನಿಗಧಿಪಡಿಸಲಾಗಿರುವುದರಿಂದ ಮೇಲ್ಕಂಡ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸಾಮಾನ್ಯ ಮರಳಿನ ಜಿ.ಎಸ್.ಟಿ ದರವು Sand Extraction Charges ನ 5% ಆಗಿದ್ದು, ದಿನಾಂಕ: 16.01.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಅನುಮೋದಿಸಲಾದ Sand Extraction Charges ರೂ. 463 ರ ಶೇ. 5 ರಷ್ಟು ಮೊತ್ತ ರೂ. 23.15/- ನ್ನು ಜಿ.ಎಸ್.ಟಿ ದರವನ್ನಾಗಿ ಪರಿಗಣಿಸಿ, ಮರಳು ಬ್ಲಾಕ್ ಸಂಖ್ಯೆ: SB-48, SB-49 & SB-3 ರಲ್ಲಿ ತೆಗೆಯುವ ಪ್ರತಿ ಮೆ.ಟನ್ ಮರಳಿಗೆ ರಾಜಧನ, Extraction Charges ಹಾಗೂ ಇತರೆ ಶುಲ್ಕಗಳು ಸೇರಿ ಒಟ್ಟು ಮೊತ್ತ **ರೂ. 636.41/-** ನಿಗಧಿಪಡಿಸಿ, ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ-4: ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (NON CRZ) ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳಲ್ಲಿ ತೆಗೆಯುವ ಮರಳಿಗೆ ಪರಿಷ್ಕೃತ ಮಾರಾಟ ದರವನ್ನು ನಿಗಧಿಪಡಿಸುವ ಬಗ್ಗೆ.**

ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ ಎಂಎಂಎನ್/115/2024, ಬೆಂಗಳೂರು ದಿನಾಂಕ: 03.12.2024 ರಂತೆ ನಾನ್ ಸಿ.ಆರ್.ಝಡ್ ವ್ಯಾಪ್ತಿಯ ನಾಲ್ಕನೇ, ಐದನೇ ಮತ್ತು ಆರನೇ ಶ್ರೇಣಿಯ (IV, V & VI Order Streams) ಹೊಳೆ/ನದಿಗಳ ವ್ಯಾಪ್ತಿಯಲ್ಲಿ ತೆರವುಗೊಳಿಸುವ ಮರಳಿನ ಬೆಲೆಯನ್ನು ಸಾರ್ವಜನಿಕರಿಗೆ/ ಖಾಸಗಿ ಟೆಂಡರ್ ಬ್ಲಾಕ್‌ಗಳಿಗೆ/ ಸರ್ಕಾರಿ ಇಲಾಖೆಗಳಿಗೆ/ ನಿಗಮಗಳಿಗೆ ಪ್ರತಿ ಮೆ.ಟನ್‌ಗೆ ರೂ. 850/- ನ್ನು ನಿಗಧಿಪಡಿಸಲು ತಿಳಿಸಲಾಗಿದ್ದು, ಈ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿಯ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-4: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ ಎಂಎಂಎನ್/115/ 2024, ಬೆಂಗಳೂರು ದಿನಾಂಕ: 03.12.2024 ರಂತೆ ನಾನ್ ಸಿ.ಆರ್.ಝಡ್ ವ್ಯಾಪ್ತಿಯ ನಾಲ್ಕನೇ, ಐದನೇ ಮತ್ತು ಆರನೇ ಶ್ರೇಣಿಯ (IV, V & VI Order Streams) ಹೊಳೆ/ನದಿಗಳ ವ್ಯಾಪ್ತಿಯಲ್ಲಿ ತೆರವುಗೊಳಿಸುವ ಮರಳಿನ ಬೆಲೆಯನ್ನು ಸಾರ್ವಜನಿಕರಿಗೆ/ ಖಾಸಗಿ ಟೆಂಡರ್ ಬ್ಲಾಕ್‌ಗಳಿಗೆ/ ಸರ್ಕಾರಿ ಇಲಾಖೆಗಳಿಗೆ/ ನಿಗಮಗಳಿಗೆ ಪ್ರತಿ ಮೆ.ಟನ್‌ಗೆ ರೂ. 850/- ನ್ನು ನಿಗಧಿಪಡಿಸಲು ಸರ್ವ ಸದಸ್ಯರುಗಳ ಒಮ್ಮತದ ಅಭಿಪ್ರಾಯದಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-5: ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಟ್‌ಬೆಳ್ತೂರು ಗ್ರಾಮದ ಹೊಸ್ಕಲಿ ಸಮೀಪದಲ್ಲಿ ಹರಿಯುವ ರಾಜಾಡಿ ಹೊಳೆಯ ಅಭಿವೃದ್ಧಿ ಹಾಗೂ ನದಿದಂಡೆ ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಲು ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ ರವರು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

ಉಡುಪಿ ಜಿಲ್ಲೆಯ ಕುಂದಾಮರ ತಾಲ್ಲೂಕಿನ ಕಟ್‌ಬೆಳ್ತೂರು ಗ್ರಾಮದ ಹೊಸ್ಕಲಿ ಸಮೀಪದಲ್ಲಿ ಹರಿಯುವ ರಾಜಾಡಿ ಹೊಳೆಯಲ್ಲಿ ತುಂಬಿರುವ ಶೇ. 75 ರಷ್ಟು ಅನುಪಯುಕ್ತ ಜಿಡ್ಡುಗಟ್ಟಿದ ಕೆಸರನ್ನು ತೆಗೆಯುವ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ನಿರ್ವಹಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರು ಅನುಮೋದನೆ ನೀಡಿದ್ದು, ಈ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡಬೇಕಾಗಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ನಂ-2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ರವರು ದಿನಾಂಕ: 10.12.2024 ರ ಪತ್ರದಲ್ಲಿ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-5: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕುಂದಾಪುರ ತಾಲ್ಲೂಕಿನ ಕಟ್‌ಬೆಳ್ತೂರು ಗ್ರಾಮದ ಹೊಸ್ಕಲಿ ಸಮೀಪದಲ್ಲಿ ಹರಿಯುವ ರಾಜಾಡಿ ಹೊಳೆಯಲ್ಲಿ ಅನುಪಯುಕ್ತ ಜಿಡ್ಡುಗಟ್ಟಿದ ಕೆಸರು ತುಂಬಿರುವುದರಿಂದ ಮಳೆಗಾಲದಲ್ಲಿ ಸುತ್ತಮುತ್ತಲಿನ ಕೃಷಿ ಭೂಮಿಗಳಿಗೆ ಹಾನಿಯುಂಟಾಗುವುದರಿಂದಾಗಿ ಸದರಿ ಹೊಳೆಯಲ್ಲಿನ ಹೂಳನ್ನು ತೆಗೆಯುವ ಕಾಮಗಾರಿಯನ್ನು ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ನಂ-2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ರವರು ನಿರ್ವಹಿಸಲು ಹಾಗೂ ಸದರಿ ಪ್ರದೇಶದಲ್ಲಿ ಸಾಮಾನ್ಯ ಮರಳು ಉಪಖನಿಜವು ದೊರೆತಲ್ಲಿ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆದುಕೊಂಡು, ದಾಸ್ತಾನು ಕೇಂದ್ರವನ್ನು ನಿರ್ಮಿಸಿ ಸಿ.ಸಿ ಟಿ.ವಿ, ವೇ-ಬ್ರಿಡ್ಜ್, ಕಂಪ್ಯೂಟರ್ ರೂಮ್/ ಆಫೀಸ್ ರೂಮ್ ಸ್ಥಾಪಿಸಿ, ಮರಳು ಗಣಿ ಗುತ್ತಿಗೆಯನ್ನು ಮಂಜೂರು ಮಾಡಿಕೊಂಡು ಸ್ಯಾಂಡ್ ಆಪ್ ಮುಖಾಂತರ ಸರ್ಕಾರಿ ಕಾಮಗಾರಿ/ ಸಾರ್ವಜನಿಕರಿಗೆ ಮರಳನ್ನು ವಿಲೇವಾರಿ ಮಾಡಲು ಕ್ರಮವಹಿಸುವಂತೆ ಸರ್ವ ಸದಸ್ಯರುಗಳ ಒಮ್ಮತದ ಅಭಿಪ್ರಾಯದಂತೆ ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ-6: ಉಡುಪಿ ಜಿಲ್ಲೆ ಬೈಂದೂರು ಮತ್ತು ಕುಂದಾಪುರ ತಾಲೂಕಿನ ಹಡವು ಮತ್ತು ತ್ರಾಸಿ ಗ್ರಾಮಗಳ ವ್ಯಾಪ್ತಿಯ ಸೌಪರ್ಣಿಕಾ ನದಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-47 ರ ಕುರಿತು ಚರ್ಚೆ.**

ಉಡುಪಿ ಜಿಲ್ಲೆಯ ಬೈಂದೂರು & ಕುಂದಾಪುರ ತಾಲೂಕಿನ ಹಡವು & ತ್ರಾಸಿ ಗ್ರಾಮಗಳ ವ್ಯಾಪ್ತಿಯ ಸೌಪರ್ಣಿಕ ನದಿಯ ಸ.ನಂ. 108 & 192 ರಲ್ಲಿನ 12.00 ಎಕರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-47 ರಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕಾರ್ಯಪಾಲಕ ಇಂಜಿನಿಯರ್, ಬಂದರು

ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ರವರಿಗೆ 5 ವರ್ಷಗಳ ಅವಧಿಗೆ ಅಥವಾ ಮರಳಿನ ಪ್ರಮಾಣ ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಆ ಅವಧಿಯವರೆಗೆ ಷರತ್ತಿಗೊಳಪಟ್ಟು ದಿನಾಂಕ: 14.02.2024 ರಂದು ಆಶಯ ಪತ್ರ ನೀಡಲಾಗಿರುತ್ತದೆ ಹಾಗೂ ದಿನಾಂಕ: 25.11.2024 ರಂದು ಮರಳು ಗಣಿ ಗುತ್ತಿಗೆ ಸಂಖ್ಯೆ: UDPNS455 ನ್ನು ಮಂಜೂರು ಮಾಡಲಾಗಿರುತ್ತದೆ. ಆದರೆ ಉಡುಪಿ ಜಿಲ್ಲೆ ಬೈಂದೂರು ತಾಲೂಕಿನ ಮರವಂತೆ ಹೊರಬಂದರು ನಿರ್ಮಾಣ ಕಾಮಗಾರಿ (2 ನೇ ಹಂತ) ಹಾಗೂ Development of Coastal Berth at Gangolli in Udupi District ಕಾಮಗಾರಿಗಳಿಗೆ ಸದರಿ ಸೌಪರ್ಣಿಕ ನದಿಯ 12.00 ಎಕರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ನ್ನು ಸಮನಾಗಿ ವಿಂಗಡಿಸಿ ನೀಡಬೇಕಾಗಿ ದಿನಾಂಕ: 07.03.2024 ರ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ರವರು ಕೋರಿರುತ್ತಾರೆ. ಸದರಿ ಮರಳು ಬ್ಲಾಕ್‌ನಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಸದರಿಯವರಿಗೆ ಈಗಾಗಲೇ ಮರಳು ಗುತ್ತಿಗೆ ಮಂಜೂರು ಮಾಡಲಾಗಿರುವುದರಿಂದ ಸದರಿಯವರೇ ಕಾಮಗಾರಿಗಳಿಗೆ ಅನುಗುಣವಾಗಿ ವಿಂಗಡಿಸಿಕೊಳ್ಳಲು ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-6: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬೈಂದೂರು & ಕುಂದಾಪುರ ತಾಲೂಕಿನ ಹಡವು & ತ್ರಾಸಿ ಗ್ರಾಮಗಳ ವ್ಯಾಪ್ತಿಯ ಸೌಪರ್ಣಿಕ ನದಿಯ ಸ.ನಂ. 108 & 192 ರಲ್ಲಿನ 12.00 ಎಕರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-47 ರಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕಾರ್ಯಪಾಲಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ರವರಿಗೆ ಈಗಾಗಲೇ ಮರಳು ಗಣಿ ಗುತ್ತಿಗೆ ಸಂಖ್ಯೆ: UDPNS455 ನ್ನು ಮಂಜೂರು ಮಾಡಲಾಗಿರುವುದರಿಂದ ಸದರಿ ಮರಳು ಬ್ಲಾಕ್‌ನಲ್ಲಿ ತೆಗೆಯುವ ಮರಳನ್ನು ಸರ್ಕಾರಿ ಕಾಮಗಾರಿಗಳಿದ್ದಲ್ಲಿ ಎರಡು ಮನವಿಗಳಿಗೆ ಮರಳನ್ನು ಒದಗಿಸಲು ಕಾರ್ಯಪಾಲಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ರವರ ಹಂತದಲ್ಲಿಯೇ ನಿರ್ಣಯ ಕೈಗೊಂಡು, ಕೈಗೊಂಡ ನಿರ್ಣಯವನ್ನು ಪತ್ರ ಮುಖೇನ ತಿಳಿಸಲು ಹಾಗೂ ಸದರಿ ಮರಳು ಬ್ಲಾಕ್‌ನಲ್ಲಿ 07 ದಿನಗಳೊಳಗಾಗಿ ಮರಳುಗಾರಿಕೆ ಕಾರ್ಯವನ್ನು ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-7: ಉಡುಪಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಮರಳನ್ನು ವಿಲೇವಾರಿ ಮಾಡುವ ಕುರಿತು.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಪ್ರದೇಶದಿಂದ MM(R&D) 1957, KMMCR 1994 ರಡಿಯಲ್ಲಿ ಖಾಸಗಿ ದೂರು/ FIR ದಾಖಲಿಸಿರುವ 133 ಪ್ರಕರಣಗಳಲ್ಲಿ ವಶಪಡಿಸಿಕೊಂಡ ಒಟ್ಟು 207.5 ಯುನಿಟ್ (622.5 ಮೆ.ಟನ್) ನಷ್ಟು ಮರಳು ವಿವಿಧ 21 ಪೊಲೀಸ್ ಠಾಣೆಯಲ್ಲಿ ವಶದಲ್ಲಿದ್ದು, ಸದರಿ ಮರಳಿನ ವಿಲೇವಾರಿಗೆ ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಮಾನ್ಯ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ, ಉಡುಪಿ ರವರು ಸಭೆಗೆ ತಿಳಿಸಿದರು.

ಈ ಕುರಿತು ಹಿರಿಯ ಭೂವಿಜ್ಞಾನಿಯವರು ಮಾತನಾಡುತ್ತಾ, KMMCR, 1994 ನಿಯಮ 31R(6) ರಲ್ಲಿ "if the seized sand is not required for any Government works, action shall be taken by the District Sand Committee to dispose such sand to the general

public" ಎಂಬುದಾಗಿ ಉಲ್ಲೇಖಿಸಲಾಗಿದ್ದು, ಅದರಂತೆ ಟೆಂಡರ್ ಕಂ ಹರಾಜು/ ಸಾರ್ವಜನಿಕರಿಗೆ ಒದಗಿಸಲು ಅವಕಾಶವಿರುವುದರಿಂದಾಗಿ ಸಾರ್ವಜನಿಕರಿಗೆ ನೀಡಬಹುದಾಗಿರುತ್ತದೆ ಎಂಬುದಾಗಿ ಸಭೆಗೆ ತಿಳಿಸಿದರು.

<u>ನಿರ್ಣಯ-6</u>: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ ದಾಸ್ತಾನು ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಿವಿಧ ಪೋಲೀಸ್ ಠಾಣಾ ವಶದಲ್ಲಿರುವ ಮರಳನ್ನು KMMCR, 1994 ನಿಯಮ 31R(6) ಸಾರ್ವಜನಿಕರಿಗೆ ಪೂರೈಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ ಕೊನೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ
ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

(ಡಾ. ಕೆ. ವಿದ್ಯಾಕುಮಾರಿ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

**ದಿನಾಂಕ: 04.03.2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು:**

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಉಡುಪಿ | ಅಧ್ಯಕ್ಷರು |
| 2. | ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ(ಪರವಾಗಿ) | ಸದಸ್ಯರು |
| 3. | ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ಉಡುಪಿ ಜಿಲ್ಲೆ, ಉಡುಪಿ | ಸದಸ್ಯರು |
| 4. | ಉಪಅರಣ್ಯ ಸಂರಕ್ಷಣಾಧಿಕಾರಿಯವರು, ಕುಂದಾಪುರ ಉಪವಿಭಾಗ, ಕುಂದಾಪುರ | ಸದಸ್ಯರು |
| 5. | ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ, ಕುಂದಾಪುರ | ಸದಸ್ಯರು |
| 6. | ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾರಿಗೆ ಇಲಾಖೆ, ಉಡುಪಿ (ಪರವಾಗಿ) | ಸದಸ್ಯರು |
| 7. | ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಉಡುಪಿ | ಸದಸ್ಯರು |
| 8. | ತಹಶೀಲ್ದಾರರು, ಉಡುಪಿ/ ಬ್ರಹ್ಮಾವರ/ ಕಾರ್ಕಳ/ ಹೆಬ್ರಿ/ ಕುಂದಾಪುರ/ ಬೈಂದೂರು (ಪರವಾಗಿ)/ ಕಾಪು (ಪರವಾಗಿ) | ಸದಸ್ಯರು |
| 9. | ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ (ಪರವಾಗಿ) | ಆಹ್ವಾನಿತರು |
| 10. | ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ | ಆಹ್ವಾನಿತರು |
| 11. | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ | ಆಹ್ವಾನಿತರು |
| 12. | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ, ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ-2, ಸಿದ್ದಾಪುರ (ಪರವಾಗಿ) | ಆಹ್ವಾನಿತರು |
| 13. | ಪೌರಾಯುಕ್ತರು, ನಗರಸಭೆ, ಉಡುಪಿ | ಆಹ್ವಾನಿತರು |
| 14. | ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಇತರೆ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಗಳ ವಿವರ ನೀಡಿದರು. ಅದರಂತೆ ಈ ಕೆಳಗಿನ ಕಾರ್ಯಸೂಚಿಗಳನ್ವಯ ನಿರ್ಣಯ ಕೈಗೊಳ್ಳಲಾಯಿತು.

<u>ವಿಷಯಸೂಚಿ–1</u>: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಕುರಿತು.

<table>
<tr><th colspan="4">ಮರಳು ಬ್ಲಾಕ್ ಗಳ ವಿವರ</th><th>ಒಟ್ಟು ಮರಳು ಬ್ಲಾಕ್ ಗಳ ಸಂಖ್ಯೆ</th><th>ಪರಿಸರ ವಿಮೋಚನಾ ಪತ್ರದಲ್ಲಿ ನಿಗಧಿಪಡಿಸಿರುವ ಮರಳಿನ ಪ್ರಮಾಣ (ಮೆ.ಟನ್)</th><th>ಪ್ರಸಕ್ತ ಸಾಲಿನಲ್ಲಿ ತೆರವುಗೊಳಿಸಿರುವ ಮರಳಿನ ಪ್ರಮಾಣ (ಮೆ.ಟನ್)</th><th>ಉಳಿಕೆ ಇರುವ ಮರಳಿನ ಪ್ರಮಾಣ (ಮೆ.ಟನ್)</th></tr>
<tr><td colspan="3" rowspan="3">I, II, III ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿದ್ದು, ಸದರಿ ಮರಳು ನಿಕ್ಷೇಪಗಳ ವಿವರ</td><td>Working</td><td>16</td><td>43667</td><td>5050</td><td>38617</td></tr>
<tr><td>Idle</td><td>3</td><td>4523</td><td>0</td><td>4523</td></tr>
<tr><td>TOTAL (A)</td><td>19</td><td>48190</td><td>5050</td><td>43140</td></tr>
<tr><td rowspan="6">IV, V & VI ನೇ ಶ್ರೇಣಿಯ ನದಿ ಪಾತ್ರಗಳಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ</td><td rowspan="5">ಮರಳು ಗುತ್ತಿಗೆ ಮಂಜೂರು ಮಾಡಲಾದ ಮರಳು ಬ್ಲಾಕ್ ಗಳು</td><td rowspan="2">Tender Blocks</td><td>Working</td><td>4</td><td>65521</td><td>22401</td><td>43120</td></tr>
<tr><td>Idle</td><td>1</td><td>9030</td><td>0</td><td>9030</td></tr>
<tr><td rowspan="2">GOVT Blocks</td><td>Working</td><td>6</td><td>246160</td><td>40198</td><td>205962</td></tr>
<tr><td>Idle</td><td>2</td><td>45244</td><td>0</td><td>45244</td></tr>
<tr><td colspan="2">TOTAL (B)</td><td>13</td><td>365955</td><td>62599</td><td>303356</td></tr>
<tr><td colspan="3">ಪ್ರಸ್ತುತ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುವ ಮರಳು ಬ್ಲಾಕ್ ಗಳ ಸಂಖ್ಯೆ (D)</td><td>22</td><td>551550</td><td>0</td><td>551550</td></tr>
<tr><td colspan="4">IV, V & VI ನೇ ಶ್ರೇಣಿಯ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ವ್ಯಾಪ್ತಿಯಲ್ಲಿ ಹೂಳಿನಲ್ಲಿ ದೊರಕುವ ಮರಳನ್ನು ತೆಗೆಯಲು (Desilting) ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ (E)</td><td>3</td><td>425404</td><td>0</td><td>425404</td></tr>
<tr><td colspan="4">ಒಟ್ಟು</td><td>57</td><td>1391099</td><td>67649</td><td>1323450</td></tr>
</table>

ಪ್ರಸ್ತುತ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ ಮರಳು ಬ್ಲಾಕ್‌ಗಳ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ಮಾಹಿತಿಯನ್ನು ಈ ಕೆಳಕಂಡಂತೆ ವಿವರಿಸಿದರು.

1. <u>ಗ್ರಾಮ ಪಂಚಾಯತ್‌ಗೆ ಆಶಯ ಪತ್ರ ನೀಡಲಾದ ಮರಳು ಬ್ಲಾಕ್‌ಗಳು:</u> ಈ ಹಿಂದೆ ಗ್ರಾಮ ಪಂಚಾಯತ್‌ಗಳಿಗೆ ನೀಡಲಾದ 99 ಮರಳು ಬ್ಲಾಕ್‌ಗಳ ಆಶಯ ಪತ್ರದ ಅವಧಿಯು ಮುಕ್ತಾಯಗೊಂಡಿರುತ್ತದೆ. ಪ್ರಸ್ತುತ ಹೊಸದಾಗಿ 19 ಮರಳು ಬ್ಲಾಕ್‌ಗಳಲ್ಲಿ ಕಾರ್ಯ ನಿರ್ವಹಿಸಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರವನ್ನು ನೀಡಲಾಗಿದ್ದು, 16 ಮರಳು ಬ್ಲಾಕ್‌ಗಳಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಉಳಿದ 03 ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆಯುವ ಕಾರ್ಯ ಪ್ರಾರಂಭಿಸಿರುವುದಿಲ್ಲ.
2. <u>ಟೆಂಡರ್ ಮರಳು ಬ್ಲಾಕ್‌ಗಳು:</u> ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿಯಾದ ಬಿಡ್ಡುದಾರರಿಗೆ ಮಂಜೂರು ಮಾಡಲಾಗಿರುವ ಒಟ್ಟು 05 ಮರಳು ಗುತ್ತಿಗೆಗಳಲ್ಲಿ 04 ಮರಳು ಬ್ಲಾಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 01 ಮರಳು ಬ್ಲಾಕ್ ಸ್ಟಾಕ್‌ಯಾರ್ಡ್ ಸಮಸ್ಯೆಯಿಂದಾಗಿ ನಿಷ್ಕ್ರಿಯವಾಗಿರುತ್ತದೆ.
3. <u>ಸರ್ಕಾರಿ ಇಲಾಖೆಗಳಿಗೆ ಮೀಸಲಿರಿಸಿರುವ ಮರಳು ಬ್ಲಾಕ್‌ಗಳು:</u> ಸರ್ಕಾರಿ ಕಾಮಗಾರಿಗಾಗಿ ಮಂಜೂರು ಮಾಡಲಾಗಿರುವ ಒಟ್ಟು 8 ಮರಳು ಬ್ಲಾಕ್‌ಗಳಲ್ಲಿ, 06 ಮರಳು ಬ್ಲಾಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 2 ಮರಳು ಬ್ಲಾಕ್‌ಗಳು ಸ್ಟಾಕ್‌ಯಾರ್ಡ್ ಹಾಗೂ ರಸ್ತೆಗಳ ಸಮಸ್ಯೆಯಿಂದಾಗಿ ನಿಷ್ಕ್ರಿಯವಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

ನಿರ್ಣಯ 1.1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಗ್ರಾಮ ಪಂಚಾಯತ್ ವ್ಯಾಪ್ತಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಳು ಬ್ಲಾಕ್‌ಗಳನ್ನು ಗುರುತಿಸಿ ಮರಳು ಪೂರೈಕೆಗೆ ಕ್ರಮವಹಿಸಿದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಮರಳಿನ ಅಭಾವವನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಳು ಬ್ಲಾಕ್‌ಗಳನ್ನು ಗುರುತಿಸಲು ಕ್ರಮವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಈ ಕುರಿತು ಮಾನ್ಯ ಪೊಲೀಸ್ ಅಧೀಕ್ಷಕರು ಮಾತನಾಡುತ್ತಾ, ಆಶಯ ಪತ್ರಗಳ ಅವಧಿಯು ಮುಕ್ತಾಯಗೊಂಡ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ 99 ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆಯುವ ಕಾರ್ಯ ಸ್ಥಗಿತಗೊಂಡಿರುವ ಬಗ್ಗೆ ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಗಳಿಂದ ಸ್ಥಳ ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಹಾಗೂ ಸದರಿ ಪ್ರದೇಶಗಳಲ್ಲಿ ಅನಧಿಕೃತ ಮರಳುಗಾರಿಕೆ/ ಸಾಗಾಣಿಕೆ ನಡೆಯುತ್ತಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲು ಸಂಬಂಧಿಸಿದ ಭೂವಿಜ್ಞಾನಿಯವರಿಗೆ ಸೂಚಿಸಿದರು. ಮುಂದುವರೆದು ಸ್ಥಳ ಪರಿಶೀಲನಾ ಸಮಯದಲ್ಲಿ ಸದರಿ ಮರಳು ಬ್ಲಾಕ್‌ಗಳ ಪ್ರದೇಶಗಳಲ್ಲಿ ಮರಳಿನ ಲಭ್ಯತೆಯಿದ್ದಲ್ಲಿ ಜಂಟಿ ಸ್ಥಳ ಪರಿಶೀಲನೆ ಕೈಗೊಂಡು ಮರಳು ಬ್ಲಾಕ್‌ಗಳನ್ನು ಗುರುತಿಸಿ ತಾಲ್ಲೂಕು ಹಾಗೂ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡು ಮರಳು ವಿಲೇವಾರಿಗೆ ಕ್ರಮವಹಿಸಿದಲ್ಲಿ ಅನಧಿಕೃತವಾಗಿ ಮರಳು ತೆಗೆದು ಸಾಗಿಸುವುದನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ ಈ ಕುರಿತು 15 ದಿನಗಳಲ್ಲಿ ಸ್ಥಳ ಪರಿಶೀಲಿಸಿ ವರದಿ ಮಂಡಿಸಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ 1.2: ಶ್ರೀ ನರಸಿಂಹ ಪೂಜಾರಿರವರಿಗೆ ಆಶಯ ಪತ್ರ ನೀಡಲಾದ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ನಿಯಮಾನುಸಾರ 1 ಕಿ.ಮೀ ವ್ಯಾಪ್ತಿಯೊಳಗೆ ದಾಸ್ತಾನು ಕೇಂದ್ರವನ್ನು ನಿರ್ಮಿಸಿರುವ ಬಗ್ಗೆ ಸಂಬಂಧಪಟ್ಟ ಭೂವಿಜ್ಞಾನಿಯವರಿಂದ ಸ್ಥಳ ಪರಿಶೀಲಿಸಿ, ವರದಿ ಪಡೆದುಕೊಂಡು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಲಾಯಿತು.

ನಿರ್ಣಯ 1.3: ಸಭೆಯಲ್ಲಿ ಹಾಜರಿದ್ದ ತಹಶೀಲ್ದಾರರು, ಬ್ರಹ್ಮಾವರ ತಾಲ್ಲೂಕು ರವರು ಮಾತನಾಡುತ್ತಾ, ಕಾರ್ಕಡ ಗ್ರಾಮದಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ನೀಡಿರುವ ಮರಳು ಬ್ಲಾಕ್‌ನ ದಾಸ್ತಾನು ಕೇಂದ್ರದಿಂದ ಮರಳನ್ನು ಸಾಗಾಟ ಮಾಡಲು ರಸ್ತೆಯನ್ನು ಹಾಗೂ ವೇ-ಬ್ರಿಡ್ಜ್ ಮತ್ತು ಸ್ಟಾಕ್‌ಯಾರ್ಡ್‌ಗೆ ಸಂಬಂಧಿಸಿದ ಕಛೇರಿ ಕಟ್ಟಡವನ್ನು ಸರ್ಕಾರಿ ಸರ್ವೆ ನಂಬರಿನ ಜಾಗದಲ್ಲಿ ನಿರ್ಮಿಸಿಕೊಂಡಿರುವುದಾಗಿ ಸಭೆಗೆ ತಿಳಿಸಿದಾಗ ಸದರಿ ರಸ್ತೆ, ಕಟ್ಟಡ ಮತ್ತು ವೇ-ಬ್ರಿಡ್ಜ್ ನ್ನು ಸರ್ಕಾರಿ ಜಾಗದಿಂದ ತೆರವುಗೊಳಿಸಿ, ಪಟ್ಟಾ ಜಾಗದಲ್ಲಿ ನಿರ್ಮಿಸಲು ಒಪ್ಪಂದ ಮಾಡಿಕೊಂಡು 15 ದಿನಗಳಲ್ಲಿ ಕಾರ್ಯ ನಿರ್ವಹಿಸಲು ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್ ಉಡುಪಿ ರವರಿಗೆ ತಿಳಿಸಲಾಯಿತು ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ರವರಿಗೆ ಕುಂದಾಪುರ ತಾಲ್ಲೂಕಿನ ಹಳ್ನಾಡು ಗ್ರಾಮದಲ್ಲಿ ದಿನಾಂಕ: 21.01.2025 ರಂದು ಮರಳು ಗುತ್ತಿಗೆಯನ್ನು ಮಂಜೂರು ಮಾಡಲಾಗಿದ್ದು, ಸದರಿಯವರು ಜರೂರಾಗಿ ಸ್ಟಾಕ್‌ಯಾರ್ಡ್ ನಿರ್ಮಿಸಿಕೊಂಡು, ವೇ-ಬ್ರಿಡ್ಜ್ ಹಾಗೂ ಸಿಸಿ ಕ್ಯಾಮರಾಗಳನ್ನು ಅಳವಡಿಸಿರುವ ಬಗ್ಗೆ ಸಂಬಂಧಪಟ್ಟ ಭೂವಿಜ್ಞಾನಿಯವರಿಂದ ಸ್ಥಳ ಪರಿಶೀಲಿಸಿ, ವರದಿ ಪಡೆದುಕೊಂಡು ಮರಳು ವಿಲೇವಾರಿಗೆ ಶೀಘ್ರ ಕ್ರಮವಹಿಸಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಕಾರ್ಯನಿರ್ವಾಹಕ ಇಂಜನಿಯರ್, ಕೆ.ಆರ್.ಐ.ಡಿ.ಎಲ್ ಉಡುಪಿ ರವರು ಮಾತನಾಡುತ್ತಾ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ ಶೇ. 25 ರಷ್ಟು ಮರಳನ್ನು

ಸಾರ್ವಜನಿಕರಿಗೆ ಪೂರೈಸಲಾಗಿದ್ದು, ಶೇ. 75 ರಷ್ಟು ಪ್ರಮಾಣದ ಮರಳು ದಾಸ್ತಾನು ಕೇಂದ್ರದಲ್ಲಿಯೇ ದಾಸ್ತಾನಿರಿಸಿದ್ದು, ಯಾವುದೇ ಸರ್ಕಾರಿ ಕಾಮಗಾರಿಗಳಿಗೆ ಮರಳಿನ ಬೇಡಿಕೆ ಇಲ್ಲದ ಕಾರಣ ಸದರಿ ಮರಳನ್ನು ವಿಲೇವಾರಿ ಮಾಡಲು ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಹಾಗೂ ಸಾರ್ವಜನಿಕರಿಗೆ ವಿತರಿಸಲು ನಿಗಧಿಪಡಿಸಲಾದ ಶೇ.25 ರಷ್ಟು ಪ್ರಮಾಣವನ್ನು ಹೆಚ್ಚಿಸಬೇಕಾಗಿ ಸಭೆಯಲ್ಲಿ ಕೋರಿದರು.

<u>ನಿರ್ಣಯ 1.4.:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, 2025-26 ನೇ ಸಾಲಿನ ಏಪ್ರಿಲ್ ಮಾಹೆಯವರೆಗೆ ದಾಸ್ತಾನು ಕೇಂದ್ರದಲ್ಲಿ ಸದರಿ ಮರಳನ್ನು ಯಥಾ ಸ್ಥಿತಿಯಲ್ಲಿ ಕಾಪಾಡಿಕೊಂಡು, ಏಪ್ರಿಲ್ ಮಾಹೆಯಲ್ಲಿ ಸಾರ್ವಜನಿಕರಿಗೆ ಪೂರೈಸಲು ಕ್ರಮವಹಿಸುವಂತೆ ಹಾಗೂ ಶೇ. 75 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ಸಭೆಯಲ್ಲಿ ಹಾಜರಿದ್ದ ತಹಶೀಲ್ದಾರರು, ಬ್ರಹ್ಮಾವರರವರು ಸಭೆಯಲ್ಲಿ ಮಾತನಾಡುತ್ತಾ, ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಉಪಖನಿಜಗಳನ್ನು ಸಾಗಾಟ ಮಾಡುವ 407 ಟಿಪ್ಪರ್, ಲಾರಿ ಇಂತಹ ಬೇರೆ ಬೇರೆ ವಾಹನಗಳಿಗೆ ಎಷ್ಟು ದಂಡ ವಿಧಿಸಬೇಕು ಹಾಗೂ ಯಾವ ಲೆಕ್ಕ ಶೀರ್ಷಿಕೆಗೆ ದಂಡವನ್ನು ಸಂದಾಯ ಮಾಡಬೇಕು ಎಂಬ ಬಗ್ಗೆ ಗೊಂದಲವಿರುವುದರಿಂದ ಈ ಕುರಿತು SOP/ ಸುತ್ತೋಲೆಯನ್ನು ಹೊರಡಿಸುವಂತೆ ಸಭೆಯಲ್ಲಿ ಕೋರಿದರು.

<u>ನಿರ್ಣಯ 1.5:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸಮಿತಿಯ ಎಲ್ಲಾ ಸದಸ್ಯರುಗಳು ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜಗಳ ಸಾಗಾಣಿಕೆಯನ್ನು ನಿಯಂತ್ರಿಸಲು ಕ್ರಮವಹಿಸಿದಲ್ಲಿ, ಸರ್ಕಾರಕ್ಕೆ ರಾಜಧನ ನಷ್ಟವುಂಟಾಗುವುದಿಲ್ಲ ಹಾಗೂ ಜಿಲ್ಲೆಯಲ್ಲಿ ಲಭ್ಯವಿರುವ ಖನಿಜ ಸಂಪತ್ತನ್ನು ರಕ್ಷಿಸಬೇಕಾಗಿರುವುದರಿಂದ ಈ ಕುರಿತು ಸರ್ಕಾರದಿಂದ ಪ್ರತಿ ಖನಿಜ/ ಉಪಖನಿಜಗಳಿಗೆ ನಿಗಧಿಪಡಿಸಲಾಗಿರುವ ರಾಜಧನ/ ದಂಡಗಳ ಮೊತ್ತದನ್ವಯ ಲೆಕ್ಕಶೀರ್ಷಿಕೆಯಡಿ ಶುಲ್ಕ/ ದಂಡ ಪಾವತಿಸುವ ಕ್ರಮದ ಕುರಿತು ಸುತ್ತೋಲೆಯನ್ನು ಹೊರಡಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿಯನ್ನು ನೀಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಲಾಯಿತು. ಅಲ್ಲದೇ ಜಿಲ್ಲೆಯ ಸಿ.ಆರ್.ಝಡ್ ವ್ಯಾಪ್ತಿಯ ನದಿಗಳಿಂದ ಮರಳನ್ನು ಕಳುವು ಮಾಡಿ ಹೊರಜಿಲ್ಲೆಗಳಿಗೆ ಅನಧಿಕೃತವಾಗಿ ಸಾಗಿಸುತ್ತಿರುವುದಾಗಿ ಸಾಕಷ್ಟು ದೂರುಗಳು ಸ್ವೀಕೃತವಾಗುತಿದ್ದು, ಈ ಕುರಿತು ಉಡುಪಿ, ಬ್ರಹ್ಮಾವರ, ಕುಂದಾಪುರ ಹಾಗೂ ಬೈಂದೂರು ತಾಲ್ಲೂಕು ತಹಶೀಲ್ದಾರರುಗಳು ಹಾಗೂ ಭೂವಿಜ್ಞಾನಿಗಳು ಸ್ಥಳ ಪರಿಶೀಲಿಸಿ ಕ್ರಮಜರುಗಿಸಲು ಹಾಗೂ ಅನಧಿಕೃತ ಮರಳು ಗಣಿಗಾರಿಕೆ/ ಸಾಗಾಣಿಕೆ / ದಾಸ್ತಾನು ವಿರುದ್ಧ ತೀವ್ರ ನಿಗಾವಹಿಸುವಂತೆ ಸಭೆಯಲ್ಲಿ ಸೂಚಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-2:</u> **ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡಲು ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ ಸಂಸ್ಥೆಯಿಂದ ಸಲ್ಲಿಸಿರುವ ಪರಿಷ್ಕೃತ ಅಂದಾಜು ಪಟ್ಟಿಯ ಕುರಿತು.**

ಪ್ರಸ್ತುತ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2024 ರಲ್ಲಿ ಪ್ರತಿ ಮೆ.ಟನ್ ಮರಳಿನ ಮಾರಾಟ ದರವನ್ನು ರೂ. 850/- ನಿಗಧಿಪಡಿಸಲಾಗಿರುವುದರಿಂದ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಡವು & ತ್ರಾಸಿ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-47 ರಲ್ಲಿ ಮರಳನ್ನು ತೆರವುಗೊಳಿಸಲು ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ ರವರು ಪರಿಷ್ಕೃತ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಪ್ರತಿ ಮೆ.ಟನ್ ಮರಳನ್ನು ತೆರವುಗೊಳಿಸಲು ತಗಲುವ ವೆಚ್ಚದ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| Sl No. | Description | Rate/MT (in Rs.) |
|---|---|---|
| 1 | Royalty Charges | 80.00 |
| 2 | DMF (10%) | 8.00 |
| 3 | AP (40%) | 32.00 |
| 4 | SSPP (per Sheet) | 10.00 |
| 5 | TCS (2%) | 1.60 |
| 6 | Sand Extraction Charges | 653.03 |
| 7 | Port & Fisheries Department Deduction (4.01%) (GST-2%, IT-2%, CBF-0.01%) | 26.19 |
| 8 | GST Charges (5%) | 32.65 |
| 9 | Labour Charges (1%) | 6.53 |
| | TOTAL | 850.00 |

<u>ನಿರ್ಣಯ-2:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಈ ಹಿಂದಿನ ಸಭೆಗಳಲ್ಲಿ ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಲ್ಲಿ ಪ್ರತಿ ಮೆ.ಟನ್ ಮರಳು ತೆರವುಗೊಳಿಸಲು ರೂ. 463/- ಎಂಬುದಾಗಿ ನಿಗಧಿಪಡಿಸಲಾಗಿದ್ದು, ಕಾರ್ಯನಿರ್ವಾಹಕ ಇಂಜಿನಿಯರ್. ಬಂದರು ಮತ್ತು ಮೀನುಗಾರಿಕಾ ವಿಭಾಗ ರವರು ರೂ. 653/- ಎಂಬುದಾಗಿ ಪರಿಷ್ಕೃತ ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಸರ್ಕಾರವು ಮರಳು ಮಾರಾಟ ದರವನ್ನು ರೂ. 850/- ಕ್ಕೆ ನಿಗಧಿಪಡಿಸಿರುವುದರಿಂದ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ ಪ್ರತಿಯೊಂದು ಮರಳು ಬ್ಲಾಕ್‌ಗಳಲ್ಲಿ Sand Extraction Charges ನ್ನು ರೂ. 530/- ಕ್ಕೆ ನಿಗಧಿಪಡಿಸಿ, ಈ ಕೆಳಕಂಡ ದರದಂತೆ ಮರಳು ಗುತ್ತಿಗೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

| Sl No. | Description | Rate/MT (in Rs.) |
|---|---|---|
| 1 | Royalty Charges | 80.00 |
| 2 | DMF (10%) | 8.00 |
| 3 | AP (40%) | 32.00 |
| 4 | SSPP (per Sheet) | 10.00 |
| 5 | TCS (2%) | 1.60 |
| 6 | Sand Extraction Charges | 530.00 |
| 7 | Agency (3%) | 15.90 |
| 8 | GST Charges (5%) | 26.50 |
| 9 | Labour Charges (1%) | 5.30 |
| | TOTAL | 709.3 |

ಅದರಂತೆ ಮರಳು ಗಣಿ ಗುತ್ತಿಗೆ ನೀಡಿರುವ ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಸದರಿ ದರದಂತೆ ಮರಳು ಗುತ್ತಿಗೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ನೋಟೀಸ್ ನೀಡಿ ಕ್ರಮವಹಿಸುವಂತೆ ಸಭೆಯಲ್ಲಿ ಚರ್ಚಿಸಿ, ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ. ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-3:** ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹೊಸದಾಗಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸುವ ಕುರಿತು.

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಕಾರ್ಕಡ ಮತ್ತು ನಾಗರಮಠ ಹಾಗೂ ಕುಂದಾಪುರ ತಾಲ್ಲೂಕಿನ ಕಟ್‌ಬೆಳ್ತೂರು, ಮೊಳಹಳ್ಳಿ, ತ್ರಾಸಿ ಮತ್ತು ಹಡವು ಗ್ರಾಮಗಳನ್ನು ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡದಂತೆ ಕ್ರಮವಹಿಸಬೇಕಾಗಿರುವುದರಿಂದ ಹೊಸದಾಗಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸುವುದು ಹಾಗೂ ಗೃಹರಕ್ಷಕ ಸಿಬ್ಬಂದಿಗಳನ್ನು ನೇಮಿಸುವುದು ಅವಶ್ಯಕವಾಗಿದ್ದು, ಈ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

**ನಿರ್ಣಯ-3:** ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕುಂದಾಪುರ ತಾಲ್ಲೂಕಿನ ಕಟ್‌ಬೆಳ್ತೂರು, ಮೊಳಹಳ್ಳಿ, ತ್ರಾಸಿ & ಹಡವು ಗ್ರಾಮಗಳಲ್ಲಿ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡುತ್ತಿರುವುದಾಗಿ ಸಾಕಷ್ಟು ದೂರುಗಳು ಸ್ವೀಕೃತವಾಗುತಿರುವುದರಿಂದ ಸದರಿ ಪ್ರದೇಶಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸುವುದು ಅವಶ್ಯವಾಗಿರುತ್ತದೆ ಎಂಬುದಾಗಿ ಪೊಲೀಸ್ ಅಧೀಕ್ಷಕರು ಸಭೆಯಲ್ಲಿ ತಿಳಿಸಿದರು. ಸದರಿ ಪ್ರದೇಶಗಳಲ್ಲಿ ಅನಧಿಕೃತ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಕೂಡಲೇ ಕ್ರಮವಹಿಸಬೇಕಾಗಿರುವುದರಿಂದ 15 ದಿನಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲು ಉಡುಪಿ ನಿರ್ಮಿತಿ ಕೇಂದ್ರ ರವರಿಗೆ ಕಾರ್ಯಾದೇಶ ನೀಡಲು ಹಾಗೂ ಸದರಿಯವರಿಗೆ ಮುಂಚಿತವಾಗಿ ಅಂದಾಜು ಪಟ್ಟಿಯ ಶೇ.75 ರಷ್ಟು ಮೊತ್ತವನ್ನು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಬ್ಯಾಂಕ್ ಖಾತೆಯಿಂದ ಬಿಡುಗಡೆ ಮಾಡಲು ಕ್ರಮವಹಿಸುವಂತೆ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-4:** **ಶ್ರೀ ಜೋಗಪ್ಪ ಕುಂದರ್ ರವರು ಮರಣ ಹೊಂದಿರುವುದರಿಂದ ಸದರಿಯವರ ಆಶಯ ಪತ್ರವನ್ನು ವಾರೀಸುದಾರರಿಗೆ ವರ್ಗಾವಣೆ ಮಾಡುವ ಕುರಿತು.**

ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಬೆಳ್ಳಂಪಳ್ಳಿ ಗ್ರಾಮದ ಸ.ನಂ: 11/1 ರ ಮಡಿಸಾಲು ಹೊಳೆ ಪಾತ್ರದಲ್ಲಿ 1.10 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-33 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾದ ಶ್ರೀ ಜೋಗಪ್ಪ ಕುಂದರ್ ರವರು ದಿನಾಂಕ: 21.08.2024 ರಂದು ಮರಣ ಹೊಂದಿದ್ದು, ಸದರಿ ಮರಳು ಪರವಾನಿಗೆಯನ್ನು ಶ್ರೀ ಜೋಗಪ್ಪ ಕುಂದರ್ ರವರ ಮಗನಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿನಲ್ಲಿ ವರ್ಗಾವಣೆ ಮಾಡಲು ಕೋರಿ ಜೋಗಪ್ಪ ಕುಂದರ್ ರವರ ಮರಣ ಪತ್ರ, ವಂಶವೃಕ್ಷ, ಕುಟುಂಬ ಸದಸ್ಯರ ಒಪ್ಪಿಗೆ ಪತ್ರದೊಂದಿಗೆ ಮನವಿಯನ್ನು ಸಲ್ಲಿಸಿದ್ದು, ಶ್ರೀ ಜೋಗಪ್ಪ ಕುಂದರ್ ರವರು ಮರಳು ಬ್ಲಾಕ್ ಸಂಖ್ಯೆ: SB-33 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿ ಆಶಯ ಪತ್ರ ನೀಡಿದ ನಂತರ ಮರಣ ಹೊಂದಿರುವುದರಿಂದ ಸದರಿಯವರ ವಾರೀಸುದಾರರಾದ ಮಗನಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿನಲ್ಲಿ ವರ್ಗಾಯಿಸುವ ಕುರಿತಂತೆ ಸೂಕ್ತ ಮಾರ್ಗದರ್ಶನ/ ಕಾನೂನು ಅಭಿಪ್ರಾಯ ನೀಡಲು ಕೋರಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲು ದಿನಾಂಕ: 03.12.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ದಿನಾಂಕ: 29.01.2025 ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಇದುವರೆಗೆ ಯಾವುದೇ ಮಾರ್ಗದರ್ಶನ/ ಕಾನೂನು ಅಭಿಪ್ರಾಯ ಸ್ವೀಕೃತವಾಗಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ-4: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬ್ಲಾಕ್ ಸಂಖ್ಯೆ: SB-33 ರಲ್ಲಿ 5,360 ಮೆ.ಟನ್ ಪ್ರಮಾಣದ ಮರಳು ಲಭ್ಯವಿರುವುದರಿಂದ ಸದರಿ ಮರಳು ಬ್ಲಾಕ್‌ನಲ್ಲಿ ಮರಳು ತೆಗೆದು ವಿಲೇವಾರಿ ಮಾಡಿದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಮರಳು ಲಭ್ಯವಾಗುವುದರಿಂದ ಈ ಕುರಿತು ಇನ್ನೊಮ್ಮೆ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪತ್ರ ಬರೆಯುವಂತೆ ಹಿರಿಯ ಭೂವಿಜ್ಞಾನಿಯವರಿಗೆ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-5</u>: ದಿನಾಂಕ: 03.03.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದ ಕುರಿತು.

<u>ವಿಷಯಸೂಚಿ-5.1</u>: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ಕುರಿತು.

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಒಟ್ಟು 21 ಮರಳು ನಿಕ್ಷೇಪಗಳನ್ನು ಗುರುತಿಸಿ ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿದ್ದು, ಅವುಗಳಲ್ಲಿ 18 ಮರಳು ನಿಕ್ಷೇಪಗಳನ್ನು ದಿನಾಂಕ: 03.03.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದ್ದು, ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

<u>ಉಡುಪಿ ತಾಲ್ಲೂಕು:</u>

| ಕ್ರಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಉಡುಪಿ | ಆಲೆವೂರು | ಕೊರಂಗ್ರಪಾಡಿ | 82,64 & 62 | 0.86 | ಚಕ್ಕೊಮತಿ ಹಳ್ಳ | III | A. N 13° 17' 49.27" E 74° 45' 56.31"<br>B. N 13° 17' 50.26" E 74° 45' 59.29"<br>C. N 13° 17' 50.93" E 74° 46' 2.22"<br>D. N 13° 17' 52.34" E 74° 46' 4.06"<br>E. N 13° 17' 52.13" E 74° 46' 4.27"<br>F. N 13° 17' 50.50" E 74° 46' 2.44"<br>G. N 13° 17' 49.78" E 74° 45' 59.22"<br>H. N 13° 17' 48.65" E 74° 45' 56.16" | 1,796 |
| 2. | ಉಡುಪಿ | ಮಣಿಪುರ | ಮಣಿಪುರ | 85, 87 & 88 | 1.26 | ಪಾಪನಾಶಿನಿ ಹೊಳೆ | III | A. N 13° 16' 55.61" E 74° 47' 12.69"<br>B. N 13° 16' 55.43" E 74° 47' 12.89"<br>C. N 13° 16' 59.53" E 74° 47' 18.18"<br>D. N 13° 16' 59.92" E 74° 47' 18.09"<br>E. N 13° 16' 59.13" E 74° 47' 27.46"<br>F. N 13° 16' 58.89" E 74° 47' 27.46" | 1,796 |
| 3. | ಉಡುಪಿ | ಮಣಿಪುರ | ಮಣಿಪುರ | 54, 99, 33 & 100 | 0.78 | ಚಕ್ಕೊಮತಿ ಹಳ್ಳ | III | A. N 13° 17' 58.77" E 74° 46' 54.41"<br>B. N 13° 18' 0.07" E 74° 46' 57.62"<br>C. N 13° 17' 59.69" E 74° 47' 2.15"<br>D. N 13° 17' 59.24" E 74° 47' 2.68"<br>E. N 13° 17' 59.64" E 74° 46' 57.77"<br>F. N 13° 18' 58.33" E 74° 46' 54.37" | 1,628 |

<u>ಬ್ರಹ್ಮಾವರ ತಾಲ್ಲೂಕು:</u>

| ಕ್ರ ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಬ್ರಹ್ಮಾವರ | 16 ನೇ ಕೊಕ್ಕರ್ಣೆ | ಪೆಜ ಮಂಗೂರು | 44 | 0.17 | ಮೊಗವೀರ ಪೇಟೆ ಸಾಲು ಹಳ್ಳ | II | A. N 13° 26' 59.03" E 74° 49' 7.40"<br>B. N 13° 27' 1.93" E 74° 49' 10.56"<br>C. N 13° 27' 1.88" E 74° 49' 11.12"<br>D. N 13° 26' 58.55" E 74° 49' 7.43" | 2500 |

| | | | | | | | | | |
|---|---|---|---|---|---|---|---|---|---|
| 2 | ಬ್ರಹ್ಮಾವರ | 16 ನೇ ಕೊಕ್ಕರ್ಣೆ | ಕುದಿ | 150 | 0.40 | ಕುದಿ ಸಾಲು ಹಳ್ಳ | III | A. N 13° 27' 1.06" E 74° 51' 23.02"<br>B. N 13° 27' 0.70" E 74° 51' 25.64"<br>C. N 13° 27' 0.92" E 74° 51' 28.26"<br>D. N 13° 27' 0.57" E 74° 51' 28.28"<br>E. N 13° 27' 0.35" E 74° 51' 25.77"<br>F. N 13° 27' 0.75" E 74° 51' 23.03" | 1650 |
| 3 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 167 | 0.32 | ಶಿರಿಯಾರ ಹಳ್ಳ | III | A. N 13° 32' 21.20" E 74° 47' 39.61"<br>B. N 13° 32' 21.01" E 74° 47' 40.82"<br>C. N 13° 32' 20.03 E 74° 47' 40.91"<br>D. N 13° 32' 19.83" E 74° 47' 39.81"<br>E. N 13° 32' 18.82" E 74° 47' 40.53"<br>F. N 13° 32' 19.11" E 74° 47' 41.47"<br>G. N 13° 32' 18.84" E 74° 47' 41.47"<br>H. N 13° 32' 18.52" E 74° 47' 40.42"<br>I. N 13° 32' 19.98" E 74° 47' 39.41"<br>J. N 13° 32' 20.15" E 74° 47' 40.57"<br>K. N 13° 32' 20.79" E 74° 47' 40.65"<br>L. N 13° 32' 20.89" E 74° 47' 39.68" | 1088 |
| 4 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 17 | 0.36 | ಶಿರಿಯಾರ ಹಳ್ಳ | III | A. N 13° 31' 44.30" E 74° 45' 37.06"<br>B. N 13° 31' 44.58" E 74° 45' 37.28"<br>C. N 13° 31' 43.33" E 74° 45' 38.85"<br>D. N 13° 31' 42.79" E 74° 45' 40.58"<br>E. N 13° 31' 41.60" E 74° 45' 40.94"<br>F. N 13° 31' 41.58" E 74° 45' 40.64"<br>G. N 13° 31' 42.57" E 74° 45' 40.37"<br>H. N 13° 31' 43.02" E 74° 45' 38.69" | 1253 |
| 5 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 181 | 0.22 | ಶಿರಿಯಾರ ಹಳ್ಳ | III | A. N 13° 32' 5.99" E 74° 48' 11.63"<br>B. N 13° 32' 5.03" E 74° 48' 11.82"<br>C. N 13° 32' 3.64" E 74° 48' 12.73"<br>D. N 13° 32' 2.36" E 74° 48' 12.91"<br>E. N 13° 32' 2.38" E 74° 48' 12.73"<br>F. N 13° 32' 3.48" E 74° 48' 12.56"<br>G. N 13° 32' 5.00" E 74° 48' 11.52"<br>H. N 13° 32' 5.98" E 74° 48' 11.33" | 766 |
| 6 | ಬ್ರಹ್ಮಾವರ | ಶಿರಿಯಾರ | ಶಿರಿಯಾರ | 129 | 0.40 | ಶಿರಿಯಾರ ಹಳ್ಳ | III | A. N 13° 32' 30.53" E 74° 46' 54.61"<br>B. N 13° 32' 29.29" E 74° 46' 56.19"<br>C. N 13° 32' 29.25" E 74° 46' 59.90"<br>D. N 13° 32' 29.01" E 74° 46' 59.87"<br>E. N 13° 32' 28.96" E 74° 46' 56.05"<br>F. N 13° 32' 30.31" E 74° 46' 54.35" | 1392 |
| 7 | ಬ್ರಹ್ಮಾವರ | ಯಡ್ತಾಡಿ | ಯಡ್ತಾಡಿ | 40 | 0.50 | ಯಡ್ತಾಡಿ ಹಳ್ಳ | III | A. N 13° 29' 57.16" E 74° 46' 48.60"<br>B. N 13° 29' 57.00" E 74° 46' 50.13"<br>C. N 13° 29' 57.85" E 74° 46' 51.21"<br>D. N 13° 29' 58.40" E 74° 46' 52.60"<br>E. N 13° 29' 56.94" E 74° 46' 54.86"<br>F. N 13° 29' 56.66" E 74° 46' 54.64"<br>G. N 13° 29' 58.02" E 74° 46' 52.56"<br>H. N 13° 29' 57.56" E 74° 46' 51.36"<br>I. N 13° 29' 56.70" E 74° 46' 50.24"<br>J. N 13° 29' 56.86" E 74° 46' 48.64" | 1738 |
| 8 | ಬ್ರಹ್ಮಾವರ | ಯಡ್ತಾಡಿ | ಯಡ್ತಾಡಿ | 82 | 0.30 | ಯಡ್ತಾಡಿ ಹಳ್ಳ | III | A. N 13° 30' 15.00" E 74° 46' 7.49"<br>B. N 13° 30' 14.08" E 74° 46' 7.62"<br>C. N 13° 30' 11.96" E 74° 46' 6.27"<br>D. N 13° 30' 11.88" E 74° 46' 7.55"<br>E. N 13° 30' 12.09" E 74° 46' 8.34"<br>F. N 13° 30' 11.89" E 74° 46' 8.34"<br>G. N 13° 30' 11.71" E 74° 46' 7.54"<br>H. N 13° 30' 11.76" E 74° 46' 6.12"<br>I. N 13° 30' 12.08" E 74° 46' 6.00"<br>J. N 13° 30' 14.10" E 74° 46' 7.33"<br>K. N 13° 30' 14.92" E 74° 46' 7.29" | 1044 |
| 9 | ಬ್ರಹ್ಮಾವರ | ವಡ್ಡರ್ಸೆ | ಕಾವಡಿ | 5 | 0.30 | ಕಾವಡಿ ಹಳ್ಳ | III | A. N 13° 30' 26.19" E 74° 45' 22.99"<br>B. N 13° 30' 28.69" E 74° 45' 26.38"<br>C. N 13° 30' 28.40" E 74° 45' 26.49"<br>D. N 13° 30' 25.95" E 74° 45' 23.19" | 1044 |

ಕಾರ್ಕಳ ತಾಲ್ಲೂಕು:

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕಾರ್ಕಳ | ಮರ್ಣೆ | ಹೆರ್ಮುಂಡೆ | 1 &70 | 0.35 | ಹೆರ್ಮುಂಡೆ ಹಳ್ಳ | III | A. N 13° 18' 46.49" E 75° 1' 42.49"<br>B. N 13° 18' 47.01" E 75° 1' 42.32"<br>C. N 13° 18' 48.87" E 75° 1' 44.67"<br>D. N 13° 18' 48.45" E 75° 1' 44.95" | 730 |
| 2. | ಕಾರ್ಕಳ | ಮರ್ಣೆ | ಹೆರ್ಮುಂಡೆ | 45, 145 & 32 | 0.30 | ಹೆರ್ಮುಂಡೆ ಹಳ್ಳ | III | A. N 13° 16' 53.26" E 75° 0' 26.93"<br>B. N 13° 16' 53.50" E 75° 0' 26.65"<br>C. N 13° 16' 55.73" E 75° 0' 28.26"<br>D. N 13° 16' 55.83" E 75° 0' 29.72"<br>E. N 13° 16' 55.60" E 75° 0' 29.71"<br>F. N 13° 16' 55.42" E 75° 0' 28.41" | 625 |
| 3. | ಕಾರ್ಕಳ | ಮರ್ಣೆ | ಮರ್ಣೆ | 82, 83, 451 & 439 | 0.71 | ಬೊಳ್ಳ ಹಳ್ಳ | III | A. N 13° 17' 58.01" E 75° 0' 20.55"<br>B. N 13° 17' 58.44" E 75° 0' 20.12"<br>C. N 13° 17' 59.71" E 75° 0' 23.05"<br>D. N 13° 17' 57.92" E 75° 0' 24.75"<br>E. N 13° 17' 57.56" E 75° 0' 24.54"<br>F. N 13° 17' 59.14" E 75° 0' 22.75" | 1045 |

ಕುಂದಾಪುರ ತಾಲ್ಲೂಕು:

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಕುಂದಾಪುರ | ಕೆದೂರು | ಉಳ್ತೂರು | 172/2 & 172/6 | 0.16 | ಹೊಗೆ ಸಾಲು | II | A- 13°32'52.03"N E 74°42'57.01"<br>B-13°32'52.11"N E 74°42'56.86"<br>C-13°32'48.28"N E 74°42'55.47"<br>D-13°32'48.41"N E 74°42'55.31" | 500 |
| 2. | ಕುಂದಾಪುರ | ಕೆದೂರು | ಕೆದೂರು | 37 | 0.25 | ಶಾನಾಡಿ ಹಳ್ಳ | II | A-13°32'38.28"N E 74°45'8.18"<br>B-13°32'38.52"N E 74°45'8.29"<br>C-13°32'42.84"N E 74°45'5.59"<br>D-13°32'42.67"N E 74°45'5.50" | 1000 |
| 3. | ಕುಂದಾಪುರ | ಬೇಳೂರು | ಬೇಳೂರು | 147 | 0.62 | ಓರೆಹೊಳೆ | III | A-13°32'9.42"N E 74°46'5.99"<br>B-13°32'9.86"N E 74°46'5.96"<br>C-13°32'13.93"N E 74°46'11.72"<br>D-13°32'13.62"N E 74°46'11.80" | 2000 |

ಮುಂದುವರೆದು ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದಲ್ಲಿ ಗುರುತಿಸಲಾಗಿರುವ ಈ ಕೆಳಕಂಡ ಮರಳು ಬ್ಲಾಕ್‌ನ್ನು ದಿನಾಂಕ: 03.03.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಸದರಿ ಮರಳು ಬ್ಲಾಕ್‌ನ್ನು ಮರುಪರಿಶೀಲಿಸಿ ಭೂವಿಜ್ಞಾನಿಯವರು ವರದಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಮರಳು ಬ್ಲಾಕ್‌ನ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಕುಂದಾಪುರ | ಕಾವ್ರಾಡಿ | ಕಾವ್ರಾಡಿ | 40 | 1.00 | ಕುಬ್ಜ ಹೊಳೆ | III | A-13°38'27.95"N E 74°45'46.18"<br>B-13°38'30.36"N E 74°45'52.23"<br>C-13°38'29.88"N E 74°45'52.44"<br>D-13°38'27.44"N E 74°45'46.40" | 8500 |
| 2 | ಕಾಪು | ಕುರ್ಕಾಲು | ಕುರ್ಕಾಲು | 123/1 | 2.00 | ಪಾಪನಾಶಿನಿ ಹೊಳೆ | III | A. N 13° 17' 8.74" E 74° 46' 32.79"<br>B. N 13° 17' 4.56" E 74° 46' 29.98"<br>C. N 13° 17' 0.41" E 74° 46' 37.02"<br>D. N 13° 17' 1.06" E 74° 46' 37.49"<br>E. N 13° 17' 4.72" E 74° 46' 30.72"<br>F. N 13° 17' 8.50" E 74° 46' 33.12" | 8800 |

ನಿರ್ಣಯ 5.1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ 18 ಮರಳು ಬ್ಲಾಕ್‌ಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿ. ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ದಿನಾಂಕ: 03.03.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ ಕುಂದಾಪುರ ಕಾವ್ರಾಡಿ ಗ್ರಾಮ ಪಂಚಾಯತ್ ಹಾಗೂ ಕಾಪು ತಾಲ್ಲೂಕಿನ ಕುರ್ಕಾಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ್ನು ತಾಂತ್ರಿಕ ಅಧಿಕಾರಿಗಳು ಮರುಪರಿಶೀಲಿಸಿ ವರದಿ ಸಲ್ಲಿಸಿರುವುದರಿಂದ ಕಾವ್ರಾಡಿ ಮರಳು ಬ್ಲಾಕ್‌ನ್ನು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ ಅನುಮೋದಿಸಲಾಯಿತು ಹಾಗೂ ಮುಂದಿನ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮುಂದಿನ ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ಅಧ್ಯಕ್ಷರು/ ಸದಸ್ಯ ಕಾರ್ಯದರ್ಶಿಯವರಿಗೆ ಸಭೆಯಲ್ಲಿ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ 5.2. ಉಡುಪಿ ಜಿಲ್ಲಾ ವ್ಯಾಪ್ತಿಯ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳ ಕುರಿತು.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಒಟ್ಟು 02 ಮರಳು ಬ್ಲಾಕ್‌ಗಳನ್ನು ಗುರುತಿಸಿ, ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿದ್ದು, ಸದರಿ ಮರಳು ನಿಕ್ಷೇಪಗಳ ತಾಲ್ಲೂಕುವಾರು ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

**ಬೈಂದೂರು ತಾಲ್ಲೂಕು:**

| ಕ್ರ.ಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1 | ಬೈಂದೂರು | ನಾಡ & ಮರವಂತೆ | 156, 81 | 7.00 | ಕೊಲ್ಲೂರು ನದಿ | V | A. N 13° 43' 12.43" E 74° 39' 7.10"<br>B. N 13° 43' 19.98" E 74° 39' 23.41"<br>C. N 13° 43' 18.62" E 74° 39' 23.95"<br>D. N 13° 43' 10.75" E 74° 39' 8.17" | 48724 |

ಕುಂದಾಪುರ ತಾಲ್ಲೂಕು:

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 2. | ಕುಂದಾಪುರ | ಜಪ್ತಿ | 174 | 8.00 | ಹಾಲಾಡಿ | V | A. N 13° 36' 45.96" E 74° 46' 33.30"<br>B. N 13° 36' 48.02" E 74° 46' 57.24"<br>C. N 13° 36' 46.25" E 74° 46' 56.98"<br>D. N 13° 36' 44.77" E 74° 46' 33.51" | 69350 |

ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬೈಂದೂರು ತಾಲ್ಲೂಕಿನ ನಾಡ & ಮರವಂತೆ ಗ್ರಾಮಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ್ನು ಮೀಸಲಿರಿಸಲು ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ಇಲಾಖೆ, ಉಡುಪಿ ರವರು ಕೋರಿರುತ್ತಾರೆ. ಸದರಿಯವರು ಪತ್ರದಲ್ಲಿ ತಿಳಿಸಿರುವಂತೆ, ಪ್ರಸ್ತುತ ಉಡುಪಿ ಜಿಲ್ಲೆಯ ಮಲ್ಪೆ ಮತ್ತು ಗಂಗೊಳ್ಳಿ ಮೀನುಗಾರಿಕಾ ಬಂದರಿನಲ್ಲಿರುವ ಮೂಲಸೌಕರ್ಯ ಸೌಲಭ್ಯಗಳನ್ನು ನವೀಕರಿಸಲು ಮತ್ತು ಬಂದರಿನಲ್ಲಿ ಕೊರತೆಯಿರುವ ಅಗತ್ಯ ಸೌಲಭ್ಯಗಳನ್ನು ನಿರ್ವಹಿಸಲು ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ (PMMSY) ಅನುಮೋದನೆ ದೊರೆತಿದ್ದು, ಸದರಿ ಕಾಮಗಾರಿಗೆ ಸುಮಾರು 20000 ಘನಮೀಟರ್ ಪ್ರಮಾಣದಷ್ಟು ಮರಳಿನ ಅವಶ್ಯಕತೆಯಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ ಎಂದು ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ-5.2.1:</u> ಬೈಂದೂರು ತಾಲ್ಲೂಕಿನ ನಾಡ & ಮರವಂತೆ ಗ್ರಾಮಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ್ನು ಬಂದರು ಮತ್ತು ಮೀನುಗಾರಿಕಾ ಇಲಾಖೆಯ ಸರ್ಕಾರಿ ಕಾಮಗಾರಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಲು ಹಾಗೂ ಕುಂದಾಪುರ ತಾಲ್ಲೂಕಿನ ಜಪ್ತಿ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ ವರದಿಯನ್ನು, ಮರಳು ಟೆಂಡರ್ ಉಪಸಮಿತಿ/ ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮೀಸಲಾತಿ ನಿಗಧಿಪಡಿಸಿ, ಅಧಿಸೂಚನೆ ಹೊರಡಿಸಿ, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕ್ರಮವಹಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಅನುಮೋದಿಸಲಾಯಿತು.

ಮುಂದುವರೆದು ದಿನಾಂಕ: 03.12.2024 ರಂದು ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಿರುವಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಗುರುತಿಸಲಾಗಿದ್ದ 03 ಮರಳು ಬ್ಲಾಕ್‌ಗಳನ್ನು ಅಕಾರಾದಿಯಲ್ಲಿ ಕ್ರಮ ಸಂಖ್ಯೆ ಬರುವಂತೆ ಕ್ರಮವಹಿಸಿ ದಿನಾಂಕ: 02.01.2025 ರಂದು ನಡೆದ ಮರಳು ಟೆಂಡರ್ ಉಪಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ಮೀಸಲಾತಿ ನಿಗಧಿಪಡಿಸಲಾಗಿರುತ್ತದೆ.

| ಕ್ರ.ಸಂ | ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಾತಿ |
|---|---|---|---|---|---|---|---|---|
| 1 | SB-51 | ಬ್ರಹ್ಮಾವರ | ಕಾಡೂರು | 230/2 | 4 | ಸೀತಾನದಿ | 20,000 | ಸಾಮಾನ್ಯ ವರ್ಗ |
| 2 | SB-52 | ಬೈಂದೂರು | ಬಡಾಕರೆ& ಮರವಂತೆ | 356 & 156 | 10.00 | ಕೊಲ್ಲೂರು ನದಿ | 69,660 | ಸಾಮಾನ್ಯ ವರ್ಗ |
| 3 | SB-53 | ಕುಂದಾಪುರ | ಹಳ್ನಾಡು | 56 | 4.65 | ಹಾಲಾಡಿ ಹೊಳೆ | 32,353 | ಪರಿಶಿಷ್ಟ ಜಾತಿ |

ಆದರೆ ಬೈಂದೂರು ತಾಲ್ಲೂಕಿನ ಬಡಾಕೆರೆ & ಮರವಂತೆ ಗ್ರಾಮದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-52 ನ್ನು ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರು ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸುವಂತೆ ಕೋರಿರುವುದರಿಂದ ಸದರಿ ಮರಳು ಬ್ಲಾಕ್ ಸಂಖ್ಯೆ: SB-52 ನ್ನು ಸರ್ಕಾರಿ ಕಾಮಗಾರಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಮರಳು ಬ್ಲಾಕ್ ಸಂಖ್ಯೆ: SB-53 ನ್ನು ಮತ್ತೊಮ್ಮೆ ಟೆಂಡರ್ ಉಪಸಮಿತಿಯಲ್ಲಿ ಮಂಡಿಸಿ, ಮೀಸಲಾತಿ ನಿಗಧಿಪಡಿಸಿ ಅಧಿಸೂಚನೆ ಹೊಡಿಸಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು ದಿನಾಂಕ: 18.01.2025 ರಂದು ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮರಳು ಬ್ಲಾಕ್ ಸಂಖ್ಯೆ: SB-12 & SB-13 ರ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ವಶಪಡಿಸಿಕೊಂಡ ಮರಳನ್ನು ಕೆ.ಆರ್.ಐ.ಡಿ.ಎಲ್ ಇಲಾಖೆಗೆ 20,000 ಮೆ.ಟನ್ ಮರಳು ಹಾಗೂ ಲೋಕೋಪಯೋಗಿ ಇಲಾಖೆಗೆ 2,064 ಮೆ.ಟನ್ ಮರಳನ್ನು ಖನಿಜ ಸಾಗಾಟ ಪರವಾನಿಗೆ ಮುಖಾಂತರ ನಿಯಮಾನುಸಾರ ವಿಲೇವಾರಿಗೆ ಕ್ರಮವಹಿಸಲು ನಿರ್ಣಯಿಸಲಾಗಿದ್ದು, ಈ ಕುರಿತು ಮಾನ್ಯ ಪೊಲೀಸ್ ಅಧೀಕ್ಷಕರು ಸಭೆಯಲ್ಲಿ ವಿಚಾರಿಸಿದಾಗ, ಪ್ರಸ್ತುತ ಸರ್ಕಾರಿ ಕಾಮಗಾರಿಗೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗದೇ ಇರುವುದರಿಂದ ಸದರಿ ಅನಧಿಕೃತ ಗಣಿಗಾರಿಕೆ ಪ್ರದೇಶದಿಂದ ವಶಕ್ಕೆ ಪಡೆಯಲಾದ ಮರಳಿಗೆ ಕೆ.ಆರ್.ಐ.ಡಿ.ಎಲ್ /ಲೋಕೋಪಯೋಗಿ ಇಲಾಖೆಯಿಂದ ಇದುವರೆಗೆ ರಾಜಧನ ಪಾವತಿಸಲಾಗಿರುವುದಿಲ್ಲ ಎಂಬುದಾಗಿ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಬ್ರಹ್ಮಾವರ ತಾಲ್ಲೂಕಿನ ಬೆಣ್ಣೆಕುದ್ರು ಹಾಗೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸರ್ಕಾರಿ ಕಾಮಗಾರಿಗಳು ನಡೆಯುತ್ತಿದ್ದು, ಸದರಿ ಕಾಮಗಾರಿಗಳಿಗೆ ಯಾವ ಮೂಲದಿಂದ ಮರಳನ್ನು ಉಪಯೋಗಿಸಲಾಗುತ್ತಿದೆ ಎಂಬ ಬಗ್ಗೆ ಪರಿಶೀಲಿಸಲು ಸದರಿ ಕಾಮಗಾರಿಗಳ ಪ್ರದೇಶದಲ್ಲಿ ಕಡ್ಡಾಯವಾಗಿ ಸಂಬಂಧಪಟ್ಟ ತಾಲ್ಲೂಕು ಭೂವಿಜ್ಞಾನಿಯವರನ್ನು ನೇಮಿಸಿ ವರದಿ ಪಡೆಯಲು ಹಾಗೂ ಅನಧಿಕೃತ ಮರಳು ಗಣಿಗಾರಿಕೆ ಪ್ರದೇಶದಿಂದ ಮರಳನ್ನು ಪಡೆಯುತ್ತಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲು ಪೊಲೀಸ್ ಅಧೀಕ್ಷಕರು ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಿದರು.

**ವಿಷಯಸೂಚಿ-6: ಉಡುಪಿ ನಗರಸಭಾ ವ್ಯಾಪ್ತಿಗೆ ನೀರು ಸರಬರಾಜು ಮಾಡುವ ಬಜೆ ಡ್ಯಾಮ್‌ನ ಮೇಲ್ಭಾಗದಿಂದ ಶಿರೂರು ಡ್ಯಾಮ್‌ವರೆಗಿನ ನದಿ ಪಾತ್ರದಲ್ಲಿ ಶೇಖರಣೆಯಾದ ಹೂಳನ್ನು ತೆರವುಗೊಳಿಸಲು ಅನುಮೋದನೆ ಕೋರಿರುವ ಕುರಿತು.**

ಉಡುಪಿ ನಗರಸಭಾ ವ್ಯಾಪ್ತಿಗೆ ನೀರು ಸರಬರಾಜು ಮಾಡುವ ಬಜೆ ಡ್ಯಾಮ್‌ನ ಮೇಲ್ಭಾಗದಿಂದ ಶಿರೂರು ಡ್ಯಾಮ್‌ವರೆಗಿನ ನದಿ ಪಾತ್ರದಲ್ಲಿ ಹೂಳು ತುಂಬಿ ನೀರು ಶೇಖರಣೆಗೆ ತೊಂದರೆಯಾಗಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುತ್ತಿರುವುದರಿಂದ ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಈ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಲ್ಲಿ ಅನುಮೋದನೆ ಕೋರಿ ಪೌರಾಯುಕ್ತರು, ಉಡುಪಿ ನಗರಸಭೆ ರವರು ದಿನಾಂಕ: 24.01.2025 ರಂದು ಪತ್ರವನ್ನು ಸಲ್ಲಿಸಿರುತ್ತಾರೆ. ಬಜೆ ಡ್ಯಾಮ್‌ನಲ್ಲಿ ಹೂಳಿನಲ್ಲಿ ದೊರಕುವ ಮರಳನ್ನು ತೆರವುಗೊಳಿಸಲು ಈಗಾಗಲೇ 03 ಮರಳು ಬ್ಲಾಕ್‌ಗಳನ್ನು ಗುರುತಿಸಿ ನಗರಸಭೆ, ಉಡುಪಿರವರಿಗೆ ಆಶಯ ಪತ್ರವನ್ನು ನೀಡಲಾಗಿದ್ದು, ಇದುವರೆಗೆ ಹೂಳು ತೆಗೆಯುವ ಕಾರ್ಯ ಪ್ರಾರಂಭಿಸಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ-6:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬಜೆ ಡ್ಯಾಮ್‌ನಲ್ಲಿ ಶೇಖರಣೆಯಾಗಿರುವ ಹೂಳನ್ನು ತೆರವುಗೊಳಿಸದಿದ್ದಲ್ಲಿ ಮುಂಬರುವ ಬೇಸಿಗೆಕಾಲದಲ್ಲಿ ನೀರನ್ನು ಪೂರೈಸಲು ಕಷ್ಟ ಸಾಧ್ಯವಾಗುವುದರಿಂದ ಸದರಿ

ಬಜೆ ಡ್ಯಾಮ್‌ನಲ್ಲಿ ಹೂಳನ್ನು ತೆರವುಗೊಳಿಸುವ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಪೌರಾಯುಕ್ತರು, ನಗರ ಸಭೆ, ಉಡುಪಿ ರವರಿಗೆ ತಿಳಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–7: **Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ.**

Udupi e-Sand App ತಂತ್ರಾಂಶದ ನಿರ್ವಹಣೆಗಾಗಿ Axis Bank, Manipal Branch ನಲ್ಲಿ ತೆರೆಯಲಾದ ಬ್ಯಾಂಕ್ ಖಾತೆಯಿಂದ ವಾಹನ ಮಾಲೀಕರಿಗೆ ಹಾಗೂ ಮರಳು ಪರವಾನಿಗೆದಾರರಿಗೆ ಪ್ರಸ್ತುತ ಚೆಕ್ ಮುಖಾಂತರ ಪಾವತಿ ಮಾಡಲಾಗುತ್ತಿದ್ದು, ಇದರಿಂದ ಕೆಲವೊಮ್ಮೆ ವಿಳಂಬವಾಗುತ್ತಿರುವುದರಿಂದ ತೊಂದರೆಯಾಗುತ್ತಿರುವುದಾಗಿ ದೂರುಗಳು ಸ್ವೀಕೃತವಾಗುತ್ತಿರುವುದರಿಂದ Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ–7: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ ವಾಹನ ಮಾಲೀಕರಿಗೆ ಹಾಗೂ ಮರಳು ಪರವಾನಿಗೆದಾರರಿಗೆ ಸೂಕ್ತ ಸಮಯದಲ್ಲಿ ಪಾವತಿ ಮಾಡಲು ಸಾಧ್ಯವಾಗುವುದರಿಂದ Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲು ಕೂಡಲೇ ಕ್ರಮವಹಿಸುವಂತೆ ಹಾಗೂ ಸರ್ಕಾರಿ ಇಲಾಖೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆಗಳನ್ನು ತೆರೆಯಲು ಸರ್ಕಾರದ ಆದೇಶವಾಗಿರುವುದರಿಂದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ಬ್ಯಾಂಕ್ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆರೆಯಲು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ, ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ
ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

(ಡಾ. ಕೆ. ವಿದ್ಯಾಕುಮಾರಿ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

## ದಿನಾಂಕ: 19.05.2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು:

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| 1. | ಮಾನ್ಯ ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಉಡುಪಿ | ಅಧ್ಯಕ್ಷರು |
| 2. | ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ | ಸದಸ್ಯರು |
| 3. | ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ಉಡುಪಿ ಜಿಲ್ಲೆ, ಉಡುಪಿ (ಪರವಾಗಿ) | ಸದಸ್ಯರು |
| 4. | ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ, ಕುಂದಾಪುರ | ಸದಸ್ಯರು |
| 5. | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ | ಸದಸ್ಯರು |
| 6. | ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾರಿಗೆ ಇಲಾಖೆ, ಉಡುಪಿ | ಸದಸ್ಯರು |
| 7. | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಗಳೂರು | ಸದಸ್ಯರು |
| 8. | ತಹಶೀಲ್ದಾರರು, ಬ್ರಹ್ಮಾವರ/ ಕುಂದಾಪುರ/ ಬೈಂದೂರು/ ಹೆಬ್ರಿ/ ಕಾರ್ಕಳ/ ಕಾಪು | ಸದಸ್ಯರು |
| 9. | ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ (ಪರವಾಗಿ) | ಆಹ್ವಾನಿತರು |
| 10. | ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ (ಪರವಾಗಿ) | ಆಹ್ವಾನಿತರು |
| 11. | ಕಾರ್ಯಪಾಲಕ ಅಭಿಯಂತರರು. ಕೆ.ಆರ್.ಐ.ಡಿ.ಎಲ್, ಉಡುಪಿ | ಆಹ್ವಾನಿತರು |
| 12. | ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ–ಕ್ವಿಮಿಪ್–ಪಿ.ಐ.ಯು, ಉಡುಪಿ | ಆಹ್ವಾನಿತರು |
| 13. | ಪೌರಾಯುಕ್ತರು, ನಗರಸಭೆ, ಉಡುಪಿ | ಆಹ್ವಾನಿತರು |
| 14. | ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ | ಸದಸ್ಯ ಕಾರ್ಯದರ್ಶಿ |

ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಇತರೆ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಕಾರ್ಯಸೂಚಿಯ ಬಗ್ಗೆ ತಿಳಿಸಿಕೊಡುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ಅದರಂತೆ ಹಿರಿಯ ಭೂವಿಜ್ಞಾನಿಯವರು ಸಭೆಯಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಗಳ ವಿವರ ನೀಡಿದರು. ಅದರಂತೆ ಈ ಕೆಳಗಿನ ಕಾರ್ಯಸೂಚಿಗಳನ್ವಯ ನಿರ್ಣಯ ಕೈಗೊಳ್ಳಲಾಯಿತು.

<u>ವಿಷಯಸೂಚಿ–1.1</u>: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಕುರಿತು.

<table>
<tr><th colspan="4">ಮರಳು ಬ್ಲಾಕ್ ಗಳ ವಿವರ</th><th>ಒಟ್ಟು ಮರಳು ಬ್ಲಾಕ್ ಗಳ ಸಂಖ್ಯೆ</th><th>ಪರಿಸರ ವಿಮೋಚನಾ ಪತ್ರದಲ್ಲಿ ನಿಗಧಿಪಡಿಸಿರುವ ಮರಳಿನ ಪ್ರಮಾಣ (ಮೆ.ಟನ್)</th><th>ಪ್ರಸಕ್ತ ಸಾಲಿನಲ್ಲಿ ತೆರವುಗೊಳಿಸಿರುವ ಮರಳಿನ ಪ್ರಮಾಣ (ಮೆ.ಟನ್)</th><th>ಉಳಿಕೆ ಇರುವ ಮರಳಿನ ಪ್ರಮಾಣ (ಮೆ.ಟನ್)</th></tr>
<tr><td colspan="3" rowspan="3">I, II, III ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾಗಿದ್ದು, ಸದರಿ ಮರಳು ನಿಕ್ಷೇಪಗಳ ವಿವರ</td><td>Working</td><td>27</td><td>59723</td><td>14160</td><td>50901</td></tr>
<tr><td>Idle</td><td>10</td><td>12062</td><td>0</td><td>12062</td></tr>
<tr><td>TOTAL (A)</td><td>37</td><td>71785</td><td>14160</td><td>62963</td></tr>
<tr><td rowspan="10">IV, V & VI ನೇ ಶ್ರೇಣಿಯ ನದಿ ಪಾತ್ರಗಳಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ</td><td rowspan="5">ಮರಳು ಗುತ್ತಿಗೆ ಮಂಜೂರು ಮಾಡಲಾದ ಮರಳು ಬ್ಲಾಕ್ ಗಳು</td><td rowspan="2">Tender Blocks</td><td>Working</td><td>4</td><td>50086</td><td>21482</td><td>28604</td></tr>
<tr><td>Idle</td><td>1</td><td>24465</td><td>0</td><td>24465</td></tr>
<tr><td rowspan="2">GOVT Blocks</td><td>Working</td><td>7</td><td>279223</td><td>69736</td><td>209487</td></tr>
<tr><td>Idle</td><td>2</td><td>30971</td><td>0</td><td>30971</td></tr>
<tr><td colspan="2">TOTAL (B)</td><td>14</td><td>384745</td><td>91218</td><td>293527</td></tr>
<tr><td rowspan="3">ಮರಳು ಗುತ್ತಿಗೆ ಮಂಜೂರು ಮಾಡಲು ಬಾಕಿ ಇರುವ ಮರಳು ಬ್ಲಾಕ್ ಗಳು</td><td colspan="2">Tender Blocks</td><td>16</td><td>297187</td><td>0</td><td>297187</td></tr>
<tr><td colspan="2">GOVT Blocks</td><td>6</td><td>141339</td><td>0</td><td>141339</td></tr>
<tr><td colspan="2">TOTAL (C )</td><td>22</td><td>438526</td><td>0</td><td>438526</td></tr>
<tr><td colspan="3">ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವ ಮರಳು ಬ್ಲಾರ್ ಗಳ ಸಂಖ್ಯೆ (D)</td><td>11</td><td>239328</td><td>0</td><td>239328</td></tr>
<tr><td colspan="3">ಪ್ರಸ್ತುತ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಗುರುತಿಸಿರುವ ಮರಳು ಬ್ಲಾಕ್ ಗಳ ಸಂಖ್ಯೆ (E)</td><td>14</td><td>433925</td><td>0</td><td>433925</td></tr>
<tr><td colspan="4">IV, V & VI ನೇ ಶ್ರೇಣಿಯ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ವ್ಯಾಪ್ತಿಯಲ್ಲಿ ಹೂಳಿನಲ್ಲಿ ದೊರಕುವ ಮರಳನ್ನು ತೆಗೆಯಲು (Desilting) ಗುರುತಿಸಲಾಗಿರುವ ಮರಳು ಬ್ಲಾಕ್‌ಗಳ ವಿವರ (F)</td><td>3</td><td>425404</td><td>0</td><td>425404</td></tr>
<tr><td colspan="4">ಒಟ್ಟು (A+B+C+D+E+F)</td><td>101</td><td>1993713</td><td>105378</td><td>1893673</td></tr>
</table>

ಪ್ರಸ್ತುತ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ ಮರಳು ಬ್ಲಾಕ್‌ಗಳ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಸಭೆಗೆ ಮಂಡಿಸುತ್ತಾ, ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಲಾದ 37 ಮರಳು ಬ್ಲಾಕ್‌ಗಳಲ್ಲಿ 27 ಮರಳು ಬ್ಲಾಕ್‌ಗಳಲ್ಲಿ ಮರಳು ತೆಗೆಯುವ ಕಾರ್ಯವನ್ನು ನಿರ್ವಹಿಸುತ್ತಿದ್ದು, ಉಳಿದ 10 ಮರಳು ಬ್ಲಾಕ್‌ಗಳಲ್ಲಿ ರಸ್ತೆ ಹಾಗೂ ಇನ್ನಿತರೆ ಸಮಸ್ಯೆಗಳಿಂದ ಮರಳು ತೆಗೆಯುವ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ ಹಾಗೂ ಟೆಂಡರ್ ಮರಳು ಬ್ಲಾಕ್‌ಗಳಲ್ಲಿ 01, ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ 02 ಮರಳು ಬ್ಲಾಕ್‌ಗಳಲ್ಲಿ ಪ್ರಸ್ತುತ ಅವಧಿಯಲ್ಲಿ ಮರಳು ತೆಗೆಯುವ ಕಾರ್ಯವನ್ನು ನಿರ್ವಹಿಸಿರುವುದಿಲ್ಲ ಮತ್ತು ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರ ನೀಡಿರುವ ಅವಧಿ ಮುಕ್ತಾಯಗೊಂಡ 99 ಮರಳು ನಿಕ್ಷೇಪಗಳನ್ನು ಮರು ಪರಿಶೀಲಿಸಲಾಗಿದ್ದು, ಸದರಿ ಮರಳು ನಿಕ್ಷೇಪಗಳಲ್ಲಿ ಮರಳಿನ ಲಭ್ಯತೆ ಇರುವುದು ಕಂಡುಬಂದಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 1.1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಯಿತು.

- ಪರಿಸರ ವಿಮೋಚನಾ ಪತ್ರದಲ್ಲಿನ ಷರತ್ತುಗಳನ್ವಯ ದಿನಾಂಕ:05.06.2025 ರಿಂದ ದಿನಾಂಕ: 15.10.2025 ರವರೆಗೆ ಮರಳು ಗಣಿಗಾರಿಕೆಗೆ ನಿಷೇಧವಿದ್ದು, ಪ್ರಸ್ತುತ ಮಳೆಗಾಲ ಪ್ರಾರಂಭವಾಗಿರುವುದರಿಂದ ಸಿಡಿಲು/ಮಳೆಯ ಆಘಾತಗಳಿಂದ ಕಾರ್ಮಿಕರ ಹಿತರಕ್ಷಣೆ ಹಾಗೂ ಮೀನುಗಳ ಸಂತಾನೋತ್ಪತ್ತಿಗೆ ಹಾನಿಯಾಗದಂತೆ ಕ್ರಮವಹಿಸುವ ಸಂಬಂಧ ತಕ್ಷಣದಿಂದ ಜಾರಿಗೆ ಬರುವಂತೆ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಮರಳು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಸಾಗಾಣಿಕೆಯನ್ನು ತಡೆಗಟ್ಟುವ ಸಂಬಂಧ ಜೂನ್ 05 ನೇ ತಾರೀಖಿನೊಳಗಾಗಿ ಮರಳು ದಾಸ್ತಾನು ಕೇಂದ್ರಗಳಲ್ಲಿ ದಾಸ್ತಾನಿರಿಸಿದ ಮರಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಮರಳು ಗಣಿ ಗುತ್ತಿಗೆದಾರರಿಗೆ/ಸರ್ಕಾರಿ ಇಲಾಖೆಗಳಿಗೆ ಪತ್ರ ಬರೆಯಲು ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಲಾಯಿತು.
- ಜೂನ್ 05 ನೇ ತಾರೀಖಿನ ನಂತರ ಸಂಬಂಧಪಟ್ಟ ಭೂವಿಜ್ಞಾನಿಗಳು ಮರಳು ದಾಸ್ತಾನು ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಮರಳಿನ ದಾಸ್ತಾನಿರುವುದು ಕಂಡುಬಂದಲ್ಲಿ ಸದರಿ ಮರಳನ್ನು ವಶಪಡಿಸಿಕೊಂಡು ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಂಡು ಮರಳಿನ ವಿಲೇವಾರಿಗೆ ಸಂಬಂಧಿಸಿದ ತಾಲ್ಲೂಕು ಭೂವಿಜ್ಞಾನಿಯವರು ಹಾಗೂ ತಹಶೀಲ್ದಾರರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.
- ಮರಳು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ನದಿ ದಂಡೆ ಕುಸಿಯದಂತೆ ಹಾಗೂ ಅತೀ ಆಳದ ಗಣಿಗಾರಿಕೆ ನಡೆಸದಂತೆ ಪರಿಸರ ವಿಮೋಚನಾ ಪತ್ರದ ಷರತ್ತಿನನ್ವಯ 03 ಮೀಟರ್ ಆಳದವರೆಗೆ ಸೀಮೀತಗೊಳಿಸುವಂತೆ ಹಾಗೂ ಅನಧಿಕೃತ ಗಣಿಗಾರಿಕೆಯಿಂದಾಗಿ ಪಕ್ಕದ ಕೃಷಿ ಹಾಗೂ ಇತರೆ ಭೂಮಿಗಳಿಗೆ ಹಾನಿಯುಂಟಾಗದಂತೆ ಕ್ರಮ ಕೈಗೊಳ್ಳಬೇಕಾಗಿದ್ದು, ಈ ಸಂಬಂಧ ಪರಿಸರ ವಿಮೋಚನಾ ಪತ್ರದಲ್ಲಿ ಷರತ್ತುಗಳನ್ವಯ ಮರಳು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗಣಿಗಾರಿಕೆ/ ಸಾಗಾಣಿಕೆ ಕಾರ್ಯ ನಡೆಸುತ್ತಿರುವ ಬಗ್ಗೆ ಕಾಲ ಕಾಲಕ್ಕೆ ಸದರಿ ಮರಳು ಗಣಿ ಗುತ್ತಿಗೆ ಪ್ರದೇಶಗಳಿಗೆ ಸಂಬಂಧಿಸಿದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ಸದಸ್ಯರು/ ತಾಲ್ಲೂಕು ಭೂವಿಜ್ಞಾನಿಯವರು ಭೇಟಿ ನೀಡಿ ಪರಿಶೀಲಿಸಿ 07 ದಿನಗಳಲ್ಲಿ ವರದಿಯನ್ನು ಸಲ್ಲಿಸಲು ಸಭೆಯಲ್ಲಿ ಸೂಚಿಸಲಾಯಿತು.
- ದಿನಾಂಕ: 16.05.2025 ರಂದು ಸಂಬಂಧಪಟ್ಟ ತಾಲ್ಲೂಕು ಭೂವಿಜ್ಞಾನಿಯವರು ನೀಡಿರುವ ವರದಿಯನ್ವಯ ಗ್ರಾಮ ಪಂಚಾಯತ್‌ಗಳಿಗೆ ಈ ಹಿಂದೆ ಆಶಯ ಪತ್ರ ನೀಡಿದ ಅವಧಿ ಮುಕ್ತಾಯಗೊಂಡ 99 ಮರಳು ಬ್ಲಾಕ್‌ಗಳಲ್ಲಿ ಮರಳಿನ ಲಭ್ಯತೆ ಇಲ್ಲದೇ ಇರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ಕೈಬಿಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಪ್ರಸ್ತುತ ನಿಷ್ಕ್ರಿಯವಾಗಿರುವ ಮರಳು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಅಕ್ಟೋಬರ್ 15 ರ ನಂತರ ಮರಳು ಗಣಿಗಾರಿಕೆ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಹಿರಿಯ ಭೂವಿಜ್ಞಾನಿಯವರಿಗೆ/ ಸರ್ಕಾರಿ ಕಾಮಗಾರಿ ನಿರ್ವಹಿಸುವ ಇಲಾಖೆ/ ನಿಗಮ ಮಂಡಳಿಗಳಿಗೆ ಸಭೆಯಲ್ಲಿ ಸೂಚಿಸಿ, ಮೇಲ್ಕಂಡಂತೆ ಕೈಗೊಂಡ ತೀರ್ಮಾನಗಳಿಗೆ ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯಸೂಚಿ–1.2: ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆಗಳಿಂದ **Udupi e-Sand App** ಮುಖಾಂತರ ವಿಲೇವಾರಿ ಮಾಡಲಾದ ಮರಳಿನ ಪ್ರಮಾಣದ ವಿವರ.

ದಿನಾಂಕ: 03.12.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಲ್ಲಿನ ವಾರ್ಷಿಕ ಉತ್ಪಾದನೆಯ 75% ರಷ್ಟು ಪ್ರಮಾಣದ ಮರಳನ್ನು ಸಂಬಂಧಪಟ್ಟ ಇಲಾಖೆಯ ಸರ್ಕಾರಿ ಕಾಮಗಾರಿಗಳಿಗೆ ಮತ್ತು ಉಳಿದ 25% ರಷ್ಟು ಪ್ರಮಾಣದ ಮರಳನ್ನು ಜಿಲ್ಲಾ ವ್ಯಾಪ್ತಿಯಲ್ಲಿನ ವಸತಿ ಮನೆ/ MGNREGA / ಇತರೆ ಕಾಮಗಾರಿಗಳಿಗೆ ಪೂರೈಸಲು ತೀರ್ಮಾನಿಸಲಾಗಿದ್ದು, ಅದರಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾದ ಮರಳು ಗಣಿ ಗುತ್ತಿಗೆಗಳಿಂದ Udupi e-Sand App ಮುಖಾಂತರ ಪೂರೈಸಲಾದ ಮರಳಿನ ಪ್ರಮಾಣದ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| SL No | Lease No | Lease Holder Name | FY 2024-25 | | | FY 2025-26(Till 16th May 2025) | | |
|---|---|---|---|---|---|---|---|---|
| | | | Total MT Delivered against Public Booking | Total MT Delivered against Govt. Orders | Total MT's Delivered | Total MT Delivered against Public Booking | Total MT Delivered against Govt. Orders | Total MT's Delivered |
| 1 | UDPNS451 | KRIDL-Balkuru | 10884 | 0 | 10884 | 2201 | 11205 | 13406 |
| 2 | UDPNS452 | KRIDL-Karkada | 0 | 0 | 0 | 325 | 3132 | 3457 |
| 3 | UDPNS454 | KRIDL-Katbelturu | 8557 | 0 | 8557 | 2326 | 6206 | 8519 |
| 4 | UDPNS458 | KRIDL-Molahalli | 8541 | 3106 | 11647 | 101 | 591 | 682 |
| 5 | UDPNS455 | Port & Fisheries | 13309 | 0 | 13309 | 4535 | 3677 | 8202 |
| 6 | UDPNS457 | PWD-Halnadu | 12150 | 0 | 12150 | 3823 | 10912 | 14709 |
| 7 | UDPNS459 | RDWSD-Halnad | 0 | 0 | 0 | 2195 | 7400 | 9595 |
| 8 | UDPNSAOS03 | Jagadeesh Shetty | 3580 | 0 | 3580 | 1005 | 0 | 1005 |
| 9 | UDPNSAOS04 | Bhujanga | 45782 | 0 | 45782 | 10577 | 0 | 10577 |
| 10 | UDPNSAOS05 | Vincent Prakash Almeda | 2929 | 0 | 2929 | 349 | 0 | 349 |
| 11 | UDPNSAOS06 | Mahabala Naik | 3377 | 0 | 3377 | 0 | 0 | 0 |
| 12 | UDPNSAOS07 | Narasimha Poojary | 187 | 0 | 187 | 705 | 0 | 702 |
| Grand Total (in MT) | | | 1,09,386 | 3,106 | 1,12,292 | 28,142 | 43,123 | 71,265 |

ನಿರ್ಣಯ–1.2: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಸ್ವೀಕೃತವಾಗುತ್ತಿರುವುದರಿಂದ, ಸದರಿ ಮರಳು ಬ್ಲಾಕ್‌ಗಳಿಂದ ಮರಳು ಬಳಕೆಯಾಗಿರುವ ಸರ್ಕಾರಿ ಕಾಮಗಾರಿಗಳ ವಿವರ ಹಾಗೂ ಸದರಿ ಸರ್ಕಾರಿ ಕಾಮಗಾರಿಗಳಿಗೆ ಅವಶ್ಯಕವಿರುವ ಮರಳಿನ ಪ್ರಮಾಣ, ಪೂರೈಕೆಯಾಗಿರುವ ಮರಳಿನ ಪ್ರಮಾಣ ಬಗ್ಗೆ ಪತ್ರದ ಮೂಲಕ ಸ್ಪಷ್ಟ ವರದಿಯನ್ನು 03 ದಿನಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಲ್ಲಿಸಲು ನೀಡಲು ಸಭೆಯಲ್ಲಿ ಹಾಜರಿದ್ದ ಸರ್ಕಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–1.3: ಮರಳು ಗಣಿ ಗುತ್ತಿಗೆ ಮಂಜೂರಾತಿ ಮಾಡಲು ಬಾಕಿ ಇರುವ ಮರಳು ಬ್ಲಾಕ್‌ಗಳು.

ವಿಷಯಸೂಚಿ–1.3.1: ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಲ್ಲಿ, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ ರವರಿಗೆ ದಿನಾಂಕ: 15.01.2021 ರಂದು ಆಶಯ ಪತ್ರವನ್ನು ನೀಡಲಾಗಿದ್ದು, ಸದರಿಯವರು ಇದುವರೆಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. ನಿಯಮಾನುಸಾರ ಆಶಯ ಪತ್ರ ನೀಡಿದ 06 ತಿಂಗಳೊಳಗಾಗಿ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಬೇಕಾಗಿರುತ್ತದೆ. ಅದರಂತೆ ಪರಿಸರ ವಿಮೋಚನಾ ಪತ್ರವನ್ನು ಸಲ್ಲಿಸುವಂತೆ ಸದರಿಯವರಿಗೆ ದಿನಾಂಕ: 31.05.2023, 25.07.2023 ಹಾಗೂ 30.08.2023 ರಂದು ಪತ್ರ ಬರೆಯಲಾಗಿದ್ದು, ಇದುವರೆಗೆ ಪರಿಸರ ವಿಮೋಚನಾ ಪತ್ರವನ್ನು ಇದುವರೆಗೆ ಸಲ್ಲಿಸಿರುವುದಿಲ್ಲ. ಪ್ರಸ್ತುತ ಸದರಿಯವರಿಗೆ ಮೀಸಲಿರಿಸಿರುವ ಮರಳು ಬ್ಲಾಕ್ ಸಂಖ್ಯೆ: 12 & 13 ನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯ ಕಾಮಗಾರಿಗಾಗಿ ಮೀಸಲಿರಿಸುವಂತೆ ಮನವಿ ಸ್ವೀಕೃತವಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು & ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಿರಿಸಿದ ಸರ್ಕಾರಿ ಇಲಾಖೆ | ಆಶಯ ಪತ್ರ ನೀಡಿದ ದಿನಾಂಕ | ಕ್ವಾರಿ ಪ್ಲಾನ್ ಅನುಮೋದಿತ ದಿನಾಂಕ | ಮರಳು ಗುತ್ತಿಗೆ ಮಂಜೂರು ಮಾಡಲು ಬಾಕಿ ಇರಲು ಕಾರಣ |
|---|---|---|---|---|---|---|---|---|---|---|
| 1 | 12 | ಕುಂದಾಪುರ ಶಂಕರ ನಾರಾಯಣ | 295 | 1.50 | ವರಾಹಿ | 7303 | ಕರ್ನಾಟಕ ನೀರಾವರಿ ನಿಗಮ ನಿಯಮಿತ, ವರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ | 15.01.2021 | 18.01.2021 | ಇದುವರೆಗೆ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. ಪ್ರಸ್ತುತ ಮರಳು ಬ್ಲಾಕ್ ಸಂಖ್ಯೆ: 12 ನ್ನು ವರಾಹಿ ಜಲಾಶಯ ಯೋಜನಾ ವಿಭಾಗದ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುತ್ತಾರೆ. ಹಾಗೂ ಮರಳು ಬ್ಲಾಕ್ ಸಂಖ್ಯೆ: 13 ನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಗೆ ಮೀಸಲಿರಿಸುವಂತೆ ಕೋರಿರುತ್ತಾರೆ |
| 2 | 13 | ಕುಂದಾಪುರ ಮೊಳಹಳ್ಳಿ | 249 | 1.00 | ವರಾಹಿ | 5216 | | 15.01.2021 | 18.01.2021 | |
| 3 | 30 | ಕಾರ್ಕಳ ಕೌಡೂರು | 229/1ಎ | 1.00 | ಸುಧಾಹೊಳೆ | 3479 | | 15.01.2021 | 18.01.2021 | |
| 4 | 32 | ಕಾರ್ಕಳ ಕುಕ್ಕುಜೆ | 59 | 1.00 | ತೀರ್ಥೊಟ್ಟು ಹೊಳೆ | 6957 | | 15.01.2021 | 18.01.2021 | |
| 5 | SB-52 | ಬೈಂದೂರು ಬಡಾಕೆರೆ & ಮರವಂತೆ | 36 & 156 | 10.00 | ಕೊಲ್ಲೂರು ನದಿ | 69,660 | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ | 01.04.2025 | - | ಕ್ವಾರಿಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. |
| 6 | SB-55 | ಬೈಂದೂರು ನಾಡ & ಮರವಂತೆ | 156 & 81 | 7.00 | ಕೊಲ್ಲೂರು ನದಿ | 48,724 | ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ | 01.04.2025 | - | |
| ಒಟ್ಟು | | | | | | 1,41,339 | | | | |

ನಿರ್ಣಯ–1.3.1: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ರವರಿಗೆ ಮೀಸಲಿರಿಸಿ ಆಶಯ ಪತ್ರ ನೀಡಿರುವ 04 ಮರಳು ಬ್ಲಾಕ್‌ಗಳಲ್ಲಿ ಮರಳು ಬ್ಲಾಕ್ ಸಂಖ್ಯೆ: 12 ನ್ನು ವಾರಾಹಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ ರವರಿಗೆ ಮೀಸಲಿರಿಸಿ, ಪರಿಸರ ವಿಮೋಚನಾ ಪತ್ರ ಪಡೆದು ಸಲ್ಲಿಸಿ, ಮರಳು ಗುತ್ತಿಗೆ ಮಂಜೂರಾತಿ ಪಡೆಯಲು ಶೀಘ್ರ ಕ್ರಮವಹಿಸುವಂತೆ ಸದರಿ ಇಲಾಖೆಗೆ ಪತ್ರ ಬರೆಯಲು ಹಾಗೂ

ಮರಳು ಬ್ಲಾಕ್ ಸಂಖ್ಯೆ: 13 ನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ, ಉಡುಪಿ ರವರಿಗೆ ಮೀಸಲಿರಿಸಿ, ಅಧಿಸೂಚನೆ ಹೊರಡಿಸಿ ಆಶಯ ಪತ್ರ ನೀಡುವ ಕುರಿತು ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಮರಳು ಬ್ಲಾಕ್ ಸಂಖ್ಯೆ: 30 & 32 ಕ್ಕೆ ಸಂಬಂಧಿಸಿದಂತೆ ಇದುವರೆಗೆ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸದೇ ಇರುವುದರಿಂದ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ರವರಿಗೆ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಯಾವುದೇ ಆಸಕ್ತಿ ಇರುವುದಿಲ್ಲ ಎಂಬುದಾಗಿ ಪರಿಗಣಿಸಿ, ಸದರಿಯವರಿಗೆ ನೀಡಿರುವ ಆಶಯ ಪತ್ರವನ್ನು ರದ್ದುಪಡಿಸಿ, ಪತ್ರ ಮುಖೇನ ಸದರಿಯವರಿಗೆ ಮಾಹಿತಿಯನ್ನು ನೀಡಲು ಮತ್ತು ಸದರಿ ಮರಳು ಬ್ಲಾಕ್‌ಗಳಿಗೆ ಟೆಂಡರ್ ಉಪಸಮಿತಿ ಸಭೆಯಲ್ಲಿ ಮೀಸಲಾತಿಯನ್ನು ನಿಗಧಿಪಡಿಸಿಕೊಂಡು ಟೆಂಡರ್ ಕಂ-ಹರಾಜು ಪ್ರಕ್ರಿಯೆ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

ಮುಂದುವರೆದು ಮರಳು ಬ್ಲಾಕ್ ಸಂಖ್ಯೆ: SB-52 ಹಾಗೂ SB-55 ಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಕೆ.ಆರ್.ಐ.ಡಿ.ಎಲ್ ಹಾಗೂ ಬಂದರು ಮತ್ತು ಮೀನುಗಾರಿಕಾ ಇಲಾಖೆಯ ಅಧಿಕಾರಿಗಳಲ್ಲಿ ವಿಚಾರಿಸಲಾಗಿ, ಸದರಿ ಮರಳು ಬ್ಲಾಕ್‌ಗಳ ಅವಶ್ಯಕತೆ ಇರುವುದಾಗಿ ಸಭೆಯಲ್ಲಿ ತಿಳಿಸಿದರು. ಅದರಂತೆ ಸದರಿ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ: 01.04.2025 ರಂದು ನೀಡಿರುವ ಆಶಯ ಪತ್ರದಲ್ಲಿ ತಿಳಿಸಿರುವಂತೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು, ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಲು ಶೀಘ್ರ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

<u>ವಿಷಯಸೂಚಿ-1.3.2</u>: ಟೆಂಡರ್ ಕಂ ಹರಾಜು ಪ್ರಕ್ರಿಯೆ ಯಶಸ್ವಿಯಾದ ಈ ಕೆಳಕಂಡ 16 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ 06 ತಿಂಗಳೊಳಗಾಗಿ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು ಆಶಯ ಪತ್ರವನ್ನು ನೀಡಲಾಗಿದ್ದು, ಕ್ರ.ಸಂ.8 ರಿಂದ 16 ರವರೆಗಿನ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಇದುವರೆಗೆ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. ಮರಳು ಬ್ಲಾಕ್ ಸಂಖ್ಯೆ: SB-17 & SB-18 ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ಸದರಿ ಮರಳು ಬ್ಲಾಕ್‌ಗಳಿಗೆ ಮರಳು ಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಮರಳು ಬ್ಲಾಕ್ ಸಂಖ್ಯೆ: SB-16 ರ ಅಕ್ಷಾಂಶ-ರೇಖಾಂಶದಲ್ಲಿ ವ್ಯತ್ಯಾಸವಿರುವುದರಿಂದ ಮತ್ತೊಮ್ಮೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ಆಶಯ ಪತ್ರವನ್ನು ನೀಡಲು ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು & ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಯಶಸ್ವಿ ಬಿಡ್ಡುದಾರರು & ಮೀಸಲಾತಿ | EMD ಮೊತ್ತ | ಆಶಯ ಪತ್ರ ನೀಡಿದ ದಿನಾಂಕ | ಕ್ವಾರಿ ಪ್ಲಾನ್ ಅನುಮೋದಿತ ದಿನಾಂಕ | ಮರಳು ಗುತ್ತಿಗೆ ಮಂಜೂರು ಮಾಡಲು ಬಾಕಿ ಇರಲು ಕಾರಣ |
|---|---|---|---|---|---|---|---|---|---|---|---|
| 1 | DSB-5 | ಬ್ರಹ್ಮಾವರ ಹೊಸಾಳ ನಾಗರಮಠ | 140. 111 | 8.90 | ಸೀತಾನದಿ | 91,928 | ಶ್ರೀ ಬನ್ನಾಡಿ ಕುಶ ಕುಮಾರ್ (ಸಾಮಾನ್ಯ ವರ್ಗ) | 18,38,560/- | 15.11.2024 | 30.12.2024 | ದಿನಾಂಕ: 13.05.2025 ರಂದು ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. |

| | | | | | | | | | | | |
|---|---|---|---|---|---|---|---|---|---|---|---|
| 2 | SB-22 | ಬ್ರಹ್ಮಾವರ ಚೇರ್ಕಾಡಿ | 93 | 2.00 | ಮಡಿಸಾಲು ಹೊಳೆ | 13.918 | ಶ್ರೀ ಜಯರಾಮ ಶೆಟ್ಟಿ (ಸಾಮಾನ್ಯ ವರ್ಗ) | 2,78,360/- | 12.02.2024 | 24.02.2025 | ಸದರಿ ಮರಳು ಬ್ಲಾಕ್ ನ ಅಕ್ಷಾಂಶ ರೇಖಾಂಶದಲ್ಲಿ ವ್ಯತ್ಯಾಸವಿರುವುದರಿಂದ ಮರು ಜಂಟಿ ಮೋಜಣಿ ನಡೆಸಿ ಸರಿಪಡಿಸಲಾಗಿರುತ್ತದ |
| 3 | SB-33 | ಉಡುಪಿ ಬೆಳ್ಳಂಪಳ್ಳಿ | 11/1 | 1.10 | ಮಡಿಸಾಲು ಹೊಳೆ | 5.360 | ಶ್ರೀ ಜೋಗಪ್ಪ ಕುಂದರ್ (ಸಾಮಾನ್ಯ ವರ್ಗ) | 1,07,200/- | 12.02.2024 | - | ಸದರಿ ಬಿಡ್ಡುದಾರರು ಮರಣ ಹೊಂದಿರುವುದರಿಂದ ಕೇಂದ್ರ ಕಛೇರಿಯ ಮಾರ್ಗದರ್ಶನದಂತೆ ಸದರಿಯವರ ವಾರೀಸುದಾರರಾದ ಶ್ರೀ ಸುಶಾಂತ್ ರವರಿಗೆ ಆಶಯ ಪತ್ರವನ್ನು ವರ್ಗಾವಣೆ ಮಾಡಲಾಗಿರುತ್ತದೆ. |
| 4 | SB-11 | ಕುಂದಾಪುರ ರಟ್ಟಾಡಿ | 96 | 1.50 | ವರಾಹಿ | 7.304 | ಶ್ರೀ ಬಿ. ಅಶೋಕ್ ಕುಮಾರ್ ಶೆಟ್ಟಿ (ಸಾಮಾನ್ಯ ವರ್ಗ) | 1,46,080/- | 01.01.2025 | | ಸದರಿ ಮರಳು ಬ್ಲಾಕಿನ ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಜಂಟಿ ಮೋಜಣಿ ಕೈಗೊಂಡು ಸರಿಪಡಿಸಿ, ದಿನಾಂಕ: 01.01.2025 ರಂದು ಆಶಯ ಪತ್ರವನ್ನು ನೀಡಲಾಗಿರುತ್ತದ |
| 5 | SB-16 | ಬ್ರಹ್ಮಾವರ ಹೊಸೂರು | 7 | 3.00 | ಮಡಿಸಾಲು ಹೊಳೆ | 10.436 | ಶ್ರೀ ಜಯರಾಮ ಶೆಟ್ಟಿ (ಸಾಮಾನ್ಯ ವರ್ಗ) | 2,08,720/- | ಆಶಯ ಪತ್ರ ನೀಡಲು ಬಾಕಿ ಇರುತ್ತದೆ. ಸದರಿ ಮರಳು ಬ್ಲಾಕಿನ ಜಿ.ಪಿ.ಎಸ್ ಅಕ್ಷಾಂಶ-ರೇಖಾಂಶದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಜಂಟಿ ಮೋಜಣಿಗೆ ದಿನಾಂಕವನ್ನು ನಿಗಧಿಪಡಿಸಲಾಗಿದ್ದು, ಸದರಿ ದಿನದಂದು ಸರ್ವೆ ಇಲಾಖೆಯ ಅಧಿಕಾರಿಗಳು ಹಾಗೂ ಟೆಂಡರ್ ದಾರರು ಹಾಜರಾಗಿರುವುದಿಲ್ಲ. ಮತ್ತೊಮ್ಮೆ ಜಂಟಿ ಮೋಜಣಿಗೆ ದಿನಾಂಕವನ್ನು ನಿಗಧಿಪಡಿಸಿ ಮುಂದಿನ ಕ್ರಮವಹಿಸಲಾಗುವುದು. | | |
| 6 | SB-17 | ಬ್ರಹ್ಮಾವರ 33 ಶಿರೂರು | 76 | 1.50 | ಸೀತಾ | 6.782 | ಶ್ರೀ ಪವನ್ ಕುಮಾರ್ ಶೆಟ್ಟಿ (ಸಾಮಾನ್ಯ ವರ್ಗ) | 1,35,640/- | 24.03.2023 | - | ಡೀಮ್ಡ್ ಫಾರಸ್ಟ್ ವ್ಯಾಪ್ತಿಯಲ್ಲಿ ಬರುವುದರಿಂದ ಇದುವರೆಗೆ ಕ್ವಾರಿಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರ ಸ್ವೀಕೃತವಾಗಿರುವುದಿಲ್ಲ. |
| 7 | SB-18 | ಬ್ರಹ್ಮಾವರ 33 ಶಿರೂರು | 137 | 1.00 | ಸೀತಾ | 4.174 | ಶ್ರೀ ಪವನ್ ಕುಮಾರ್ ಶೆಟ್ಟಿ (ಸಾಮಾನ್ಯ ವರ್ಗ) | 83,480/- | 24.03.2023 | - | |
| 8 | SB-15 | ಕುಂದಾಪುರ ಅಂಪಾರು-2 | 1 | 3.00 | ಹಾಲಾಡಿ ಹೊಳೆ | 31.372 | ಶ್ರೀ ಹೆಚ್. ಕೆ. ದೇವಾನಂದ ಶೆಟ್ಟಿ (ಸಾಮಾನ್ಯ ವರ್ಗ) | 6,27,440/- | 24.03.2023 | - | ಕ್ವಾರಿಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. |
| 9 | SB-26 | ಬ್ರಹ್ಮಾವರ 52 ನೇ ಹೇರೂರು | 107 | 2.70 | ನಡ್ಪಾಲು ಹೊಳೆ | 18.790 | ಶ್ರೀ ಸಂತೋಷ್ (ಸಾಮಾನ್ಯ ವರ್ಗ) | 3,75,800/- | 24.03.2023 | - | |
| 10 | SB-23 | ಬ್ರಹ್ಮಾವರ ಹಲುವಳ್ಳಿ | Adjecent 7, 12, 253 | 1.00 | ಮಡಿಸಾಲು ಹೊಳೆ | 6.959 | ಶ್ರೀ ಮಧುಕರ ನಾಯಕ್ (ಸಾಮಾನ್ಯ ವರ್ಗ) | 1,39,180/- | 12.02.2024 | - | ಕ್ವಾರಿಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದಿಲ್ಲ. |
| 11 | SB-28 | ಬ್ರಹ್ಮಾವರ ಆರೂರು (ಬೆಳ್ಮಾರು) | 150 | 2.20 | ಮಡಿಸಾಲು ಹೊಳೆ | 15.310 | ಶ್ರೀ ಸಂತೋಷ್ (ಪರಿಶಿಷ್ಟ ಜಾತಿ) | 3,06,200/- | 12.02.2024 | - | |
| 12 | SB-32 | ಉಡುಪಿ ಬೆಳ್ಳಂಪಳ್ಳಿ | 11/1 | 1.00 | ಮಡಿಸಾಲು ಹೊಳೆ | 2.783 | ಶ್ರೀ ಸಂತೋಷ್ (ಪರಿಶಿಷ್ಟ ಜಾತಿ) | 55,660/- | 12.02.2024 | - | |

| | | | | | | | | | | | |
|---|---|---|---|---|---|---|---|---|---|---|---|
| 13 | SB-34 | ಉಡುಪಿ ಶಿರೂರು (ಹೊಳಬಾಗಿಲು) | 273 | 2.00 | ಸೀತಾ ನದಿ | 13.918 | ಶ್ರೀ ಶಂಕರ (ಪರಿಶಿಷ್ಟ ಜಾತಿ) | 2,78,360/- | 12.02.2024 | - | ಕ್ವಾರಿಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡದು ಸಲ್ಲಿಸಿರುವುದಿಲ್ಲ. |
| 14 | SB-41 | ಕಾರ್ಕಳ ಮುಂಡ್ಕೂರು (ಆಲಗುಂಡಿ ಪರಿಸರ) | 209/1ಎ | 1.00 | ಶಾಂಭವಿ | 3.478 | ಶ್ರೀ ಸಂತೋಷ್ (ಪರಿಶಿಷ್ಟ ಜಾತಿ) | 69,560/- | 12.02.2024 | - | |
| 15 | SB-30 | ಬ್ರಹ್ಮಾವರ ರುಕ್ಕಿಹಳ್ಳಿ & ಚೇರ್ಕಾಡಿ | 133 | 3.00 | ಮಡಿಸಾಲು ಹೊಳೆ | 20.880 | ಶ್ರೀ ಶಂಕರ (ಸಾಮಾನ್ಯ ವರ್ಗ) | 4,17,600/- | 15.11.2024 | - | |
| 16 | SB-31 | ಉಡುಪಿ & ಬ್ರಹ್ಮಾವರ ರುಕ್ಕಿಹಳ್ಳಿ & ಚೇರ್ಕಾಡಿ | 133 | 3.50 | ಮಡಿಸಾಲು ಹೊಳೆ | 21.987 | ಶ್ರೀ ಹರೀಶ ಭುಜಂಗ ಶೆಟ್ಟಿ (ಸಾಮಾನ್ಯ ವರ್ಗ) | 4,39,740/- | 15.11.2024 | - | |
| ಒಟ್ಟು | | | | | | 2,75,379 | | | | | |

<u>ನಿರ್ಣಯ-1.3.2:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.

1. ಕ್ರಮ ಸಂಖ್ಯೆ: 1 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: DSB-5 ಗೆ ಸಂಬಂಧಿಸಿದಂತೆ ಯಶಸ್ವಿ ಬಿಡ್ಡುದಾರರಾದ ಶ್ರೀ ಬನ್ನಾಡಿ ಕುಶ ಕುಮಾರ್ ರವರು ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿರುವುದರಿಂದ ಸದರಿಯವರಿಗೆ ಮರಳು ಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸುವುದು.
2. ಕ್ರಮ ಸಂಖ್ಯೆ: 2 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-22 ಗೆ ಸಂಬಂಧಿಸಿದಂತೆ, ಜಂಟಿ ಮೋಜಣಿ ನಡೆಸಿ ಅಕ್ಷಾಂಶ ರೇಖಾಂಶಗಳನ್ನು ಸರಿಪಡಿಸಿ ವರದಿಯನ್ನು ಸಲ್ಲಿಸಿರುವುದರಿಂದ ಸದರಿ ವರದಿಯಂತೆ ಪರಿಷ್ಕೃತ ಆಶಯ ಪತ್ರವನ್ನು ನೀಡುವುದು ಹಾಗೂ ಸದರಿ ಪರಿಷ್ಕೃತ ಆಶಯ ಪತ್ರದಂತೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಶ್ರೀ ಜಯರಾಮ ಶೆಟ್ಟಿ ರವರಿಗೆ ನೋಟೀಸ್ ಜಾರಿ ಮಾಡುವುದು.
3. ಕ್ರಮ ಸಂಖ್ಯೆ: 3 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-33 ಯ ಯಶಸ್ವಿ ಬಿಡ್ಡುದಾರರಾದ ಶ್ರೀ ಜೋಗಪ್ಪ ಕುಂದರ್ ರವರು ಮರಣ ಹೊಂದಿರುವುದರಿಂದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೇಂದ್ರ ಕಛೇರಿ ಆದೇಶದಂತೆ ಸದರಿಯವರ ವಾರೀಸುದಾರರಾದ ಶ್ರೀ ಸುಶಾಂತ್ ರವರಿಗೆ ಆಶಯ ಪತ್ರ ನೀಡಿರುವುದಕ್ಕೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಿಂದ ಘಟನೋತ್ತರ ಅನುಮೋದನೆ ನೀಡಲಾಯಿತು ಹಾಗೂ ಸದರಿ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಶ್ರೀ ಸುಶಾಂತ್‌ರವರಿಗೆ ನೋಟೀಸ್ ಜಾರಿ ಮಾಡುವುದು.
4. ಕ್ರಮ ಸಂಖ್ಯೆ: 4 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-11 ಕ್ಕೆ ಸಂಬಂಧಿಸಿದಂತೆ, ದಿನಾಂಕ: 01.01.2025 ರಂದು ಆಶಯ ಪತ್ರವನ್ನು ನೀಡಲಾಗಿರುವುದರಿಂದ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕ್ರಮವಹಿಸದಿದ್ದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಶ್ರೀ ಬಿ. ಅಶೋಕ್ ಕುಮಾರ್ ಶೆಟ್ಟಿ ರವರಿಗೆ ನೋಟೀಸ್ ಜಾರಿ ಮಾಡುವುದು.

5. ಕ್ರಮ ಸಂಖ್ಯೆ: 5 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-16 ಕ್ಕೆ ಸಂಬಂಧಿಸಿದಂತೆ, ಜಂಟಿ ಮೋಜಣಿ ನಡೆಸಿ, ವರದಿ/ ನಕ್ಷೆಯನ್ನು ಪಡೆದು ಶ್ರೀ ಜಯರಾಮ ಶೆಟ್ಟಿ ರವರಿಗೆ ಆಶಯ ಪತ್ರವನ್ನು ನೀಡಲು ಕ್ರಮವಹಿಸುವುದು.
6. ಕ್ರ.ಸಂ. 6 & 7 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-17 & SB-18 ರ ಪ್ರದೇಶವು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ಸದರಿ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆಯಲ್ಲಿ ಪಾವತಿಸಲಾದ ಇ.ಎಂ.ಡಿ ಮೊತ್ತವನ್ನು ಯಶಸ್ವಿ ಬಿಡ್ಡುದಾರರಿಗೆ ಮರುಪಾವತಿ ಮಾಡಿ, ಸದರಿ ಬ್ಲಾಕ್‌ಗಳ ಆಶಯ ಪತ್ರವನ್ನು ರದ್ದುಪಡಿಸುವುದು ಹಾಗೂ ಸದರಿ ಮರಳು ಬ್ಲಾಕ್‌ಗಳನ್ನು ಟೆಂಡರ್ ಪ್ರಕ್ರಿಯೆಯಿಂದ ಕೈಬಿಡುವುದು.
7. ಉಳಿದಂತೆ ಕ್ರಮ ಸಂಖ್ಯೆ: 8 ರಿಂದ 16 ರವರೆಗಿನ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ, ಟೆಂಡರ್ ಮಾರ್ಗಸೂಚಿಯನ್ವಯ ಕ್ವಾರಿ ಪ್ಲಾನ್ ಅನುಮೋದನೆ ಪಡೆದು ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಲು 6 ತಿಂಗಳ ಕಾಲಾವಕಾಶ ನೀಡಿ ಆಶಯ ಪತ್ರವನ್ನು ನೀಡಲಾಗಿದ್ದು, ನಿಯಮಾನುಸಾರ ಹೆಚ್ಚುವರಿಯಾಗಿ 03 ತಿಂಗಳ ಕಾಲಾವಕಾಶವಿರುತ್ತದೆ. ಅದರಂತೆ ಕ್ವಾರಿ ಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸುವಂತೆ ಸೂಚಿಸಿ ದಿನಾಂಕ:25.07.2023, 30.08.2023 & 13.12.2023 ರಂದು ಪತ್ರ ಮುಖೇನ ಸೂಚಿಸಲಾಗಿದ್ದರೂ ಕೂಡ ಕ್ವಾರಿ ಪ್ಲಾನ್ ಹಾಗೂ ಪರಿಸರ ವಿಮೋಚನಾ ಪತ್ರ ಸಲ್ಲಿಸದೆ ಇರುವುದರಿಂದಾಗಿ ಸದರಿ 09 ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸದರಿ ಮರಳು ಬ್ಲಾಕ್‌ಗಳನ್ನು ಮರು ಟೆಂಡರ್ ಕರೆಯಲು ಹಾಗೂ ಮುಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲು ಸಭೆಯಲ್ಲಿ ತೀರ್ಮಾನಿಸಲಾಯತು. ಮೇಲ್ಕಂಡ ನಿರ್ಣಯಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ–2: ಟೆಂಡರ್ ಉಪಸಮಿತಿ ಸಭೆಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಆಶಯ ಪತ್ರ (Provisional acceptance Letter) ನೀಡಲು ಶಿಫಾರಸ್ಸು ನೀಡಿರುವ ಮರಳು ಬ್ಲಾಕ್‌ಗಳ ಕುರಿತು ಚರ್ಚೆ.**

ದಿನಾಂಕ: 13.11.2024 ರಿಂದ 16.12.2024 ರವರೆಗೆ ನಡೆದ ಎರಡನೇ ಸುತ್ತಿನ ಆರ್ಥಿಕ ಲೈವ್ ಬಿಡ್‌ನಲ್ಲಿ ಭಾಗವಹಿಸಿರುವವರಲ್ಲಿ ಅಧಿಕ ಬಿಡ್ ಮೊತ್ತವನ್ನು ಪಾವತಿಸಿರುವ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರಾಗಿ ಪರಿಗಣಿಸಿ ಆಶಯ ಪತ್ರವನ್ನು (Provisional acceptance Letter) ನೀಡಲು ದಿನಾಂಕ: 29.03.2025 ರಂದು ನಡೆದ ಟೆಂಡರ್ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಕುರಿತು ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ಮತ್ತು ಬಿಡ್ಡುದಾರರ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-50 | ಬೈಂದೂರು & ಕುಂದಾಪುರ | ಹಡವು, ತ್ರಾಸಿ & ನಾಡ | 63,468 | S188047 | ಹೆಚ್ ಮಂಜುನಾಥ | 1269360 | ₹ 140 | 149 | H1 |
| | | | | S19607 | ಉದಯ ಕುಮಾರ್ ಶೆಟ್ಟಿ | 1269360 | | 146 | H2 |
| | | | | S209968 | ಕೃಷ್ಣ ಪೂಜಾರಿ | 1269360 | | 143 | H3 |

* ಮರಳು ಬ್ಲಾಕ್ ಸಂಖ್ಯೆ: **SB-50** ರಲ್ಲಿ ಶ್ರೀ ಹೆಚ್ ಮಂಜುನಾಥ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 149/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-37 | ಉಡುಪಿ | ಕುಕ್ಕೆಹಳ್ಳಿ | 5,637 | S175893 | ಕೃಷ್ಣ ಕುಲಾಲ್ | 112740 | ₹ 100 | 106 | H1 |
| | | | | S115738 | ಜಗದೀಶ್ ಶೆಟ್ಟಿ | 112740 | | 104 | H2 |
| | | | | S167462 | ಮಧುಕರ ನಾಯಕ್ | 112740 | | 102 | H3 |

* ಮರಳು ಬ್ಲಾಕ್ ಸಂಖ್ಯೆ: **SB-37** ರಲ್ಲಿ ಶ್ರೀ ಕೃಷ್ಣ ಕುಲಾಲ್ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 106/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-25 | ಬ್ರಹ್ಮಾವರ | ನೀಲಾವರ (ಕೆಳಗಿನಬೆಟ್ಟು) | 21,573 | S215832 | ಅರುಣ ಡಿಸೋಜಾ | 431460 | ₹ 95 | 101 | H1 |
| | | | | S175318 | ಆನಂದ ಕಾಂಚನ್ | 431460 | | 99 | H2 |

* ಮರಳು ಬ್ಲಾಕ್ ಸಂಖ್ಯೆ: **SB-25** ರಲ್ಲಿ ಶ್ರೀ ಅರುಣ ಡಿಸೋಜಾ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 101/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-02 | ಕುಂದಾಪುರ | ಶಂಕರ ನಾರಾಯಣ | 38,184 | S116067 | ಶೀನ ಹೆಚ್ | 763680 | ₹ 85 | 93 | H1 |
| | | | | S188537 | ಸೀತಾರಾಮ ವಡೇರಹೋಬಳಿ | 763680 | | 91 | H2 |
| | | | | S115889 | ಭುಜಂಗ | 763680 | | 89 | H3 |

* ಮರಳು ಬ್ಲಾಕ್ ಸಂಖ್ಯೆ: **SB-02** ರಲ್ಲಿ ಶ್ರೀ ಶೀನ ಹೆಚ್ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 93/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| DSB-04 | ಬೈಂದೂರು | ಹೆರಂಜಾರು–ಕಂಬದಕೋಣೆ | 7,647 | S209968 | ಕೃಷ್ಣ ಪೂಜಾರಿ | 152940 | ₹ 140 | 149 | H1 |
| | | | | S212522 | ಶ್ರೀನಿವಾಸ | 152940 | | 146 | H2 |
| | | | | S215804 | ಡೀನ್ ಜಾನ್ಸನ್ ಬುತ್ತೆಲ್ಲೋ | 152940 | | 143 | H3 |

* ಮರಳು ಬ್ಲಾಕ್ ಸಂಖ್ಯೆ: **DSB-04** ರಲ್ಲಿ ಶ್ರೀ ಕೃಷ್ಣ ಪೂಜಾರಿ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 149/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-19 | ಬ್ರಹ್ಮಾವರ | 33 ನೇ ಶಿರೂರು | 4,174 | S216001 | ವಿಜಯ ಬಿ. ಶೆಟ್ಟಿ | 83480 | ₹ 140 | 149 | H1 |
| | | | | S82428 | ನವೀನ್ ಬಾಂಜಾ | 83480 | | 146 | H2 |

- ಮರಳು ಬ್ಲಾಕ್ ಸಂಖ್ಯೆ: **SB-19** ರಲ್ಲಿ ಶ್ರೀ ವಿಜಯ ಬಿ. ಶೆಟ್ಟಿ ಇವರು ಅತ್ಯಧಿಕ ಬಿಡ್ಡು ಮೊತ್ತ ರೂ. 149/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-10 | ಕುಂದಾಪುರ | ಕುಳ್ಳುಂಜೆ | 13,044 | S214635 | ಅರುಣ ಖಾರ್ವಿ | 260880 | ₹ 82 | 84 | H1 |

- ಮರಳು ಬ್ಲಾಕ್ ಸಂಖ್ಯೆ: **SB-10** ರಲ್ಲಿ ಏಕ ಬಿಡ್ಡುದಾರರಾಗಿರುವ ಶ್ರೀ ಅರುಣ ಖಾರ್ವಿ ಇವರು ಬಿಡ್ಡು ಮೊತ್ತ ರೂ. 84/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-08 | ಕುಂದಾಪುರ | ಹಾಲಾಡಿ, ಹೆಂಗವಳ್ಳಿ, ಕುಳ್ಳುಂಜೆ | 31,663 | S116067 | ಶೀನ ಹೆಚ್ | 633260 | ₹ 80 | 82 | H1 |

- ಮರಳು ಬ್ಲಾಕ್ ಸಂಖ್ಯೆ: **SB-08** ರಲ್ಲಿ ಏಕ ಬಿಡ್ಡುದಾರರಾಗಿರುವ ಶ್ರೀ ಶೀನ ಹೆಚ್. ಇವರು ಬಿಡ್ಡು ಮೊತ್ತ ರೂ. 82/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-45 | ಕಾರ್ಕಳ | ಮರ್ಣೆ, ಹಿರ್ಗಾನ | 10,438 | S216614 | ದೀಪಕ್ ಕೋಟ್ಯಾನ್ | 208760 | ₹ 80 | 82 | H1 |

- ಮರಳು ಬ್ಲಾಕ್ ಸಂಖ್ಯೆ: **SB-45** ರಲ್ಲಿ ಏಕ ಬಿಡ್ಡುದಾರರಾಗಿರುವ ಶ್ರೀ ದೀಪಕ್ ಕೋಟ್ಯಾನ್ ಇವರು ಬಿಡ್ಡು ಮೊತ್ತ ರೂ. 82/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-40 | ಕಾರ್ಕಳ | ಮುಂಡ್ಕೂರು (ಕೊಪ್ಪಳ ಪರಿಸರ) | 3,478 | S216614 | ದೀಪಕ್ ಕೋಟ್ಯಾನ್ | 69560 | ₹ 80 | 82 | H1 |

* ಮರಳು ಬ್ಲಾಕ್ ಸಂಖ್ಯೆ: **SB-40** ರಲ್ಲಿ ಏಕ ಬಿಡ್ಡುದಾರರಾಗಿರುವ ಶ್ರೀ ದೀಪಕ್ ಕೋಟ್ಯಾನ್ ಇವರು ಬಿಡ್ಡು ಮೊತ್ತ ರೂ. 82/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಪ್ರಮಾಣ (ಮೆ.ಟನ್) | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರು | EMD ಮೊತ್ತ | Floor Price | ಬಿಡ್ ಮಾಡಿದ ಮೊತ್ತ In Rupees (₹) | ಶ್ರೇಣಿ |
|---|---|---|---|---|---|---|---|---|---|
| SB-39 | ಕಾರ್ಕಳ & ಉಡುಪಿ | ಎರ್ಲಪಾಡಿ &ಶಿರೂರು | 40,022 | S216614 | ದೀಪಕ್ ಕೋಟ್ಯಾನ್ | 800440 | ₹ 80 | 82 | H1 |

* ಮರಳು ಬ್ಲಾಕ್ ಸಂಖ್ಯೆ: **SB-39** ರಲ್ಲಿ ಏಕ ಬಿಡ್ಡುದಾರರಾಗಿರುವ ಶ್ರೀ ದೀಪಕ್ ಕೋಟ್ಯಾನ್ ಇವರು ಬಿಡ್ಡು ಮೊತ್ತ ರೂ. 82/- ನ್ನು ಬಿಡ್‌ನಲ್ಲಿ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿರುತ್ತಾರೆ.

ಮೇಲ್ಕಂಡ 11 ಟೆಂಡರ್ ಮರಳು ಬ್ಲಾಕ್‌ಗಳಲ್ಲಿ ಯಶಸ್ವಿ ಬಿಡ್ಡುದಾರರಿಗೆ ಮರಳು ಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸುವ ಸಂಬಂಧ ಅನುಮೋದಿತ ಕ್ವಾರಿ ಪ್ಲಾನ್, ಪರಿಸರ ಅನುಮತಿ ಪತ್ರ ಹಾಗೂ ಸಂಬಂಧಪಟ್ಟ ಇಲಾಖೆಗಳ ನಿರಾಕ್ಷೇಪಣಾ ಪತ್ರ / ಇತರೆ ದಾಖಲಾತಿಗಳನ್ನು ಸಲ್ಲಿಸಲು ಆಶಯ ಪತ್ರ (Provisional Acceptance Letter) ನ್ನು ನೀಡಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 2:</u> ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಮೇಲ್ಕಂಡ 11 ಮರಳು ಬ್ಲಾಕ್‌ಗಳಲ್ಲಿ ಅತೀ ಹೆಚ್ಚು ಬಿಡ್ ಮೊತ್ತವನ್ನು (H1) ದಾಖಲಿಸಿರುವವರನ್ನು ಯಶಸ್ವಿ ಬಿಡ್ಡುದಾರರನ್ನಾಗಿ ಪರಿಗಣಿಸಿ ಆಶಯ ಪತ್ರ (Provisional Acceptance Letter) ನ್ನು ನೀಡಲು ದಿನಾಂಕ: 29.03.2025 ರಂದು ನಡೆದ ಟೆಂಡರ್ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಹೆಚ್ಚಿನ ಮೊತ್ತಕ್ಕೆ ಬಿಡ್ ದಾಖಲಿಸಿರುವವರನ್ನು (H1) ಯಶಸ್ವಿ ಬಿಡ್ಡುದಾರರನ್ನಾಗಿ ಪರಿಗಣಿಸಿ, ಆಶಯ ಪತ್ರವನ್ನು (Provisional Acceptance Letter) ನೀಡಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯಸೂಚಿ-3:</u> ಟೆಂಡರ್ ಪ್ರಕ್ರಿಯೆಯ ಆರ್ಥಿಕ ಲೈವ್ ಬಿಡ್‌ನಲ್ಲಿ ಯಶಸ್ವಿಯಾಗದೇ ಇರುವ ಬಿಡ್ಡುದಾರರ EMD ಮೊತ್ತವನ್ನು ಮರುಪಾವತಿಸುವ ಕುರಿತು.**

ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಒಟ್ಟು 48 ಜನ ಬಿಡ್ಡುದಾರರಿಗೆ EMD ಮೊತ್ತವನ್ನು ದಿನಾಂಕ: 04.04.2025 ರಂದು ಮರುಪಾವತಿಸಲಾಗಿದ್ದು, ಈ ಕುರಿತು ಘಟನೋತ್ತರ ಮಂಜೂರಾತಿ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಬಿಡ್ಡುದಾರರ ವಿವರಗಳನ್ನು ಈ ಕೆಳಕಂಡಂತೆ ಸಲ್ಲಿಸಿದರು.

| ಮರಳು ಬ್ಲಾಕ್ ಸಂಖ್ಯೆ | ತಾಲ್ಲೂಕು | ಗ್ರಾಮ | ಬಿಡ್‌ನಲ್ಲಿ ಭಾಗವಹಿಸಿದ ಐಡಿ | ತಾಂತ್ರಿಕ ಬಿಡ್‌ನಲ್ಲಿ ಭಾಗವಹಿಸುವವರು | EMD ಮೊತ್ತ |
|---|---|---|---|---|---|
| SB-50 | ಬೈಂದೂರು & ಕುಂದಾಪುರ ತಾಲ್ಲೂಕು | ಹಡವು, ತ್ರಾಸಿ & ನಾಡ | S19607 | ಉದಯ ಕುಮಾರ್ ಶೆಟ್ಟಿ | 1269360 |
| | | | S215704 | ಹೆಚ್. ಕೆ. ದಿನಕರ | 1269360 |
| | | | S175371 | ರತ್ನಾಕರ ಕಾಂಚನ್ | 1269360 |

| | | | | | |
|---|---|---|---|---|---|
| | | | S188375 | ದಿನಕರ ಶೆಟ್ಟಿ | 1269360 |
| | | | S115886 | ಬಿ ನರಸಿಂಹ ಪೂಜಾರಿ | 1269360 |
| | | | S210025 | ಸಂಜೀವ ಮೊಗವೀರ | 1269360 |
| | | | S214895 | ವಾಸುದೇವಾ ಎಸ್ ಪೂಜಾರಿ | 1269360 |
| | | | S132652 | ಚಂದ್ರಶೇಖರ್ ಶೆಟ್ಟಿ | 1269360 |
| | | | S175839 | ನೀತಾ ಎಸ್ ಹೆಗ್ಡೆ | 1269360 |
| | | | S12928 | ಪ್ರವೀಣ್ ಕುಮಾರ್ ಶೆಟ್ಟಿ | 1269360 |
| | | | S167863 | ಆರ್ ಅಶ್ವಥ್ | 1269360 |
| | | | S115889 | ಭುಜಂಗ | 1269360 |
| | | | S115887 | ದೇವದಾಸ್ ಭಂಡಾರಿ | 1269360 |
| | | | S215231 | ಅಪ್ಪು ಮೊಗವೀರ | 1269360 |
| | | | S175193 | ಸ್ಟಾನಿ ಸ್ಲಾಸ್ ಲೂವಿಸ್ | 1269360 |
| | | | S210953 | ಬಿ ಸುರೇಶ್ ರಾವ್ | 1269360 |
| | | | S115637 | ಜೆ. ಕೆ ಮಹಾಬಲ ನಾಯ್ಕ್ | 1269360 |
| | | | S215640 | ಲವಕರ ಶೆಟ್ಟಿ | 1269360 |
| | | | S35592 | ಹೆಚ್ ಕೆ ದೇವಾನಂದ ಶೆಟ್ಟಿ | 1269360 |
| | | | S204303 | ಸದಾಶಿವ ಆರ್ ಶೆಟ್ಟಿ | 1269360 |
| | | | S116374 | ಬಿ.ಅಶೋಕ್ ಕುಮಾರ್ ಶೆಟ್ಟಿ | 1269360 |
| | | | S209968 | ಕೃಷ್ಣ ಪೂಜಾರಿ | 1269360 |
| | | | S167869 | ಶೆಟ್ಟಿ ಮಂಜಯ್ಯ ನಾರ್ಡೋಳ್ಳಿ (ಕೋಸ್ಟಲ್ ಕಾಶ್ಯೂ ಇಂಡಸ್ಟ್ರೀಸ್) | 1269360 |
| | | | S175549 | ರಾಜು | 1269360 |
| | | | S115791 | ನರಸಿಂಹ ಪೂಜಾರಿ | 1269360 |
| | | | S214439 | ಲಿಯೋ ಡಿಸೋಜಾ | 1269360 |
| | | | S175570 | ಗುಂಡು | 1269360 |
| | | | S215833 | ಕೋಟೇಶ್ವರ ಮೊಹಮ್ಮದ್ ಆಸಿಫ್ | 1269360 |
| | | | S116067 | ಶೀನಾ ಹೆಚ್ | 1269360 |
| | | | S115648 | ಬಿ ಮಂಜುನಾಥ ಕಾಂಚನ್ | 1269360 |
| | | | S117876 | ರಾಜು ಪೂಜಾರಿ | 1269360 |
| | | | S212522 | ಶ್ರೀನಿವಾಸ | 1269360 |
| SB-37 | ಉಡುಪಿ | ಕುಕ್ಕೆಹಳ್ಳಿ | S115738 | ಜಗದೀಶ್ ಶೆಟ್ಟಿ | 112740 |
| | | | S167462 | ಮಧುಕರ ನಾಯಕ್ | 112740 |
| SB-25 | ಬ್ರಹ್ಮಾವರ | ನೀಲಾವರ (ಕೆಳಗಿನಬೆಟ್ಟು) | S175318 | ಆನಂದ ಕಾಂಚನ್ | 431460 |
| | | | S154380 | ರಿತೇಶ್ ಕುಮಾರ್ | 431460 |
| SB-02 | ಕುಂದಾಪುರ | ಶಂಕರ ನಾರಾಯಣ | S188537 | ಸೀತಾರಾಮ ವಡೇರಹೋಬಳಿ | 763680 |
| | | | S115889 | ಭುಜಂಗ | 763680 |
| DSB-04 | ಬೈಂದೂರು | ಹೆರಂಜಾರು– ಕಂಬದಕೋಣೆ | S215804 | ಡೀನ್ ಜಾನ್ಸನ್ ಬೊತ್ತೆಲ್ಲೋ | 152940 |
| | | | S212522 | ಶ್ರೀನಿವಾಸ | 152940 |
| | | | S210025 | ಸಂಜೀವ ಮೊಗವೀರ | 152940 |
| | | | S175273 | ಪೀಟರ್ ಮೆಂಡೋನ್ಸಾ | 152940 |
| | | | S175570 | ಗುಂಡು | 152940 |

| | | | | | |
|---|---|---|---|---|---|
| SB-29 | ಬ್ರಹ್ಮಾವರ | ಕರ್ಜೆ | S217229 | ಯು ರಮೇಶ್ ಶೆಟ್ಟಿ | 417660 |
| SB-19 | ಬ್ರಹ್ಮಾವರ | 33 ನೇ ಶಿರೂರು | S82428 | ನವೀನ್ ಬಾಂಜಾ | 83480 |
| SB-04 | ಬ್ರಹ್ಮಾವರ | ಹಲುವಳ್ಳಿ | S217229 | ಯು ರಮೇಶ್ ಶೆಟ್ಟಿ | 208720 |
| SB-46 | ಹೆಬ್ರಿ | ಮುದ್ರಾಡಿ | S216614 | ದೀಪಕ್ ಕೋಟ್ಯಾನ್ | 111320 |
| SB-45 | ಕಾರ್ಕಳ | ಮರ್ಣೆ–ಹಿರ್ಗಾನ | S116374 | ಬಿ. ಅಶೋಕ್ ಕುಮಾರ್ ಶೆಟ್ಟಿ | 208760 |

ನಿರ್ಣಯ 3: ಅದರಂತೆ ಸಭೆಯಲ್ಲಿ ಪರಿಶೀಲಿಸಲಾಗಿ, ದಿನಾಂಕ: 29.03.2025 ರಂದು ನಡೆದ ಟೆಂಡರ್ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಒಟ್ಟು 48 ಜನ ಬಿಡ್ಡುದಾರರಿಗೆ ದಿನಾಂಕ: 04.04.2025 ರಂದು EMD ಮೊತ್ತವನ್ನು ಮರುಪಾವತಿಸಿರುವುದಕ್ಕೆ ಘಟನೋತ್ತರ ಮಂಜೂರಾತಿಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ–4: ಟೆಂಡರ್ ಯಶಸ್ವಿಯಾಗದೇ ಇರುವ ಮರಳು ಬ್ಲಾಕ್‌ಗಳ ಮರು ಟೆಂಡರ್ ಕರೆಯುವ ಕುರಿತು.**

ಪ್ರಸ್ತುತ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ 22 ಮರಳು ಬ್ಲಾಕ್‌ಗಳಲ್ಲಿ 11 ಮರಳು ಬ್ಲಾಕ್‌ಗಳ ಟೆಂಡರ್ ಯಶಸ್ವಿಯಾಗಿದ್ದು, ಉಳಿದ 11 ಮರಳು ಬ್ಲಾಕ್‌ಗಳನ್ನು ಟೆಂಡರ್ ಕರೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ವಿವರ ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಮೀಸಲಾತಿ | ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಬಿಡ್ಡುದಾರರ ಸಂಖ್ಯೆ | | | |
|---|---|---|---|---|---|---|---|---|---|---|---|---|
| | | | | | | | | | 1st Tender | 2nd Tender | 3rd Tender | 4th Tender |
| ನಾಲ್ಕು ಬಾರಿ ಟೆಂಡರ್ ಕರೆದಿರುವ ಮರಳು ಬ್ಲಾಕ್ ಗಳು | | | | | | | | | | | | |
| 1 | SB-29 | ಬ್ರಹ್ಮಾವರ | ಕರ್ಜೆ | Adjecent 253 & 7 | 3.00 | ಮಡಿಸಾಲು ಹೊಳೆ | 20.883 | ಸಾಮಾನ್ಯ ವರ್ಗ | 0 | 0 | 0 | 1 |
| 2 | SB-46 | ಹೆಬ್ರಿ | ಮುದ್ರಾಡಿ | 40 | 1.00 | ಗುಂಡಾಳ ಹೊಳೆ | 5.566 | ಸಾಮಾನ್ಯ ವರ್ಗ | 0 | 0 | 0 | 1 |
| 3 | SB-9 | ಕುಂದಾಪುರ | ಹಾರ್ದಳ್ಳಿ–ಮಂಡಳ್ಳಿ | 109 | 5.00 | ವಾರಾಹಿ | 27.829 | ಪರಿಶಿಷ್ಟ ಪಂಗಡ | 0 | 0 | 0 | 0 |
| 4 | SB-21 | ಬ್ರಹ್ಮಾವರ | ಚೇರ್ಕಾಡಿ | Adjecent 29, 93, 11 | 1.20 | ಮಡಿಸಾಲು ಹೊಳೆ | 8.351 | ಪರಿಶಿಷ್ಟ ಜಾತಿ | 1 | 0 | 3 | 0 |
| 5 | SB-24 | ಬ್ರಹ್ಮಾವರ | ನೀಲಾವರ | 154 | 5.00 | ಸೀತಾನದಿ | 34.796 | ಪರಿಶಿಷ್ಟ ಪಂಗಡ | 2 | 0 | 0 | 0 |
| 6 | SB-27 | ಬ್ರಹ್ಮಾವರ | ಹಾವಂಜೆ (ದಾಸಬೆಟ್ಟು) | 127 | 1.00 | ನಡ್ಪಾಲು ಹೊಳೆ | 6.959 | ಸಾಮಾನ್ಯ ವರ್ಗ | 0 | 0 | 1 | 0 |
| 7 | SB-38 | ಉಡುಪಿ | ಕುಕ್ಕೆಹಳ್ಳಿ | 133 | 1.00 | ಮಡಿಸಾಲು ಹೊಳೆ | 3.480 | ಸಾಮಾನ್ಯ ವರ್ಗ | 0 | 0 | 4 | 0 |

| | | | | | | | | | | | | |
|---|---|---|---|---|---|---|---|---|---|---|---|---|
| 8 | SB-42 | ಕಾರ್ಕಳ | ಕಾರ್ಕಳ ಕಸಬಾ | 341/1 | 1.00 | ದುರ್ಗಾ | 5,566 | ಪರಿಶಿಷ್ಠ ಪಂಗಡ | 1 | 0 | 0 | 0 |
| 9 | SB-43 | ಕಾರ್ಕಳ | ಹೆರ್ಮುಂಡೆ & ಹಿರ್ಗಾನ | 45 | 25.50 | ಸ್ವರ್ಣಾ ನದಿ | 1,77,500 | ವಿಶೇಷ ಚೇತನ | 0 | 0 | 0 | 0 |
| 10 | SB-44 | ಕಾರ್ಕಳ | ಮರ್ಣೆ & ಹಿರ್ಗಾನ | 225 & 150 | 5.20 | ಸ್ವರ್ಣಾ ನದಿ | 10,856 | ಸಾಮಾನ್ಯ ವರ್ಗ | 0 | 0 | 1 | 0 |
| ಎರಡು ಬಾರಿ ಟೆಂಡರ್ ಕರೆದಿರುವ ಮರಳು ಬ್ಲಾಕ್ ಗಳು | | | | | | | | | | | | |
| 11 | SB-4 | ಬ್ರಹ್ಮಾವರ | ಹಲುವಳ್ಳಿ | 7 | 3.00 | ಮಡಿಸಾಲು ಹೊಳೆ | 10,436 | ಸಾಮಾನ್ಯ ವರ್ಗ | - | - | 1 | 0 |
| ಹೊಸದಾಗಿ ಟೆಂಡರ್ ಕರೆಯಬೇಕಾಗಿರುವ ಮರಳು ಬ್ಲಾಕ್ ಗಳು | | | | | | | | | | | | |
| 12 | SB-51 | ಬ್ರಹ್ಮಾವರ | ಕಾಡೂರು | 230/2 | 4.00 | ಸೀತಾನದಿ | 20,000 | ಸಾಮಾನ್ಯ ವರ್ಗ | - | - | - | - |
| 13 | SB-53 | ಕುಂದಾಪುರ | ಹಳ್ನಾಡು | 56 | 4.65 | ಹಾಲಾಡಿ ಹೊಳೆ | 32,353 | ಸಾಮಾನ್ಯ ವರ್ಗ | - | - | - | - |
| 14 | SB-54 | ಕುಂದಾಪುರ | ಜಪ್ತಿ | 174 | 8.00 | ಹಾಲಾಡಿ ಹೊಳೆ | 69,350 | ಪರಿಶಿಷ್ಠ ಜಾತಿ | - | - | - | - |
| ಒಟ್ಟು | | | | | | | **4,92,422** | | | | | |

ಮುಂದುವರೆದು ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/ಉ/2023-24/15748, ದಿನಾಂಕ: 23.02.2024 ರಲ್ಲಿ ಕನಿಷ್ಠ 03 ಬಾರಿ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಕನಿಷ್ಟ 03 ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ತದನಂತರದ ಹರಾಜು ಪ್ರಕ್ರಿಯೆಯಲ್ಲಿ ನಿಗಧಿತ ಬಿಡ್ಡುದಾರರಿಗಿಂತ ಕಡಿಮೆ ಬಿಡ್ಡುದಾರರು ಭಾಗವಹಿಸಿದಲ್ಲಿ ಸದರಿ ಬಿಡ್ಡುದಾರರುಗಳನ್ನು ಪರಿಗಣಿಸುವ ಕುರಿತು ಜಿಲ್ಲಾ ಮರಳು ಸಮಿತಿಯಿಂದ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂಬುದಾಗಿ ತಿಳಿಸಲಾಗಿರುತ್ತದೆ. ಅದರಂತೆ ಕನಿಷ್ಠ 03 ಬಾರಿ ಟೆಂಡರ್ ಪ್ರಕ್ರಿಯೆ ಕೈಗೊಂಡ ಮರಳು ಬ್ಲಾಕ್‌ಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಏಕ ಬಿಡ್ಡುದಾರರನ್ನು ಪರಿಗಣಿಸಲು ಅವಕಾಶವಿರುತ್ತದೆ. ಆದರೆ ಕ್ರಮ ಸಂಖ್ಯೆ: 01 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-29 ರ ಟೆಂಡರ್‌ನಲ್ಲಿ ಭಾಗವಹಿಸಿರುವ 01 ಬಿಡ್ಡುದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಸ್ಟಾಕ್‌ಯಾರ್ಡ್‌ಗೆ ಸಂಬಂಧಿಸಿದಂತೆ ರೂ. 500/- ಮೊತ್ತದ ಇ-ಸ್ಟಾಂಪ್ ಒಪ್ಪಂದ ಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗೂ ಕ್ರಮ ಸಂಖ್ಯೆ: 02 ರಲ್ಲಿನ ಮರಳು ಬ್ಲಾಕ್ ಸಂಖ್ಯೆ: SB-46 ರ ಟೆಂಡರ್‌ನಲ್ಲಿ ಭಾಗವಹಿಸಿರುವ 01 ಬಿಡ್ಡುದಾರರು ಮರಳು ಬ್ಲಾಕ್ ಇರುವ ಹೆಬ್ರಿ ತಾಲ್ಲೂಕು ವ್ಯಾಪ್ತಿಯಲ್ಲಿ ವಾಸವಿರುವುದಿಲ್ಲವಾದ ಕಾರಣ ಟೆಂಡರ್ ಉಪಸಮಿತಿ ಸಭೆಯಲ್ಲಿ ಸದರಿ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರನ್ನಾಗಿ ಪರಿಗಣಿಸಿರುವುದಿಲ್ಲ. ಉಳಿದ 08 ಮರಳು ಬ್ಲಾಕ್‌ಗಳ 04 ನೇ ಟೆಂಡರ್ ಪ್ರಕ್ರಿಯೆಯಲ್ಲಿ ಏಕಬಿಡ್ಡುದಾರರೂ ಸಹ ಭಾಗವಹಿಸಿರುವುದಿಲ್ಲ. ಹಳ್ನಾಡು ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-53 ನ್ನು ಸರ್ಕಾರಿ ಕಾಮಗಾರಿಗಾಗಿ ಕೆ.ಯು.ಐ.ಡಿ.ಎಫ್.ಸಿ ಇಲಾಖೆಯವರು ಹಾಗೂ ಜಪ್ತಿ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-54 ನ್ನು ಸರ್ಕಾರಿ ಕಾಮಗಾರಿಗಾಗಿ ಮೀಸಲಿರಿಸಲು ಬಂದರು ಮತ್ತು ಮೀನುಗಾರಿಕಾ ಇಲಾಖೆಯವರು ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 4: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕ್ರ.ಸಂ: 01 ರಿಂದ 10 ರವರೆಗಿನ ಮರಳು ಬ್ಲಾಕ್‌ಗಳಲ್ಲಿ ನಾಲ್ಕನೇ ಟೆಂಡರ್ ಪ್ರಕ್ರಿಯೆಯಲ್ಲಿಯೂ ಏಕ ಬಿಡ್ಡುದಾರರೂ ಸಹ ಭಾಗವಹಿಸದೇ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ವಿಶೇಷ ಚೇತನರಿಗೆ ಮೀಸಲಿರಿಸಿರುವ ಮರಳು ಬ್ಲಾಕ್‌ಗಳಿಗೆ ಮರು ಮೀಸಲಾತಿ ನಿಗಧಿಪಡಿಸುವ ಬಗ್ಗೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಂದ ಸೂಕ್ತ ಮಾರ್ಗದರ್ಶನ/ ನಿರ್ದೇಶನ ಕೋರಿ ಪತ್ರ ಬರೆದು, ಮಾರ್ಗದರ್ಶನ ಸ್ವೀಕೃತವಾದ ನಂತರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮುಂದಿನ ಕ್ರಮವಹಿಸಲು ಹಾಗೂ ಮರಳು ಬ್ಲಾಕ್ ಸಂಖ್ಯೆ: SB-4 & SB-51 ಗಳನ್ನು ಮರು ಟೆಂಡರ್ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಮುಂದುವರೆದು ಹಳ್ನಾಡು ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-53 ನ್ನು ಸರ್ಕಾರಿ ಕಾಮಗಾರಿಗಾಗಿ ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ, ಉಡುಪಿ ರವರಿಗೆ ಮೀಸಲಿರಿಸಲು ಹಾಗೂ ಜಪ್ತಿ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-54 ನ್ನು ಸರ್ಕಾರಿ ಕಾಮಗಾರಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ಇಲಾಖೆ, ಉಡುಪಿ ರವರಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿ, ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ-5: ಮರಳು ಬ್ಲಾಕ್ ಸಂಖ್ಯೆ: SB-22 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರಾದ ಶ್ರೀ ಜಯರಾಮ ಶೆಟ್ಟಿ ರವರಿಗೆ ತಿದ್ದುಪಡಿ ಆಶಯ ಪತ್ರವನ್ನು ನೀಡುವ ಕುರಿತು.

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಚೇರ್ಕಾಡಿ ಗ್ರಾಮದ ಸ.ನಂ: 93 ರ 2.00 ಎಕರೆ ಪ್ರದೇಶದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-22 ರ ಟೆಂಡರ್ ಪ್ರಕ್ರಿಯೆಯಲ್ಲಿ ಶ್ರೀ ಜಯರಾಮ ಶೆಟ್ಟಿ ರವರು ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗಿದ್ದು, ಸದರಿಯವರಿಗೆ ಮರಳು ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ಸಂಬಂಧ ಕಡತವನ್ನು ಪರಿಶೀಲಿಸಲಾಗಿ ಸದರಿ ಮರಳು ಬ್ಲಾಕ್‌ನ ಜಂಟಿ ಸ್ಥಳ ಪರಿಶೀಲನಾ ವರದಿಯಲ್ಲಿನ ಅಕ್ಷಾಂಶ-ರೇಖಾಂಶದಲ್ಲಿನ ಪ್ರದೇಶಕ್ಕೂ ಮತ್ತು ತಾಲ್ಲೂಕು ಮೋಜಣಿದಾರರು ನೀಡಿರುವ ನಕ್ಷೆಯಲ್ಲಿನ ಪ್ರದೇಶಕ್ಕೂ ವ್ಯತ್ಯಾಸವಿರುವುದು ಕಂಡುಬಂದಿದ್ದು, ಸದರಿ ಮರಳು ಬ್ಲಾಕ್‌ನ್ನು ಪುನಃ ಜಂಟಿ ಮೋಜಣಿ ನಡೆಸಿ ಸದರಿ ಪ್ರದೇಶವು ಬ್ರಹ್ಮಾವರ ತಾಲ್ಲೂಕಿನ ಚೇರ್ಕಾಡಿ ಗ್ರಾಮದ ಸರ್ವೆ ನಂಬ್ರ 93 ಮತ್ತು ಉಡುಪಿ ತಾಲ್ಲೂಕಿನ ಬೆಳ್ಳಂಪಳ್ಳಿ ಗ್ರಾಮದ ಸರ್ವೆ ನಂಬ್ರ 11 ರ ವ್ಯಾಪ್ತಿಯಲ್ಲಿ ಬರುತ್ತಿರುವುದಾಗಿ ಜಂಟಿ ಮೋಜಣಿ ವರದಿಯನ್ನು ಸಲ್ಲಿಸಿದ್ದು, ಸದರಿ ಮರಳು ಬ್ಲಾಕ್‌ನ ವಿವರಗಳನ್ನು ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡಂತೆ ಸಭೆಗೆ ಮಂಡಿಸುತ್ತಾ, ಶ್ರೀ ಜಯರಾಮ ಶೆಟ್ಟಿ ರವರು ಸದರಿ ಜಂಟಿ ಮೋಜಣಿಗೆ ಒಪ್ಪಿಗೆ ಇರುವುದಾಗಿ ಒಪ್ಪಿಗೆ ಪತ್ರವನ್ನು ಸಲ್ಲಿಸಿದ್ದು, ಸದರಿಯವರಿಗೆ ಮರಳು ಗುತ್ತಿಗೆ ಮಂಜೂರಾತಿ ನೀಡಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂಬುದಾಗಿ ಸಭೆಗೆ ತಿಳಿಸಿದರು.

| ಕ್ರ ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಅಕ್ಷಾಂಶ-ರೇಖಾಂಶ |
|---|---|---|---|---|---|---|---|---|
| 1 | SB-22 | ಬ್ರಹ್ಮಾವರ & ಉಡುಪಿ | ಚೇರ್ಕಾಡಿ & ಬೆಳ್ಳಂಪಳ್ಳಿ | 93 & 11 | 2.00 | ಮಡಿಸಾಲು ಹೊಳೆ | 13.918 | A. N13° 24' 28.82" E74° 49' 45.13"<br>B. N13° 24' 31.83" E74° 49' 46.00"<br>C. N13° 24' 31.55" E74° 49' 47.14"<br>D. N13° 24' 27.86" E74° 49' 46.22"<br>E. N13° 24' 24.98" E74° 49' 43.13"<br>F. N13° 24' 25.52" E74° 49' 42.55" |

ನಿರ್ಣಯ 5: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮರಳು ಬ್ಲಾಕ್ ಸಂಖ್ಯೆ: SB-22 ರ ಮರು ಪರಿಶೀಲನೆ ನಡೆಸಿ, ವರದಿಯನ್ನು ಸಲ್ಲಿಸಿರುವುದರಿಂದ ಜಂಟಿ ಮೋಜಣಿ ನಡೆಸಿ ಅಕ್ಷಾಂಶ ರೇಖಾಂಶಗಳನ್ನು ಸರಿಪಡಿಸಿ ವರದಿಯನ್ನು ಸಲ್ಲಿಸಿರುವುದರಿಂದ ಸದರಿ ವರದಿಯಂತೆ ಪರಿಷ್ಕೃತ ಆಶಯ ಪತ್ರವನ್ನು ನೀಡುವುದು ಹಾಗೂ ಸದರಿ ಪರಿಷ್ಕೃತ ಆಶಯ ಪತ್ರದಂತೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು ಹಾಗೂ ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಶ್ರೀ ಜಯರಾಮ ಶೆಟ್ಟಿ ರವರಿಗೆ ನೋಟೀಸ್ ಜಾರಿ ಮಾಡಲು ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯಸೂಚಿ-6: ಶ್ರೀ ಜೋಗಪ್ಪ ಕುಂದರ್ ರವರು ಮರಣ ಹೊಂದಿರುವುದರಿಂದ ಸದರಿಯವರ ಆಶಯ ಪತ್ರವನ್ನು ವಾರೀಸುದಾರರಿಗೆ ವರ್ಗಾವಣೆ ಮಾಡುವ ಕುರಿತು.**

ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಬೆಳ್ಳಂಪಳ್ಳಿ ಗ್ರಾಮದ ಸ.ನಂ: 11/1 ರ ಮಡಿಸಾಲು ಹೊಳೆ ಪಾತ್ರದಲ್ಲಿ 1.10 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: SB-33 ರ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾದ ಶ್ರೀ ಜೋಗಪ್ಪ ಕುಂದರ್ ರವರು ದಿನಾಂಕ: 21.08.2024 ರಂದು ಮರಣ ಹೊಂದಿದ್ದು, ಸದರಿಯವರಿಗೆ ನೀಡಿರುವ ಆಶಯ ಪತ್ರವನ್ನು ಸದರಿಯವರ ವಾರೀಸುದಾರರಾಗಿ ಮಗನಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿನಲ್ಲಿ ವರ್ಗಾಯಿಸುವ ಕುರಿತು ದಿನಾಂಕ: 03.12.2024 & 04.03.2025 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಿರುವಂತೆ ಸೂಕ್ತ ಮಾರ್ಗದರ್ಶನ/ ಅಭಿಪ್ರಾಯ ನೀಡುವಂತೆ ಕೋರಿ ಕೇಂದ್ರ ಕಛೇರಿಗೆ ಪತ್ರವನ್ನು ಬರೆಯಲಾಗಿದ್ದು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023 ರ ನಿಯಮ 19-ಸಿ(1) ರಲ್ಲಿ ಅರ್ಜಿದಾರನು ಗುತ್ತಿಗೆ/ ಲೈಸೆನ್ಸ್ ಮಂಜೂರಾತಿ ಪೂರ್ವದಲ್ಲಿ ಮರಣ ಹೊಂದಿದಲ್ಲಿ ಆತನ ಕಾನೂನು ಬದ್ಧ ಉತ್ತರಾಧಿಕಾರಿಯನ್ನು ನೇಮಕ ಮಾಡಿ ಗುತ್ತಿಗೆ ಮಂಜೂರಾತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ ಎಂಬುದಾಗಿ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಮ.ವಿ/ಉ/2024-25, ದಿನಾಂಕ: 29.03.2025 ರಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023 ರ ನಿಯಮ 19-ಸಿ(1) ರನ್ವಯ ಶ್ರೀ ಜೋಗಪ್ಪ ಕುಂದರ್ ರವರಿಗೆ ನೀಡಲಾದ ಆಶಯ ಪತ್ರವನ್ನು ಸದರಿಯವರ ವಾರೀಸುದಾರರಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿಗೆ ದಿನಾಂಕ: 11.04.2025 ರಂದು ವರ್ಗಾವಣೆ ಮಾಡಿ ಆದೇಶಿಸಲಾಗಿದ್ದು, ಘಟನೋತ್ತರ ಮಂಜೂರಾತಿ ಪಡೆಯಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 6: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಕೇಂದ್ರ ಕಛೇರಿಯ ನಿರ್ದೇಶನದಂತೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023 ರ ನಿಯಮ 19-ಸಿ(1) ರನ್ವಯ ಶ್ರೀ ಜೋಗಪ್ಪ ಕುಂದರ್ ರವರಿಗೆ ನೀಡಲಾದ ಆಶಯ ಪತ್ರವನ್ನು ಸದರಿಯವರ ವಾರೀಸುದಾರರಾದ ಶ್ರೀ ಸುಶಾಂತ್ ಕುಂದರ್ ರವರ ಹೆಸರಿಗೆ ವರ್ಗಾವಣೆ ಮಾಡಿರುವುದಕ್ಕೆ ಘಟನೋತ್ತರ ಮಂಜೂರಾತಿಯನ್ನು ನೀಡಲು ಹಾಗೂ ಸದರಿ ಮರಳು ಬ್ಲಾಕ್‌ಗೆ ಸಂಬಂಧಿಸಿದಂತೆ ಶೀಘ್ರವಾಗಿ ಕ್ವಾರಿ ಪ್ಲಾನ್ ಸಲ್ಲಿಸಿ ಅನುಮೋದನೆ ಪಡೆದುಕೊಂಡು, ಪರಿಸರ ವಿಮೋಚನಾ ಪತ್ರವನ್ನು ಪಡೆದು ಸಲ್ಲಿಸಿ ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಶ್ರೀ ಸುಶಾಂತ್‌ರವರಿಗೆ ನೋಟೀಸ್ ಜಾರಿ ಮಾಡಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–7: ಮರಳು ಬ್ಲಾಕ್‌ಗಳನ್ನು ಮೀಸಲಿರಿಸುವಂತೆ ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ, ವರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ರವರಿಗೆ 04 ಮರಳು ಬ್ಲಾಕ್‌ಗಳನ್ನು ಮೀಸಲಿರಿಸಿ ದಿನಾಂಕ: 15.01.2021 ರಂದು ಆಶಯ ಪತ್ರವನ್ನು ನೀಡಲಾಗಿದ್ದು, ಪ್ರಸ್ತುತ ಮರಳು ಬ್ಲಾಕ್ ಸಂಖ್ಯೆ: 12 ನ್ನು ವಾರಾಹಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಹಾಗೂ ಮರಳು ಬ್ಲಾಕ್ ಸಂಖ್ಯೆ: 13 ನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಮರಳು ಬ್ಲಾಕ್‌ಗಳ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| ಕ್ರ. ಸಂ | ಮರಳು ಬ್ಲಾಕ್ ಸಂಖ್ಯೆ | ತಾಲೂಕು | ಗ್ರಾಮ | ಸ. ನಂ | ವಿಸ್ತೀರ್ಣ (ಎಕರೆ) | ನದಿ | ಪ್ರಮಾಣ (ಮೆ.ಟನ್) | ಅಕ್ಷಾಂಶ–ರೇಖಾಂಶ |
|---|---|---|---|---|---|---|---|---|
| 1 | 12 | ಕುಂದಾಪುರ | ಶಂಕರ ನಾರಾಯಣ | 295 | 1.50 | ವರಾಹಿ | 7303 | N 13° 37' 22.32" E 74° 49' 14.51"<br>N 13° 37' 23.16" E 74° 49' 14.41"<br>N 13° 27' 20.41" E 74° 49' 22.00"<br>N 13° 27' 19.79" E 74° 49' 20.76"<br>N 13° 37' 20.87" E 74° 49' 17.8"<br>N 13° 37' 21.4" E 74° 49' 18.5" |
| 2 | 13 | ಕುಂದಾಪುರ | ಮೊಳಹಳ್ಳಿ | 249 | 1.00 | ವರಾಹಿ | 5216 | N 13° 37' 21.50" E 74° 49' 14.44"<br>N 13° 37' 22.32" E 74° 49' 14.51"<br>N 13° 37' 19.79" E 74° 49' 20.76"<br>N 13° 37' 19.27" E 74° 49' 19.99"<br>N 13° 37' 20.87" E 74° 49' 17.95"<br>N 13° 37' 21.44" E 74° 49' 18.5" |

ನಿರ್ಣಯ 7: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ವಿಷಯಸೂಚಿ 1.3.1 ರಲ್ಲಿ ನಿರ್ಣಯಿಸಿರುವಂತೆ, ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ರವರಿಗೆ ಮೀಸಲಿರಿಸಿ ಆಶಯ ಪತ್ರ ನೀಡಿರುವ 04 ಮರಳು ಬ್ಲಾಕ್‌ಗಳಲ್ಲಿ ಶಂಕರನಾರಾಯಣ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: 12 ನ್ನು ವಾರಾಹಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ ರವರಿಗೆ ಮೀಸಲಿರಿಸಿ, ಪರಿಸರ ವಿಮೋಚನಾ ಪತ್ರ ಪಡೆದು ಸಲ್ಲಿಸಿ, ಮರಳು ಗುತ್ತಿಗೆ ಮಂಜೂರಾತಿ ಪಡೆಯಲು ಶೀಘ್ರ ಕ್ರಮವಹಿಸುವಂತೆ ಸದರಿ ಇಲಾಖೆಗೆ ಪತ್ರ ಬರೆಯಲು ಹಾಗೂ ಮೊಳಹಳ್ಳಿ ಗ್ರಾಮದಲ್ಲಿ ಗುರುತಿಸಿರುವ ಮರಳು ಬ್ಲಾಕ್ ಸಂಖ್ಯೆ: 13 ನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯ ಕಾಮಗಾರಿಗೆ ಮೀಸಲಿರಿಸುವಂತೆ ಕೋರಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ, ಉಡುಪಿ ರವರಿಗೆ ಮೀಸಲಿರಿಸಿ, ಅಧಿಸೂಚನೆ ಹೊರಡಿಸಿ, ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ–8: ದಿನಾಂಕ: 06.05.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದ ಕುರಿತು.**

**ವಿಷಯಸೂಚಿ–8.1: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ನಿಕ್ಷೇಪಗಳ ಕುರಿತು.**

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ I, II, III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹೊಸದಾಗಿ ಗುರುತಿಸಲಾಗಿರುವ ಒಟ್ಟು 18 ಮರಳು ನಿಕ್ಷೇಪಗಳನ್ನು ದಿನಾಂಕ: 06.05.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯತ್ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1 | ಉಡುಪಿ | ಅಲೆವೂರು | ಕೊರಂಗ್ರಪಾಡಿ | 31 | 1.00 | ಚಕ್ಕೂಮತಿ ಹಳ್ಳ | III | A. N 13° 17' 52.67" E 74° 46' 4.27"<br>B. N 13° 17' 55.63" E 74° 46' 6.00"<br>C. N 13° 17' 57.49" E 74° 46' 8.24"<br>D. N 13° 17' 57.13" E 74° 46' 11.00"<br>E. N 13° 17' 56.28" E 74° 46' 10.87"<br>F. N 13° 17' 56.98" E 74° 46' 8.19"<br>G. N 13° 17' 55.47" E 74° 46' 6.50"<br>H. N 13° 17' 52.50" E 74° 46' 4.55" | 2784 |
| 2 | ಉಡುಪಿ | ಅಲೆವೂರು | ಅಲೆವೂರು | 39,31 38 & 114 | 0.78 | ಚಕ್ಕೂಮತಿ ಹಳ್ಳ | III | A. N 13° 17' 58.03" E 74° 46' 16.48"<br>B. N 13° 17' 58.83" E 74° 46' 18.03"<br>C. N 13° 17' 58.95" E 74° 46' 19.48"<br>D. N 13° 17' 58.10" E 74° 46' 21.53"<br>E. N 13° 17' 57.30" E 74° 46' 22.80"<br>F. N 13° 17' 56.83" E 74° 46' 23.98"<br>G. N 13° 17' 56.29" E 74° 46' 25.69"<br>H. N 13° 17' 56.38" E 74° 46' 27.36"<br>I. N 13° 17' 56.65" E 74° 46' 28.89"<br>J. N 13° 17' 56.34" E 74° 46' 28.94"<br>K. N 13° 17' 56.11" E 74° 46' 27.33"<br>L. N 13° 17' 56.05" E 74° 46' 25.64"<br>M. N 13° 17' 56.57 E 74° 46' 23.85"<br>N. N 13° 17' 57.09" E 74° 46' 22.68"<br>O. N 13° 17' 57.90" E 74° 46' 21.42"<br>P. N 13° 17' 58.67" E 74° 46' 19.52"<br>Q. N 13° 17' 58.62" E 74° 46' 18.20"<br>R. N 13° 17' 57.81" E 74° 46' 16.64" | 2171 |
| 3 | ಉಡುಪಿ | ಅಲೆವೂರು | ಕೊರಂಗ್ರಪಾಡಿ | 82 | 0.80 | ಚಕ್ಕೂಮತಿ ಹಳ್ಳ | III | A. N 13° 17' 44.63" E 74° 45' 51.33"<br>B. N 13° 17' 46.16" E 74° 45' 51.84"<br>C. N 13° 17' 47.84" E 74° 45' 53.47"<br>D. N 13° 17' 49.06" E 74° 45' 55.56"<br>E. N 13° 17' 48.62" E 74° 45' 55.82"<br>F. N 13° 17' 47.35" E 74° 45' 53.77"<br>G. N 13° 17' 45.77" E 74° 45' 52.23"<br>H. N 13° 17' 43.88" E 74° 45' 51.60" | 2784 |
| 4 | ಉಡುಪಿ | ಅಲೆವೂರು | ಮಣಿಪುರ | 31 | 0.51 | ಚಕ್ಕೂಮತಿ ಹಳ್ಳ | III | A. N 13° 17' 58.59" E 74° 46' 19.58"<br>B. N 13° 17' 57.86" E 74° 46' 21.40"<br>C. N 13° 17' 56.51" E 74° 46' 23.78"<br>D. N 13° 17' 56.02" E 74° 46' 25.63"<br>E. N 13° 17' 56.25" E 74° 46' 28.09"<br>F. N 13° 17' 56.01" E 74° 46' 28.18"<br>G. N 13° 17' 55.78" E 74° 46' 25.51"<br>H. N 13° 17' 56.31" E 74° 46' 23.69"<br>I. N 13° 17' 57.63" E 74° 46' 21.25" | 1774 |
| 5 | ಉಡುಪಿ | ಅಲೆವೂರು | ಅಲೆವೂರು | 109, 30 & 32 | 0.62 | ಚಕ್ಕೂಮತಿ ಹಳ್ಳ | III | A. N 13° 18' 6.19" E 74° 47' 44.35"<br>B. N 13° 18' 3.53" E 74° 47' 50.63"<br>C. N 13° 18' 3.17" E 74° 47' 50.45"<br>D. N 13° 18' 5.86" E 74° 47' 44.24" | 2158 |
| 6 | ಉಡುಪಿ | ಮಣಿಪುರ | ಮಣಿಪುರ | 207, 108 | 0.83 | ಚಕ್ಕೂಮತಿ ಹಳ್ಳ | III | A. N 13° 17' 59.91" E 74° 47' 28.17"<br>B. N 13° 17' 58.45" E 74° 47' 30.65"<br>C. N 13° 17' 58.93" E 74° 47' 33.24"<br>D. N 13° 18' 3.11" E 74° 47' 36.23"<br>E. N 13° 18' 3.02" E 74° 47' 36.48"<br>F. N 13° 17' 58.35" E 74° 47' 33.33"<br>G. N 13° 17' 58.20" E 74° 47' 30.58"<br>H. N 13° 17' 59.64" E 74° 47' 27.95" | 1732 |

| | | | | | | | | | |
|---|---|---|---|---|---|---|---|---|---|
| 7 | ಉಡುಪಿ | ಮಣಿಪುರ | ಮಣಿಪುರ | 31,82 | 0.65 | ಚಕ್ಕೂಮತಿ ಹಳ್ಳ | III | A. N 13° 17' 48.52" E 74° 45' 55.95"<br>B. N 13° 17' 49.70" E 74° 45' 59.28"<br>C. N 13° 17' 50.39" E 74° 46' 2.24"<br>D. N 13° 17' 50.06" E 74° 46' 2.50"<br>E. N 13° 17' 49.38" E 74° 45' 59.51"<br>F. N 13° 17' 48.03" E 74° 45' 56.11" | 1357 |
| 8 | ಉಡುಪಿ | ಮಣಿಪುರ | ಮಣಿಪುರ | 86 | 0.61 | ಪಾಪನಾಶಿನಿ ಹೊಳೆ | III | A. N 13° 16' 59.17" E 74° 47' 27.77"<br>B. N 13° 16' 59.17" E 74° 47' 30.48"<br>C. N 13° 16' 58.85" E 74° 47' 33.08"<br>D. N 13° 16' 58.25" E 74° 47' 35.43"<br>E. N 13° 16' 57.91" E 74° 47' 35.33"<br>F. N 13° 16' 58.53" E 74° 47' 33.03"<br>G. N 13° 16' 58.80" E 74° 47' 30.50"<br>H. N 13° 16' 58.87" E 74° 47' 27.73" | 2547 |
| 9 | ಬ್ರಹ್ಮಾವರ | ಕೋಟ | ಗಿಳಿಯಾರು | 62 | 0.22 | – | III | A. N 13° 31' 12.40" E 74° 43' 11.39"<br>B. N 13° 31' 12.31" E 74° 43' 11.58"<br>C. N 13° 31' 10.80" E 74° 43' 10.68"<br>D. N 13° 31' 9.43" E 74° 43' 8.89"<br>E. N 13° 31' 9.65" E 74° 43' 8.75"<br>F. N 13° 31' 11.04" E 74° 43' 10.52" | 950 |
| 10 | ಬೈಂದೂರು | ಮರವಂತೆ | ಮರವಂತೆ | 87/1, 86/1 | 0.22 | – | III | A. N 13° 43' 19.27" E 74° 39' 2.73"<br>B. N 13° 43' 19.35" E 74° 39' 2.95"<br>C. N 13° 43' 17.54" E 74° 39' 3.35"<br>D. N 13° 43' 15.59" E 74° 39' 3.55"<br>E. N 13° 43' 15.56" E 74° 39' 3.32" | 950 |
| 11 | ಬೈಂದೂರು | ನಾಡ | ಬಡಾಕೆರೆ | 12,13 | 0.26 | – | III | A. N 13° 43' 42.89" E 74° 39' 39.08"<br>B. N 13° 43' 42.97" E 74° 39' 40.68"<br>C. N 13° 43' 43.30" E 74° 39' 43.57"<br>D. N 13° 43' 43.07" E 74° 39' 43.58"<br>E. N 13° 43' 42.74" E 74° 39' 40.74"<br>F. N 13° 43' 42.65" E 74° 39' 39.11" | 1044 |
| 12 | ಕುಂದಾಪುರ | ತೆಕ್ಕಟ್ಟೆ | ತೆಕ್ಕಟ್ಟೆ | 185 | 0.30 | ತೆಕ್ಕಟ್ಟೆ ಹೊಳೆ | II | A. N 13° 32' 40.32" E 74° 42' 43.31"<br>B. N 13° 32' 40.57" E 74° 42' 41.43"<br>C. N 13° 32' 38.40" E 74° 42' 40.44"<br>D. N 13° 32' 38.30" E 74° 42' 40.72"<br>E. N 13° 32' 40.14" E 74° 42' 41.31"<br>F. N 13° 32' 40.13" E 74° 42' 43.32" | 1200 |
| 13 | ಕುಂದಾಪುರ | ಕೆದೂರು | ಕೆದೂರು | 86 | 0.72 | ಕೊರ್ಗಿ ಹೊಳೆ | II | A. N 13° 33' 12.16" E 74° 45' 16.21"<br>B. N 13° 33' 10.40" E 74° 45' 12.78"<br>C. N 13° 33' 7.52" E 74° 45' 12.71"<br>D. N 13° 33' 7.36" E 74° 45' 12.93"<br>E. N 13° 33' 10.34" E 74° 45' 13.21"<br>F. N 13° 33' 11.85" E 74° 45' 16.35" | 4200 |
| 14 | ಕುಂದಾಪುರ | ಕಾಳವರ | ಕಾಳವರ | 29 | 0.21 | ಅಬ್ಬಿ ಹೊಳೆ | II | A. N 13° 35' 54.88" E 74° 45' 1.95"<br>B. N 13° 35' 55.56" E 74° 45' 4.05"<br>C. N 13° 35' 55.67" E 74° 45' 7.76"<br>D. N 13° 35' 55.36" E 74° 45' 7.70"<br>E. N 13° 35' 55.33" E 74° 45' 4.03"<br>F. N 13° 35' 54.59" E 74° 45' 1.94" | 1400 |
| 15 | ಕಾರ್ಕಳ | ಇನ್ನಾ | ಇನ್ನಾ | 118, 119, 120 | 0.83 | ದಾಸಕಟ್ಟ ಹಳ್ಳ | III | A. N 13° 7' 49.31" E 74° 50' 25.90"<br>B. N 13° 7' 49.43" E 74° 50' 26.26"<br>C. N 13° 7' 48.19" E 74° 50' 27.15"<br>D. N 13° 7' 51.47" E 74° 50' 29.54"<br>E. N 13° 7' 48.82" E 74° 50' 31.26"<br>F. N 13° 7' 48.70" E 74° 50' 30.94"<br>G. N 13° 7' 51.16" E 74° 50' 29.46"<br>H. N 13° 7' 47.92" E 74° 50' 26.94" | 4043 |
| 16 | ಹೆಬ್ರಿ | ಮುದ್ರಾಡಿ | ಮುದ್ರಾಡಿ | 200 | 1.26 | ಕೆಳಕಿಳಪಳ್ಳ | III | A. N 13° 25' 1.00" E 74° 58' 43.25"<br>B. N 13° 25' 0.88" E 74° 58' 42.14"<br>C. N 13° 24' 55.77" E 74° 58' 43.71"<br>D. N 13° 24' 55.93" E 74° 58' 44.68" | 4000 |

ನಿರ್ಣಯ 8.4: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬ್ರಹ್ಮಾವರ ತಾಲ್ಲೂಕಿನ ಚಿತ್ರಪಾಡಿ ಗ್ರಾಮವು ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಸಾಲಿಗ್ರಾಮ ಪಟ್ಟಣ ಪಂಚಾಯತ್‌ನಿಂದ ಸದರಿ ಪ್ರದೇಶದಲ್ಲಿನ ಹೂಳನ್ನು ತೆರವುಗೊಳಿಸಲು ಕ್ರಮವಹಿಸುವಂತೆ ಹಾಗೂ ಸದರಿ ಹೂಳಿನಲ್ಲಿ ಮರಳು ದೊರಕಿದಲ್ಲಿ ಪಟ್ಟಣ ಪಂಚಾಯತ್/ ತಾಲ್ಲೂಕು ಮರಳು ಉಸ್ತವಾರಿ ಸಮಿತಿ ಸದಸ್ಯರು/ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ವಶಕ್ಕೆ ಪಡೆದು ಸರ್ಕಾರಿ ಕಾಮಗಾರಿಗೆ ನೀಡಲು ಅಥವಾ ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಳ್ಳಲು ಕ್ರಮವಹಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ–9: ಕಟ್ಟಡ ಸಾಮಾಗ್ರಿ ಸಾಗಾಟ ಲಾರಿ ಟೆಂಪೋ ಮಾಲಕರ ಸಂಘಟನೆಗಳ ಒಕ್ಕೂಟ, ಉಡುಪಿ ಜಿಲ್ಲೆ ರವರು ಸಲ್ಲಿಸಿರುವ ಮನವಿಗಳ ಕುರಿತು.**

ವಿಷಯಸೂಚಿ–9.1: ಸಾರ್ವಜನಿಕ ಹಾಗೂ ಸರಕಾರಿ ಕಾಮಗಾರಿಗಳಿಗೆಂದು ಟೆಂಡರ್ ಕಂ ಹರಾಜು ಪ್ರಕ್ರಿಯೆ ಮೂಲಕ ನೀಡಲಾದ ನಾನ್ ಸಿ.ಆರ್.ಝಡ್ ಮರಳು ಬ್ಲಾಕ್‌ಗಳಲ್ಲಿ ದಿನಂಪ್ರತಿ ಕಾನೂನು ಉಲ್ಲಂಘನೆ ಆಗುತ್ತಿರುವ ಬಗ್ಗೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಕ್ರಮ ಕೈಗೊಳ್ಳುವಂತೆ ರಾಘವೇಂದ್ರ ಸಿ ರವರು ಕೋರಿದ್ದು, ಈ ಕುರಿತು ಕ್ರಮವಹಿಸುವಂತೆ ಮಾನ್ಯ ಪೊಲೀಸ್ ಅಧೀಕ್ಷಕರ ಕಛೇರಿ ಪತ್ರ ಸಂಖ್ಯೆ: ಜಿ.ಎನ್.ಎಲ್–3/478/ಉಜಿ/2025, ದಿನಾಂಕ: 14.05.2025 ರಲ್ಲಿ ತಿಳಿಸಲಾಗಿರುತ್ತದೆ.

ವಿಷಯಸೂಚಿ–9.2: ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಟೆಂಡರ್ ಮೂಲಕ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾದ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಅನಧಿಕೃತವಾಗಿ ಮರಳು ಗಣಿಗಾರಿಕೆ/ ಸಾಗಾಣಿಕೆ ನಡೆಸುತ್ತಿರುವುದಾಗಿ ಕಟ್ಟಡ ಸಾಮಾಗ್ರಿ ಸಾಗಾಟ ಲಾರಿ ಟೆಂಪೋ ಮಾಲೀಕರ ಸಂಘಟನೆಗಳ ಒಕ್ಕೂಟ, ಉಡುಪಿ ಜಿಲ್ಲೆ ರವರು ದೂರು ಸಲ್ಲಿಸಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ನಿರ್ಣಯ 9.1 & 9.2: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆಗಳಿಂದ ಮರಳು ಬಳಕೆಯಾಗಿರುವ ಸರ್ಕಾರಿ ಕಾಮಗಾರಿಗಳ ವಿವರ, ಪೂರೈಕೆಯಾಗಿರುವ ಮರಳಿನ ಪ್ರಮಾಣ ಹಾಗೂ ಸದರಿ ಕಾಮಗಾರಿಗಳಿಗೆ ಅವಶ್ಯಕವಿರುವ ಮರಳಿನ ಪ್ರಮಾಣದ ಬಗ್ಗೆ 03 ದಿನಗಳಲ್ಲಿ ಸಂಬಂಧಪಟ್ಟ ಇಲಾಖೆ/ ಮರಳು ಗಣಿ ಗುತ್ತಿಗೆದಾರರಿಂದ ಹಾಗೂ Udupi e-Sand App ನಿಂದ ಸ್ಪಷ್ಟ ವರದಿಯನ್ನು ಪಡೆದು ಕಟ್ಟಡ ಸಾಮಾಗ್ರಿ ಸಾಗಾಟ ಲಾರಿ ಟೆಂಪೋ ಮಾಲೀಕರ ಸಂಘಟನೆಗಳ ಒಕ್ಕೂಟ, ಉಡುಪಿ ಜಿಲ್ಲೆ ರವರಿಗೆ ಹಿಂಬರಹ ನೀಡಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯಸೂಚಿ–9.3: ಮರಳು ಸಾಗಾಟ ದರವನ್ನು ಪರಿಷ್ಕರಿಸುವಂತೆ ಹಾಗೂ ಸರಕಾರಿ ಕಾಮಗಾರಿಗಳಿಗೆ ಮೀಸಲಿಟ್ಟ ಮರಳನ್ನು ನಿಗಧಿತ ಕಾಮಗಾರಿಗಳಿಗೆ ಸಾಗಿಸಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿರುವ ಬಗ್ಗೆ.

| ಹಿಂದಿನ ಸಾಗಾಟ ದರ | ಕೋರಿರುವ ಪರಿಷ್ಕೃತ ಸಾಗಾಟ ದರ |
|---|---|
| ಮರಳಿನ ಮಾರಾಟ ದರ ರೂ. 700/–<br>1. ಜಿಲ್ಲಾ ವ್ಯಾಪ್ತಿಯಲ್ಲಿ ಮರಳು ಸಾಗಾಟ ದರ :<br>• ದೊಡ್ಡ ಲಾರಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 3000/–<br>(8 ರಿಂದ 10 ಮೆ.ಟನ್) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 50/– (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ) | ಮರಳಿನ ಮಾರಾಟ ದರ ರೂ. 850/–<br>➢ 9 ರಿಂದ 10 ಮೆ.ಟನ್ ವಾಹನಗಳಿಗೆ ಅಪ್ ಆಂಡ್ ಡೌನ್ 30 ಕಿಲೋ ಮೀಟರ್‌ಗಳಂತೆ ಕನಿಷ್ಠ 4500/– + ನಂತರದ ಪ್ರತಿ ಕಿ.ಮೀಟರ್‌ಗೆ 200 ರೂ.ಗಳಂತೆ<br>➢ 5 ರಿಂದ 8 ಮೆ.ಟನ್ ವಾಹನಗಳಿಗೆ ಅಪ್ ಆಂಡ್ ಡೌನ್ 30 ಕಿಲೋ ಮೀಟರ್‌ಗಳಂತೆ |

| | |
|---|---|
| • ಮಧ್ಯಮ ಗ್ರಾತ್ರದ ವಾಹನಗಳಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 2000/-<br>(4 ರಿಂದ 8 ಮೆ.ಟನ್) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 40/- (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ)<br>• ಸಣ್ಣ ವಾಹನಗಳಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 1500/-<br>(1 ರಿಂದ 4 ಮೆ.ಟನ್ ವರೆಗೆ) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 35/- (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ) | ಕನಿಷ್ಠ 4000/- + ನಂತರದ ಪ್ರತಿ ಕಿ.ಮೀಟರ್‌ಗೆ 150 ರೂ.ಗಳಂತೆ<br>➢ 3 ರಿಂದ 4 ಮೆ.ಟನ್ ವಾಹನಗಳಿಗೆ ಅಪ್ ಆಂಡ್ ಡೌನ್ 30 ಕಿಲೋ ಮೀಟರ್‌ಗಳಂತೆ ಕನಿಷ್ಠ 3500/- + ನಂತರದ ಪ್ರತಿ ಕಿ.ಮೀಟರ್‌ಗೆ 100 ರೂ.ಗಳಂತೆ |

<u>ನಿರ್ಣಯ 9.3:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಈ ಹಿಂದೆ ನಿಗಧಿಪಡಿಸಲಾಗಿದ್ದ ಮರಳು ಸಾಗಾಟ ದರ ಹಾಗೂ ಪರಿಷ್ಕರಿಸುವಂತೆ ಕೋರಿರುವ ಮರಳು ಸಾಗಾಟ ದರವನ್ನು ಪರಿಶೀಲಿಸಿ, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಮರಳು ಸಾಗಾಟ ದರವನ್ನು ನಿಗಧಿಪಡಿಸಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು.

- ದೊಡ್ಡ ಲಾರಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 3,500/-
  (8 ರಿಂದ 10 ಮೆ.ಟನ್) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 50/- (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ)
- ಮಧ್ಯಮ ಗ್ರಾತ್ರದ ವಾಹನಗಳಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 2,500/-
  (4 ರಿಂದ 8 ಮೆ.ಟನ್) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 40/- (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ)
- ಸಣ್ಣ ವಾಹನಗಳಿಗೆ : 20 ಕಿ.ಮೀಟರ್‌ವರೆಗೆ ಸಾಗಾಣಿಕೆ ದರ ರೂ. 2,000/-
  (1 ರಿಂದ 4 ಮೆ.ಟನ್ ವರೆಗೆ) ನಂತರದ ಪ್ರತಿ ಕಿ.ಮೀಟರ್‌ಗೆ ರೂ. 35/- (20 ಕಿ.ಮೀಟರ್ ಹೊರತುಪಡಿಸಿದ ನಂತರದ ಪ್ರತಿ ಕಿ.ಮೀಟರ್‌ಗೆ ಹೋಗುವ ಮತ್ತು ಬರುವ ಕಿ.ಮೀಟರ್ ಒಳಗೊಂಡಂತೆ)

<u>ವಿಷಯಸೂಚಿ-9.4:</u> ಮರಳು ಗಣಿ ಗುತ್ತಿಗೆ ಮಂಜೂರಾತಿ ಪಡೆದ ಗುತ್ತಿಗೆದಾರರು/ ಸರ್ಕಾರಿ ಇಲಾಖೆಗಳು ಗಣಿ ಇಲಾಖೆಯ ಆದೇಶವನ್ನು ಪಾಲಿಸದೇ ಮರಳು ಕೊಡಲು ನಿರಾಕರಿಸುತ್ತಿದ್ದು, ಇದರಿಂದ ವಾಹನಗಳು ಹಿಂತಿರುಗಿ ನಷ್ಟ ಉಂಟಾಗುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುವ ಬಗ್ಗೆ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 9.4:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, Sand App ನಲ್ಲಿ ಪ್ರಕಟಿಸುವ ಪಟ್ಟಿಯನ್ವಯ ಶೇಕಡಾ 25 ರಷ್ಟು ಖಾಸಗಿಯವರಿಗೆ ನೀಡುವ ಮರಳನ್ನು ಕಡ್ಡಾಯವಾಗಿ ಹಿಂದಿನ ದಿನ Sand App ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಮತ್ತು ಸದರಿ ಸಂದೇಶವನ್ನು ಎಲ್ಲಾ ಲಾರಿ ಗ್ರೂಪ್‌ಗಳಿಗೆ ರವಾನಿಸಲು ಸಭೆಯಲ್ಲಿ ಹಾಜರಿದ್ದ Udupi e-Sand App ನ ಪ್ರತಿನಿಧಿಯವರಿಗೆ ಸಭೆಯಲ್ಲಿ ಸೂಚಿಸಲಾಯಿತು. Sand App ನಲ್ಲಿ ನಮೂದಿಸಿದ ಸರದಿಯಲ್ಲಿ ಮಾತ್ರವೇ ಮರಳನ್ನು ವಾಹನಗಳಿಗೆ ವಿತರಿಸುವುದು. ಇದಕ್ಕೆ ತಪ್ಪಿದಲ್ಲಿ ಪ್ರತಿ ವಾಹನಕ್ಕೆ

| | | | | | | | | | |
|---|---|---|---|---|---|---|---|---|---|
| 17 | ಹೆಬ್ರಿ | ವರಂಗ | ಅಂಡಾರು | 148 | 1.36 | ಅಂಡಾರು ಹೊಳೆ | III | A. N 13° 19' 13.69" E 75° 2' 14.13"<br>B. N 13° 19' 14.60" E 75° 2' 18.41"<br>C. N 13° 19' 13.26" E 75° 2' 23.59"<br>D. N 13° 19' 12.77" E 75° 2' 23.55" | 3000 |
| 18 | ಹೆಬ್ರಿ | ವರಂಗ | ವರಂಗ | 20 | 0.46 | ತಳಮನೆ ಹಳ್ಳ | II | A. N 13° 22' 38.51" E 75° 01' 33.52"<br>B. N 13° 22' 38.4" E 75° 01' 38.98"<br>C. N 13° 22' 38.14" E 75° 01' 39.22"<br>D. N 13° 22' 38.12" E 75° 01' 33.33" | 1400 |
| | | | | | | | | ಒಟ್ಟು | 39,494 |

<u>ನಿರ್ಣಯ 8.1</u>: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ 18 ಮರಳು ಬ್ಲಾಕ್‌ಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-8.2</u>: ಕುಂದಾಪುರ ತಾಲ್ಲೂಕಿನ ಬೇಳೂರು ಮತ್ತು ಕಾಳಾವರ ಗ್ರಾಮಗಳ ಹೊಳೆಗಳಲ್ಲಿ ಹೂಳು/ ಮರಳು ತೆರವುಗೊಳಿಸುವ ಸಲುವಾಗಿ ಸದರಿ ಪ್ರದೇಶಗಳನ್ನು ಪರಿಶೀಲನೆ ನಡೆಸಲಾಗಿದ್ದು, ಸದರಿ ಮರಳು ನಿಕ್ಷೇಪಗಳು ಇರುವುದು ಕಂಡುಬಂದಿರುತ್ತದೆ. ಆದರೆ ಸದರಿ ಪ್ರದೇಶವು ಪಟ್ಟಾ ಜಾಗದಲ್ಲಿರುತ್ತದೆ. ಪಟ್ಟಾ ಜಾಗದಲ್ಲಿನ I, II, III ಶ್ರೇಣಿಯ ಹಳ್ಳ/ಹೊಳೆ/ತೊರೆಗಳಲ್ಲಿ ಮರಳು ತೆರವುಗೊಳಿಸಲು ನಿಯಮಾನುಸಾರ ಅವಕಾಶವಿಲ್ಲದಿರುವುದರಿಂದ ಸದರಿ ಮರಳು ಬ್ಲಾಕ್‌ಗಳನ್ನು ದಿನಾಂಕ: 06.05.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತಿರಸ್ಕರಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಮರಳು ಬ್ಲಾಕ್‌ಗಳ ವಿವರಗಳನ್ನು ಸಭೆಗೆ ಮಂಡಿಸಿದರು.

| ಕ್ರ ಸಂ | ತಾಲ್ಲೂಕು | ಗ್ರಾಮ ಪಂಚಾಯತ್/ | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ- ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|---|
| 1. | ಕುಂದಾಪುರ | ಬೇಳೂರು | ಬೇಳೂರು | 34 (ಪಟ್ಟಾ) | 0.22 | ಕೊರ್ಗಿ ಹೊಳೆ | III | A. N 13° 32' 46.23" E 74° 45' 10.17"<br>B. N 13° 32' 46.08" E 74° 45' 8.83"<br>C. N 13° 32' 45.38" E 74° 45' 6.43"<br>D. N 13° 32' 45.17" E 74° 45' 6.47"<br>E. N 13° 32' 45.82" E 74° 45' 8.85"<br>F. N 13° 32' 45.96" E 74° 45' 10.18" | 1100 |
| 2. | ಕುಂದಾಪುರ | ಕಾಳಾವರ | ಅಸೋಡು | 30 & 31(ಪಟ್ಟಾ) | 1.10 | ಅಬ್ಬಿ ಹೊಳೆ | II | A. N 13° 34' 15.35" E 74° 43' 12.01"<br>B. N 13° 34' 15.11" E 74° 43' 11.94"<br>C. N 13° 34' 15.85" E 74° 43' 19.25"<br>D. N 13° 34' 21.38" E 74° 43' 25.27"<br>E. N 13° 34' 21.54" E 74° 43' 25.06"<br>F. N 13° 34' 16.25" E 74° 43' 25.15" | 3500 |
| 3. | ಕುಂದಾಪುರ | ಕಾಳಾವರ | ಅಸೋಡು | 4 (ಪಟ್ಟಾ) | 0.26 | ಅಬ್ಬಿ ಹೊಳೆ | II | A. N 13° 34' 30.92" E 74° 43' 35.30"<br>B. N 13° 34' 30.45" E 74° 43' 35.18"<br>C. N 13° 34' 29.97" E 74° 43' 33.10"<br>D. N 13° 34' 29.40" E 74° 43' 33.15" | 1200 |

<u>ನಿರ್ಣಯ 8.2</u>: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಮೇಲ್ಕಂಡ ಪ್ರದೇಶಗಳಲ್ಲಿ ಹೂಳು ತೆರವುಗೊಳಸದೇ ಇದ್ದಲ್ಲಿ ಮಳೆಗಾಲದಲ್ಲಿ ಅಕ್ಕಪಕ್ಕದ ಕೃಷಿ ಜಮೀನು/ಪಟ್ಟಾ ಜಮೀನುಗಳಿಗೆ ಪ್ರವಾಹವುಂಟಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಸದರಿ ಪ್ರದೇಶದಲ್ಲಿನ ಹೂಳನ್ನು ತೆರವುಗೊಳಿಸಲು ಕ್ರಮವಹಿಸುವಂತೆ ಹಾಗೂ ಸದರಿ ಹೂಳಿನಲ್ಲಿ ಮರಳು ದೊರೆತಲ್ಲಿ ಗ್ರಾಮ ಪಂಚಾಯತ್/ಪಟ್ಟಣ ಪಂಚಾಯತ್ ಮತ್ತು ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸದಸ್ಯರು/ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರು ವಶಕ್ಕೆ ಪಡೆದು

ಸರ್ಕಾರಿ ಕಾಮಗಾರಿಗೆ ನೀಡಲು ಅಥವಾ ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

<u>ವಿಷಯಸೂಚಿ–8.3:</u> **ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ ಗುರುತಿಸಿರುವ ಮರಳು ಬ್ಲಾಕ್‌ಗಳ ಬಗ್ಗೆ ಚರ್ಚೆ.**

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ IV, V, VI ನೇ ಶ್ರೇಣಿಯ ನದಿಗಳಲ್ಲಿ ಹೊಸದಾಗಿ **01** ಮರಳು ಬ್ಲಾಕ್‌ನ್ನು ಗುರುತಿಸಿ, ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿದ್ದು, ದಿನಾಂಕ: 06.05.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಮರಳು ಬ್ಲಾಕ್‌ಗಳ ವಿವರಗಳನ್ನು ಸಭೆಗೆ ಮಂಡಿಸಿದರು.

| ಕ್ರಸಂ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ (ಎಕರೆ) | ನದಿ | ಶ್ರೇಣಿ | ಅಕ್ಷಾಂಶ– ರೇಖಾಂಶ | ಪ್ರಮಾಣ (ಮೆ.ಟನ್) |
|---|---|---|---|---|---|---|---|---|
| 1. | ಕುಂದಾಪುರ | ಗುಲ್ವಾಡಿ | 180 | 4.00 | ವಾರಾಹಿ | V | A. N 13° 38' 30.81" E 74° 45' 17.91"<br>B. N 13° 38' 28.95" E 74° 45' 23.28"<br>C. N 13° 38' 25.73" E 74° 45' 22.96"<br>D. N 13° 38' 27.72" E 74° 45' 17.65" | 26,000 |

<u>ನಿರ್ಣಯ–8.4:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಮರಳು ಬ್ಲಾಕ್‌ನ್ನು ಸರ್ಕಾರಿ ಕಾಮಗಾರಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ಇಲಾಖೆ, ಉಡುಪಿ ರವರಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿ, ಸದರಿ ಇಲಾಖೆಗೆ ಆಶಯ ಪತ್ರವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ–8.4:</u> **ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಚಿತ್ರಪಾಡಿ ಗ್ರಾಮದ ಹೊಳೆಕೆರೆಯಿಂದ ಕಾರ್ಕಡ ಕಾವಡಿ ವರೆಗಿನ ಹೊಳೆಯಲ್ಲಿ ಹೂಳೆತ್ತುವ ಬಗ್ಗೆ ಚರ್ಚೆ.**

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಚಿತ್ರಪಾಡಿ ಗ್ರಾಮದ ಹೊಳೆ ಕೆರೆಯಿಂದ ಕಾರ್ಕಡ ಕಾವಡಿ ವರೆಗಿನ ಹೊಳೆಯಲ್ಲಿ ಚಾವಲ್ (ಅಂತರ್ ಗಂಗೆ) ತುಂಬಿರುವುದರಿಂದ ಪ್ರತಿ ವರ್ಷ ನೆರೆಯಿಂದ ಸಾರ್ವಜನಿಕರಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗಿರುತ್ತದೆ. ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಸದರಿ ಹೊಳೆಯಲ್ಲಿ ತುಂಬಿರುವ ಚಾವಲ್ (ಅಂತರ್ ಗಂಗೆ) ಮತ್ತು ಮರಗಳನ್ನು ತುರ್ತಾಗಿ ತೆರವುಗೊಳಿಸುವಂತೆ ಮುಖ್ಯಾಧಿಕಾರಿ, ಸಾಲಿಗ್ರಾಮ ಪಟ್ಟಣ ಪಂಚಾಯತ್ ರವರು ಕೋರಿರುತ್ತಾರೆ.

ಸದರಿ ವಿಷಯವನ್ನು ದಿನಾಂಕ: 06.05.2025 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಹೊಳೆಯಲ್ಲಿ ಅಂತರ್ ಗಂಗೆ, ಹುಲ್ಲು ಮತ್ತು ಹೂಳು ತುಂಬಿದ್ದು, ಮರಳು ದಿಬ್ಬ ಇರುವುದು ಕಂಡುಬಂದಿರುವುದಿಲ್ಲವೆಂದು ಭೂವಿಜ್ಞಾನಿಯವರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಚರ್ಚಿಸಲಾಗಿ, ಸದರಿ ಪ್ರದೇಶವು ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತಿದ್ದು, ಅದರಂತೆ ಸದರಿ ಪ್ರದೇಶದಲ್ಲಿ ತುಂಬಿರುವ ಹೂಳು, ಅಂತರ್ ಗಂಗೆಯನ್ನು ನಿಯಮಾನುಸಾರ ತೆರವುಗೊಳಿಸುವ ಬಗ್ಗೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

ಮೊದಲ ಬಾರಿ ರೂ. 25,000/-, ಎರಡನೇ ಬಾರಿ ರೂ. 50,000/-, 3 ನೇ ಬಾರಿ ರೂ. 75,000/- ದಂಡವನ್ನು ವಿಧಿಸುವುದು ಹಾಗೂ ನಾಲ್ಕನೇ ಬಾರಿ ಷರತ್ತು ಉಲ್ಲಂಘಿಸಿದಲ್ಲಿ ಮರಳು ಗಣಿ ಗುತ್ತಿಗೆ ರದ್ದುಪಡಿಸಲು ಕ್ರಮವಹಿಸುವಂತೆ ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ತಿಳಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-10:</u> ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರು ನೀಡಿರುವ ಮನವಿಯ ಕುರಿತು.

ಕೆ.ಆರ್.ಐ.ಡಿ.ಎಲ್ ಇಲಾಖೆಯ ಕಾಮಗಾರಿಗಳಿಗೆ ಸಾಕಾಗುವಷ್ಟು ಮರಳನ್ನು ಶೇಖರಣೆ ಮಾಡಲಾಗಿದ್ದು, ಯಾವುದಾದರೂ ಒಂದು ಮರಳು ಬ್ಲಾಕ್‌ನ್ನು ಕೆ.ಆರ್.ಐ.ಡಿ.ಎಲ್ ಇಲಾಖೆಗೆ ಮೀಸಲಿರಿಸಿ, ಬಾಕಿ ಉಳಿದ ಮರಳು ಬ್ಲಾಕ್‌ಗಳನ್ನು ಗಣಿ ಇಲಾಖೆಯ ಸುಪರ್ದಿಗೆ ಹಿಂಪಡೆದು ಸದರಿ ಮರಳು ಬ್ಲಾಕ್‌ಗಳ ಮರಳಿನ ವಿತರಣೆಯನ್ನು ಟೆಂಡರ್ ಮುಖೇನ ವಿತರಿಸಲು ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರು ದಿನಾಂಕ: 07.05.2025 ರ ಪತ್ರದಲ್ಲಿ ಕೋರಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ 10:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಜಿಲ್ಲೆಯಲ್ಲಿ ಮರಳಿನ ಅಭಾವವಿರುವುದರಿಂದ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳಿನ ಅಭಾವವುಂಟಾಗದಂತೆ ಕ್ರಮವಹಿಸಬೇಕಾಗಿರುವುದರಿಂದ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರಿಗೆ ನೀಡಲಾಗಿರುವ ಮರಳು ಬ್ಲಾಕ್‌ಗಳಲ್ಲಿ ಸದರಿಯವರೇ ಕಾರ್ಯ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಸರ್ಕಾರಿ ಕಾಮಗಾರಿ ಪಡೆದ ಇಲಾಖೆ/ ಮರಳು ಗಣಿ ಗುತ್ತಿಗೆ ಪಡೆದವರು ಮರಳು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಪರಿಸರ ವಿಮೋಚನಾ ಪತ್ರದಲ್ಲಿನ ಷರತ್ತುಗಳನುಸಾರ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಹಾಗೂ ಸದರಿ ಮರಳು ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆಯಿಂದ ಸುತ್ತ ಮುತ್ತಲಿನ ಪ್ರದೇಶಕ್ಕೆ ಹಾನಿಯಾಗದಂತೆ ನಿಗಾವಹಿಸಲು ಸಂಬಂಧಪಟ್ಟ ತಾಲ್ಲೂಕು ಭೂವಿಜ್ಞಾನಿಯವರು ಮರಳು ಗಣಿ ಗುತ್ತಿಗೆ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಂಡು ವರದಿಯನ್ನು 03 ದಿನಗಳಲ್ಲಿ ಸಲ್ಲಿಸಲು ಸಭೆಯಲ್ಲಿ ಸೂಚಿಸಲಾಯಿತು. ಮುಂದುವರೆದು ಪರಿಸರ ವಿಮೋಚನಾ ಪತ್ರದಲ್ಲಿನ ಷರತ್ತುಗಳ ಪಾಲನೆಯಾದ ಬಗ್ಗೆ ಸಕ್ಷಮ ಇಲಾಖೆ/ ಸಂಸ್ಥೆಯೊಂದಿಗೆ ಸ್ಥಳ ಪರಿಶೀಲಿಸಿ 07 ದಿನಗಳಲ್ಲಿ ವರದಿಯನ್ನು ಸಲ್ಲಿಸಲು ಮತ್ತು ಈ ಕುರಿತು ಕ್ರಮವಹಿಸುವ ಸಂಬಂಧ ಸಕ್ಷಮ ಇಲಾಖೆಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸದರಿ ಮರಳು ಬ್ಲಾಕ್‌ಗಳಿಗೆ ಸಂಬಂಧಿಸಿದ ದಾಸ್ತಾನು ಕೇಂದ್ರಗಳಲ್ಲಿ ಮರಳನ್ನು ದಾಸ್ತಾನಿರಿಸಿದ್ದಲ್ಲಿ ಸದರಿ ಮರಳನ್ನು ವಶಕ್ಕೆ ಪಡೆದು ಸರ್ಕಾರಿ ಇಲಾಖೆ/ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಳ್ಳಲು ಸಂಬಂಧಪಟ್ಟ ತಹಶೀಲ್ದಾರರು / ಭೂವಿಜ್ಞಾನಿಗಳಿಗೆ ಸಭೆಯಲ್ಲಿ ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ವಿಷಯಸೂಚಿ-11:</u> **New Payment Gateway & Axis Banks Payout System ಗಾಗಿ Wizlite Innovation Center Pvt Ltd ರವರು ಸಲ್ಲಿಸಿರುವ ದರಪಟ್ಟಿಯ ಕುರಿತು.**

Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ ವಾಹನ ಮಾಲೀಕರಿಗೆ ಹಾಗೂ ಮರಳು ಪರವಾನಿಗೆದಾರರಿಗೆ ಸೂಕ್ತ ಸಮಯದಲ್ಲಿ ಪಾವತಿ ಮಾಡಲು ಸಾಧ್ಯವಾಗುವುದರಿಂದ Udupi e-Sand App ತಂತ್ರಾಂಶದಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲು ಕೂಡಲೇ ಕ್ರಮವಹಿಸುವಂತೆ ದಿನಾಂಕ: 04.12.2025 ರಂದು ನಡೆದ ಜಿಲ್ಲಾ ಮರಳು ಉಸುವಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಅದರಂತೆ Udupi e-Sand App Project ಗೆ ಸಂಬಂಧಿಸಿದಂತೆ New Payment Gateway & Axis Banks Payout System ಅಭಿವೃದ್ಧಿಗಾಗಿ Wizlite Innovation

Center Pvt Ltd ರವರು ಈ ಕೆಳಕಂಡಂತೆ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸುತ್ತಾ, ಸದರಿ ಅಂದಾಜು ಪಟ್ಟಿಯ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

| SL No. | Description | Amount in INR |
|---|---|---|
| 1 | API Design , Development and Integration with Axis Bank Payment System | 2,50,000 |
| 2 | Integration of Axis Bank Payment Gateway (customer Booking Paymens) | 2,00,000 |
| 3 | Setup of Callback/ Response URLs, Transaction Status Sync and Reconcilation Modules | 1,50,000 |
| 4 | Migration from Existing Bill Desk Setup, including Configuration Changes | 2,00,000 |
| 5 | Testing (UAT and Live) Error Handling and Logging System Integration | 75,000 |
| 6 | Support for UAT and production Go-Live with Axis Bank Coordination | 75,000 |
| 7 | Documentation, Error Handling and Backend Reporting Enhancements | 50,000 |
| | **Total (Excl.GST)** | **10,00,000** |
| | **GST @ 18%** | **1,80,000** |
| | **Total Payable Amount (Incl. GST)** | **11,80,000** |

ನಿರ್ಣಯ-11: ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಸದರಿ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಮೊತ್ತವು ಅಧಿಕವಾಗಿದ್ದು, Udupi e-Sand App Project ಗೆ ಸಂಬಂಧಿಸಿದಂತೆ New Payment Gateway & Axis Banks Payout System ಅಭಿವೃದ್ಧಿಗಾಗಿ ಟೆಂಡರ್ ಕರೆದು ಮುಂದಿನ ಸಭೆಯಲ್ಲಿ ಮಂಡಿಸಲು ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ ಇರುವ ವ್ಯವಸ್ಥೆಯಲ್ಲಿಯೇ ಮುಂದುವರೆಸಲು ಸಭೆಯಲ್ಲಿ ತೀರ್ಮಾನಿಸಿದಾಗ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಸೂಚಿ-12: Field Monitoring Mobile Application (FMMA) ನ್ನು ಅಭಿವೃದ್ಧಿಪಡಿಸುವ ಬಗ್ಗೆ.**

ದಿನಾಂಕ: 09.11.2022 & ದಿನಾಂಕ: 04.01.2023 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜಗಳ ಸಾಗಾಣಿಕೆಯನ್ನು ತಡೆಗಟ್ಟುವ ಸಂಬಂಧ Field Monitoring Mobile Application (FMMA) ನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದ್ದು ಅದರಂತೆ ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಬೆಂಗಳೂರು ರವರಿಗೆ ದಿನಾಂಕ: 23.11.2022 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಸೇವೆಯನ್ನು ಪೂರೈಸಲು ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಸದರಿ ಟೆಂಡರ್‌ನಲ್ಲಿ ಅತಿ ಕಡಿಮೆ ದರವನ್ನು ನಮೂದಿಸಿರುವ M/s Wizlite Innovation Center Private Ltd, ಬೆಂಗಳೂರು ರವರಿಗೆ ಕಿಯೋನಿಕ್ಸ್ ಸಂಸ್ಥೆಯಿಂದ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಆದರೆ ಸದರಿಯವರು ಇದುವರೆಗೆ Field Monitoring Mobile Application

(FMMA) ನ್ನು ಅಭಿವೃದ್ಧಿಪಡಿಸಿ, ಕಛೇರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ Field Monitoring Mobile Application (FMMA) ಗೆ ಸಂಬಂಧಿಸಿದಂತೆ ಟೆಂಡರ್ ಕರೆಯಲು ಕ್ರಮವಹಿಸಬೇಕಾಗಿರುತ್ತದೆ ಎಂಬುದಾಗಿ ಹಿರಿಯ ಭೂವಿಜ್ಞಾನಿಯವರು ಸಭೆಗೆ ತಿಳಿಸಿದರು.

<u>ನಿರ್ಣಯ–12:</u> ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜಗಳ ಸಾಗಾಣಿಕೆಯನ್ನು ತಡೆಗಟ್ಟುವ ಸಂಬಂಧ Field Monitoring Mobile Application (FMMA) ನ್ನು ಅಭಿವೃದ್ಧಿಪಡಿಸಲು ಹಾಗೂ ನಿರಾಕ್ಷೇಪಣಾ ಪತ್ರಗಳನ್ನು ತ್ವರಿತಗತಿಯಲ್ಲಿ ಪಡೆಯುವ ಸಂಬಂಧ KSPCB, ಕಂದಾಯ, ಅರಣ್ಯ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳನ್ನು ಸಮನ್ವಯಗೊಳಿಸಿ ನಿರಾಕ್ಷೇಪಣಾ ಪತ್ರಗಳನ್ನು ನೀಡಿ ಮರಳು/ ಕಲ್ಲುಗಣಿ ಗುತ್ತಿಗೆ ಅರ್ಜಿಗಳ ವಿಲೇವಾರಿಗೆ ಕ್ರಮವಹಿಸಲು ಆಪ್ ಅನ್ನು ಅಭಿವೃದ್ಧಿಪಡಿಸಲು ಕ್ರಮವಹಿಸುವ ಸಂಬಂಧ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಸರ್ವಾನುಮತದಿಂದ ಅನುಮೋದಿಸಲಾಯಿತು.

ಚರ್ಚಿಸಬೇಕಾದ ವಿಷಯಗಳು ಮುಕ್ತಾಯವಾದ ಕಾರಣ, ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ
ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

(ಡಾ. ಕೆ. ವಿದ್ಯಾಕುಮಾರಿ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

CI-MMN-203-2025